ಕಾದಂಬರಿ

ಮೂಲ ತುಳು : ಶ್ರೀಮತಿ ಲಲಿತಾ ರೈ

ಕನ್ನಡಕ್ಕೆ : ಡಾ. ಪ್ರಮೀಳಾ ಮಾಧವ್

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ

ಶಿಕಾರಿ

ಕಾದಂಬರಿ

ಮೂಲ ತುಳು
ಶ್ರೀಮತಿ ಲಲಿತಾ ರೈ

ಕನ್ನಡಕ್ಕೆ
ಡಾ. ಪ್ರಮೀಳಾ ಮಾಧವ್

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ
ತುಳುಭವನ, ಉರ್ವಸ್ಟೋರ್
ಮಂಗಳೂರು – 575 006

SHIKARI

A Tulu translation of the Kannada Novel Bonte Dernd of

Smt. Lalitha Rai
'Lalitha Residency'
402, Vishwas Apartment
Kodialbail West, Mangaluru - 575 003

Translated by
Dr. Prameela Madhav
'Shree Sadana'
88/A, Ist Main, Vittala Nagara
Near ISRO Layout, Bengaluru - 560 111
Mobile : 9845921610
email : prameela.madhav@gmail.com

Chief Editor
A.C. Bhandari
President, Karnataka Tulu Sahitya Academy

Publisher
Chandrahasa Rai B.
Registrar, Karnataka Tulu Sahitya Academy

Published by
Karnataka Tulu Sahitya Academy
Mangaluru - 575 006
Dakshina Kannada, Karnataka, INDIA
Tel : +91 824 2459389
Email : tulu.academy@yahoo.co.in

© Karnataka Tulu Sahithya Academy

First Impression : 2019
No. of copies : 300
Paper used : 80 gsm NS Maplitho
Size : Demy 1/8
Pages : 184
Price : Rs. 225

Cover Design : **Kallur Nagesh**

Designed & printed at
Aakrithi Prints
Light House Hill Road, Mangaluru - 1
Phone : 0824 2443002

ಅಧ್ಯಕ್ಷರ ನುಡಿ

ನಾಡು–ನುಡಿಯ ಬೆಳವಣಿಗೆಯ ದಿಸೆಯಲ್ಲಿ ತುಳು ಸಾಹಿತ್ಯ ಅಕಾಡೆಮಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಮುನ್ನಡೆಯುತ್ತಿದೆ. ತುಳು ಭಾಷೆ, ಸಂಸ್ಕೃತಿಯ ಕುರಿತು ಅಭಿಮಾನ ಮೂಡಿಸುವ ಸಾಹಿತ್ಯ ಸಮ್ಮೇಳನಗಳ ಜೊತೆಗೆ ಶಾಲೆಗಳಲ್ಲಿ ತುಳುವನ್ನು ಭಾಷೆಯಾಗಿ ಕಲಿಸುವ ಶೈಕ್ಷಣಿಕ ಯೋಜನೆಗೆ ಒತ್ತು ನೀಡಿದೆ. ತುಳು ಭಾಷೆ, ಲಿಪಿ ಕಲಿಕೆ ಮತ್ತು ಸಾಂಸ್ಕೃತಿಕ ವೈಶಿಷ್ಟತೆಗಳ ಬಗೆಗೆ ವಿಚಾರ ಮಂಥನ ನಡೆಸುವ ಕಾರ್ಯಕ್ರಮಗಳ ಜೊತೆಗೆ ತುಳುವಿನ ಸಂಶೋಧನೆ ಸಾಹಿತ್ಯ ಸೃಜನಶೀಲ ಕೃತಿಗಳನ್ನು ಪ್ರಕಟಿಸುವುದಕ್ಕೆ ಉತ್ತೇಜನ ನೀಡುತ್ತಿದೆ. ಮಾತ್ರವಲ್ಲದೇ ತುಳು ನಾಡು–ನುಡಿ ಪ್ರಬಲವಾಗಬೇಕಾದರೆ, ಅದರ ಸಾಂಸ್ಕೃತಿಕ ವೈಶಿಷ್ಟ್ಯ ಮತ್ತು ಶಕ್ತಿಯನ್ನು ಹೊರ ಜಗತ್ತಿಗೆ ತಿಳಿಸುವುದು ಅಗತ್ಯ ಎನ್ನುವುದನ್ನು ಮನಗಂಡು ತುಳುವಿನಿಂದ ಇತರ ಭಾಷೆಗಳಿಗೆ ಅನುವಾದಿಸಿದ ಕೃತಿಗಳನ್ನು ಪ್ರಕಟಿಸುವ ಕೆಲಸ ಕೈಗೊಂಡಿದೆ.

ಹಿರಿಯ ಲೇಖಕಿ ಶ್ರೀಮತಿ ಲಲಿತಾ ರೈಯವರ ತುಳು ಮೂಲ ಕೃತಿ 'ಬೋಂಟೆ ದೇರ್‌ಂಡ್' ಎನ್ನುವ ಕಾದಂಬರಿಯನ್ನು ಡಾ. ಪ್ರಮೀಳಾ ಮಾಧವ್ ಅವರು ಕನ್ನಡಕ್ಕೆ ಅನುವಾದಿಸಿದ್ದಾರೆ. ಬಂಟರ ಸಮುದಾಯದ ಕತೆಯನ್ನು ಮುಂದಿಡುವ ಈ ಕಾದಂಬರಿ ಹೆಣ್ಣಿಗಾಗುವ ಅನ್ಯಾಯಗಳನ್ನು ಅನಾವರಣಗೊಳಿಸುತ್ತದೆ. ಈ ಬೃಹತ್ ಕಾದಂಬರಿಯು ಒಂದು ಕಡೆಗೆ ಸ್ವಾತಂತ್ರ್ಯ ಹೋರಾಟದ ಕನಸುಗಳನ್ನು ಮತ್ತೊಂದೆಡೆಗೆ ಭೂಮಸೂದೆ ಯಿಂದ ಉಂಟಾದ ಪಲ್ಲಟಗಳನ್ನು ಮಂಡಿಸುತ್ತಾ ಸಮುದಾಯವು ಬದಲಾವಣೆಗೊಳ್ಳ ಬೇಕಾದ ಅಗತ್ಯವನ್ನು ಪ್ರಗತಿಪರ ದೃಷ್ಟಿಕೋನದಲ್ಲಿ ನಮ್ಮ ಮುಂದೆ ಪ್ರಸ್ತುತಪಡಿಸುತ್ತದೆ.

ತುಳು ಸಮಾಜ ಮತ್ತು ಸಂಸ್ಕೃತಿಯ ವೈಶಿಷ್ಟ್ಯಗಳನ್ನು ಸುಂದರವಾಗಿ ಮುಂದಿಡುವ ಈ ಕಾದಂಬರಿಯನ್ನು ಅನುವಾದಿಸಿ ಕೊಡುವ ಮೂಲಕ ಡಾ. ಪ್ರಮೀಳಾ ಮಾಧವ್ ಅವರು ಕನ್ನಡ ಭಾಷಿಕರಿಗೆ ತುಳು ಲೋಕವನ್ನು ಪರಿಚಯಿಸುವ ಮಹತ್ತರ ಕೆಲಸವನ್ನು ಮಾಡಿದ್ದಾರೆ. ಅವರಿಗೆ ಅಭಿನಂದನೆಗಳು.

ಈ ಪುಸ್ತಕವನ್ನು ಸುಂದರವಾಗಿ ಮುದ್ರಿಸಿದ ಆಕೃತಿ ಪ್ರಿಂಟ್ಸ್ ಮಂಗಳೂರು ಹಾಗೆಯೇ ಈ ಪುಸ್ತಕವನ್ನು ಪ್ರಕಟ ಮಾಡಲು ಅನುವು ಮಾಡಿಕೊಟ್ಟ ಅಕಾಡೆಮಿಯ ಗೌರವಾನ್ವಿತ ಸದಸ್ಯರಿಗೆ, ಅಕಾಡೆಮಿಯ ರಿಜಿಸ್ಟ್ರಾರ್ ಶ್ರೀ ಚಂದ್ರಹಾಸ ರೈ ಬಿ. ಮತ್ತು ಕಚೇರಿಯ ಸಿಬ್ಬಂದಿ ವರ್ಗದವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ.

ಮಂಗಳೂರು
07–02–2019

ಎ.ಸಿ. ಭಂಡಾರಿ
ಅಧ್ಯಕ್ಷರು
ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ

ಅನುವಾದಕಿಯ ಅನಿಸಿಕೆ

'ಶಿಕಾರಿ' ಕಾದಂಬರಿ ಶ್ರೀಮತಿ ಲಲಿತಾ ರೈಯವರು ಬರೆದ 'ಬೋಂಟೆ ದೇರ್‌ಂಡ್' ಎಂಬ ತುಳು ಕಾದಂಬರಿಯ ಕನ್ನಡಾನುವಾದವಾಗಿದೆ. ತುಳುನಾಡಿನ ಸಂಸ್ಕೃತಿಯ ಪ್ರತೀಕವಾದ ಈ ಕೃತಿ ಭೂತಕಾಲದ ಬಂಟ ಸಮುದಾಯದ ಸಂಸ್ಕೃತಿಯನ್ನು ಮಾತ್ರವಲ್ಲದೆ ಎಲ್ಲ ಸಮುದಾಯಗಳ ಬದುಕಿನ ಆಯಾಮಗಳನ್ನೂ ಅನಾವರಣ ಮಾಡುತ್ತದೆ.

ಮಹಿಳಾ ಕೇಂದ್ರಿತ ನೆಲೆಗಳಿಂದ ಬಿಚ್ಚಿಕೊಳ್ಳುವ ಈ ಕಾದಂಬರಿ ಮುಖ್ಯವಾಗಿ ಅಳಿಯ ಸಂತಾನದ ಬದುಕಿನಲ್ಲಿ ವಿಧವೆಯಾದ ಹೆಣ್ಣುಮಕ್ಕಳಿಗಾಗುವ ಅನ್ಯಾಯಗಳನ್ನು ಅತ್ಯಂತ ಆಪ್ತವಾಗಿಯೂ ಮಾರ್ಮಿಕವಾಗಿಯೂ ಬಿಚ್ಚಿಡುತ್ತದೆ. ಕೈಹಿಡಿದವನ ಬದುಕು ಭಾಗ್ಯಗಳೊಂದಿಗೆ ಒಂದಾಗಿ ಬದುಕುವ ಹೆಣ್ಣುಮಗಳು ಗಂಡ ತೀರಿಹೋದಾಗ ವಿಧವೆಯಾಗುವುದು ಮಾತ್ರವಲ್ಲ ಅದುವರೆಗಿನ ಬದುಕಿನಿಂದಲೂ ಪರಿತ್ಯಕ್ತೆಯಾಗುತ್ತಾಳೆ. ಗಂಡನ ಮನೆಯ ಸುಖ, ಸಂಪತ್ತು, ಅಧಿಕಾರಗಳನ್ನು ಬಿಟ್ಟು ಅವರು ಕೊಟ್ಟ ದುಃಖ ಸೀರೆಯನ್ನು ಉಟ್ಟು ಮಕ್ಕಳೊಂದಿಗೆ ತವರು ಸೇರುವ ಆಕೆಗೆ ಜೀವನವೊಂದು ಸವಾಲಾಗುತ್ತದೆ. ತವರುಮನೆಯ ಹಂಗಿನ ಕೂಳನ್ನುಣ್ಣುತ್ತ ಜೀತದಾಳಿನಂತೆ ಮನೆಯ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತ ಕಠೋರವಾದ ಬದುಕಿಗೆ ತನ್ನನ್ನು ಸಮರ್ಪಿಸುವ ಪರಿಸ್ಥಿತಿ ಅವಳಿಗೆ ಪ್ರಾಪ್ತವಾಗುತ್ತದೆ. ಅಮಾನವೀಯವಾದ ಈ ಜೀವನ ಪದ್ಧತಿಯನ್ನು ಕಾದಂಬರಿಯ ಮೂಲಕ ಲೇಖಕಿಯವರು ತೀಕ್ಷ್ಣವಾಗಿ ಪ್ರತಿರೋಧಿಸುತ್ತಾರೆ.

ಹಾಗೆಯೇ ಈ ಕಾದಂಬರಿಯಲ್ಲಿ ಪ್ರಾಚೀನ ಸಂಪ್ರದಾಯಗಳಿಗೆ ಸಮಸಮನಾಗಿ ಅನೇಕ ಹೊಸ ಆಶಯಗಳು, ಸಿದ್ಧಾಂತಗಳು, ಸುಧಾರಣಾ ಪ್ರಕ್ರಿಯೆಗಳು ತಳಕು ಹಾಕಿರುವುದು ಕಾದಂಬರಿಕಾರ್ತಿಯ ಪ್ರಗತಿಪರ ಚಿಂತನೆಗಳನ್ನು ಸಾಬೀತುಪಡಿಸುತ್ತವೆ. ಇಲ್ಲಿ ಬರುವ ಭವಾನಿಯೆಂಬ ಮಹಿಳಾ ಪಾತ್ರದಲ್ಲಿ ಲೇಖಕಿಯವರು ಹುದುಗಿಸಿರುವ

ವೈಚಾರಿಕ ಚಿಂತನೆಗಳು, ತರ್ಕಬದ್ಧ ವ್ಯಾಖ್ಯಾನಗಳು, ಕ್ರಾಂತಿಕಾರಕ ನಿಲವುಗಳು ಅಚ್ಚರಿ ಹುಟ್ಟಿಸುತ್ತವೆ. ಮಹಿಳೆಯರು ದುರ್ಬಲರೆಂದೂ ಹೇಡಿಗಳೆಂದೂ ಗಂಡಸರ ಸಹಾಯ ವಿಲ್ಲದೆ ಮನೆಯಾಚೆ ವ್ಯವಹರಿಸಲಾರರೆಂದೂ ನಂಬಿರುವ ಕಾಲಘಟ್ಟದಲ್ಲಿ ಮಹಿಳೆಯನ್ನು ಅತ್ಯಂತ ಸಬಲಳನ್ನಾಗಿಯೂ ಸ್ವಾಭಿಮಾನಿಯನ್ನಾಗಿಯೂ ಚಿತ್ರಿಸಿರುವುದು ಲೇಖಕಿಯ ಸ್ತ್ರೀವಾದೀ ಚಿಂತನೆಗೆ ನಿದರ್ಶನವಾಗಿದೆ. ತನಗೆ ಅನ್ಯಾಯವಾದಾಗ ಯಾರನ್ನೂ ಮೊರೆ ಹೋಗದೆ ಸ್ವತಂತ್ರವಾಗಿ ತೀರ್ಮಾನ ತೆಗೆದುಕೊಂಡು ಅನ್ಯಾಯವನ್ನು ಪ್ರತಿಭಟಿಸಲು ಮುನ್ನುಗ್ಗುವ ದಿಟ್ಟ ಮಹಿಳೆ ಭವಾನಿ ಸ್ತ್ರೀಶಕ್ತಿಯ ಪ್ರತೀಕವಾಗಿ ಚಿತ್ರಿತ ಳಾಗಿದ್ದಾಳೆ. ಅವಳ ವಿಚಾರ ಜಾಗೃತಿಗೆ ಸ್ವಾತಂತ್ರ್ಯ ಹೋರಾಟಗಾರ ಶಂಕರನ ಆಲೋಚನೆಗಳು ಆಜ್ಯವೆರೆಯುತ್ತವೆ. ಶಂಕರನ ಸಾಮಾಜಿಕ ಕಾಳಜಿ, ಸೇವಾಮನೋಭಾವ, ನಿಸ್ಪೃಹತೆ, ದೇಶಪ್ರೇಮ, ಸರಳ ವಿವಾಹದ ಪರಿಕಲ್ಪನೆ, ಜಾತ್ಯತೀತ ಮನೋಭಾವ, ಗ್ರಾಮೋದ್ಧಾರ ಮುಂತಾದ ಸುಧಾರಿತ ಜೀವನ ಮೌಲ್ಯಗಳು ಒಬ್ಬ ಆದರ್ಶ ಯುವಕನಲ್ಲಿ ಕಾಣಬಹುದಾದ ಅತ್ಯುತ್ತಮ ಗುಣಗಳಾಗಿವೆ. ನೇತಾಜಿ ಸುಭಾಷ್‌ಚಂದ್ರ ಬೋಸರ ಕ್ರಾಂತಿಯ ಹಾದಿಯಲ್ಲಿ ಸ್ವಾತಂತ್ರ್ಯ ಚಳುವಳಿಗೆ ಧುಮುಕಿ ಅಂಗವಿಕಲನಾಗಿದ್ದರೂ ಸಾವಿತ್ರಿ ಬಾಯಿ ಫುಲೆಯಂಥವರ ಪ್ರಭಾವಕ್ಕೊಳಗಾಗಿ ಸಮಾಜಸೇವೆಗಾಗಿ ತನ್ನ ಬದುಕನ್ನು ಮೀಸಲಾಗಿಡುವ ಮತ್ತು ಅದೇ ಮನೋಭಾವವುಳ್ಳ ಭವಾನಿಯನ್ನು ಮನಸಾ ಮೆಚ್ಚಿ ಬಾಳಸಂಗಾತಿಯಾಗಿ ಆರಿಸುವ ಶಂಕರ ಉದಾತ್ತ ಪಾತ್ರವಾಗಿ ಶೋಭಿಸುತ್ತಾನೆ.

ದೇಶಗಳನ್ನು ಸುತ್ತಿದ ಕೋಶಗಳನ್ನು ಓದಿದ ಶ್ರೀಮತಿ ಲಲಿತಾ ರೈಯವರು ತಮ್ಮ ಅಪಾರವಾದ ಜೀವನಾನುಭವಗಳ ಹಾಗೂ ಮಾನವೀಯ ತಿಳುವಳಿಕೆಗಳಿಂದ ಕೂಡಿದ ಪರಿಪಕ್ವ ಮನಸ್ಸಿನ ಹಿನ್ನೆಲೆಯಲ್ಲಿ ಬದುಕಿನ ಸ್ಥಿತ್ಯಂತರಗಳನ್ನು, ನ್ಯಾಯ ಅನ್ಯಾಯಗಳ ಫಲಿತಗಳನ್ನು ಎಷ್ಟು ಸೂಕ್ಷ್ಮವಾಗಿ ಅವಲೋಕಿಸಿದ್ದಾರೆ ಎಂಬುದಕ್ಕೆ ಈ ಕೆಳಗಿನ ಸಾಲುಗಳನ್ನೇ ಸಾಕ್ಷಿ:

'ಈಗ ಸ್ವಾತಂತ್ರ್ಯ ಬಂದ ಮೇಲೆ ಆಸ್ತಿಯ ಬಹುಭಾಗ ಡಿಕ್ಲರೇಷನ್‌ನಿಂದ ಕೈಬಿಟ್ಟು ಹೋಗಿ ಒಕ್ಕಲಿಗರ ಪಾಲಾಗಿದೆ. ದೊಡ್ಡ ದೊಡ್ಡ ಮನೆಗಳ ಆಸ್ತಿಗಳು 1957ರ ಹಿಂದೂ ಆಸ್ತಿಯ ಕಾನೂನು ಪ್ರಕಾರ ತಲೆಲೆಕ್ಕದಲ್ಲಿ ಹರಿಹಂಚಾಗಿದೆ. ಅಧಿಕಾರದ ಮದ ಹೋಗಿದೆ. ವಯಸ್ಸಾಗಿ ರಕ್ತ ದಪ್ಪಗಾಗಿದೆ. ದೊಡ್ಡ ಮನೆಯ ಯುವಕರೂ ಬೆನ್ನು ಬಗ್ಗಿಸಿ ದುಡಿಯದೆ ಗತ್ಯಂತರವಿಲ್ಲ ಎಂಬ ಪಾಠ ಕಲಿತಿದ್ದಾರೆ. ಇಡೀ ದಿನ ಸೋಮಾರಿಗಳಾಗಿ ಕುಳಿತುಕೊಳ್ಳಲು, ಲೊಟ್ಟೆ ಪಂಚಾತಿಕೆ ಮಾಡಲು, ಅಲ್ಲದೆ ಇಸ್ಪೀಟು ಆಡಲು, ಕೋಳಿ ಅಂಕ, ದೈವ ದೇವರುಗಳ ವರ್ಷಾವಧಿಯ ಕೋಲ, ನೇಮ, ಉತ್ಸವ, ಜಾತ್ರೆ ಎನ್ನುತ್ತ ಪಂಚೆ ಎತ್ತಿ ಕಟ್ಟಿ ತಿರುಗುವ ಕಾಲ ಕಳೆಯಿತು. ಈಗ ಹತ್ತು ಬೆರಳುಗಳು ಸವೆದರೆ ಮಾತ್ರ ಕೈ ಬಾಯಿಗೆ ಹೋಗುತ್ತದೆ. ದಿನಗಳು ಚೆನ್ನಾಗಿ ಕಳೆಯುತ್ತವೆಂದು ಭಾವಿಸಿ ಬೇಸರವಾದಾಗ ಕಾಡುಗುಡ್ಡಗಳನ್ನು ಹತ್ತಿ ಚಿಕ್ಕ ದೊಡ್ಡ ಬೇಟೆಯಾಡಿ ಕಾಡುಕೋಳಿಯ ಮಾಂಸ ತಿಂದು, ಮೂಗುಮಟ್ಟ ಹೆಂಡ ಕುಡಿದು ಖುಷಿಯಾಗಿ ಕಳೆಯುವ ಕಾಲ ಮುಗಿಯಿತು.

ಬೇಟೆಯಾಡಿ ಪ್ರಾಣಿಗಳನ್ನು ಹಿಡಿಯುವ ಬದಲು ಕಾಲವೇ ಅವರನ್ನು ಬೇಟೆಯಾಡುತ್ತಿದೆ. ಈ ಬೇಟೆಯಲ್ಲಿ ಉಪಾಯದಲ್ಲಿ ಕಾರ್ಯಸಾಧನೆ ಮಾಡುವವನು ತಪ್ಪಿಸಿಕೊಳ್ತಾನೆ. ಸಾಧನೆ ಮಾಡದೆ ಕಾಲಕ್ಕೆ ಸರಿಯಾಗಿ ಹೆಜ್ಜೆಯಿಡಲಾರದವನು ಬಡತನಕ್ಕೆ ಬಲಿಯಾಗುತ್ತಾನೆ.'

'ಬೋಂಟೆ ದೇರ್‍ಂಡ್' ಎಂಬ ಶೀರ್ಷಿಕೆಯೇ ಒಂದು ರೀತಿಯಲ್ಲಿ ವಿಶಿಷ್ಟವೂ ಸಾಂಕೇತಿಕವೂ ಆಗಿದೆ. ಜೀವಸಂಕುಲದಲ್ಲಿ ನಡೆಯುತ್ತಿರುವ ಬೇಟೆಯ ಅಥವಾ ಹಿಂಸಾಚಾರದ ವಿಭಿನ್ನ ಪ್ರಕ್ರಿಯೆಗಳನ್ನು, ಬೇಟೆಯಾಡುವವರೇ ಬೇಟೆಗೆ ಒಳಗಾಗುವ ವ್ಯಂಗ್ಯವನ್ನು ಈ ಕಾದಂಬರಿ ಅತ್ಯಂತ ಸೂಕ್ಷ್ಮವಾಗಿಯೂ ಅರ್ಥಪೂರ್ಣವಾಗಿಯೂ ಹೃದಯಸ್ಪರ್ಶಿಯಾಗಿಯೂ ವಿಶ್ಲೇಷಿಸುತ್ತದೆ. ಲೇಖಕಿಯ ದೂರದರ್ಶಿತ್ವ, ವಿಚಿಕಿತ್ಸಕ ಮನೋಭಾವ ಹಾಗೂ ವೈಚಾರಿಕ ಚಿಂತನೆಗಳು ಶ್ಲಾಘನೀಯ. ಲೇಖಕಿಯವರ ಮರೆವಿನಿಂದಾಗಿಯೋ ಕಾದಂಬರಿಯ ಹರಹಿನಲ್ಲಿ ನಗಣ್ಯವೆನಿಸಬಹುದಾದ ಚಿಕ್ಕಪುಟ್ಟ ಲೋಪದೋಷಗಳು ಕಾಣಿಸಿವೆ.

ತಮ್ಮ ಇಳಿವಯಸ್ಸಿನಲ್ಲೂ ಕುಂದದ ಆತ್ಮಶಕ್ತಿಯಿಂದ ಸಾಹಿತ್ಯ ಸೇವೆಯ ಸಂಕಲ್ಪವನ್ನು ಹೊತ್ತಿರುವ ಪ್ರಗತಿಪರ ಹಾಗೂ ಕ್ರಾಂತಿಕಾರಕ ನಿಲುವಿನಿಂದ ಪ್ರಸ್ತುತರಾಗುವ ಶ್ರೀಮತಿ ಲಲಿತಾ ರೈಯವರನ್ನು ಇಂಥ ಉತ್ತಮ, ಮೌಲಿಕ ಕೃತಿಯನ್ನು ರಚಿಸಿದುದಕ್ಕಾಗಿ ನಾನು ಹೃದಯಪೂರ್ವಕವಾಗಿ ಅಭಿನಂದಿಸುತ್ತೇನೆ. ಮಾತ್ರವಲ್ಲ ತಮ್ಮ ಕೃತಿಯನ್ನು ಕನ್ನಡಕ್ಕೆ ಅನುವಾದಿಸಲು ಅನುಮತಿ ನೀಡಿದುದಕ್ಕಾಗಿಯೂ ಅವರನ್ನು ಅಭಿವಂದಿಸುತ್ತೇನೆ.

'ಬೋಂಟೆ ದೇರ್‍ಂಡ್' ಕೃತಿಯ ಸೊಗಸನ್ನು ಕನ್ನಡ ಬಂಧುಗಳೊಂದಿಗೆ ಹಂಚುವುದಕ್ಕೆ ಕಾರಣರಾದವರು ಶ್ರೇಷ್ಠ ಬರಹಗಾರ ದಂಪತಿಗಳಾದ ಡಾ. ವಾಮನ ನಂದಾವರ ಮತ್ತು ಶ್ರೀಮತಿ ಚಂದ್ರಕಲಾ ನಂದಾವರ ಅವರು. ತಮ್ಮ ಹೇಮಾಂಶು ಪ್ರಕಾಶನದಿಂದ ಪ್ರಕಟವಾದ ಈ ಕೃತಿಯನ್ನು ನನಗೆ ಕೊಟ್ಟು ಅನುವಾದಿಸಲು ಅವಕಾಶ ಮಾಡಿದ ಅವರಿಗೆ ನನ್ನ ಮನದಾಳದ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ತುಳು ಭಾಷಾ ಸಂಸ್ಕೃತಿಯ ವಿಚಾರದಲ್ಲಿ ಅಂಥ ಅಗಾಧವಾದ ಪಾಂಡಿತ್ಯವಿಲ್ಲದ ನನಗೆ ಕಾದಂಬರಿಯನ್ನು ಓದಿದ ಹುಮ್ಮಸ್ಸಿನಲ್ಲಿ ಅನುವಾದಿಸಲು ಹೊರಟಾಗ ಕೆಲವು ಅಡಚಣೆಗಳು ಎದುರಾದುವು. ಮುಖ್ಯವಾಗಿ ತುಳುನಾಡ ಸಂಸ್ಕೃತಿಯ ಬೇರುಗಳೊಳಗೆ ಹುದುಗಿರುವ ಅಪ್ಪಟ ದೇಸೀ ನೆಲೆಗಳು ನನ್ನ ಉತ್ಸಾಹದ ಭರವನ್ನು ಇಳಿಸಿ ಅನುವಾದಿಸಬೇಕೇ ಬೇಡವೇ ಎಂಬ ಮಾನಸಿಕ ಗೊಂದಲವನ್ನು ಉಂಟುಮಾಡಿದಾಗ ನನ್ನಲ್ಲಿ ಧೈರ್ಯತುಂಬಿ, ಪ್ರೋತ್ಸಾಹಿಸಿ ಕಾರ್ಯಭಾರವನ್ನು ಪೂರ್ಣಗೊಳಿಸಲು ನೆರವಾದವರು ಶ್ರೀಮತಿ ಚಂದ್ರಕಲಾ ನಂದಾವರ ಅವರು. ಅದಕ್ಕಾಗಿಯೂ ನಾನು ಅವರನ್ನು ವಂದಿಸುತ್ತೇನೆ.

ನನ್ನ ಸಾಹಿತ್ಯ ಕೈಂಕರ್ಯವನ್ನು ಅತ್ಯಂತ ಅಭಿಮಾನ, ಆಸಕ್ತಿಗಳಿಂದ ಗಮನಿಸಿ ನನ್ನ ಬರವಣಿಗೆಗೆ ಸ್ಫೂರ್ತಿ, ಉತ್ತೇಜನಗಳನ್ನು ತುಂಬುವವರು ನನ್ನ ಆತ್ಮೀಯ ಗೆಳತಿಯರಾದ ಶ್ರೀಮತಿ ಅರುಂಧತಿ ರಾವ್ ಮತ್ತು ಶ್ರೀಮತಿ ಅರುಣಾ ನಾಗರಾಜ್

ಅವರು. ಅವರಿಗೂ ನನ್ನ ಪ್ರೀತಿಯ ನೆನಕೆಗಳು.

ಹಾಗೆಯೇ ಅನುವಾದ ಮಾಡುವ ಕಾರ್ಯದಲ್ಲಿ ನನ್ನನ್ನು ಬೆಂಬಲಿಸಿದ, ಸಹಕರಿಸಿದ ನನ್ನ ಬಾಳಸಂಗಾತಿ ಶ್ರೀ ಮಾಧವ ಕುಂಜತ್ತೂರು ಅವರಿಗೂ ನನ್ನ ಇನ್ನಿತರ ಆತ್ಮೀಯ ಬಂಧು, ಮಿತ್ರರಿಗೂ ನನ್ನ ಆತ್ಮೀಯ ವಂದನೆಗಳು.

ಈ ಅನುವಾದ ಕೃತಿಯ ಪ್ರಕಟಣೆಯ ವಿಚಾರದಲ್ಲಿ ಶ್ರೀಮತಿ ಚಂದ್ರಕಲಾ ನಂದಾವರ ಅವರ ಸೂಚನೆಯನ್ವಯ ತುಳು ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದ ಶ್ರೀಯುತ ಎ.ಸಿ. ಭಂಡಾರಿಯವರನ್ನು ಪತ್ರಮುಖೇನ ಸಂಪರ್ಕಿಸಿದಾಗ ಅವರು ತುಂಬ ಸಂತೋಷದಿಂದಲೇ ಪ್ರಕಟಣೆಯ ಜವಾಬ್ದಾರಿಯನ್ನು ವಹಿಸಿಕೊಂಡರು. ಅವರಿಗೂ ಅಕಾಡೆಮಿಯ ರಿಜಿಸ್ಟ್ರಾರರಾದ ಶ್ರೀಯುತ ಚಂದ್ರಹಾಸ ರೈ ಅವರಿಗೂ ಇತರ ಎಲ್ಲ ಸದಸ್ಯರಿಗೂ ನನ್ನ ಹೃದಯಪೂರ್ವಕ ನಮನಗಳು.

ಕೃತಿಯನ್ನು ಅತಿ ಕ್ಷಿಪ್ರಕಾಲದಲ್ಲಿ ಅಂದವಾಗಿ ಮುದ್ರಿಸಿದ ಕೃತಿಯ ಪ್ರಕಟಣೆಗೆ ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ಕಾರಣರಾದ ಪ್ರತಿಯೊಬ್ಬರಿಗೂ ಮುಖ್ಯವಾಗಿ ಕರಾವಳಿ ಲೇಖಕಿಯರ ಮತ್ತು ವಾಚಕಿಯರ ಸಂಘದ ಎಲ್ಲ ಸದಸ್ಯರಿಗೂ ಪದಾಧಿಕಾರಿಗಳಿಗೂ ನಾನು ಆಭಾರಿಯಾಗಿದ್ದೇನೆ.

ಬೆಂಗಳೂರು **ಡಾ. ಪ್ರಮೀಳಾ ಮಾಧವ್**
10-03-2019

ಪುಟನೋಟ

ಶಿಕಾರಿ	11
ಮೈಂದಣ್ಣನ ದೌಲತ್ತು	56
ಶಂಕರ ಮೂಡಿ ಬಂದನಾ?	112
ಅಂತರ್ವಾಣಿ ಎದುರಾದಾಗ	117
ಅರ್ಕಾವತಿಯ ರಂಗಪ್ರವೇಶ	134

ಶಿಕಾರಿ

ಪಡುವಣ ಆಗಸ ನಿವಾಳಿಸುವ ನೀರು ಚೆಲ್ಲಿದಂತೆ ಕೆಂಪಾಗಿತ್ತು. ಮೂಡಣ ದಿಕ್ಕಿನ ಬೆಟ್ಟಗಳ ಪೊದರುಗಳೆಡೆಯಿಂದ ಸಂಜೆಯ ಗಾಳಿ ಹಗಲೆಲ್ಲ ಬೆಂದ ಬಂಡೆಕಲ್ಲಿನ ಮೇಲೆ ಏದುಸಿರು ಬಿಡುತ್ತ ಬೀಸುತ್ತಿತ್ತು. ಸಹಿಸಲಸಾಧ್ಯವಾದ ಸೆಕೆಯಿಂದ ಜೀವದಲ್ಲಿ ಸಂಕಟದ ಬೇಗೆ! ನೀರು ಹರಿಯುವಂತೆ ಬೆವರು ಇಳಿಯುತ್ತಿತ್ತು. ಕ್ಷಣಕ್ಕೊಮ್ಮೆ ನೀರು ಕುಡಿಯ ಬೇಕೆನಿಸುವಷ್ಟು ದಾಹ. ಮನುಷ್ಯನ ಅನ್ಯಾಯದ ವರ್ತನೆಗಳು ಹೆಚ್ಚಿದಂತೆ ಭೂಮಿಗೆ ತಡೆಯಲಾಗುವುದಿಲ್ಲವೆಂಬಂತೆ ಗಾಳಿ ಏದುಸಿರು ಬಿಡುತ್ತ ಬೀಸುವಾಗ ಅದರೊಂದಿಗೆ ಉಸಿರಿನ ಸುಯಿಲೂ ಬೆಂಕಿಯಂತೆ ಸುಳಿಯುತ್ತಿತ್ತು.

ಮುಂಜಾನೆಯೇ ಭವಾನಿ ಗುತ್ತಿನ ಮನೆಯ ಕಾಂಪೌಂಡಿ ನೊಳಗಿರುವ ಚಿಕ್ಕ ಕೆರೆಗೆ ಮಗುವಿನ ಮೈಲಿಗೆ ಬಟ್ಟೆಯನ್ನು ಒಗೆಯಲು ಹೋಗುತ್ತಾಳೆ. ಬಾಣಂತಿ ಮತ್ತು ಮಗುವಿನ ಬಟ್ಟೆಗಳನ್ನು ಬಿಸಿಲು ಬರುವ ಮೊದಲೇ ಒಗೆಯಬೇಕು. ಒದ್ದೆ ಬಟ್ಟೆಯನ್ನು ರಾತ್ರಿ ಹೊತ್ತಿನಲ್ಲಿ ಹಗ್ಗದಲ್ಲಿ ಒಣಗಲು ಹಾಕಿದರೆ ಬಾಣಂತಿ ಮಗುವಿಗೆ ಜ್ವರ ಬರುತ್ತದೆ, ಹಾಗೆ ಮಾಡಬಾರದೆಂದು ಅವಳ ಅಜ್ಜಿ ರುಕ್ಕಕ್ಕ ಸಾರಿ ಸಾರಿ ಹೇಳುತ್ತಾರೆ. ಆದ್ದರಿಂದ ಭವಾನಿಯೇ ಬೆಳಗಿನ ಹೊತ್ತು ಬಟ್ಟೆ ಒಗೆಯಲು ಹೋಗುತ್ತಾಳೆ. ಬೆಳಗ್ಗಿನಿಂದ ಸಂಜೆಯವರೆಗೂ ಭವಾನಿಯ ಕೆಲಸ ಮುಗಿಯುವುದಿಲ್ಲ. ಸಂಜೆ ಗಾಳಿಯ ಬಿಸಿ ಉಸುರಿನೊಂದಿಗೆ ಅವಳ ಉಸಿರೂ ಸೇರುತ್ತದೆ.

ರುಕ್ಕಕ್ಕನ ಮಗಳು ಅಂತಕ್ಕ. ಅವರು ಸರಸು, ಭವಾನಿ ಮತ್ತು ಮೈಂದಣ್ಣನವರ ತಾಯಿ. ಆಕೆಗೆ ರುಕ್ಕಕ್ಕನಂತೆ ಮಣ ಮಣ ಎಂದು ಗೊಣಗುವ ಸ್ವಭಾವವಿಲ್ಲ. ಕೋಪ ಬಂದರೆ ಗಂಟಲು ಏರಿಸಿ ಎರಡು ಮಾತು ಬಯ್ಯುತ್ತಾರೆ. ಅವರ ಬಯ್ಗಳಿಗೆ ಜಾಸ್ತಿ ಗುರಿಯಾಗುವವಳು ಭವಾನಿಯೇ. ಈಗ ಹೆರಿಗೆಯಾಗಿರುವುದು ಸರಸುವಿಗೆ. ಅವಳು ಭವಾನಿಯ ಅಕ್ಕ.

ಮಡಿವಾಳ್ತಿ ಪಮ್ಮು ಬೆಳಗಾಗುವಷ್ಟರಲ್ಲೇ ಬಂದು ಮೆಟ್ಟಲಲ್ಲಿ ಕುಳಿತುಕೊಳ್ಳುತ್ತಾಳೆ. ಬಾಣಂತಿಯ ಕೊಟ್ಟಿಗೆಯ ಬಾಗಿಲು ತೆರೆಯುವುದನ್ನೇ ಕಾಯುತ್ತಾಳೆ. ವೀಳ್ಯದೆಲೆಯನ್ನು ದವಡೆಯಲ್ಲಿ ತುಂಬಿಸಿ ಬಾಯಾಡಿಸುತ್ತ ಕುಳಿತುಕೊಳ್ಳುವುದಕ್ಕಿಂತ ಬಚ್ಚಲಿಗೆ ನೀರು ತುಂಬಿಸಬಹುದು, ಬೆಂಕಿ ಕಾಯಿಸಬಹುದು. ಆದರೆ ಪಮ್ಮು ತುಂಬ ಚಾಲಾಕಿನ ಹೆಂಗಸು. ಅದನ್ನೇನೂ ಮಾಡದೆ ಸುಮ್ಮನೆ ಕುಳಿತುಕೊಳ್ಳುತ್ತಾಳೆ. ಏಕೆಂದು ಅವಳನ್ನು ಕೇಳಿದರೆ ತಕ್ಷಣ ಅವಳ ಮುಂಜಾವದ ಶ್ಲೋಕ ಶುರುವಾಗುವುದು ಹೀಗೆ:

'ಬೆಳಗ್ಗೆ ಬೆಳಗ್ಗೆ ಒಂದು ಹನಿ ಬಿಸಿ ಚಹಾ ಗಂಟಲಿಗೆ ಇಳಿಯದಿದ್ದರೆ ಕೈಕಾಲೇ ಅಲ್ಲಾಡುವುದಿಲ್ಲ.'

ಅದು ನಿಜವೇ. ಮುನ್ನಾದಿನ ಸಂಜೆ ಕುಡಿದ ಮಾಯ್ಲನ ಹುಳಿಹೆಂಡದ ಅಮಲು ತಲೆಯಿಂದ ಇಳಿಯದೆ ಮನಸ್ಸಿಗೆ ಉತ್ಸಾಹ ಬರುವುದಿಲ್ಲ. ಕೈಕಾಲು ಅಲ್ಲಾಡುವುದಿಲ್ಲ. ಮನೆಯಲ್ಲಿ ಎರಡು ಕರೆಯುವ ಹಸುಗಳಿವೆ. ಬೆಳಗ್ಗೆ ಒಂದು ಕುಡ್ತೆ ಚಹಾ ಮಾಡಲು ನಿನಗೇನು ಸಂಕಟ ಎಂದು ಅಂತಕ್ಕ ದಬಾಯಿಸಿದರೆ ಅದಕ್ಕೆ ಪಮ್ಮುವಿನ ಉತ್ತರ ಸಿದ್ಧವಾಗಿರುತ್ತದೆ.

'ಪದವಿನ ಉಜ್ಜಕ್ಕನ ಹೋಟೆಲಿಗೆ ಕಡಿಮೆಯೆಂದರೂ ಎರಡು ಕುಡ್ತೆ ವರ್ತನೆ ಹಾಲು ಕೊಡಬೇಕು. ಅಷ್ಟಾದರೂ ಕೊಡದಿದ್ದರೆ ಅವುಗಳ ಹೊಟ್ಟೆಗೆ ತಿನಿಸು, ಹಿಂಡಿ, ಮಡ್ಡಿ ಕೊಡಬೇಡವೇ? ಈ ಬೇಸಿಗೆಯಲ್ಲಿ ಹಸಿರು ಹುಲ್ಲೇ ಇಲ್ಲ, ಬರೇ ನಾಲ್ಕು ಸೂಡಿ ಬೈಹುಲ್ಲು ಹಾಕಿದರೆ ಎಷ್ಟು ಹಾಲು ಸಿಕ್ಕೀತು?'

ಮೇಯಲು ಅಟ್ಟಿದರೆ 'ನನ್ನ ತರಕಾರಿಯನ್ನೆಲ್ಲ ತಿಂದು ಧ್ವಂಸಮಾಡಿತೆಂದು' ಆ ಅಂಟೋನಿ ಪ್ರಭುವಿನ ಆರೋಪವನ್ನು ಕೇಳಬೇಕು.

'ನನ್ನ ಬಾಳೆಗೆ ಬಾಯಿ ಹಾಕಿತು, ಅಲ್ಲಿದ್ದ ಗಿಡವನ್ನೆಲ್ಲ ಮುರಿದು ಲಗಾಡಿ ಮಾಡಿತು' ಎನ್ನುತ್ತಾರೆ ಅಕ್ಕು ಬೈದ್ಯದಿ. 'ಬೇಲಿ ಹಾದು ಹಿತ್ತಿಲಿಗೆ ಬಂದಿದೆ, ನಿನ್ನ ಹಸುವಿನ ಕೊರಳಿಗೆ ಕೋಲು ಕಟ್ಟು' ಅನ್ನುತ್ತಾರೆ .ಇನ್ನು ತೋಟಕ್ಕೇನಾದರೂ ನುಗ್ಗಿದರೆ ಕಾಲಿನ ಗಂಟು ಮುರಿಯುವಂತೆ ಹೊಡೆಯುತ್ತೇನೆನ್ನುವ ಬೊಗ್ರ ಪೂಜಾರಿ. ಕಣ್ಣಿನಲ್ಲಿ ರಕ್ತವೇ ಇಲ್ಲ ಆ ಜನಕ್ಕೆ.

ಆಕೆಯ ಮಾತುಗಳನ್ನು ಅರ್ಧದಲ್ಲೇ ಕತ್ತರಿಸಿ ಅಂತಕ್ಕ ಹೇಳಿದರು: 'ಅಲ್ಲ ಪಮ್ಮು, ಆ ಸೂಳೆಮಗ ಗಣಪತಿ ಖಾರ್ವಿ ಗುತ್ತಿನ ಮನೆಯ ಮೊಗಸಾಲೆಗೆ ಹೇಗೆ ಕಾಲಿಟ್ಟನೋ ಎಲ್ಲ ಅಡಿಮೇಲಾಯ್ತು. ಪಂಜುರ್ಲಿಗೆ ಕಾಣುವುದಿಲ್ಲವಾ ಅವನ ಮಾಯ ಮಾಟ. ಅವನ ನಡತೆ ಏನು? ಶಂಭುವಿನ ಬದುಕೇ ಬದಲಾಯ್ತು. ಯಜಮಾನ ಒಂದು ಹೆಜ್ಜೆ ಇಟ್ಟರೆ ಆಳು ನಾಲ್ಕು ಹೆಜ್ಜೆ ಇಡ್ತಾನೆ. ಇಂಥವನನ್ನು ಆ ಶಂಭು ಚೌಟ ಅದು ಹೇಗೆ ತಂದಿಟ್ಟನೋ..'

ಅವರ ಮಾತು ನಡುಮನೆಯಲ್ಲಿದ್ದ ಸೋಮಾವತಿ ಅಕ್ಕನಿಗೂ ಕೇಳಿಸಿತು. ಆಕೆ ಶಂಭು ಚೌಟರ ಹೆಂಡತಿ. ಆಕೆಗೆ ಮೊದಲಿನಿಂದಲೂ ಗಂಡನ ಪ್ರಾಮಾಣಿಕತನದ ಬಗ್ಗೆ

ಬಲವಾದ ಅನುಮಾನ. ಆದರೆ ಏನು ಮಾಡುವುದು? ಆಕೆ ಮಂಗಳೂರಿನ ಪಟ್ಟಣದಲ್ಲಿ ಜನಿಸಿದ ಹೆಣ್ಣು. ಬೆಳ್ಳಗಿನ ಸುಂದರಿ. ಆಕೆಯ ತಂದೆ ತುಂಬ ಹಣ ಕೊಟ್ಟಿದ್ದಾರೆ. ನಚ್ಚದ ಮಾಬಲಣ್ಣನವರು ದೊಡ್ಡ ಪಟೇಲರು. ಅದನ್ನು ಯೋಚಿಸಿಯೇ ಶಂಭು ಚೌಟರು ಮದುವೆಯಾದುದು. ಆಮೇಲೆ ಅವರಿಗೆ ಆಕೆ ತುಂಬ ರೂಪಸಿಯೆಂಬುದು ಗೊತ್ತಾಯ್ತು. ಆದರೆ ಬಲು ಸೂಕ್ಷ್ಮ ಸ್ವಭಾವದ ಹೆಣ್ಣು ಆಕೆ. ಬತ್ತದ ತೌಡು ಆಗುವುದಿಲ್ಲ. ಅಕ್ಕಿ ಮಾಡುವಾಗ ಬೆಂಕಿಯ ಬಳಿಗೆ ಹೋದರೆ ಮರುದಿನ ಜ್ವರ ಬರುತ್ತದೆ. ಬತ್ತ ಬೇಯುವಾಗ ಉಸಿರಾಟಕ್ಕೆ ತೊಂದರೆ. ಉಬ್ಬಸ ಬರುತ್ತದೆ. ಇದೆಲ್ಲ ಶಂಭು ಚೌಟರಿಗೆ ತಲೆನೋವಿನ ವಿಷಯವಾಗಿತ್ತು.

ಹಾಗಿದ್ದರೂ ಮದುವೆಯಾದ ಬೆನ್ನಿಗೇ ಸೋಮಾವತಿ ಇಬ್ಬರು ಮಕ್ಕಳ ತಾಯಿ ಯಾದರು. ಆದ್ದರಿಂದ ಮಕ್ಕಳು ಚಿಕ್ಕವರು ಅವರಿಗೆ ಕಷ್ಟವಾಗುತ್ತದೆಂದು ಹೆಚ್ಚಾಗಿ ತಾಯಿ ಮನೆಯಲ್ಲೇ ಇರುತ್ತಿದ್ದರು.

ಹಿರಿಯ ಚೌಟರು ಅಂದರೆ ಅಂತಕ್ಕನ ನೇರ ತಮ್ಮ ದೇವಣ್ಣ ಚೌಟರು. ಅವರು ತುಂಬ ಸಾಧು ಮನುಷ್ಯ. ಮನೆಯ ಕಾರುಬಾರನ್ನೆಲ್ಲ ಶಂಭು ಚೌಟರೇ ನಡೆಸುತ್ತಾರೆ. ದೇವಣ್ಣ ಚೌಟರ ಹೆಂಡತಿ ತುಂಗಕ್ಕ ಬಂಜೆ. ಅವರಿಗೆ ಶ್ರವಣ ಶಕ್ತಿಯೂ ಸ್ವಲ್ಪ ಕಡಿಮೆ. ಚಿಕ್ಕವರಿದ್ದಾಗ ಕಿವಿನೋವಿಗೆಂದು ಬಿಸಿಯಾದ ಮೆಣಸಿನ ಎಣ್ಣೆ ಹಾಕಿದ ಮೇಲೆ ಅವರ ಒಂದು ಕಿವಿ ಕೇಳುವ ಶಕ್ತಿಯನ್ನು ಕಳೆದುಕೊಂಡಿತ್ತು. ಮನೆಯೊಳಗಿನ ಹೆಚ್ಚಿನ ಕೆಲಸವನ್ನೆಲ್ಲ ಅವರೇ ಮಾಡುತ್ತಾರೆ. ಯಾರ ಸುದ್ದಿಗೂ ಹೋಗುವ ಜಾಯಮಾನ ಅವರದಲ್ಲ. ಹಾಗಾಗಿ ಅಂತಕ್ಕ ಎಷ್ಟೇ ಸಿಡಿಸಿಡಿ ಅಂದರೂ ಅವರೇ ಹೆಚ್ಚು ಮಾತಾಡುತ್ತಾರಲ್ಲದೆ ತುಂಗಕ್ಕ ಯಾವ ಉಸಾಬರಿಗೂ ಹೋಗುತ್ತಿರಲಿಲ್ಲ.

ಬೆಳಗ್ಗಿನ ಚಹಾ ಗಂಟಲಿಗೆ ಬಿದ್ದ ಮೇಲೆಯೇ ಪಮ್ಮುವಿನ ಕೆಲಸ ಆರಂಭವಾಗುತ್ತದೆ. ಬಚ್ಚಲಿಗೆ ತುಂಬಿಸಲು ಕೆರೆಯಿಂದಲೇ ನೀರು ತರಬೇಕು. ಮಲ್ಲರಾಯನ ಉಯ್ಯಾಲೆಯಲ್ಲಿ ಇಡುವ ನೀರು ಬಾವಿಯಿಂದಲೇ ಸೇದಿ ತರಬೇಕು. ಸೂತಕವಿದ್ದವರು ಬಾವಿಯಿಂದ ನೀರು ಸೇದುವುದು ನಿಷಿದ್ಧ. ಸೂತಕ ಕಳೆಯುವವರೆಗೆ ಬಾವಿಯ ಸಮೀಪ ಬರುವುದಕ್ಕೂ ಸಾಧ್ಯವಿಲ್ಲ. ಬಾಣಂತಿಯ ಸ್ನಾನಕ್ಕೂ ಬಾವಿ ನೀರು ತೆಗೆದುಕೊಂಡು ಹೋಗಬಾರದು. ಹಂಡೆಗೆ ನೀರು ತುಂಬಿಸಲು ಎರಡು ಕೈಯಲ್ಲೂ ಎರಡು ಚೆಂಬಿನ ಬಿಂದಿಗೆ ಹಿಡಿದುಕೊಂಡು ಅಡುಗೆಮನೆಯ ಬದಿಯ ಕೈಸಾಲೆಯ ಹತ್ತಿರವಿರುವ ಪುಟ್ಟ ಕೆರೆಯಿಂದ ಪಮ್ಮು ನೀರು ತರುತ್ತಾಳೆ. ಆಗ ಮೊಗಸಾಲೆಯ ಬದಿಯಲ್ಲಿ ಕುಳಿತ ಗಣಪ ಖಾರ್ವಿ, ತಮ್ಮು ಮರಕಲ, ಹೊಲದಲ್ಲಿ ಉಳಲು ಬೆಳಗ್ಗೆಯೇ ಬರುವ ಬೊಗ್ರ, ಕೋಟಿವೈದ್ಯ, ತಿಂಮ ಮೂಲ್ಯ ಇವರೆಲ್ಲ ಪಮ್ಮುವಿನ ನಡಿಗೆಯ ವಯ್ಯಾರವನ್ನು ನೋಡುತ್ತಾರೆ. ಆಗ ಪಮ್ಮುವಿನ ಬಿಂದಿಗೆಯಲ್ಲಿರುವ ನೀರು ಬಚ್ಚಲಿಗೆ ತಲಪಲು ತುಂಬ ಸಮಯ ಹಿಡಿಯುತ್ತದೆ. ಹೆಜ್ಜೆಯ ಮೇಲೆ ಹೆಜ್ಜೆ ಇಡುತ್ತ ಶರೀರ ಅಲ್ಲಾಡದ ಹಾಗೆ ನಡೆಯುತ್ತಾಳೆ. ಅದೂ ಅಲ್ಲದೆ ವಯಸ್ಸು 40 ಕಳೆದಿದ್ದರೂ ಪಮ್ಮುವಿನ ಯೌವನ ಇನ್ನೂ ಸಡಿಲ

ವಾಗಿರಲಿಲ್ಲ. ಅವಳ ತುರುಬಿನ ಸೊಂಪು, ಸೆರಗನ್ನು ಎಳೆದು ಕಟ್ಟಿದುದರಿಂದ ಕಾಣುವ ಸೊಂಟದ ಮಾಟ, ಪೃಷ್ಠದ ಬಿಗಿ ಒಂದಿಷ್ಟೂ ಕುಂದಿರಲಿಲ್ಲ. ಗಂಡಸರ ಕಣ್ಣಿಗೆ ಯಾವಾಗಲೂ ಅವಳ ಸೌಂದರ್ಯ ಚುಚ್ಚುವಂತಿತ್ತು. ಇದಕ್ಕೆ ಸಂಶಯವೇ ಇಲ್ಲ.

ಮಗುವಿಗೆ ಎಣ್ಣೆ ಸವರಬೇಕು. ಕೆಂಪುಬೇರಿನ ಎಣ್ಣೆಯನ್ನು ಶೀನ ಐತಾಳರು ಕೊಡುತ್ತಾರೆ. ಅದು ಅವರೇ ತಯಾರಿಸಿದ ವಿಶಿಷ್ಟ ಎಣ್ಣೆ. ಶೀನ ಐತಾಳರು ಸ್ವಲ್ಪ ವಿಚಿತ್ರ ಮನುಷ್ಯ. ಬೇರಿನ ಔಷಧಿಯಲ್ಲದೆ ಮಾಟ ಮಂತ್ರ, ಪ್ರೇತೋಚ್ಚಾಟನೆ, ವಶೀಕರಣ ಎಲ್ಲ ಅವರಿಗೆ ಗೊತ್ತಿದೆ. ಅವರಿಗೆ ಭೂತ ಬಿಡಿಸುವ ಐತಾಳರೆಂದೇ ಹೆಸರು. ಈ ವಿಶೇಷಣದಿಂದ ತಿಳಿಯುವಷ್ಟು ಬೇಗ ಅವರ ನಿಜ ಹೆಸರು ಹೇಳಿದರೆ ಜನರಿಗೆ ಗೊತ್ತಾಗುವುದಿಲ್ಲ. ಮಗುವಿಗೆ ಎಣ್ಣೆ ಹಚ್ಚಿ ಕೈಕಾಲು ಮಾಲೀಷು ಮಾಡಿ ಸ್ನಾನ ಮಾಡಿಸಿದ ಬಳಿಕವೇ ಬಾಣಂತಿಯ ಕೆಲಸ.

ಸರಸು ಅಂತಕ್ಕನ ಮೊದಲ ಮಗಳು. ಅವಳ ಬಾಣಂತನವೂ ಬಹಳ ನಾಜೂಕಿನಿಂದಲೂ ಸಂಭ್ರಮದಿಂದಲೂ ನಡೆಯುತ್ತಿತ್ತು. ಅವಳ ಒತ್ತಿನವ ಮೈಂದಣ್ಣ. ಅವನ ಅನಂತರ ಭವಾನಿ. ಅವಳ ಬಳಿಕ ಅವಳಿಜವಳಿ ಗಂಡು ಮಕ್ಕಳು ರಾಮ ಮತ್ತು ಲಕ್ಷ್ಮಣ ಇಬ್ಬರೂ ಆಕಸ್ಮಿಕವಾಗಿ ತೀರಿಹೋದರು. ಅಣೆಕಟ್ಟಿನ ನೀರಿನಲ್ಲಿ ಬಾಳೆದಿಂಡನ್ನು ತೆಪ್ಪವನ್ನಾಗಿ ಮಾಡಿ ಈಜು ಕಲಿಯಲು ಹೋದವರು ಕೈಸೋತು ನೀರಲ್ಲಿ ಮುಳುಗಿ ಸತ್ತು ಹೋದಮೇಲೆ ಅಂತಕ್ಕನಿಗೆ ಉಳಿದವರು ಮೂವರು ಮಕ್ಕಳು.

ಸಂಪಾಜೆಯ ಪತ್ತಿಮಾರ್ ಗುತ್ತಿನ ಮನೆಯಿಂದ ಮುತ್ತೈದೆತನವನ್ನು ಕಳಕೊಂಡು ಹದಿಮೂರು ದಿನಗಳ ಸೂತಕ ಕಳೆದು ಗಂಡನ ಮನೆಯ ಹಂಗನ್ನು ತೊರೆದು ಮುಖ ಮುಚ್ಚಿಕೊಂಡು ಬೊಳ್ಳೂರು ಬಾವೆಯ ತವರುಮನೆಯ ಆಶ್ರಯಕ್ಕೆ ಬರುವಾಗ ಅವರು ತಂದ ದೊಡ್ಡ ಆಸ್ತಿಯೆಂದರೆ ಈ ಮೂವರು ಮಕ್ಕಳು. ಅಂತಕ್ಕನ ಭಾಗ್ಯವನ್ನು ಏನು ಹೇಳುವುದು!

ಬಾಣಂತಿಗೆ ಎಣ್ಣೆ ಹಚ್ಚಿದ ಮೇಲೆ ಎರಡು ಮೂರು ಗಂಟೆ ಹಾಗೇ ಇರಬೇಕು. ಅಷ್ಟು ಹೊತ್ತಿಗೆ ಬೆಳಿಗ್ಗೆ ತಿಂದ ಟೋಸ್ಟೂ ಕರಗುತ್ತದೆ. ಕುಡಿದ ದಶಮೂಲಾರಿಷ್ಟವೂ ಕರಗಿರುತ್ತದೆ.

ಅಷ್ಟಾದಾಗ ಎಣ್ಣೆ ಹಚ್ಚಿ ಚಾಪೆಯಲ್ಲಿ ಮಲಗಿಸಿದ್ದ ಮಗುವನ್ನು ಎತ್ತಿ ಅಂತಕ್ಕನ ಕೈಗೆ ಕೊಟ್ಟು ಪಮ್ಮು ಮಗುವಿಗೆ ಸ್ನಾನ ಮಾಡಿಸಲು ತಪ್ಪಲೆಯಲ್ಲಿ ನೀರು ತೋಡುತ್ತಾಳೆ. ಮಣೆಯಲ್ಲಿ ಕುಳಿತು ಮಗುವಿಗೆ ಸ್ನಾನ ಮಾಡಿಸುವಾಗ ಅಂತಕ್ಕ ಅಲ್ಲೇ ಕುಳಿತುಕೊಳ್ಳುತ್ತಾರೆ. 'ಕಾಲು ಕೈಗಳನ್ನು ನಿಧಾನವಾಗಿ ಬಗ್ಗಿಸು. ಗಂಟಲಿನ ಬಳಿ ಮೇಲಕ್ಕೆ ಉಜ್ಜು, ತೊಡೆಯ ಸಂದನ್ನು ಮೆಲ್ಲ ಉಜ್ಜು, ಕೈಕಾಲಿನ ಲಟಿಕೆ ತೆಗೆಯಬೇಡವೇ? ಅದು ಯಾವ ರೀತಿ ತೆಗೆಯುತ್ತೀಯಾ? ಎಳೆ ಬೆರಳುಗಳನ್ನು ಎಳೆಯಬೇಡವೇ?' ಹೀಗೆಲ್ಲ ಎಚ್ಚರಿಕೆ ಕೊಡುತ್ತಾರೆ. ತಲೆಗೆ ನೀರು ಹುಯ್ಯುವಾಗ 'ಹಣೆಯ ಬಳಿ ಕೈ ಅಡ್ಡ ಇಡು, ಮೂಗಿಗೆ ನೀರು ಹೋಗದಂತೆ.. ಆಯ್ತಾ? ಸರಿ, ನೆತ್ತಿ ಊದು' ಎನ್ನುತ್ತಾರೆ.

ಮಗುವನ್ನು ತೆಳ್ಳಗಿನ ಬಟ್ಟೆಯಲ್ಲಿ ಸುತ್ತಿಕೊಂಡು ತರುತ್ತಾರೆ. ಒಳಗೆ ಬಂದು 'ಭವಾನಿ, ಲೋಬಾನ ತೆಗೆದುಕೊಂಡು ಬಾ. ಸೌಟಿನಲ್ಲಿ ಕೆಂಡ ತೆಗೆದುಕೊಂಡು ಬೇಗ ಬಾ.' ಎನ್ನುತ್ತಾರೆ.. ಬಟ್ಟೆಯಲ್ಲಿ ಸುತ್ತಿ ಹೊಗೆ ಕೊಡಿಸಿ ತೊಟ್ಟಿಲಲ್ಲಿ ಮಲಗಿಸುತ್ತಾರೆ.

ಆಮೇಲೆ ಬಾಣಂತಿಗೆ ಸ್ನಾನ ಮಾಡಿಸುವ ಸಂಭ್ರಮ. ಎರಡು ಹಂಡೆ ನೀರು ಬೇಕೇ ಬೇಕು. ತಪ್ಪಲೆಯಲ್ಲಿ ನೀರು ತುಂಬಿಸಿ ಬೀಸಿ ಎರೆಯಬೇಕು. ಹೆಗಲಿಗೆ, ಬೆನ್ನಿಗೆ, ಕಾಲಿಗೆ, ಎದೆಗೆಲ್ಲ ಬಿಸಿ ಬಿಸಿ ನೀರು ಎರಚಿದ ಬಳಿಕ ಸೀಗೆಕಾಯಿ ಹಾಕಿ ತಲೆ ತಿಕ್ಕಬೇಕು. ಆಮೇಲೆ ಸೋಪು ಹಾಕಿ ತಿಕ್ಕಬೇಕು. ಎಣ್ಣೆ ಹೋಗಬೇಕಿದ್ದರೆ ಚೆನ್ನಾಗಿಯೇ ತಿಕ್ಕಬೇಕು. ಸ್ನಾನವಾಗಿ ಅವಳನ್ನು ಒಳಗೆ ಕರೆದುಕೊಂಡು ಬರುವುದರೊಳಗೆ ಪಮ್ಮುಗೆ ಸಾಕಾಗಿರುತ್ತದೆ. ಬಿಸಿ ನೀರು ಎರಚಿ ಎರಚಿ ಕೈ ಸುಸ್ತಾಗಿರುತ್ತದೆ. ಅನಂತರ 20 ಮೊಳದ ವಾಯಿಲ್ ಸೀರೆಯನ್ನು ಮಡಚಿ ಆರಿಂಚು ಅಗಲದ ಪಟ್ಟಿಮಾಡಿ ಬಾಣಂತಿಯ ಸೊಂಟಕ್ಕೆ ಸುತ್ತಬೇಕು. ಸರಸು ಮಂಚವನ್ನು ಗಟ್ಟಿ ಹಿಡಿದುಕೊಳ್ತಾಳೆ. ಪಮ್ಮು ಅವಳಿಗೆ ಸುತ್ತು ಬರುತ್ತ ಸೀರೆಯನ್ನು ಸೊಂಟಕ್ಕೆ ಸುತ್ತುತ್ತಾಳೆ. ಅಷ್ಟಾಗುವಾಗ ಅಂತಕ್ಕ ಮಣ್ಣಿನ ಬೋಗುಣಿಯಲ್ಲಿ ಕಡೆದಿಟ್ಟ ಸೊಪ್ಪಿಗೆ ಬೆಣಚುಕಲ್ಲು ಕಾಯಿಸಿ ಹಾಕಿ ಅದನ್ನು ಮಗಳಿಗೆ ಕುಡಿಯಲು ತಂದುಕೊಡುತ್ತಾರೆ. ಅದನ್ನು ಕುಡಿದ ಮೇಲೆ ಬಾಣಂತಿ ಮುಸುಕು ಹಾಕಿ ಮಲಗುತ್ತಾಳೆ.

ಒಂದು ನಿದ್ರೆ ಮುಗಿಸಿ ಬಾಣಂತಿ ಎದ್ದ ಮೇಲೆ ಒಂದು ಮೊಟ್ಟೆಕೋಳಿಯನ್ನು ಕುಯ್ದು ಮಾಡಿದ ಪಲ್ಯವನ್ನೂ ತಿಳಿ ಬಸಿದು ಚೆನ್ನಾಗಿ ಆರಿಸಿದ ಬಿಡಿ ಬಿಡಿ ಅನ್ನವನ್ನೂ ಕೊಡುತ್ತಾರೆ. ಆ ಪಲ್ಯಕ್ಕೆ ಕೊಬ್ಬರಿಯನ್ನು ಸುಟ್ಟು ಮಸಾಲೆ ಹಾಕಿ ಕೊದ್ದೆಲು ಮಾಡುತ್ತಾರೆ. ಅದಕ್ಕೆ ತುಪ್ಪದಲ್ಲಿ ಒಗ್ಗರಣೆ ಕೊಡುತ್ತಾರೆ. ಅದು ಬೇಯುವಾಗ ಅದರ ನೀರನ್ನು ಬಸಿದು ಅದಕ್ಕೆ ನೀರುಳ್ಳಿ ಹಾಕಿ ಕುದಿಸಿ ಊಟಕ್ಕೆ ಮೊದಲು ಬಾಣಂತಿಗೆ ಕುಡಿಯಲು ಕೊಡುತ್ತಾರೆ.

ಹೀಗೆ, 40 ದಿನಗಳ ಬಾಣಂತನ ಮುಗಿದು ಬಾವಿ ಮುಟ್ಟುವುದು, ದೇವಸ್ಥಾನಕ್ಕೆ ಹೋಗಿ ಬರುವುದು ಕಳೆಯುವುದರೊಳಗೆ ಒಬ್ಬ ಬಾಣಂತಿಗೆ ಕಡಿಮೆಯೆಂದರೂ 30 ಕೋಳಿಗಳು ಬೇಕಾಗುತ್ತವೆ. ಆದರೆ ಮಗಳನ್ನು ಸಾಕಲು, ಮದ್ದು ಮಾಡಲು, ಮಣ್ಣಿ ಮಾಡಲು, ಬೆಳ್ಳುಳ್ಳಿಯ ಮದ್ದು ಕಡೆಯಲು ಖರ್ಚು ಮಾಡುವಷ್ಟು ಧಾರಾಳ ದುಡ್ಡು ಅಂತಕ್ಕನ ಹತ್ತಿರ ಇಲ್ಲ. ಯಾರನ್ನು ಕೇಳುವುದು, ತಮ್ಮಂದಿರು ಅವಳ ಮಾತಿಗೆ ಕಿವಿ ಕೊಡುವವರಲ್ಲ. ಅವಳ ಕಷ್ಟ ಸುಖ ವಿಚಾರಿಸುವವರಲ್ಲ. ಅಂತಕ್ಕನಿಗೆ ಹಣದ ವಿಚಾರದಲ್ಲಿ ಕೈಕಟ್ಟಿದೆ ಎಂಬುದು ಅವರಿಗೆ ಗೊತ್ತಿದ್ದದ್ದೇ.

ಅಡುಗೆ ಮನೆಯ ಜವಾಬ್ದಾರಿ ತುಂಗಕ್ಕನದಾದರೆ ಹೊರಗಿನ ಉಸ್ತುವಾರಿಯನ್ನು ನೋಡಿಕೊಳ್ಳುವುದು ಸೋಮಕ್ಕ. ಸಾಮಾನು ಇಡುವ ಉಗ್ರಾಣ ಕೋಣೆಯ ಹಿತ್ತಾಳೆಯ ಬೀಗದ ಕೈಗೊಂಚಲು ಶಂಭು ಚೌಟರ ಸೊಂಟದಲ್ಲಿ. ಅಂತಕ್ಕನ ಕಾರುಬಾರು ಎಲ್ಲೂ ನಡೆಯುವುದಿಲ್ಲ. ಆಮೇಲೆ ಅವರಿಗೆ ಉಳಿದಿರುವುದೇನು! ಹೊಲದಂಡೆಯ ಎಳೆ

ತೆಂಗಿನಕಾಯಿ, ಕುಯಿಲು ಆಗಿ ತೆನೆಯಲ್ಲಿ ಬಾಕಿಯಾದ ಜಳ್ಳು ಭತ್ತ, ಒಂದಷ್ಟು ಅಕ್ಕಿ ನುಚ್ಚು.

ಬಾಣಂತಿಯ ಅನುಪಾನಕ್ಕಾಗಿ ಗಾಣದಲ್ಲಿ ತೆಗೆದ ತೆಂಗಿನೆಣ್ಣೆಯೂ ಅಂಗಡಿಯ ಸಾಮಗ್ರಿಗಳೂ ಬೇಕು. ಓಲೆಬೆಲ್ಲ, ತುಪ್ಪ, ಹೊನ್ನೆಣ್ಣೆ, ಬಾಯಿಗಿಷ್ಟವಾದ ಭಕ್ಷ್ಯ ಮಾಡಲು ಓಲೆಬೆಲ್ಲ, ಜೀರಸಾಲೆ ಅಕ್ಕಿ, ಒಳ್ಳೆಮೆಣಸು, ಅವಲಕ್ಕಿ ಇತ್ಯಾದಿಗಳು.

ಅಂಗಡಿ ಸಾಮಗ್ರಿಗಳೆಲ್ಲ ಬೇಕೆಂದು ರುಕ್ಕಕ್ಕ ಹಿರಿಮಗನ ಬಳಿಗೆ ಹೋಗಿ ಹಿಂಜರಿಯುತ್ತ ಹೇಳಿದರು. 'ನನ್ನಿಂದ ಏನೂ ಸಾಧ್ಯವಿಲ್ಲ. ನಾನು ಯಾವಾಗ ಆ ಕಂಬಳದ ಹೊಲದಲ್ಲಿ ಕೋಣನ ಹಿಂದಿನ ನೊಗದ ಹಲಗೆಯಿಂದ ಬಿದ್ದೆನೋ ಆ ದಿನವೇ ನನ್ನ ಮೂರೂ ಮೂಳೆ ಮುರಿಯಿತು. ಅಲ್ಲಿಗೆ ನನ್ನ ಆಯುಷ್ಯವೂ ಮುಗಿದಂತಾಯಿತು. ನನಗೇ ಸರಿಯಾಗಿ ನಿಲ್ಲುವುದಕ್ಕೆ ಆಗುವುದಿಲ್ಲ. ನೇಗಿಲು ಹಿಡಿದು ಎರಡು ಸುತ್ತು ಉಳುವುದಕ್ಕೂ ಆಗುವುದಿಲ್ಲ. ಹಾಕಿದ ಅನ್ನ ಕೊಟ್ಟ ಕೆಲಸ ಅಂತ ದಿನ ತಳ್ಳುತ್ತಿದ್ದೇನೆ. ಲೆಕ್ಕಪಕ್ಕ ಖರ್ಚಿನ ವಿವರ ಕೊಡುವ ತೆಗೆದುಕೊಳ್ಳುವ ಇಟ್ಟುಕೊಳ್ಳುವ ಜವಾಬ್ದಾರಿಯನ್ನೆಲ್ಲ ಶಂಭುಗೇ ಬಿಟ್ಟುಕೊಟ್ಟಿದ್ದೇನೆ. ನೀವು ಇದನ್ನು ಅವನಿಗೆ ಹೇಳಿ. ಅವನು ಬೇಕಾದ ಹಣ ಕಾಸು ಕೊಡ್ತಾನೆ. ಅವನಿಗೆ ಸ್ವಲ್ಪ ಮುಂಗೋಪ ಅಷ್ಟೇ. ಮೂಗಿನ ತುದಿಯಲ್ಲಿ ದುಡುಕು.. ಅದು ಬಿಟ್ಟರೆ ಆತ ಅಂಥ ಕೆಟ್ಟ ಮನುಷ್ಯನೇನೂ ಅಲ್ಲ' ಎಂದರು ದೇವಣ್ಣ ಚೌಟರು.

'ಲೇ, ಹೆಣ್ಣೇ (ಅಂತಕ್ಕನನ್ನು ಅವರ ತಾಯಿ ರುಕ್ಕಕ್ಕನಿಗೆ ಚಿಕ್ಕಂದಿನಿಂದಲೂ ಹಾಗೆಯೇ ಕರೆಯುವುದು ರೂಢಿಯಾಗಿತ್ತು) ಈ ಮಹಾನುಭಾವರ ಜತೆ ನನಗೆ ಮಾತನಾಡಲು ಸಾಧ್ಯವಿಲ್ಲ. ಸಮಯ ಸಂದರ್ಭ ನೋಡಿಕೊಂಡು ನೀನೇ ಶಂಭುವಿನ ಹತ್ತಿರ ಹೇಳು ಮಗಳೇ' ಎಂದರು ರುಕ್ಕಕ್ಕ.

ಅಂತಕ್ಕನಿಗೆ ದುಃಖವೂ ಕೋಪವೂ ಏಕಕಾಲಕ್ಕೆ ನಾನು ತಾನೆಂದು ಧಾವಿಸಿತು. ಆದರೆ ಏನು ಮಾಡಿಯಾರು! ತಮ್ಮಂದಿರನ್ನು ಅಲ್ಲಾಡಿಸಲು ಅವರಿಂದಾಗದು. ಅವರು ಮದುವೆಯಾಗುವ ಯುವತಿಯಾಗಿದ್ದಾಗ ಎಲ್ಲ ಮನೆಯ ಹೆಣ್ಣುಮಕ್ಕಳನ್ನೂ ನೆಂಟಸ್ತಿಕೆ ಕೇಳಲು ಜನ ಬರುತ್ತಿದ್ದರು. ಆದರೆ ಅಂತಕ್ಕನನ್ನು ಕೇಳುವುದಕ್ಕೆ ಎಲ್ಲರೂ ಹಿಂಜರಿಯು ತ್ತಿದ್ದರು. ಆಗ ಅವರ ತಂದೆ ಸಂಕು ಚೌಟರು ಬದುಕಿದ್ದರು. ಅವರು ಶೆಡ್ಯದ ದೋಣಿಂಜೆ ಮನೆತನದವರು. ಬಹಳ ಸಾಧು ಮನುಷ್ಯ. ಯಾರಿಗೂ ಗದರಿಸಿ ಒಂದು ಮಾತು ಹೇಳುವವರಲ್ಲ. ಯಾರ ಜತೆಗಾದರೂ ನೆಂಟಸ್ತಿಕೆಯ ವಿಷಯ ಬಂದರೆ ಅವರು ಹೇಳುತ್ತಿದ್ದರು, 'ನನಗೆ ಇಬ್ಬರು ಜೋರಿನ ಗಂಡು ಮಕ್ಕಳು. ಒಬ್ಬಳು ಮಗಳು. ದೇವರು ಅವಳನ್ನೂ ಗಂಡಾಗಿ ಹುಟ್ಟಿಸುತ್ತಿದ್ದರೆ ಯೋಚನೆಯೇ ಇರುತ್ತಿರಲಿಲ್ಲ.' ಎಲ್ಲಿ ಮಾತು ಬಂದರೂ ಸಂಕು ಚೌಟರಿಗೆ ಮಗಳದ್ದೇ ಪ್ರಶಂಸೆ. ಆದರೆ ಮದುವೆಯ ವಿಚಾರ ಬಂದಾಗ ಎಲ್ಲರೂ 'ಬೇಡಪ್ಪ, ಮನೆಗೆ ಉಡ ನುಗ್ಗಿದಂತೆ ಆದೀತು' ಎಂದೇ ಹೇಳುತ್ತಿದ್ದರು.

ಒಂದು ದಿನ ಹೊಟ್ಟೆಗೆ ಯಾವುದೋ ನಂಜಿನ ಆಹಾರ ಬಿದ್ದು ವಾಂತಿಭೇದಿಯಾಗಿ ಡಾಕ್ಟರರು ಬರುವುದರೊಳಗೇ ಸಂಕು ಚೌಟರು ಕಣ್ಣು ಮುಚ್ಚಿದರು. ಮಧ್ಯರಾತ್ರಿಯಲ್ಲಿ ಪದವಿಗೆ ಬೆಟ್ಟ ಹತ್ತಿ ಹೋಗಬೇಕು. ಮೂರು ಮೈಲಿ ಲಾಟೀನಿನ ಬೆಳಕಿನಲ್ಲಿ ಹೋಗಿ ಡಾಕ್ಟರರನ್ನು ಕರೆದುಕೊಂಡು ಬರುವಾಗ ಸಂಕು ಚೌಟರು ತನ್ನ ಒಳ್ಳೆಯದು ಕೆಟ್ಟದ್ದು ಎಲ್ಲವನ್ನೂ ತೆಗೆದುಕೊಂಡು ಮದ್ದು ಕೊಟ್ಟು ಕರೆದು ತರಲು ಆಗದ ಊರಿಗೆ ಹೊರಟೇ ಹೋಗಿದ್ದರು.

ಈಗ ಅಂತಕ್ಕನ ಜವಾಬ್ದಾರಿ ಅವರ ಇಬ್ಬರು ತಮ್ಮಂದಿರ ಮೇಲೆ ಬಿತ್ತು. ಶಂಭು ಚೌಟರಿಗೆ ಕೋಳಿ ಅಂಕದ ಹುಚ್ಚು. ಎಲ್ಲಿಯಾದರೂ ಕೋಳಿ ಅಂಕ ಇದೆಯೆಂಬ ಸುದ್ದಿ ಸಿಕ್ಕಿದರೆ ಸಾಕು ಎರಡು ಹುಂಜಗಳನ್ನು ಆಳಿನ ಕೈಯಲ್ಲಿ ಹಿಡಿಸಿಕೊಂಡು ಹತ್ತು ಮೈಲು ದೂರ ಬೇಕಾದರೂ ಹೋಗುತ್ತಾರೆ. ಎಣ್ಮೂರು ಕಟ್ಟದ ಬೈದ್ಯರ ನೇಮದ ಕೋಳಿಕಟ್ಟ ಎಂದರೆ ಸುಪ್ರಸಿದ್ಧ. ಅಲ್ಲಿ ಒಕ್ಕಲಿಗರೂ ಇತರರೂ ಕೋಳಿಕಟ್ಟದಲ್ಲಿ ಭಾಗವಹಿಸುತ್ತಾರೆ.

ತೆಂಕುನಾಡಿಗೆ ಹೋಗಿ ಕೊಚ್ಚಿ, ಕೊಲ್ಲಾಚಿಯಿಂದ ಕೋಳಿಗಳನ್ನು ತಂದು ಸಾಲಾಗಿ ನಿಲ್ಲಿಸಿ ಕೋಳಿ ಕಟ್ಟ ನಡೆಸುತ್ತಾರೆ. ಮಂಜನಾಡಿ, ಸಿದ್ಯಾಲ, ಮೆಣಾಲದವರೆಲ್ಲ ಬಂದು ಸೇರುತ್ತಾರೆಂಬ ಸುದ್ದಿಯನ್ನು ಕೂರಿಯಾಲದ ರಾಜನ್ ದೈವದ ಕೋಲಕ್ಕೆ ಬಂದ ಬೆಳ್ಳಾರೆಯ ಸೀತಮಾರ್ಲೆ ಹೇಳಿದ. ಕೇಳಿದ ಕೂಡಲೇ ಶಂಭು ಚೌಟರ ಕಿವಿ ನೆಟ್ಟಗಾಯ್ತು. ಹೇಗಾದರೂ ಬೈದ್ಯರ ನೇಮಕ್ಕೆ ಹೋಗಿ ಆ ಕೋಳಿಕಟ್ಟವನ್ನು ನೋಡಲೇಬೇಕೆಂದು ಅವರು ನಿರ್ಧರಿಸಿದರು. ನಾಲ್ಕು ಉತ್ತಮವಾದ ಕಟ್ಟದ ಹುಂಜಗಳನ್ನು ಗುಡ್ಡದ ಭತ್ತ ತಿನ್ನಿಸಿ ಮೂರು ತಿಂಗಳು ಸಾಕಿದರು. ಬೆಳಗ್ಗೆ ಬೆಳಗ್ಗೆ ಎದ್ದ ತಕ್ಷಣ ಅವರಿಗೆ ಅವುಗಳದೇ ಸೇವೆ. ಆಳು ಬಲಾಯಿ ಉಳುವ ಕೋಣಗಳಿಗೆ ಅಕ್ಕಚ್ಚು, ಹುಲ್ಲು, ಓಟದ ಕೋಣಗಳಿಗೆ ಹುರುಳಿ ಕೊಟ್ಟಿದ್ದಾನಾ ಎಂದು ನೋಡುವುದು ಆಮೇಲೆ. ಮೊದಲು ಕೋಳಿಗಳ ಮಾಲೀಸು ನಡೆಯಬೇಕು.

ಬೈದ್ಯರ ನೇಮಕ್ಕೆ ಧ್ವಜ ಏರಿಸಲಾಗಿದೆ ಎಂಬ ಸುದ್ದಿ ಸೀತಮಾರ್ಲನ ಪತ್ರದಿಂದ ಗೊತ್ತಾಯ್ತು. ಕೂಡಲೇ ಚೌಟರು ನಾಲ್ಕು ಕಟ್ಟದ ಹುಂಜಗಳನ್ನು ನಾಲ್ವರು ಯುವಕರ ಕೈಯಲ್ಲಿ ಹಿಡಿಸಿಕೊಂಡು ಬಹಳ ಸಂಭ್ರಮ ಸಡಗರಗಳಿಂದ ಬೈದ್ಯರ ನೇಮಕ್ಕೆ ಹೊರಟರು. ಎರಡು ಬೆರಳಗಲದ ಜರಿಯಂಚಿನ ಶಲ್ಯ ಹಾಕಿ ಮುಂಡಾಸು ಸುತ್ತಿಕೊಂಡು ಬಹಳ ಜಂಭದಿಂದ ಹೊರಟರು.

ಬೈದ್ಯರ ನೇಮ ನಡೆಯುವ ಗರಡಿಯ ಸಮೀಪದಲ್ಲೇ ಮಣಿಲದ ಮನೆ. ಹಳೆಯ ಗೋಡೆಗಳ ಮುಳಿಹುಲ್ಲಿನ ಗುಡಿಸಲು. ಅದು ಸೀತಮಾರ್ಲನ ದೊಡ್ಡಮ್ಮನ ಗಂಡನ ಮನೆ. ಮಾರ್ಲನ ಇಷ್ಟದಂತೆ ಅವನೊಂದಿಗೆ ಮಣಿಲದ ಮನೆಗೆ ಹೋದರು. ಆವತ್ತು ರಾತ್ರಿ ಕೋಳಿ ಕಡುಬು, ತೆಂಗಿನ ಹೆಂಡ (ಕುಡಿಯುವವರಿಗೆ ಸ್ವಲ್ಪ ಸ್ವಲ್ಪ ಸಾರಾಯಿಯೂ ಇತ್ತು), ಹೆಸರುಬೇಳೆ ಪಾಯಸದ ಊಟವೂ ಆಯ್ತು.

ಮರುದಿನ ಬೆಳಿಗ್ಗೆ ಬಾಳೆಎಲೆಯಲ್ಲಿ ಮಡಚಿ ಉಗಿಯಲ್ಲಿ ಬೇಯಿಸಿದ ಕೊಟ್ಟಿಗೆ ಮತ್ತು ತೆಂಗಿನಕಾಯಿ ಚಟ್ನಿಯ ಫಲಾಹಾರ ಸೇವಿಸಿ ಬೈದ್ಯರ ನೇಮ ನೋಡಿದರು. ಅದರ ಮರುದಿನ ಹುಲಿಭೂತದ ಕೋಲ. ಅದರ ಮರುದಿನ ಬೆಳಿಗ್ಗೆ ಕೋಳಿಅಂಕ. ಸಾಲಾಗಿ 25 ಕೋಳಿಗಳನ್ನು ನಿಲ್ಲಿಸಿ 'ಕಾದುವವರು ಯಾರಿದ್ದೀರಿ?' ಎಂದು ಕೇಳಿದರು ಮಂಜನಾಡಿನ ಮಲ್ಲಿನವರು. ಅವರ ವಿರುದ್ಧ ಮಣಿಲದ ಸಿದ್ಯ ಮತ್ತು ಶಂಭು ಚೌಟರು ಪ್ರತಿಸವಾಲು ಹಾಕಿದರು. ಇವರ ಜತೆಯಲ್ಲಿ ಕೇನ್ಯದ ಮನೆಯ ಮುಂಡಪ್ಪ ಕಂಬೊಳಿಯೂ ಸೇರಿದರು. ಹತ ಹತ ಎನ್ನುತ್ತ ಕೋಳಿಗಳು ನೆಗೆದು ನೆಗೆದು ತಾಗಿದುವು. ಕೋಳಿಗಳಿಗಿಂತ ಹೆಚ್ಚಾಗಿ ಅವರ ಮಾಲಿಕರೂ ಗೆಳೆಯರೂ ಹೆಚ್ಚು ನೆಗೆಯುತ್ತಿದ್ದರು. ಕಿಕ್ಕಿರಿದ ಜನರ ಬೊಬ್ಬೆಯೋ ಬೊಬ್ಬೆ. ಮಂಜನಾಡಿನ ಸೀನಮಲ್ಲಿಯ ಮನೆಯ ಕೋಳಿಗಳು ನೋಡಲು ತುಂಬ ಮಜಬೂತಾಗಿದ್ದುವು. ಸೋಲು ಗೆಲವು ದೈವೇಚ್ಛೆಯಾದರೂ ಆ ದಿನ ಅವರ ಅದೃಷ್ಟ ಖೋತಾ ಆಗಿತ್ತು. ಹತ್ತು ಕೋಳಿಗಳು ಕಾದಿ ಸೋತುವು. ನಾಲ್ಕು ಕೋಳಿಗಳು ಕತ್ತಿ ಕಟ್ಟಿದ ಕಾಲಿಗೆ ಪೆಟ್ಟಾಗಿ ಬದಿಗೆ ಸರಿದವು. ಉಳಿದ ಕೋಳಿಗಳು ಮೂರು. ಅದರಲ್ಲೊಂದು ಶಂಭು ಚೌಟರ ಕೋಳಿಯ ಎದುರು ಸೆಣಸಿ ಮರ್ಮಕ್ಕೆ ಪೆಟ್ಟಾಗಿ ಬಿತ್ತು. ಉಳಿದ ಎರಡು ಕೋಳಿಗಳಲ್ಲಿ ಒಂದು ಕುತ್ತಿಗೆಯ ನರಕ್ಕೆ ಮತ್ತು ಎದೆಗೆ ಏಟು ಬಿದ್ದು ಅಲ್ಲೇ ಬಸಳೆಯ ಕುಡಿಯಂತೆ ಬಾಡಿ ಬಿದ್ದಿತು. ಇನ್ನೊಂದು ಕಾಲಿಗೆ ಕತ್ತಿ ಕಟ್ಟಿದ್ದಂತೆಯೇ ಕಳದಿಂದ ಓಡಿತು. ಅದನ್ನು ಹಿಂಬಾಲಿಸಿ ಓಡಿದ ಯುವಕನೊಬ್ಬ ಕೋಳಿಯನ್ನು ಹಿಡಿಯುವಾಗ ಅದರ ಕಾಲಿನ ಕತ್ತಿ ತಾಗಿ ಕೊಂಬಿನ ಗಿಂಡಿಯ ಧಾರೆಯಿಂದ ಸುರಿಯುವ ನೀರಿನಂತೆ ನೆತ್ತರು ಹರಿದು ಹೊಲದಲ್ಲೇ ಪ್ರಜ್ಞೆ ತಪ್ಪಿ ಬಿದ್ದ.

ಒಬ್ಬ ಮೇಲೆ ನೆಗೆದ ಕೋಳಿಯನ್ನು ಹಿಡಿಯಲು ಕೈಹಚ್ಚಿದಾಗ ಕತ್ತಿಯೇ ಕೈಗೆ ಸಿಕ್ಕಿ ಕೋಳಿ ಮೇಲೆ ಹೋಗಿ ಉಳಿದ ಕೋಳಿಗಳ ಜತೆ ಸೇರಿತು. ಕೋಳಿ ಅಂಕ ಮುಗಿಯುವಾಗ ರಾತ್ರಿ ಹತ್ತು ಗಂಟೆ ಕಳೆದಿತ್ತು. ಅನಂತರ ಜಾರು ಕೊಟ್ಟಾರಿನ ಸಾರಾಯಿ ಕುಡಿದು ಮಣಿಲದ ಮನೆ ಸೇರುವಾಗ ರಾತ್ರಿ ಹನ್ನೆರಡು ಕಳೆದಿತ್ತು. ಮಣಿಲದ ಮನೆಯ ಹೆಂಗಸರು ಬಂದವರನ್ನು ಮನಸ್ಸಿನಲ್ಲೇ ಬಯ್ಯುತ್ತ ನಿದ್ರೆ ತೂಗುವ ಕಣ್ಣಿನಲ್ಲೇ ಆ ಮಧ್ಯರಾತ್ರಿ ಬಸಳೆ ಮತ್ತು ಹುರುಳಿಕಾಳು ಹಾಕಿ ಮಾಡಿದ ಮೇಲೋಗರದಲ್ಲೇ ಊಟ ಬಡಿಸಿದರು. ರಾತ್ರಿ ಗೆದ್ದುತಂದ ಕೋಳಿಗಳನ್ನು ಕೋಳಿಗೂಡಿನಲ್ಲಿಟ್ಟು ಬುಟ್ಟಿ ಕವುಚಿದರು. ಆಳುಗಳು ಗಾಯದ ಕೋಳಿಗಳಿಗೆ ನಂಜು ಹೋಗಲು ಕಡೆಂಜದ ಎಣ್ಣೆಯನ್ನು ಹಚ್ಚಿ ಬಟ್ಟೆ ಕಟ್ಟಿದರು. ಅಷ್ಟು ಹೊತ್ತಿಗೆ ಎರಡು ಗಂಟೆ. ಅವರಿಗೆ ಒಂದು ಪಾತ್ರೆಯಲ್ಲಿ ಮೇಲೋಗರ ತೆಗೆದಿಟ್ಟು ಹೆಂಗಸರೆಲ್ಲ ಹೋಗಿ ಮಲಗಿದರು. ಕೆಲಸದಾಳು ಐತ ಅವರಿಗೆ ಬಡಿಸಲು ನಿಂತ.

ಎಣ್ಮೂರು ಕೋಳಿಅಂಕಕ್ಕೆ ಹೋದ ಕಾರಣ ಶಂಭು ಚೌಟರಿಗೆ ಮುಂಡಪ್ಪ ಕಂಬೋಳಿಯವರ ಪರಿಚಯವಾಯ್ತು. ಜಾತ್ರೆಯ ಮರುದಿನ ಔತಣದ ಊಟ ಮಾಡುವಾಗ 'ಇಷ್ಟು ದೂರ ಬಂದಿದ್ದೀರಲ್ಲ ಚೌಟರೇ, ನಮ್ಮ ಮನೆಗೆ ಬಂದು

ಹೋಗಬಹುದು' ಎಂದರು ಕಂಬೋಳಿಯವರು. ಜೋಡೆತ್ತಿನ ಗಾಡಿ ಕಟ್ಟಿಸಿಕೊಂಡು ಸಂಪಾಜೆಯಿಂದ ಅವರು ಬಂದಿದ್ದರು. ಅವರಿಗೆ ಮದುವೆಯಾಗಿಲ್ಲವೆಂಬ ಸೂಕ್ಷ್ಮವನ್ನು ಸೀತಮಾರ್ಲ ಬೆಳಗ್ಗೆಯೇ ಶಂಭು ಚೌಟರಿಗೆ ನೀಡಿದ್ದ. ಮಾತ್ರವಲ್ಲ ಆತ ಬಹಳ ಗತ್ತಿನ, ತಾಳ್ಮೆ ಇಲ್ಲದ, ಗರ್ವಿಷ್ಠ ಮನುಷ್ಯನೆಂಬುದನ್ನೂ ತಿಳಿಸಿದ್ದ. ಅಂತಕ್ಕನನ್ನು ನೆನೆದು ಒಂದು ಆಲೋಚನೆ ಶಂಭು ಚೌಟರ ಮನಸ್ಸಿಗೆ ಬಂತು. 'ಅದು ಪರವಾಗಿಲ್ಲ ಸೀತ. ನಮ್ಮ ಹುಡುಗಿಯೂ ಏನೂ ಕಡಿಮೆಯಲ್ಲ. ಈ ಉಪ್ಪಿಗೆ ಆ ಹುಳಿ ಚೆನ್ನಾಗಿ ಹೊಂದಿಕೆಯಾಗ್ತದೆ' ಮನಸ್ಸಿನಲ್ಲೇ ಲೆಕ್ಕ ಹಾಕುತ್ತ ಶಂಭು ಚೌಟರು ಉತ್ತರಿಸಿದರು.

ಕಂಬೋಳಿಯವರು ಕರೆದದ್ದೇ ಆಗಬಹುದೆಂದು ಶಂಭು ಚೌಟರು ಅವರ ಮನೆಗೆ ಹೋದರು. ಕೇಣ್ಯದ ಬಾವೆ ಬಹಳ ಹಳೆಯ ಮನೆ. ಅದರ ಸುತ್ತಲೂ ಕಾಡು. ಆನೆ, ಹಂದಿ, ಹುಲಿ ಕುಳಿತುಕೊಳ್ಳುವ ಮಲೆ, ಕೂಗಳತೆ ದೂರದಲ್ಲಿ ಒಕ್ಕಲಿಗರ ಹತ್ತು ಹದಿನೈದು ಮನೆಗಳಿವೆ. ಒಂದು ಮನೆಯ ಒಕ್ಕಲಿನವರು ಮಾತ್ರ ಕೊಟ್ಟಿಗೆಯ ಹತ್ತಿರದ ಗುಡಿಸಲಿನಲ್ಲಿ ವಾಸಮಾಡುತ್ತಾರೆ. ಅವರು ಭೂತದ ಉಯ್ಯಾಲೆಗೆ ನೀರು ಇಟ್ಟು ಚಾವಡಿಯ ದೀಪವನ್ನು ಉರಿಸುತ್ತಾರೆ. ಭೂತದ ಬನದಲ್ಲಿ ದೀಪವಿಟ್ಟು ಹೊತ್ತು ಮುಳುಗುವಾಗ ಶಂಖ ಊದುತ್ತಾರೆ. ರಾತ್ರಿ ಕಾವಲಿಗೆ ತೋಟದ ಅಟ್ಟಲಿಗೆಯಲ್ಲಿ ಮಲಗಲು ಮತ್ತು ಬೇರೆ ಕೆಲಸಗಳಿಗೆ ನಾಲ್ಕು ಕುಟುಂಬಗಳಿವೆ.

ಕಂಬೋಳಿಯವರ ಮನೆಯಲ್ಲಿ ಅವರ ಚಿಕ್ಕಮ್ಮನ ಇಬ್ಬರು ಗಂಡು ಮಕ್ಕಳು ಮತ್ತು ಅವರ ಮಡದಿಯರು ಇದ್ದಾರೆ. ಮನೆವಾರ್ತೆ ನೋಡುವ ವಿಧವೆ ಅಕ್ಕ, ಅವರ ನಾಲ್ವರು ಮಕ್ಕಳು. ಮೂರು ಗಂಡು ಮತ್ತು ಎಂಟು ವರ್ಷದ ಒಂದು ಹೆಣ್ಣು. ಹಾಗಾಗಿ ಮನೆತುಂಬ ಜನಗಳು.

ನೀವೇನು ಇಷ್ಟು ವರ್ಷವಾದರೂ ಮದುವೆಯಾಗಿಲ್ಲವೆಂದು ಶಂಭು ಚೌಟರು ಕೇಳಿಯೇ ಬಿಟ್ಟರು.

'ಸ್ವಲ್ಪ ತೊಂದರೆ ಇತ್ತು. ಹತ್ತಿರದ ಕರಾಡ-ಕರ್ಲಾಡ ಭಟ್ಟ ಕೇಶವ ಅಪೂರ್ಣ್‌ಕರ್ ಅವರ ನೀರಿನ ವ್ಯಾಜ್ಯ, ಪಕ್ಕದ ಕೇಪು ಗೌಡರ ಕುಮ್ಕಿ, ದರ್ಕಾಸು ಒತ್ತುವರಿಯ ಕೇಸು ಹೀಗೆಲ್ಲ.. ಒಟ್ಟಿನಲ್ಲಿ ಸಮಾಧಾನವೆಂಬುದೇ ಇರಲಿಲ್ಲ. ಅದೆಲ್ಲ ಮುಗಿದ ಮೇಲೆ ಮದುವೆಯಾಗೋಣಾಂತ ಕುಳಿತೆ. ಈಗ ಸುಮಾರು ಒಂದೂವರೆ ವರ್ಷದಿಂದ ಎಲ್ಲವೂ ಸ್ವಲ್ಪ ಹದಕ್ಕೆ ಬಂದಿದೆ.'

ಕಂಬೋಳಿಯವರ ಮನೆ, ವ್ಯವಹಾರ, ಆಸ್ತಿ, ಬದುಕು ನೋಡಿ ಚೌಟರಿಗೆ ಸಂತೋಷವಾಯ್ತು.

ಆದರೆ ಒಂದೇ ಅಡ್ಡಿ. ನಮಗಿರುವುದು ಒಂದು ಹೆಣ್ಣು. ಇಷ್ಟು ದೂರ ಹೇಗೆ ಮದುವೆ ಮಾಡಿಕೊಡುವುದೆಂದು ಅಮ್ಮ ತಕರಾರು ಮಾಡುವುದು ಖಂಡಿತ. ಏನು ಮಾಡುವುದೆಂದು ಯೋಚಿಸುತ್ತಲೇ ಚೌಟರು ಮನೆಗೆ ಬಂದರು. ಬರುವಾಗ ಸೀತ ಮಾರ್ಲನ ಹತ್ತಿರ ಹೇಳಿದರು.

'ಹೌದ ಸೀತ, ನಮ್ಮ ಅಂತಕ್ಕನನ್ನು ಇಲ್ಲಿಗೆ ಕಂಬೋಳಿಯವರಿಗೆ ಕೊಟ್ಟರೆ ಹೇಗೆ?'

'ನಾನೂ ಅದನ್ನೇ ಯೋಚಿಸುತ್ತಿದ್ದೆ ಅಣ್ಣಾ. ಅದು ತುಂಬ ಒಳ್ಳೆಯ ಆಲೋಚನೆ. ಮುಂದುವರಿಸಿ' ಅಂದ ಸೀತ ಮಾರ್ಲ.

'ಹಾಗಿದ್ದರೆ ಸೀತ, ನಾನು ಹೋದ ಮೇಲೆ ಸಮಯ ನೋಡಿ ನೀನು ಕಂಬೋಳಿಯವರ ಹತ್ತಿರ ಒಂದು ಮಾತು ಹೇಳ್ತೀಯಾ? ಅವರು ಏನು ಹೇಳಿದರೆಂದು ನನಗೆ ಆಮೇಲೆ ತಿಳಿಸು.'

ಶಂಭು ಚೌಟರು ವಾಪಸ್ಸಾದ ಬೆನ್ನಿಗೇ ಸ್ವಲ್ಪ ದಿನಗಳಲ್ಲಿ ಸೀತ ಮಾರ್ಲನ ಪತ್ರ ಬಂತು. 'ನೆಂಟಸ್ತಿಕೆ ಮಾತನಾಡಲು ಬನ್ನಿ ಅಣ್ಣ. ನನ್ನ ದೊಡ್ಡಪ್ಪ ಎಲ್ಲ ಮಾತಾಡಿದ್ದಾರೆ. ಸಂಬಂಧ ಒಪ್ಪಿಗೆ. ಆದರೆ 500/- ರೂ. ವರದಕ್ಷಿಣೆ ಕೇಳುತ್ತಾರೆ. ಹೇಗಾದರೂ ಹೊಂದಿಸಿ ಕೊಡಿ ಅಣ್ಣ. ನಿಮ್ಮ ತಲೆನೋವೂ ಕಡಿಮೆಯಾದೀತು. ಹೆಣ್ಣಿನ ಗೋತ್ರ ಗುಜರಣ್ಣ. ಗಂಡಿನದ್ದು ಆರ್ಯಣ್ಣ. ಎರಡೂ ಚೆನ್ನಾಗಿ ಸೇರ್ತವೆ. ಮಾತು ಮುಂದುವರಿಸಿ.'

ಮಣೇಲರ ಮನೆಯಲ್ಲಿ ಮದುವೆ ವಿಚಾರ ಮಾತನಾಡಿದ್ದು ನಿಜವಾಯ್ತು. ಈಶ್ವರಮಂಗಲದ ಗಂಗಾಧರೇಶ್ವರ ದೇವಸ್ಥಾನದ ಭಟ್ಟರು ಮನೆಗೆ ಬಂದು ಗಂಡು ಹೆಣ್ಣಿನ ಜಾತಕವನ್ನು ಕೂಡಿಸಿ ಮುಂದಿನ ಮುಹೂರ್ತ ನೋಡಿ ಹೇಳಿದರು. ಸರಿಯಾಗಿ ಒಂದು ತಿಂಗಳೊಳಗೆ ಮದುವೆಯ ಕೆಲಸ ಮಾಡಬಹುದು.

ಚೌಟರು ಆಮಂತ್ರಣ ಪತ್ರ ಮಾಡಿಸಿ ಊರಿಗೆಲ್ಲ ಹಂಚಿದರು. ಕುಟುಂಬದವರಿಗೆ ನೆಂಟರಿಷ್ಟರಿಗೆ ಮನೆಯವರೇ ಹೋಗಿ ಮದುವೆಯ ಕರೆಯೋಲೆ ನೀಡಿ ಕರೆದುಬಂದರು. ಹೆಣ್ಣಿನ ದಿಬ್ಬಣ ಹೊರಡುವಾಗ ಉಯ್ಯಾಲೆಯ ದೈವಕ್ಕೆ ಕೈಮುಗಿದು ಕುಟುಂಬದ ಹಿರಿಯ ಮುತ್ತೈದೆ ನಾಗಮ್ಮಕ್ಕ ಮದುಮಗಳಿಗೆ ಕರಿಮಣಿ ಕಟ್ಟಿ ಕಾಲುಂಗುರ ಹಾಕಿ ಭೂತಗಳಿಗೆ ಕೈಮುಗಿಸಿದರು. ಗಣಪತಿ ಇಟ್ಟು ಊರ ದೈವಗಳಿಗೆ ಕೈಮುಗಿಸಿದರು.

ಕೈಗಳಿಗೆ ಬಂಗಾರದ ಬಳೆ, ಕೊರಳಿಗೆ ರುಕ್ಕಕ್ಕನ ಷರಟಡ್ಡಿಕೆ, ಕಿವಿಗೆ ಮುತ್ತಿನ ಬೆಂಡೋಲೆ, ಕಾಲಿಗೆ ಗೆಜ್ಜೆ, ಬೆಳ್ಳಿಯ ಕಾಲುಸರ, ಬೆರಳಿಗೆ ಎರಡು ಉಂಗುರ, ಜಡೆಗೆ ಬಂಗಾರದ ಸಂಪಿಗೆ, ಬಲಗೈ ಬೆರಳಿಗೆ ಕುಸುರಿಯ ವಂಕಿ ಉಂಗುರ (ಬಂಟರ ಮುತ್ತೈದೆ ಮಹಿಳೆಯರು ಧರಿಸುವ ವಿಶೇಷ ಉಂಗುರ). ಮದುಮಗಳಿಗೆ ಮನೆಯ ಸಿಂಗಾರವಾದ ಕರಿಮಣಿಯನ್ನೂ ಮದುಮಗನಿಗೆ ಬಂಗಾರದ ಉಂಗುರಗಳನ್ನೂ ರುಕ್ಕಕ್ಕ ಸಿದ್ಧಗೊಳಿಸಿದರು. ಬೀಗರ ಔತಣಕ್ಕೆ ಮದುಮಗಳ ಮನೆಗೆ ಬಂದ ಮದುಮಗ ಮದುವೆ ಹೆಣ್ಣನ್ನು ಕರೆದುಕೊಂಡು ಹೋಗುವಾಗ ಅತ್ತೆಯ ಕಾಲಿಗೆ ನಮಸ್ಕರಿಸುತ್ತಾನೆ. ಆಗ ಅತ್ತೆ ಮದುಮಗನ ಬೆರಳಿಗೆ ಉಂಗುರ ತೊಡಿಸಬೇಕು. ಅದು ಪದ್ಧತಿ. ಕಂಬೋಳಿಯವರಿಗೆ ತೊಡಿಸಲು ಒಂದು ಪವನಿನ ಗಟ್ಟಿಯಾದ ಉಂಗುರ ಮಾಡಿಸಿ ಚೌಟರು ಅಮ್ಮ ರುಕ್ಕಕ್ಕನ ಕೈಗೆ ಕೊಟ್ಟರು.

ಗಂಡಿನ ಮನೆಯಲ್ಲಿ ಭಾರಿ ಗೌಜಿಯಿಂದ ಜೋಡು ಕದಿನೆ ಇಟ್ಟು ಮುಹೂರ್ತದ ಕಂಬ ಊರಿದರು. ಬಾಕಿಮಾರಿನಲ್ಲಿ ಚಪ್ಪರ ಹಾಕಿ ಪೆಟ್ರೋಮೇಕ್ಸ್‌ನ ಬೆಳಕಿನಲ್ಲಿ

ಊರವರಿಗೆಲ್ಲ ಊಟ ಹಾಕಿದರು. ಬಂದ ನೆಂಟರಿಗೆಲ್ಲ ಮನೆಯ ಅಂಗಳದಲ್ಲಿ ಊಟದ ಏರ್ಪಾಡು ಆಯ್ತು. ಮಡಿವಾಳ ತೀರ್ಥದ ನೀರು ಚಿಮುಕಿಸಿ ಬಿಳಿಬಟ್ಟೆ ಹಾಸಿದ.

ಬಿಳಿಬಟ್ಟೆ ಕಟ್ಟಿ ಮಂಟಪ ರಚಿಸಿ ಧಾರೆಗೆ ತಯಾರಾಯ್ತು.

ಪಲ್ಲಕ್ಕಿಯಲ್ಲಿ ಮದುಮಗಳನ್ನು ಕೂರಿಸಿ ವಾದ್ಯ ಬಾರಿಸುತ್ತ ಸಾಲು ಸಾಲು ಕೊಂಬು ಊದುತ್ತ ಮಂಗಳೂರಿನ ನಾಗಸ್ವರ ವಾದನದ ಮೇಳದಲ್ಲಿ ಬೊಳ್ಳೂರು ಪರಾರಿಯಿಂದ ಅಂತಕ್ಕನ ದಿಬ್ಬಣ ಬಂತು. ಮೊದಲು ಬಸ್ಸು, ಆಮೇಲೆ ಜೋಡೆತ್ತಿನ ಗಾಡಿಯಲ್ಲಿ ಪ್ರಯಾಣ ಸಾಗಿತು. ಸಂಪಾಜೆಯ ಹತ್ತಿರ ಬಂದಾಗ ಮದುಮಗಳನ್ನು ಪಲ್ಲಕ್ಕಿಯಲ್ಲಿ ಕುಳ್ಳಿರಿಸಿ ಮದುವೆ ಮಂಟಪಕ್ಕೆ ಕರೆತಂದರು. ಸಂಭ್ರಮ, ಸಡಗರಗಳಿಂದ ಮದುವೆ ಕಳೆಯಿತು. ಚೌಟರ ಎದೆಭಾರ ಕಡಿಮೆಯಾಯ್ತು.

ಅಂತಕ್ಕ ಕೇನ್ಯದ ಬಾವೆ ಪರ್ತಿಮಾರ್ ಗುತ್ತಿನಲ್ಲಿ ಇಪ್ಪತ್ತನಾಲ್ಕು ವರ್ಷ ಕಳೆದರು. ಇವಳು ಒಂದು ಮಂಗಳವಾರ ಹೋಗಿ ಮುಂದಿನ ಮಂಗಳವಾರ ಅಮ್ಮನ ಮನೆಗೆ ವಾಪಸ್ಸಾಗುತ್ತಾಳೆ ಎಂದು ಹೇಳಿದವರ ಮಾತು ಸುಳ್ಳಾಯ್ತು. ಶಂಭು ಚೌಟರ ಎದೆ ಡವಡವ ಆಗುತ್ತಿತ್ತು. ಅಂತಕ್ಕನ ಬಾಯಿ ಜೋರು. ಕಂಬೋಳಿಯವರೂ ಜೋರಿನ ಜನವೇ. ಅವರ ಕೆನ್ನೆಗಳಲ್ಲಿ ನರೆಗೂದಲು ಬಂದಿತ್ತು. ಈಗ ಅವರು ಮಧ್ಯವಯಸ್ಸಿನವರು. ಆದರೂ ಗೌರಮ್ಮನಂಥ ಮಡದಿ ಸಿಕ್ಕಿ ತುಂಬ ಖುಷಿಯಾಗಿದ್ದರು. ಅದಕ್ಕೆ ತಕ್ಕಂತೆ ಅಂತಕ್ಕನೂ ಗಂಡನನ್ನು ಪ್ರೀತಿಯಿಂದಲೇ ಮರುಳು ಮಾಡುತ್ತಿದ್ದರು.

ಇಬ್ಬರು ಚೌಟರಿಗೂ ಒಟ್ಟಿಗೆ ಮದುವೆ ಗೊತ್ತಾಯ್ತು. ಮದುವೆಗೆ ಅಂತಕ್ಕ ಬೊಳ್ಳೂರು ಪರಾರಿಗೆ ಗಂಡನ ಜೊತೆ ಬಂದರು. ಮದುವೆ ಕಳೆದು ಎಂಟು ದಿನಕ್ಕೆ ಅವರ ಜೊತೆಯಲ್ಲೇ ವಾಪಸ್ಸಾದರು. ಆಮೇಲೆ ಬಂದುದು ಚೊಚ್ಚಲು ಹೆರಿಗೆಗೆ. ತಮ್ಮಂದಿರು ಅವರನ್ನು ಕರೆದುಕೊಂಡು ಬರುವುದರೊಳಗೆ ಅವರ ಅಮ್ಮನ ಯಜಮಾನಿಕೆ ಮುಗಿದು ತುಂಗಕ್ಕನದ್ದೂ ಸೋಮಕ್ಕನದ್ದೂ ಆಳ್ವಿಕೆ ಆರಂಭವಾಗಿತ್ತು. ಬಾಣಂತಿ ಎದ್ದು ಬಾವಿ ಮುಟ್ಟಿ ಊರಿನ ದೇವಸ್ಥಾನಕ್ಕೂ ಹೋಗಿ ಮಳೆಗಾಲ ಆರಂಭವಾಗುವಾಗಲೇ ಆ ಕಾಡಿನ ಊರು ಕೇನ್ಯದ ಬಾವೆಗೆ ಹೋದರು. ಮೊದಲ ಮಗುವಿಗೆ ಸೊಂಟಕ್ಕೆ ಡಾಬು, ಕೈಗೆ ಬಳೆ, ಕುತ್ತಿಗೆಗೆ ಕಂಠಿಸರ ಹಾಕಲು ರುಕ್ಕಕ್ಕನ ಮೂಲಕ ಶಂಭು ಚೌಟರಿಗೆ ಹೇಳಿಸಿದರು. ಅಡಿಕೆಗಳನ್ನು ಮಂಡಿಗೆ ಹಾಕಿ ಬರಬೇಕಾದ ದುಡ್ಡು ಬರದೆ ಕಂಗಿನ ಬುಡಕ್ಕೆ ಹಾಕುವುದಕ್ಕೂ ಆಗದೆ ತೋಟದ ಕೆಲಸ ಮಾಡಿಸುವುದೇ ಅವರಿಗೆ ಕಷ್ಟವಾಗಿತ್ತು. 'ಬೇಕಾದರೆ ಬೆಳ್ಳಿಯ ಉಡಿದಾರ ಮಾಡಿಸುವ. ಕುತ್ತಿಗೆಗೆ ಮುಕ್ಕಾಲು ಪವನಿನ ಸರ ಮಾಡಿಸಿದರೆ ಸಾಕು. ಆ ಗಟ್ಟದ ಮೂಲೆಯಲ್ಲಿ ಯಾರು ನೋಡಿ ಮೆಚ್ಚಬೇಕಾಗಿದೆ' ಎಂದರು ಶಂಭು ಚೌಟರು.

ಹೆತ್ತವಳಿಗೆ ಹೆರಿಗೆ ಮರ್ಯಾದೆಯನ್ನು ತೆಗೆದುಕೊಂಡು ಕಂಬೋಳಿಯವರ ಅಕ್ಕನೂ ತಮ್ಮನ ಹೆಂಡತಿಯೂ ಬಂದರು. ಭರಣಿ ತುಂಬ ತುಪ್ಪ, ಒಂದು ಗಂಟಿನಲ್ಲಿ ಒಳ್ಳೆ ಮೆಣಸು, ಡಬ್ಬಿ ತುಂಬ ಓಲೆಬೆಲ್ಲ, ಏಲಕ್ಕಿಯ ಕಟ್ಟು, ಹತ್ತು ಹನ್ನೆರಡು ಕೋಳಿಗಳು–

ಹೀಗೆ. ಹೆರಿಗೆಯ ಮರ್ಯಾದೆಯೊಂದಿಗೆ ಬಂದವರು ನಾಲ್ಕು ಬಾಟ್ಲಿ ಗೇರುಬೀಜದ ಸಾರಾಯಿಯನ್ನೂ ತಂದಿದ್ದರು. ಹೆತ್ತವಳಿಗೆ ಶೀತ ಬರದಿರಲೂ ಕರುಳು ಸಂಕುಚನಗೊಳ್ಳಲೂ ಸಾರಾಯಿ ಒಳ್ಳೆಯದೆಂಬುದು ಗಟ್ಟದ ಊರಿನವರ ನಂಬಿಕೆ. ಬಂದ ಬೀಗರಿಗೆ ಕೋಳಿರೊಟ್ಟಿ, ಕೋಳಿ ಗಸಿ, ಪಚ್ಚೆ ಹೆಸರು ಪಾಯಸ ಎಲ್ಲವನ್ನೂ ಮಾಡಿ ರಾತ್ರಿ ಸ್ಕಾಚ್ ವಿಸ್ಕಿ ಕೊಟ್ಟು ಸಮ್ಮಾನ ಮಾಡಿದರು. ಹುಳಿಮೆಣಸಿನ ಕೋಳಿ ಪಲ್ಯವೂ ಚೆನ್ನಾಗಿ ಆಯ್ತು.

ಅವರು ವಾಪಸ್ಸು ಹೋಗಿ ತಿಂಗಳಾಗುವುದರೊಳಗೆ ಮಗುವಿಗೆ ಬಂಗಾರ ಹಾಕಲಿಲ್ಲವೆಂದು ಮುಖ ಊದಿಸಿ ಅತ್ತಿಗೆಯರಲ್ಲೂ ತಮ್ಮಂದಿರಲ್ಲೂ ಜಗಳವಾಡಿ ಜುಮಾದಿಯ ಮುಕ್ಕಾಲ್ದಿ ಉಗ್ರಪ್ಪನನ್ನು ಕರೆದುಕೊಂಡು ಬಂಟವಾಳದ ಪೇಟೆಯಿಂದ ಬಾಡಿಗೆ ಕಾರು ತರಿಸಿ ಅಂತಕ್ಕ ಕೇನ್ಯದ ಬಾವೆಗೆ ಹಿಂತಿರುಗಿದರು.

ಅದೇ ಕೊನೆ, ಆಮೇಲೆ ಮೂರು ಹೆರಿಗೆಯನ್ನೂ ಅಂತಕ್ಕ ಗಂಡನ ಮನೆಯಲ್ಲೇ ಸುಧಾರಿಸಿದರು. ಕಂಬೋಳಿಯವರ ಕಿವಿ ಚುಚ್ಚಿ ಅವರು ಕೂಡ ಚೌಟರನ್ನು ಏನು ಎತ್ತ ಎಂದು ಕೇಳದಂತೆ ಮಾಡಿದರು. ಅದಾಗಿ ಹತ್ತು ವರ್ಷ ಕಳೆಯಿತು.

ಹತ್ತು ವರ್ಷಗಳ ಬಳಿಕ, ಇಬ್ಬರು ಗಂಡು ಮಕ್ಕಳು ಕಟ್ಟದ ನೀರಿನಲ್ಲಿ ಮುಳುಗಿ ಸತ್ತು ಹೋದ ಸುದ್ದಿಯನ್ನು ಹತ್ತು ದಿನಗಳ ಬಳಿಕ ಕೇಣ್ಯದ ಬಾವೆಯಿಂದ ಆಳನ್ನು ಕಳುಹಿಸಿ ಬೊಳ್ಳೂರು ಪರಾರಿಗೆ ತಿಳಿಸಿದರು. ಭೂತಗಳ ಉಯ್ಯಾಲೆ ಇರುವ ಮನೆ, ಭೂತಸ್ಥಾನವಿರುವ ಗೌರವದ ಮನೆ ಬೊಳ್ಳೂರು ಪರಾರಿ. ಸತ್ತ ಸಾವಿನ ಸೂತಕ ಆಚರಿಸಬೇಕಿತ್ತು, ಕಂಬೋಳಿಯವರು ತಿಳಿದವರಾಗಿಯೂ ಹೀಗೆ ಮಾಡಬಾರದಾಗಿತ್ತೆಂದು ಶಂಭು ಚೌಟರು ನೊಂದುಕೊಂಡರು. ಒಬ್ಬರಿಗೊಬ್ಬರು ದೂರವೇ ಆದರು.

* * * * *

ತಾನೊಂದು ಬಗೆದರೆ ದೈವ ಇನ್ನೊಂದು ಬಗೆಯುತ್ತದೆನ್ನುವ ಮಾತು ನಿಜವೇ ಆಯ್ತು. ಗದ್ದೆಗಳಲ್ಲಿ ತೆನೆ ಬಲಿತು ತಿರುಳು ತುಂಬಿ ನೆಲಕ್ಕೆ ಬಾಗಿತ್ತು. ಒಳ್ಳೆಯ ಜಾತಿಯ ಬೀಜಗಳು. ಕೂಳೂರಿನಿಂದ ತರಿಸಿದ್ದು. ಅವುಗಳನ್ನು ಕೂಡಲೇ ಕೊಯಿಲು ಮಾಡದಿದ್ದರೆ ಭತ್ತ ಉದುರಿ ಗದ್ದೆಯಲ್ಲಿ ಮೊಳಕೆ ಬರುತ್ತದೆಂದು ಕುಯ್ಯಲು ಜನರನ್ನು ಹುಡುಕಿದರು ಕಂಬೋಳಿಯವರು. ಹಳ್ಳಿ ಹಳ್ಳಿಗಳಲ್ಲಿ ಬೀಡಿ ಕೆಲಸ ಬಂದು ಬ್ಯಾರಿಗಳ ಹೆಂಗಸರು, ಪೂಜಾರಿಗಳು, ಹೊಲೆಯರು, ಕುಂಬಾರರು, ಸಾಲಿಗರು, ಗಾಣಿಗರು ಗದ್ದೆಗೆ ಬರುವುದು ಕಡಿಮೆಯಾಗಿತ್ತು. ಅವರ ಒಕ್ಕಲಿನವರಲ್ಲಿ ಸಲೀಸಾಗಿ ಕುಡುಗೋಲು ಹಿಡಿಯುವ ಯುವಕರೂ ಕಮ್ಮಿ. ಜನರನ್ನು ಸೇರಿಸುವುದರೊಳಗೆ ಕೆಲವು ದಿನಗಳು ಕಳೆದುವು.

ರಾತ್ರಿಯಲ್ಲಿ ಒಂದರ ಹಿಂದೆ ಒಂದರಂತೆ ಕಾಡು ಹಂದಿಗಳು ಮಲೆ ಇಳಿದು ಗದ್ದೆಗೆ ಬಿದ್ದುವು. ಸಾಧ್ಯವಾದಷ್ಟು ತೆನೆಗಳನ್ನು ತಿಂದು ಸಾಕಾದ ಮೇಲೆ ಗದ್ದೆಯಲ್ಲಿ ಹೊರಳಾಡಿ ಹೋದವು. ಬಿರುಗಾಳಿಗೆ ಸುಂಟರಗಾಳಿ ಸೇರಿದಂತಾಯ್ತು. ಕಟಾವಿಗೆ

ಸಿದ್ಧವಾಗಿದ್ದ ತೆನೆ ಗದ್ದೆಯ ಕೆಸರಲ್ಲಿ ಮಲಗಿತು. ಅಮಲೇರಿ ತೂರಾಡಿದ ಮನುಷ್ಯನಂತೆ ಭತ್ತದ ತೆನೆಗಳು ಇಡೀ ಗದ್ದೆಯಲ್ಲಿ ಪುಡಿಪುಡಿಯಾಗಿ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದುವು. ಕಾವಲಿನವರು ಹಂದಿಗಳು ಗದ್ದೆಗೆ ಇಳಿದಿದ್ದುವು ಎಂದು ಹೇಳಿದಾಗ ಕಂಬೋಳಿಯವರ ಎದೆಗೆ ಒನಕೆಯಿಂದ ಗುದ್ದಿದಂತಾಯ್ತು. ತುಳಸಿಗೆ ನೀರು ಹಾಕಿ ಹಿಂತಿರುಗುವಾಗ ಈ ವಾರ್ತೆ ಬಂದಿತ್ತು. ಅವರ ಅಕ್ಕ ಧೂಮಕ್ಕ ಹೇಳಿದರು. 'ಹಂದಿ ಬಿದ್ದುದು ಮುಂಜಾವದಲ್ಲಿ. ಆದ ನಷ್ಟ ಆಯ್ತು. ಇನ್ನು ಬಾಯಿಗೆ ನೀರು ಹನಿಸದೆ ಖಾಲಿ ಹೊಟ್ಟೆಯಲ್ಲಿ ಎಲ್ಲಿಗೆ ಹೋಗ್ತಿ ಮಗಾ. ಜೋಡು ನಳಿಕೆಯ ಹುಲಿಗೆ ಹಾರಿಸುವ ಕೋವಿಗಳು ಮಾತ್ರ ಮನೆಯೊಳಗಿವೆ. ಒಂಟಿ ನಳಿಕೆಯ ಕೋವಿಯನ್ನು ನೀನೇ ಮೊನ್ನೆ ದಿವಸ ಕುದುರೆ ಸಡಿಲವಾಗಿದೆಯೆಂದು ಚೋಮ ನಾಯ್ಕನ ಕೈಯಲ್ಲಿ ಸುಳ್ಯದ ಕಮ್ಮಾರನ ಕೊಟ್ಟಿಗೆಗೆ ಕಳುಹಿಸಿದ್ದೀ. ಈ ಹಕ್ಕಿ ಹಿಡಿಯುವ ಪುಡಿಮದ್ದು ಹಾಕುವ ಕೋವಿ ಹಿಡಿದುಕೊಂಡು ಖಾಲಿಹೊಟ್ಟೆಯಲ್ಲಿ ಹೋಗಬೇಡ. ಒಳಗೆ ಅಂತಕ್ಕ ಬೆಳಗ್ಗಿನ ಉಪಾಹಾರಕ್ಕಾಗಿ ಚಹಾವನ್ನೂ ತಿಂಡಿಯನ್ನೂ ತಯಾರಿಸುತ್ತಿದ್ದಾಳೆ.'

ಹಂದಿಯ ಸುದ್ದಿ ಕೇಳಿದಾಗ ಏರಿದ ಕೋಪ ಇನ್ನೂ ಇಳಿದಿರಲಿಲ್ಲ. ಇಷ್ಟು ಕಷ್ಟಪಟ್ಟು ಮಾಡಿದ್ದು ನಷ್ಟವಾಯ್ತಲ್ಲಾ ಎಂಬ ಕೋಪ ಅವರ ಹಸಿವು ಬಾಯಾರಿಕೆಗಳನ್ನೆಲ್ಲ ಗುಡಿಸಿ ಹಾಕಿತ್ತು. ಈ ಕಷ್ಟನಷ್ಟಗಳಿಗೆಲ್ಲ ಕಾರಣವಾದ ಆ ಕಾಡು ಹಂದಿಯ ಸಂತಾನವನ್ನೇ ನಾಮಾವಶೇಷ ಮಾಡುವ ರೋಷ ಅವರ ಮನಸ್ಸಿನಲ್ಲಿ ವಿಷ ಏರುವಂತೆ ಏರಿತ್ತು. ಇದಕ್ಕೆ ಏನು ಪರಿಹಾರವೆಂದು ಯೋಚಿಸುತ್ತ ಚಾವಡಿಯ ದಂಡೆಯಲ್ಲಿ ತಲೆಗೆ ಕೈಯಿಟ್ಟು ಕುಳಿತರು.

ಅಷ್ಟು ಹೊತ್ತಿಗೆ ಕರಿಯ ಕುಡುಂಬಿಯ ಸೋಮನಾಯ್ಕ ಒಂದೂವರೆ ಕಾಲಿನಿಂದ ಕುಂಟುತ್ತ ಗದ್ದೆಯ ಬದುವಿನಲ್ಲಿ ಕಲ್ಲೇಡಿಯನ್ನು ಹಿಡಿಯಲು ಬುಟ್ಟಿ ತೆಗೆದುಕೊಂಡು ಬರುವುದು ಕಾಣಿಸಿತು. ಸೋಮನಾಯ್ಕ ಕಾಡಿನ ಚಿಕ್ಕ ಮೃಗಗಳನ್ನು ಬೇಟೆಯಾಡುವುದರಲ್ಲಿ ನಿಪುಣ. ಆದ್ರೆ ಬೆನ್ನು ಬಗ್ಗಿಸಿ ದುಡಿಯುವುದರಲ್ಲಿ ಮಹಾ ಸೋಮಾರಿ. ಗಂಟಲಲ್ಲಿ ಅನ್ನ ಇಳಿಯಬೇಕಿದ್ದರೆ ದಿನವೂ ಅವನಿಗೆ ಯಾವುದಾದರೂ ಮಾಂಸದ ಅಡುಗೆಯೇ ಆಗಬೇಕು. ಮಾಂಸವಿಲ್ಲದಿದ್ದರೆ ಒಣಗಿದ ಮೀನಾದರೂ ಇರಲೇಬೇಕು. ಇಬ್ರಾಹಿಂ ಬ್ಯಾರಿಯ ಅಂಗಡಿಯಿಂದ ಕುಂಬಾದ ಒಣ ಭೂತಾಯಿ ಮೀನನ್ನೋ ಹಾಳಾಗಿ ಬೂಸ್ಟು ಹಿಡಿದು ವಾಸನೆ ಬರುವ ಮೀನನ್ನೋ ತಂದು ಬಚ್ಚಲಿನ ಒಲೆಯಲ್ಲಿ ಸುಟ್ಟು ತಿನ್ನುತ್ತಾನೆಂದು ಅವನ ತಾಯಿ ತಿಮ್ಮಾಜು ಸಿಕ್ಕಾಬಟ್ಟೆ ಬೈಯುತ್ತಾಳೆ. ಏನೂ ಸಿಗದಿದ್ದರೆ ಕೋಳಿಗೆ ಕಾವು ಕೊಡಲು ಇಟ್ಟ ಮೊಟ್ಟೆಗಳನ್ನಾದರೂ ಕದ್ದು ಅವಳ ಕಣ್ಣು ತಪ್ಪಿಸಿ ಕಾಯಿಸಿ ತಿನ್ನುತ್ತಾನೆ.

ಅಮಾವಾಸ್ಯೆ ಬಂತು ಅಂದರೆ ಅದು ನಾಯ್ಕನ ದಿನ. ಕಾಡಿನ ಪಕ್ಕದಲ್ಲಿ ಉರುಳು ಹಾಕಿ ಬಿಜಕರೆ (ತರಗೆಲೆಯಂತೆ ಇಡೀ ದಿನ ಶಬ್ದ ಮಾಡುವ ಹಕ್ಕಿ), ಕೇಂಕಣ್ (ಕೆಂಪು ಕಣ್ಣಿನ ಹಕ್ಕಿ), ಕಾಡುಕುರಿ, ಮೊಲ, ಕಾಡುಕೋಳಿ ಮುಂತಾದ ಚಿಕ್ಕಪುಟ್ಟ

ಪ್ರಾಣಿ, ಪಕ್ಷಿಗಳನ್ನು ಹಿಡಿಯುತ್ತಾನೆ. ಇಷ್ಟು ಮಾತ್ರವಲ್ಲದೆ ಹಂದಿಗಳು ಕಾಡಿನಿಂದ ಇಳಿಯುವ, ಜಾರುವ ಕಂಡಿಗಳು ಯಾವುವೆಂಬುದೂ ಅವನಿಗೆ ಗೊತ್ತಿದೆ. ಅವು ಬರುವ ಕಂಡಿಗಳಲ್ಲಿ ಉರುಳಿಟ್ಟು ಅದಕ್ಕೆ ಸುಡುಮದ್ದು ತುಂಬಿಸಿ ಕಟ್ಟುವುದರಲ್ಲೂ ಅವನು ನಿಪುಣ. ತಾನು ಒಳ್ಳೆಯ ಬೇಟೆಗಾರನೆಂಬ ಜಂಭವೂ ಅವನಿಗಿದೆ. ಇದೆಲ್ಲ ನಾಯ್ಕನನ್ನು ನೋಡಿದ ಕೂಡಲೇ ಕಂಬೋಳಿಯವರಿಗೆ ನೆನಪಾಯ್ತು. ಬೇರೆ ಯಾರಲ್ಲಾದರೂ ಹೇಳಿ ಕಳುಹಿಸಿದರೆ ತಾನು ಮಾಡಿದ ಯಾವುದೋ ತಪ್ಪಿಗೆ ಬಯ್ಯುವುದಕ್ಕೆ ಕರೆದಿದ್ದಾರೆಂದು ಭಾವಿಸುತ್ತಾನೆ. ಏಕೆಂದರೆ ಅಡಿಕೆ ಹಣ್ಣಾಗುವಾಗ ನಾಯ್ಕನ ಬಗ್ಗೆ ತುಂಬ ಎಚ್ಚರಿಕೆ ವಹಿಸಬೇಕು. ಹಗಲು ನೋಡಿದ ಗೊಂಚಲನ್ನು ಅಮಾವಾಸ್ಯೆಯ ಕತ್ತಲೆಗೇ ಆಗಲಿ, ಮಧ್ಯರಾತ್ರಿಯೇ ಆಗಲಿ ಅಳಿಲು ಹತ್ತಿದಂತೆ ಹತ್ತಿ ಹಗ್ಗ ಕಟ್ಟಿ ಕೆಳಗಿಳಿಸಿ ಚಾಚೂ ಅನ್ನದೆ ತುಂಬಿಸಿ ತೆಗೆದುಕೊಂಡು ಹೋಗುತ್ತಾನೆ.

ಹಾಗಾಗಿ ಕಂಬೋಳಿಯವರು ಜೋರಾಗಿ ಧ್ವನಿ ತೆಗೆದು ಸೋಮಣ್ಣ ನಾಯ್ಕನನ್ನು 'ಓ ಸೋಮಾ, ಸೋಮಯ್ಯ ನಾಯ್ಕಾ ಬಾರೋ ಇಲ್ಲಿಗೆ' ಎಂದು ಕರೆದರು. ಆದರೆ ಸೋಮಣ್ಣ ಕಂಬೊಳಿಯವರ ಸ್ವರ ಕೇಳಿದ್ದೇ ತಡ ಕೈಯಲ್ಲಿದ್ದ ಬುಟ್ಟಿಯನ್ನು ತಲೆಮೇಲೆ ಎತ್ತಿಹಿಡಿದು ಕುಂಟುತ್ತ ಕುಂಟುತ್ತ ಹಿಂದಕ್ಕೆ ತಿರುಗಿ ಓಡತೊಡಗಿದ. ಅದನ್ನು ನೋಡಿ ಕಂಬೊಳಿಯವರು ಹಂದಿಯ ಸುದ್ದಿಯನ್ನು ತಂದ ಹೊಲೆಯನಿಗೇ ಹೇಳಿದರು, 'ಓಡು, ಅವನನ್ನು ಹಿಂಬಾಲಿಸು. ಅದೆಂಥ ಅಹಂಕಾರ ಅವನಿಗೆ. ಕರೆಯುತ್ತಿದ್ದರೂ ಕಿವಿ ಕೇಳದವನಂತೆ ಓಡ್ತಾನೆ. ನಿನ್ನೆ ರಾತ್ರಿ ಯಾರ ಬೇಲಿಯೊಳಗೆ ನುಗ್ಗಿದ್ದಾನೋ?'

'ಅವನನ್ನು ನಿಲ್ಲಲು ಹೇಳು. ಗದ್ದೆಗೆ ಹಂದಿ ಬಿದ್ದಿದೆ. ಬೇಟೆಯಾಡಬೇಕೆಂದು ಯಜಮಾನರು ನಿನ್ನನ್ನು ಕರೆಯುತ್ತಾರೆಂದು ಹೇಳಿ ಅವನನ್ನು ತಡೆ. ಬೇಗ ಓಡು. ಕಾಲು ಒಂದೂವರೆಯಾದರೂ ಕಾಡಿನ ಮೊಲ ಓಡಿದಂತೆ ನೆಗೆಯುತ್ತ ಹೇಗೆ ಓಡ್ತಾನೆ ನೋಡು.'

ತನಿಯ ಓಡುತ್ತ ಹೋಗಿ 'ನಾಯ್ಕರೇ, ಯಜಮಾನರು ನಿಮ್ಮನ್ನು ಕರೆಯುತ್ತಿದ್ದಾರೆ. ಬೇಟೆಯಾಡಲು ಹೋಗಲಿದೆಯಂತೆ. ಹಂದಿ ಬಿದ್ದಿರುವ ಗುಂಡಿಗೆ ಸಿಡಿಮದ್ದು ಇಡಲು ನೀವು ಬರಬೇಕಂತೆ.' ಅಂದ.

ಈ ಮೊದಲು ಎಷ್ಟು ಸಲ ಅವನಿಗೆ ಸಿಡಿಮದ್ದು ಕಟ್ಟಲು ಇದೆಯೆಂದು ಕಂಬೊಳಿಯವರು ಹೇಳಿಲ್ಲ! ಇತ್ತೀಚೆಗೆ ಅವರಿಗೆ ಬೇಟೆಯ ಉತ್ಸಾಹ ಕಡಿಮೆಯಾಗಿತ್ತು. ಅವನೆಂದಲ್ಲ ಆ ಊರಿನ ಎಲ್ಲರೂ ಈಗ ಹಾಗೆಯೇ ಭಾವಿಸುತ್ತಿದ್ದರು. ತನಿಯ ಹೇಳಿದ್ದು ಕೇಳಿದ ತಕ್ಷಣ ಅವನಿಗೆ ತುಸು ಧೈರ್ಯ ಬಂದು 'ಗದ್ದೆಗೆ ಯಾವಾಗ ಹಂದಿ ಬಿದ್ದದ್ದು?' ಅಂತ ಕೇಳಿದ.

'ನಿನ್ನೆ ಮುಂಜಾವ ಪೂವ ಪೂಜಾರಿಯ ಕೊಲೆಂಜಿ ಗದ್ದೆಯ ಪಕ್ಕದ ಹೊಲಕ್ಕೆ ಇಳಿದು ಕಟಾವಿಗೆ ತಯಾರಾದ ಮಸ್ಕತಿಯ ಬೆಳೆಯನ್ನು ನಿಸ್ಸಂತಾನ ಮಾಡಿವೆ. ತೆನೆಯೆಲ್ಲ ಪುಡಿ ಪುಡಿ. ಎಂಥ ಬೆಳೆ! ವಿನಾಶಕಾಲದ ಬುದ್ಧಿ ಅವುಗಳಿಗೆ' ತನಿಯ ಹೇಳಿದ. ಈಗ

ಸೋಮನಾಯ್ಕನಿಗೆ ಪೂರಾ ಧೈರ್ಯ ಬಂತು. ಆತ ಮೆಲ್ಲಮೆಲ್ಲನೆ ಕುಂಟುತ್ತ ವಾಪಸ್ಸು ಬಂದ.

ಅವನು ಅಂಗಳ ಹತ್ತುವಾಗ ಕಂಬೊಳಿಯವರು ಕೇಳಿದರು, 'ಏನೋ ನಾಯ್ಕ, ಹಾವು ಹಿಡಿದ ನಾಯಿ ಓಡುವಂತೆ ಬದುವಿನ ಮೇಲಿನಿಂದ ಹಿಂದಕ್ಕೇಕೋ ಓಡಿದೆ? ಹೆಚ್ಚಿದ್ದೀಯಾ ಕಣೋ ನೀನು. ಕೊಯ್ಲಿಗೆ ಬಂದ ಗದ್ದೆಗೆ ಹಂದಿ ಬಿದ್ದಿದೆ ಅಂತ ಹೇಳಲು ನಿನ್ನನ್ನು ಕರೆದರೆ ಜೀವ ತೆಗೆಯಲು ಯಮದೂತರು ಬರುತ್ತಿದ್ದಾರೋ ಎಂಬಂತೆ ದುಡುದುಡು ಓಡಿದೆಯಲ್ಲ. ಎಂಥ ಅಹಂಕಾರವೋ ನಿನಗೆ? ಹತ್ತಿದ ಶನಿ ಬಿಡುಗಡೆ ಆಗುವುದೇ ಇಲ್ಲವೇ ಮಾರಾಯಾ?'

'ಯಜಮಾನರೇ, ನನ್ನಿಂದ ದೊಡ್ಡ ತಪ್ಪಾಯ್ತು. ದಯವಿಟ್ಟು ಅದನ್ನು ಹೊಟ್ಟೆಗೆ ಹಾಕಿಕೊಳ್ಳಿ. ಹಂದಿ ಬಿದ್ದ ಸುದ್ದಿ ಆಮೇಲೆ ತನಿಯ ಹೇಳಿದ.'

'ನಿನ್ನನ್ನು ನೋಡುವ ಮೊದಲೇ ಅವನು ಹೇಗೆ ಹೇಳ್ತಾನೆ? ನಿನ್ನ ಮುಖ ನೋಡಿದ ಮೇಲೆ ಹೇಳಿದ. ಅದಿರಲಿ. ಅದು ನಿನ್ನ ಎಂದಿನ ಅಭ್ಯಾಸ. ನಾನೀಗ ಒಂದು ಹಂದಿ ಬೇಟೆಗೆ ಹೋಗುವ ಆಲೋಚನೆ ಮಾಡಿದ್ದೇನೆ. ನಾಳೆ ಅಥವಾ ನಾಡಿದ್ದು.'

ಸೋಮನಾಯ್ಕನಿಗೆ ಯಜಮಾನರ ಮಾತು ಕೇಳಿ ಮುಖದಲ್ಲಿ ಮುಗುಳ್ನಗೆ ಮೂಡಿತು. ಮನಸ್ಸಿಗೆ ಹೊಟ್ಟೆ ತುಂಬ ಮಾಂಸದೂಟ ಮಾಡಿದಂತಾಯ್ತು. ದೇವರು ಕಣ್ಣುಬಿಟ್ಟರೆ ಹಾಗೆಯೇ. ಕಾಳಭೈರವ ಖುಷಿಯಲ್ಲಿ ನೋಡಿದರೆ ನಾಳೆ ಜೋಡಿ ಹಂದಿಗಳು ಶಿಕಾರಿ ಆಗಲು ಯಾಕೆ ಸಾಧ್ಯವಿಲ್ಲ! ಬಿಳಿಜನರು ಊರಲ್ಲಿ ಗುಂಡು ಹಾಕಿ ಯುದ್ಧ ಮಾಡಲು ಆರಂಭಿಸಿದ್ದಾರಂತೆ. ಈಗಲೇ ಅಕ್ಕಿಯ ಕ್ರಯ ಏರಿದೆ. ಇನ್ನಿನ್ನು ಬೇಟೆಯಾಡಲು ಸರಕಾರ ಪರವಾನಗಿ ಕೊಡುವುದಿಲ್ಲವೆಂದು ತಲಕಾವೇರಿಯ ತೀರ್ಥಸ್ನಾನಕ್ಕೆ ಬಂದ ಚೆರಿಯಂಡದ ಮುತ್ತಣ್ಣ ನಾಯ್ಕ ಹೇಳಿದ್ದ. ಅವನ ಇಬ್ಬರು ಯುವಕರು, ಹಿರಿಮಗನೂ ಸೋದರಳಿಯನೂ ಮಿಲಿಟ್ರಿಗೆ ಸೇರಿದ್ದಾರಂತೆ. ಹಾಗಾಗಿ ಒಮ್ಮೆಗೇ ಧನಿಯವರು ಬೇಟೆ ಸುದ್ದಿ ಎತ್ತಿದ್ದು ಅವನಿಗೆ ತುಂಬ ಖುಷಿಯಾಯ್ತು. ಹಾಗೆಯೇ ಅವನು ಮನಸ್ಸಿನಲ್ಲೇ ಅಂದುಕೊಂಡ, ನಾಳೆ ನನ್ನ ನಾಯಿಯನ್ನೂ ಕರೆದುಕೊಂಡು ಬರಬೇಕು. ಅವನು ಪ್ರಾಣಿಗಳನ್ನು ಎಬ್ಬಿಸುವುದರಲ್ಲಿ ಭಾರಿ ಜಾಣ.

ಮತ್ತೆ ಅವನೂ ತನಿಯ ಹೊಲೆಯನೂ ಮನೆಗೆ ಹಿಂತಿರುಗುವಾಗ ಅವರ ಪಟ್ಟಾಂಗ ಶುರುವಾಯ್ತು. ಕಿವಿಗೊಡುವವರು ಸಿಕ್ಕಿದರೆ ಸೋಮಪ್ಪ ನಾಯ್ಕ ಎಷ್ಟು ಬೇಕಾದರೂ ಮಾತನಾಡಬಲ್ಲ. ಒಂದು ಪೆಗ್ಗು ಸಾರಾಯಿ ಒಳಗೆ ಹೋದರಂತೂ ಕೇಳುವುದೇ ಬೇಡ, ಅವನ ಹರಿಕತೆ ಅಚ್ಚುತದಾಸರ ಹರಿಕತೆಯನ್ನೂ ಮೀರಿಸುತ್ತದೆ.

'ಹೌದೇನೋ, ನಾಲ್ಕು ವರ್ಷದ ಹಿಂದೆ ಧನಿಗಳು ಹಂದಿಬೇಟೆಗೆ ಹೋದಾಗ ಆ ಮೋಸದ ಸಂಗತಿ ಆಯ್ತಲ್ಲ, ಆಗ ನೀನಿಲ್ಲಿ ಒಕ್ಕಲಾಗಿದ್ದೆಯಾ?'

'ಇಲ್ಲ ನಾಯ್ಕರೇ. ನಾನು ಸುಳ್ಯದ ಆನೆಗುಂಡಿಯ ಹತ್ತಿರದ ಸರ್ಕಾರಿ ತೇಗದ

ಮರ ಜೋಡಿಸಿಡುವ ಕೂಪಿನ ಕೆಲಸ ಮಾಡುತ್ತಿದ್ದೆ. ಅಲ್ಲಿ ಆನೆಗುಂಡಿಯ ಸಮೀಪದ ಗುಡ್ಡದ ಬದಿಯ ಚಿಕ್ಕ ಚಿಕ್ಕ ಮರಗಳನ್ನೂ ಬೇಡವಾದ ಕಾಡು ಮರಗಳನ್ನೂ ಕಡಿದು ವಾರಕ್ಕೊಮ್ಮೆ ಒಣಗಿದ ಆ ಗಿಡಗಳ ರಾಶಿಗೆ ಬೆಂಕಿ ಕೊಡುವುದು. ಸ್ವಲ್ಪ ದಿವಸ ಕಳೆದು ಬೆಂಕಿ ಆರಿದ ಬಳಿಕ ಆ ಜಾಗದಲ್ಲಿ ಸಾಲಾಗಿ ತೇಗದ ಮರ ನೆಡುವುದು.'

'ಸಂಬಳ ಚೆನ್ನಾಗಿ ಕೊಡ್ತಿದ್ದರಾ?'

'ಮೊದಮೊದಲು ಕೊಡುತ್ತಿದ್ದರು. ಕೆಲಸ ಸುಲಭವೆಂದು ಕೊರವರು, ಕೊಚ್ಚಿ ಕ್ರಿಶ್ಚಿಯನ್ಸ್ ಹೀಗೆ ಬೇರೆಯವರೆಲ್ಲ ಬಂದು ಜನ ಜಾಸ್ತಿ ಆದರು. ಕಾಂಟ್ರೇಕ್ಟಿನವರು ನಮ್ಮ ಕೆಲಸಕ್ಕೆ ಇಷ್ಟು ಜನ ಬೇಡ. ಆದ್ದರಿಂದ ಅರ್ಧರ್ಧ ಸಂಬಳ ಕೊಡ್ತೇವೆ ಅಂದರು. ಅದನ್ನು ನೋಡಿ ನಾನು ನನ್ನ ಮಡದಿ ಮತ್ತು ಮೂರು ಜನ ಮಕ್ಕಳನ್ನು ಕರೆದುಕೊಂಡು ಸಂಪಾಜೆಗೆ ಬಂದೆ. ಹಾಗೆ ಬಂದೂ ಈಗ ಎರಡೂವರೆ ವರ್ಷ ಆಯ್ತು.'

'ಓ ಹಾಗೋ, ಹಾಗಿದ್ದರೆ ನಿನಗೆ ಇಲ್ಲಿ ನಡೆದ ಕಥೆ ಯಾವುದೂ ಗೊತ್ತಿಲ್ಲ. ಆ ಬೇಡದ ಘಟನೆ ನಡೆದ ಬಳಿಕ ನಮ್ಮ ಧನಿಗಳು ಬಡಗು ದಿಕ್ಕಿನ ಅವರ ಬೀಗರ ಮನೆಗೆ ಹೋಗುವುದೂ ನಿಂತುಹೋಯ್ತು. ಬೀಗರ ವಿಚಾರ ಬಿಡು, ಸುಳ್ಯದ ಪೇಟೆಗಾಗಲೀ ಕಾವೇರಿ ಜಾತ್ರೆಗೆ ಭಾಗಮಂಡಲದ ತೀರ್ಥಸ್ನಾನಕ್ಕಾಗಲೀ ಹೋಗುವುದನ್ನು ನಿಲ್ಲಿಸಿದರು.'

'ಅಲ್ಲ ನಾಯ್ಕರೇ, ಅವರ ಚಿಕ್ಕ ಮಕ್ಕಳಿಬ್ಬರೂ ತೀರಿ ಹೋದ ಬಳಿಕ ಆ ದುಃಖದಲ್ಲಿ ಅವರು ತೀರಾ ಸೋತು ಹೋದರೆಂದು ಜನಗಳು ಹೇಳುತ್ತಾರೆ, ನಿಜವೇ?'

'ಅದು ಅಷ್ಟು ಸಣ್ಣ ವಿಷಯವೇನಲ್ಲ. ಅವರ ಕರುಳು ಬೆಂದುಹೋದ ಸಂಗತಿ ಅದು. ದೈವ ದೇವರು ಕೋಪಿಸಿದರೆ ಅಂಥ ಸಂಗತಿ ನಡೆಯುತ್ತದಂತೆ ಕಣೋ. ಮನುಷ್ಯರಿಗೆ ಪಾರಂಪರ್ಯವಾಗಿ ತಗಲುವ ಶಾಪ ಅದು. ಕುಟುಂಬಕ್ಕೆ ಗೆದ್ದಲು ಹಿಡಿಯುವಂಥ ಸಂಗತಿ'

'ಧನಿಗಳಾದ್ದರಿಂದ ಅದನ್ನು ಸಹಿಸಿದರು. ಆದರೆ ಆ ದುಃಖದಲ್ಲಿ ಬೆಂದು ಅಲ್ಲಿಗೇ ಕುಸಿದು ಹೋದರು.'

'ಬಂಗಾರದ ಪುತ್ಥಳಿಯಂಥ ಇಬ್ಬರು ಗಂಡು ಮಕ್ಕಳು ಕಟ್ಟದ ನೀರಿನಲ್ಲಿ ಮುಳುಗಿ ಸತ್ತ ಬಳಿಕ ಧನಿಯವರ ವರಸೆಯೇ ಬದಲಾಯ್ತು. ಮೊದಲಿನ ದರ್ಪ, ಶೌರ್ಯ, ಕೋಪ, ಆವೇಶ ಎಲ್ಲವೂ ಅಡಗಿ ಹೋದುವು. ಎಲ್ಲ ಬಿಡು, ಮನೆಯ ಮೆಟ್ಟುಗಲ್ಲು ಇಳಿದು ಊರಿಗೆ ನಾಲ್ಕು ಸುತ್ತು ಹೋಗುವುದು ಕೂಡ ತುಂಬ ಅಪರೂಪವಾಯ್ತು.'

'ಇನ್ನೇನು ಮತ್ತೆ? ಅಲ್ಲ ಕಣೋ. ಅಂಥ ಇಬ್ಬರು ಬಂಗಾರದಂಥ ಗಂಡು ಮಕ್ಕಳನ್ನು ಕಳೆದುಕೊಂಡರೆ ಯಾವ ಹೆತ್ತವರಿಗೆ ಮನಸ್ಸು ಮುದುಡುವುದಿಲ್ಲ, ಬದುಕು ಭಾರವಾಗುವುದಿಲ್ಲ!'

'ಆ ಮಕ್ಕಳು ಸತ್ತು ಹೋದುದನ್ನು ಎಣಿಸುವಾಗ ಹೊಟ್ಟೆಗೆ ಬೆಂಕಿ ಹಾಕಿದಂತೆ

ಆಗ್ತದೆ. ಆ ದಿನವೂ ಧನಿಯವರು 'ತುಪಾಕಿ ಸಿದ್ಧಮಾಡು. ಹಂದಿ ಬೇಟೆಗೆ ಹೋಗಲಿಕ್ಕಿದೆ' ಸೋಮಾ ಅಂದರು. 'ಕೋವಿಯೇನೂ ಬೇಡ ಯಜಮಾನರೇ. ಡಬ್ಬಿ ಬಡಿದು, ತಮ್ಮಟೆ ಕುಟ್ಟಿ ಮೊದಲಿಗೆ ಹುಡುಕೋಣ. ಆಮೇಲೆ ಕದಿನಿ ಇಟ್ಟು ಮಕ್ಕಳಿಂದ ಬೊಬ್ಬೆ ಹಾಕಿಸಿ ಬೆಟ್ಟ ಹತ್ತುವ. ಆಗ ಕೆಸರಿನ ಹಳ್ಳದಲ್ಲಿ ಮಲಗಿರುವ ಹಂದಿಗಳು ಎದ್ದು ಗಾಬರಿಬಿದ್ದು ಓಡುತ್ತವೆ. ಮರಿಗಳನ್ನು ಬಿಟ್ಟು ಹೆಣ್ಣು ಹಂದಿಗಳು ಚೆಲ್ಲಾಪಿಲ್ಲಿಯಾಗಿ ಓಡತೊಡಗಿದಾಗ ದೊಡ್ಡ ಗಂಡು ನಾಯಿಯನ್ನು ಬಿಟ್ಟರೆ ಚಿಕ್ಕ ಹೆಣ್ಣು ಹಂದಿಗಳನ್ನು ಬೆನ್ನಟ್ಟಲು ಜೋಡು ನಳಿಕೆಯ ಕೋವಿಯೇನೂ ಬೇಕಾಗಿಲ್ಲ. ಒಂಟಿ ನಳಿಕೆಯಲ್ಲಿ ಪರೇಲ್ ಗುಂಡು ಹಾಕಿದರೂ ಒಂದೆರಡು ಹಂದಿಗಳನ್ನು ಶಿಕಾರಿ ಮಾಡಲು ಕಷ್ಟವಿಲ್ಲ. ಅಷ್ಟರಲ್ಲಿ ದಾಡೆ ಬೆಳೆದ ಹಂದಿಗಳು, ಗಂಡು ಹಂದಿಗಳು ಎಲ್ಲ ರೋಷಗೊಂಡು ಗರ್ವದಿಂದ ಎದುರು ಬರುತ್ತವೆ. ಬೇಟೆ ಮೋಸವಾಗದೆ ನಡೆಯುತ್ತದೆ' ಎಂದು ಅವರಿಗೆ ಹೇಳಿದೆ. ಅವರು ನಮಗೆ ಮರುದಿನ ಬೇಟೆಯಾಡಲು ಹೋಗಬೇಕೆಂದು ಹೇಳಿದರು. ಹಾಗೆಯೇ ತಯಾರಿಯೂ ನಡೆದಿತ್ತು.

ಅವರ ಅವಳಿಜವಳಿ ಮಕ್ಕಳು ಚಿಕ್ಕವರಾದರೂ ಭಾರಿ ತುಂಟ ಮಕ್ಕಳು. ಅವರಿಗೂ ಆ ಮಾತು ಗೊತ್ತಾಗಿತ್ತು. ಹಾಗಾಗಿ ಹಿಂದಿನ ದಿನ ರಾತ್ರಿಯೇ ಕಂಬೊಳಿಯವರು ಮಕ್ಕಳಿಗೆ ಹೇಳಿದ್ದರಂತೆ, 'ಹೌದೇನ್ರೋ, ನಾಳೆ ನೀವಿಬ್ಬರೂ ಬೆಳಗ್ಗೆಯೇ ಎಣ್ಣೆ ಹಚ್ಚಿ ಸ್ನಾನಮಾಡಿ ಜೋಡುಹಳ್ಳದ ಕಾಳಭೈರವನಿಗೂ ಕಾಳಮ್ಮನಿಗೂ ಒಂದು ಹಣ್ಣುಕಾಯಿ ಮತ್ತು ಅಭಿಷೇಕ ಮಾಡಿಸಿಕೊಂಡು ಬನ್ನಿ. ತಪ್ಪಿಯೂ ಆ ಕಾಡಿನ ಹತ್ತಿರ ಬರಬಾರದು.'

ಆಗಲೇ ಅವರಿಬ್ಬರೂ 'ಮೈಂದಣ್ಣ ಬೇಟೆಗೆ ಬರಬಹುದು. ನಾವು ಮಾತ್ರ ಯಾಕೆ ಬರಬಾರದು?' ಎಂದು ಕೇಳಿಯೂ ಇದ್ದರಂತೆ.

'ಮಕ್ಕಳು ಬಾಯಿ ಮುಚ್ಚಿ ಕುಳಿತಿರಬೇಕು. ತರಲೆ ಮಾಡಿದರೆ ಬೆನ್ನಿನಲ್ಲಿ ಬೆತ್ತ ಪುಡಿಯಾದೀತು. ಗೊತ್ತಾಯ್ತಾ.. ಎಲ್ಲಿದ್ದೀಯಾ, ನಾಳೆ ಬೆಳಿಗ್ಗೆ ಇಬ್ಬರನ್ನೂ ತಲೆಗೆ ಮೀಯಿಸಿ ಜೋಡುಹಳ್ಳದ ಭೈರವ ದೇವರಿಗೆ ಒಂದು ಅಭಿಷೇಕವನ್ನೂ ಅಲ್ಲಿಯ ಕಾಳಮ್ಮ ದೇವರಿಗೆ ಒಂದು ಕುಂಕುಮಾರ್ಚನೆಯನ್ನೂ ಮಾಡಿಸಲು ದುಡ್ಡು ಕೊಟ್ಟು ಕಳುಹಿಸು' ಎಂದು ಹೆಂಡತಿಗೆ ಹೇಳಿ ಸಂಜೆ ಅಡುಗೆ ಕೋಣೆಯ ಒಳಗಿನ ತೂಗುದೀಪಕ್ಕೆ ಬತ್ತಿ, ಹೊನ್ನೆಣ್ಣೆ ಹಾಕಿ ಬೇಗನೆ ದೀಪ ಹಚ್ಚಿದರು. ಆಮೇಲೆ ಉಯ್ಯಾಲೆಯ ತೂಗುದೀಪವನ್ನು ದಪ್ಪ ಬಟ್ಟೆಯಲ್ಲಿ ಉಜ್ಜಿ ಬೆಳ್ಳಗಾಗಿಸಲು ಕೆಲಸದ ಹುಡುಗ ಕುಟ್ಟನನ್ನು ಕುಳ್ಳಿರಿಸಿ ಕೆಲಸ ಮಾಡುತ್ತಿದ್ದ ಅಂತಕ್ಕನನ್ನು ಕರೆದು ಕಂಬೊಳಿಯವರು ಮತ್ತೊಮ್ಮೆ ಅಪ್ಪಣೆ ಮಾಡಿದರಂತೆ. 'ಆಯ್ತು, ಆಯ್ತು' ಅಂತ ಅಂತಕ್ಕ ಎರಡೆರಡು ಸಲ ಹೂಂಗುಟ್ಟಿದರು.

ಮರುದಿನ ಬೆಳಿಗ್ಗೆ ಉಗ್ರಾಣಿ ಉಗ್ಗಪ್ಪನ ಹೊಲಕ್ಕೆ ಜನರೆಲ್ಲ ಕೋಲು, ದೊಣ್ಣೆ, ತೂತಾದ ಚಿಮಿಣಿ ಎಣ್ಣೆ ಡಬ್ಬಿಗಳನ್ನೆಲ್ಲ ಹಿಡಿದುಕೊಂಡು ಬಂದರು. ಕೊರಗರ ಗುಡಿಸಲಿನಿಂದ ದುಡಿ, ತಮ್ಮಟೆಗಳನ್ನೆಲ್ಲ ತಂದು ಸೇರಿಸಿದರು. ಕಂಬೊಳಿಯವರ

ಗ್ರಾಮದಿಂದಲೂ ಪಕ್ಕದ ಕುರ್ನಾಡು, ಚೇರಂಬಾಡಿ ಗ್ರಾಮಗಳಿಂದಲೂ ಜನರು ನಾನು ತಾನೆಂದು ಹಂದಿ ಬೇಟೆಯಾಡುವ ಉತ್ಸಾಹದಲ್ಲಿ ಬಂದು ಸೇರಿದರು. ಬೇಟೆಯ ಹುಚ್ಚು, ಮಾಂಸ ತಿನ್ನುವ ಗೀಳು ಜನರಿಗೆ. ಅಲ್ಲದೆ ಬೇಟೆಯ ಕೊನೆಗೆ ಕಂಬೊಳಿಯವರು ಬೇಕಾದಷ್ಟು ಹೆಂಡವನ್ನೂ ಕುಡಿಸುತ್ತಾರೆಂಬ ಆಸೆ. ಎಲ್ಲ ಜನರಿಗೂ ಈ ವಿಷಯ ಚೆನ್ನಾಗಿಯೇ ಗೊತ್ತು. ಒಟ್ಟು ಸೇರಿದ ಗೃಹಸ್ಥರಿಗೆ ಮಾಂಸದ ಲಾಭ, ಹಂದಿ ಬಿದ್ದ ಜಾಗದವರಿಗೆ ಜಾಗದ ಲಾಭ, ಹಂದಿ ಬೀಳಿಸಿದವರಿಗೆ ಇಮ್ಮಡಿ ಲಾಭ–ಹೀಗೆ ಕಂಬೊಳಿಯವರು ನ್ಯಾಯವಾಗಿ ಪಾಲು ಕೊಡುತ್ತಾರೆಂಬುದು ಅವರಿಗೆ ಗೊತ್ತಿದೆ. ಹುಳಿ ಹೆಂಡವಲ್ಲದೆ ಗ್ರಾಮಸ್ಥರಿಗೆ ಸಾರಾಯಿಯ ಸನ್ಮಾನವೂ ಉಂಟು. ಹಾಗಾಗಿ ಬೆಳಗಾಗುವುದರೊಳಗೇ ಹೊಲದಲ್ಲಿ ಜನ ಜಮಾಯಿಸಿದರು. ಹೆಚ್ಚಿನ ಜನರ ಹತ್ತಿರ ಒಂಟಿ ನಳಿಕೆಯ ಕೋವಿ, ಕೆಲವರ ಹತ್ತಿರ ಹಕ್ಕಿ ಹೊಡೆಯುವ ಕೋವಿಗಳಲ್ಲದೆ ನಾಲ್ಕೈದು ಜನರ ಹತ್ತಿರ ಅಂದರೆ ತೋಟದವರು ಮತ್ತು ಹಳೆಯ ಗುತ್ತಿನ ಮನೆಗಳವರ ಹತ್ತಿರ ಜೋಡುನಳಿಕೆಯ ಸರಕಾರದ ಪರವಾನಗಿಯಿರುವ ಕೋವಿಗಳೂ ಇದ್ದುವು. ಹತ್ತು ಹನ್ನೆರಡು ಜನ ಬೇಟೆಯಲ್ಲಿ ನಿಪುಣರಾದ ಒಕ್ಕಲಿಗರ ನಾಯಿಗಳೂ ಇದ್ದುವು. ಜನರ ಜಾತ್ರೆಯೇ ನೆರೆದಿತ್ತು. ಡಬ್ಬಿ ಬಡಿದು, ಕದಿನೆ ಹಾಕಿ, ಕೂಗು ಹಾಕುತ್ತ ಎಲ್ಲರೂ ಕಾಡಿಗೆ ನುಗ್ಗಿದರು. ಕಂಬೊಳಿಯವರು ಹೇಳಿದರು: 'ಮೈಂದಣ್ಣ, ನನ್ನ ಪಕ್ಕದಲ್ಲೇ ನೀನಿರಬೇಕು ಮಗಾ. ನಿನ್ನಿಚ್ಛೆಯಂತೆ ಕಂಡಲ್ಲಿಗೆಲ್ಲ ಯಾರ್‍ಯಾರದೋ ಬೆನ್ನು ಹತ್ತಿ ಹೋಗಿಬಿಡಬೇಡ. ಗೊತ್ತಾಯ್ತಾ?' ಮೈಂದಣ್ಣ ಹೂಂಗುಟ್ಟಿದ. ಅವನು ಪಾಪ ಸಜ್ಜನ.

ಅಂಗಳದ ತುದಿಯಲ್ಲಿ ನಿಂತುಕೊಂಡು ಈ ಬೇಟೆಯ ಸಂಭ್ರಮವನ್ನು ನೋಡುತ್ತಿದ್ದ ರಾಮಲಕ್ಷ್ಮಣರಿಗೆ ಎಲ್ಲೂ ಇಲ್ಲದ ಕೋಪ ಮತ್ತು ದುಃಖ ಒಟ್ಟೊಟ್ಟಿಗೆ ಏರುತ್ತಲೇ ಇತ್ತು. ಏನು ಮಾಡಬೇಕೆಂದೇ ಗೊತ್ತಾಗಲಿಲ್ಲ. ಕಂಬೊಳಿಯವರ ಆದೇಶವನ್ನು ಅಮ್ಮ ಅಂತಕ್ಕ ಏನಾದರೂ ಮೀರಲಾರರು. ಅಥವಾ ಅವರೇನಾದರೂ 'ಸ್ವಲ್ಪ ದೂರ ಹೋಗಿ ಬನ್ನಿ' ಎಂದು ಕಳುಹಿಸಿದರೂ ಸಂಜೆ ಬರುವ ಅಪ್ಪನ ಬೆತ್ತದ ರುಚಿ ಇಬ್ಬರಿಗೂ ಸಿಗುತ್ತದೆ. ಹಾಗೆಯೇ ಬೈಗಳು ಮತ್ತು ನಿಂದನೆಯ ಬಿಸಿ ಅಂತಕ್ಕನಿಗೂ ಸಿಗುವುದು ಖಂಡಿತ. ಏನು ಮಾಡುವುದು?

ಆಗ ಲಕ್ಷ್ಮಣ ಹೇಳಿದ. 'ರಾಮಾ, ಜೋಡು ಹಳ್ಳಕ್ಕೆ ಹೋಗಲು ಹೇಳಿದ್ದಾರಲ್ಲ. ಸುವರ್ಣ ನದಿಗೆ ಮೊನ್ನೆ ಕಟ್ಟೆ ಕಟ್ಟಿದ್ದಾರೆ. ಅಲ್ಲಿ ಹೋಗಿ ಈಜಲು ಕಲಿಯೋಣ. ಅಪ್ಪ ನೀರಿಗೆ ಇಳಿಯಬಾರದೆಂದು ಅದರ ಹತ್ತಿರ ಹೋಗಲೂ ಬಿಡುವುದಿಲ್ಲ.'

ರಾಮನಿಗೆ ಆ ಮಾತು ಕೇಳಿ ಖುಷಿಯಾಯ್ತು. 'ಹೌದೌದು. ತೋಟದಲ್ಲಿ ಆ ದಿನ ಹಂದಿ ನುಗ್ಗಿ ಉರುಳಿಸಿದ ಬಾಳೆಯ ದಿಂಡಿದೆ. ಅದರಿಂದ ನಾಲ್ಕು ದಿಂಡು ಕತ್ತರಿಸಿ ತೆಗೆದುಕೊಂಡು ಹೋಗಿ ತೆಪ್ಪ ಮಾಡುವ. ಬಚ್ಚಲಲ್ಲಿ ಮೀಯುವುದು ಬೇಡ. ಅಮ್ಮನ ಹತ್ತಿರ ತೋಡಿಗೆ ಹೋಗಿ ಸ್ನಾನಮಾಡಿ ದೇವಸ್ಥಾನಕ್ಕೆ ಹೋಗುತ್ತೇವೆಂದು ಹೇಳಿ ಹೋಗುವ.'

ಲಕ್ಷ್ಮಣ ಹೇಳಿದ, 'ಅಮ್ಮ ಬೇಡಾಂತ ತಡೆಯುವ ಮೊದಲೇ ಓಡಿ ಹೋಗೋಣ.'

ಅಂತಕ್ಕ ಅಡುಗೆಕೋಣೆಯಿಂದ ಚಾವಡಿಗೆ ಬಂದು ಅಂಗಳದಲ್ಲಿ ನಿಂತಾಗ ಅವಳಿಜವಳಿಗಳಿಬ್ಬರೂ ಬಾಕಿಮಾರು ಗದ್ದೆ ದಾಟಿ ಹೊಲದ ಪಕ್ಕದಲ್ಲಿ ಓಡುವುದು ಕಾಣಿಸಿತು. ಇನ್ನು ಅವರನ್ನು ಕರೆಯುವುದಾದರೂ ಏಕೆ? ಕರೆದುದು ಕೇಳಿಸಿದರೂ ತನ್ನ ಮಾತಿಗೆ ಓಗೊಟ್ಟು ಹಿಂದಕ್ಕೆ ಬರುವ ಮಾತಂತೂ ಖಂಡಿತ ಇಲ್ಲ. ಈ ಮಕ್ಕಳಿಗೆ ಯಾಕಿಷ್ಟು ತರಲೆ ಬುದ್ಧಿ ಕೊಟ್ಟೆ ದೇವರೇ! ಪಂಜುರ್ಲಿ ನೀನೆ ಕಾಪಾಡಬೇಕಪ್ಪ ಎನ್ನುತ್ತ ಚಾವಡಿಯ ಉಯ್ಯಾಲೆಯ ಕಡೆಗೆ ನೋಡಿ ಕೈಮುಗಿಯುತ್ತ ಬಿಟ್ಟು ಬಂದಿದ್ದ ಅಕ್ಕಿ ತೊಳೆಯುವ ಅಕ್ಕಚ್ಚು ಪಾತ್ರೆಯ ಹತ್ತಿರ ಪುನಃ ಹೋದರು.

ಓಡಿ ಬಂದ ಅವಳಿಜವಳಿಗಳಿಗೆ ಗುಡ್ಡದ ಸಮೀಪದ ಹೊಳೆಯ ಹತ್ತಿರ ಬಂದಾಗ ಜೋಡು ಹಳ್ಳದಲ್ಲಿ ಕಾಳಭೈರವನಿಗೂ ಕಾಳಮ್ಮ ದೇವರಿಗೂ ಹರಕೆ ಹೇಳಿದ ಹಣವನ್ನು ತಾವು ಬಚ್ಚಲು ಮನೆಯ ಹಿಂದಿರುವ ಹೆಣೆದ ತೆಂಗಿನ ಸೋಗೆಯ ಮರೆಯಲ್ಲಿ ಇಟ್ಟು ಬಂದಿದ್ದೇವೆ ಎನ್ನುವುದು ನೆನಪಾಯ್ತು.

ಹಿಂದಿನ ದಿನ ಕಂಬೊಳಿಯವರು ಆಳು ಕುಂಪನ ಕೈಯಲ್ಲಿ ದುಡ್ಡು ಕೊಟ್ಟು ಸುಳ್ಯದ ಪೇಟೆಯ ಕೊಗ್ಗ ಕಮ್ತಿಯ ಅಂಗಡಿಯಿಂದ ತೆಂಗಿನ ನಾರಿನ ಹಗ್ಗವನ್ನು ತರಿಸಿದ್ದರು. ಅದು ಓಡುವ ಎಮ್ಮೆಗೆ ಮೂಗುದಾರ ಹಾಕುವುದಕ್ಕೂ ತಲೆಗೆ ಸಿಂಗರಿಸುವುದಕ್ಕೂ ಮನೆಯಲ್ಲೇ ಹೊಸೆಯುವುದಕ್ಕಾಗಿ ತಂದ ಹಗ್ಗ. ಅದಕ್ಕೆ ಕಪ್ಪು ಮತ್ತು ಕೆಂಪಿನ ಪಟ್ಟೆ ನೂಲನ್ನು ಸೇರಿಸಿ ಹೆಣೆದು ಅದೇ ಬಣ್ಣದ ನೂಲಿನ ಗೊಂಚಲನ್ನು ಗಂಟು ಗಂಟಿಗೆ ಸೇರಿಸಿ ಹೊಲಿದು ಕುತ್ತಿಗೆಯ ಸುತ್ತಲೂ ಹಾರದಂತೆ ಹಾಕುತ್ತಾರೆ. ಅಲ್ಲದೆ ಎಮ್ಮೆಯ ಮೂಗಿನ ಹಗ್ಗಕ್ಕೂ ಅದೇ ತರದ ಗೊಂಡೆಯನ್ನು ತೂಗಿಸುತ್ತಾರೆ, ಈ ರೀತಿಯ ಅಲಂಕಾರ ನೋಡುವುದಕ್ಕೂ ಚಂದ, ಓಡುವ ಎತ್ತಿಗೆ ಕಣ್ಣು ತಾಗದಿರುವುದಕ್ಕೂ ಆಗುತ್ತದೆ.

ಈಗ ಕಾಳಭೈರವನಿಗೂ ಕಾಳಮ್ಮನಿಗೂ ಹರಕೆ ಹಾಕಲು ದುಡ್ಡಿಲ್ಲ. ಭಟ್ಟರಿಗೆ ದಕ್ಷಿಣೆ ಕೊಡಬೇಕೆಂದರೂ ಕೈಖಾಲಿ. ರಾಮನ ಜೇಬಿನಲ್ಲಿ ಒಂದು ರೂಪಾಯಿಯ ಎರಡು ನಾಣ್ಯಗಳಿದ್ದುವು. ಅದನ್ನು ಐಸ್ ಕ್ಯಾಂಡಿಗಾಗಿ ಇಟ್ಟುಕೊಂಡಿದ್ದ. ಅದರಲ್ಲಿ ಒಂದು ರೂಪಾಯಿಯನ್ನು ಭಟ್ಟರಿಗೂ ಇನ್ನೊಂದನ್ನು ಐಸ್‌ಕ್ಯಾಂಡಿ ತಿನ್ನುವುದಕ್ಕೂ ಇಟ್ಟುಕೊಳ್ಳುವುದೆಂದು ಇಬ್ಬರೂ ಮಾತಾಡಿಕೊಂಡರು.

ಅವರ ಮನೆಯ ತೋಟದ ಬದಿಯಿಂದ ಬರುವಾಗ ಅಲ್ಲಿ ಏಳೆಂಟು ದಿನಗಳ ಹಿಂದೆ ಬೇಟೆಯಂದು ಸೇರುವ ಜನರಿಗೆ ಚಹಾ ಮತ್ತು ಉಪಾಹಾರಕ್ಕಾಗಿ ಬಾಳೆಹಣ್ಣು ಬೇಕೆಂದು ಕಂಬೊಳಿಯವರು ಬೆಳೆದಿದ್ದ ಬಾಳೆಗೊನೆಗಳನ್ನು ಕಡಿಸಿದ್ದರು. ಗೊನೆಗಳನ್ನು ಸಾಗಿಸಿ ಅದರ ದಿಂಡುಗಳನ್ನು ತೋಟದಲ್ಲಿ ನೀರು ಹರಿಯುವ ಹಳ್ಳದಲ್ಲಿ ಹಾಕಿದ್ದರು. ಕೆಲಸಗಾರರ ಸೋಮಾರಿತನದಿಂದಾಗಿ ಅದು ಅಲ್ಲಲ್ಲೇ ಸ್ವಲ್ಪ ಸ್ವಲ್ಪ ಉಳಿದಿದ್ದುವು. ಸ್ವಚ್ಛ ಮಾಡಿರಲಿಲ್ಲ.

ರಾಮನೂ ಲಕ್ಷ್ಮಣನೂ ಮೂರ್‍ನಾಲ್ಕು ಮಾರು ಉದ್ದದ ಎರಡೆರಡು ಬಾಳೆಯ ದಿಂಡುಗಳನ್ನು ಕಡಿದು ತೆಗೆದುಕೊಂಡು ಹೋದರು. ತೋಡಿನ ಬದಿಯಲ್ಲಿ ಇಳಿಸಿ ಎರಡೆರಡನ್ನು ಮನೆಯಿಂದ ತಂದಿದ್ದ ತೆಂಗಿನ ನಾರಿನ ಹಗ್ಗದಿಂದ ಬಿಗಿದು ಕಟ್ಟಿ ತೆಪ್ಪ ಮಾಡಿದರು. ಬಟ್ಟೆ ಬಿಚ್ಚಿ ಅದನ್ನು ಹಿಡಿದುಕೊಂಡು ಕಟ್ಟದ ನೀರಿಗೆ ಇಳಿದರು. ಗುಡ್ಡದ ಮೇಲಿನ ಮಲೆಯಿಂದ ಇಳಿಯುವ ಸುವರ್ಣ ಹೊಳೆಯ ಮೂಲ ಒಸರಿನ ತೋಡು ಅದು. ಬೇಸಗೆಯ ಕೊನೆಯಲ್ಲೂ ಕಾಲಿನ ಮಂಡಿ ಮುಳುಗುವಷ್ಟು ನೀರು ಅದರಲ್ಲಿ ಯಾವಾಗಲೂ ಇರುತ್ತದೆ. ಅದು ಅಲ್ಲಿಲ್ಲಿ ಹರಿಯುವ ತೋಡು, ತೊರೆಗಳ ಒಸರನ್ನು ಕೂಡಿಕೊಳ್ಳುತ್ತ ಸುಳ್ಯ ಮುಟ್ಟುವಾಗ ಹದವಾಗಿ ಹರಿಯುವ ಹೊಳೆಯಾಗುತ್ತದೆ. ಈಗ ಅದಕ್ಕೆ ಕಟ್ಟೆ ಕಟ್ಟಿರುವುದರಿಂದ ನೀರು ಬಹಳ ಏರಿತ್ತು. ಮಕ್ಕಳು ಇಳಿದಲ್ಲಿ ನಾಲ್ಕಾಳು ಎತ್ತರಕ್ಕೆ ಏರಿತ್ತು. ಅವರು ಮೊದಲು ಬಾಳೆಯ ದಿಂಡನ್ನು ನೀರಿಗೆ ಹಾಕಿದರು. ಅದು ತೇಲುವಾಗ ಅದಕ್ಕೆ ಹೊಟ್ಟೆ ಕೊಟ್ಟು ಕೈಕಾಲುಗಳನ್ನು ಎಸೆಯುತ್ತ ಈಜಲು ಆರಂಭಿಸಿದರು.

ಮೊದಮೊದಲು ಧೈರ್ಯ ಬರದಿದ್ದರೂ ಸ್ವಲ್ಪ ಸ್ವಲ್ಪ ನೀರಿನ ಅಭ್ಯಾಸವಾದ ಮೇಲೆ ಮುಂದೆ ಮುಂದೆ ಹೋಗಲು ಧೈರ್ಯ ಬಂತು.

ಅಷ್ಟರಲ್ಲಿ 'ಹೋಯ್ ಹೋಯ್ ಓಡಿ ಓಡಿ, ಬೆನ್ನು ಬಿಡಬೇಡಿ. ಹತ್ತಿರ ಹೋಗಬೇಡಿ. ದೂರದಿಂದಲೇ ಹೊಡಿಯಿರಿ. ಕೋವಿ ಕೈಯಲ್ಲಿ ಸಿದ್ಧಮಾಡಿಟ್ಟುಕೊಳ್ಳಿ. ಜೋಡಿ ನಳಿಕೆಯ ಕೋವಿಗಳವರು ಮುಂದೆ ಹೋಗಿ..' ಎಂಬ ಜನಗಳ ಬೊಬ್ಬೆಯ ಶಬ್ದ ಕೇಳಿಸಿತು. ಕೇಳಿಬರುತ್ತಿದ್ದ ಜನಗಳ ಶಬ್ದ ನಿಂತ ತಕ್ಷಣವೇ ಕಟ್ಟದ ಏರಿದ ನೀರಿಗೆ ದೊಡ್ಡತಾಳೆಮರದ ಕಾಂಡವೊಂದು ಬಿದ್ದಂಥ ಶಬ್ದ ಕೇಳಿಸಿತು. ಸ್ವಲ್ಪ ಹೊತ್ತಿನಲ್ಲೇ ಕಾಡು ಹಂದಿಯೊಂದು ನೀರಿನಲ್ಲಿ ತೇಲುತ್ತ ಮುಂದೆ ಮುಂದೆ ಬಂತು. ಬಾಳೆಯ ದಿಂಡಿನಲ್ಲಿ ತೇಲುತ್ತ ಸಾಗುತ್ತಿದ್ದ ಹುಡುಗರಿಗೆ ಏನಾಗ್ತಿದೆಯೆಂದು ಅರಿವಾಗುವ ಮುನ್ನವೇ ಲಕ್ಷ್ಮಣ ಹೊಟ್ಟೆಗೆ ಆಧಾರವಾಗಿಟ್ಟ ಬಾಳೆ ದಿಂಡಿನ ಮೇಲೆ ಹಂದಿ ಬಂದು ಜೋರಾಗಿ ಘಟ್ಟಿಸಿತು. ಬಾಳೆದಿಂಡು ನೀರಲ್ಲಿ ಮುಳುಗಿ ಲಕ್ಷ್ಮಣ ಅದರಿಂದ ದೂರಕ್ಕೆ ರಟ್ಟಿದ. ಅವನು 'ಹೋ' ಎಂದು ಕಿರುಚುತ್ತ ನೀರಲ್ಲಿ ಮುಳುಗಿದ. ರಾಮ ಆಚೆ ಕಡೆಯಲ್ಲಿದ್ದವನು ಏನಾಯ್ತೆಂದು ನೋಡುವಾಗಲೇ ಲಕ್ಷ್ಮಣ ಮುಳುಗಿದನೆಂದು ಗೊತ್ತಾಯ್ತು. ಅವನು ಆಚೀಚೆ ತೇಲುತ್ತಿದ್ದಂತೆ ಹಂದಿ ತಿರುಗಿ ಇವನ ದಿಂಡಿಗೂ ಕೋಪಾವೇಶದಿಂದ ಧಾವಿಸಿ ಬಂದು ಅಪ್ಪಳಿಸಿತು. 'ಅಪ್ಪಾ, ಅಯ್ಯಯ್ಯೋ' ಅನ್ನುತ್ತ ರಾಮನೂ ಬಾಳೆದಿಂಡಿನಿಂದ ಉರುಳಿ ನೀರಲ್ಲಿ ಮುಳುಗಿದ. ಇಷ್ಟಾದರೂ ಗಾಯಗೊಂಡ ಹಂದಿಯ ಉಗ್ರಸೊಕ್ಕು ಇಳಿದಿರಲಿಲ್ಲ. ಅದು ನೀರಿನಲ್ಲಿ ಆ ಕಡೆ ಈ ಕಡೆ ತೇಲುತ್ತಿದ್ದಂತೆ ಯಾರೋ ಬಿಟ್ಟ ಜೋಡು ನಳಿಕೆಯ ಗುಂಡು ಹಂದಿಯ ತಲೆಗೆ ಬಿತ್ತು. ಆ ಏಟಿನ ರಭಸಕ್ಕೆ ಹಂದಿ ಒಮ್ಮೆ ನೀರಿನಲ್ಲಿ ಮುಳುಗಿ ಒಮ್ಮೆ ನೀರಲ್ಲಿ ತೇಲಿ ರಕ್ತದಿಂದ ಕೆಂಪಾಗಿದ್ದ ನೀರಿನ ಮಧ್ಯದಿಂದ ನಿಧಾನವಾಗಿ ಮೇಲೆ ನೆಗೆಯುತ್ತ ಬಂತು. ಈಗ ಹಂದಿ ಅರೆಜೀವವಾಗಿತ್ತು. ಮುಂಗಾಲುಗಳನ್ನು ಸ್ವಲ್ಪ ಸ್ವಲ್ಪ ಅಲ್ಲಾಡಿಸುತ್ತಿತ್ತು. ನಿಧಾನವಾಗಿ ನೆಗೆಯುತ್ತ ಬದಿಗೆ ಬಂದು ಕಟ್ಟದ ಬದಿಯಲ್ಲಿ ಸೀಳಿ

ಎಸೆದಂತಿದ್ದ ಬಾಳೆಯ ದಿಂಡಿಗೆ ಒರಗಿತು. ಅದರ ತಲೆ ವಾಲಿತ್ತು. ಹೊರಳಾಡುವುದು ನಿಂತಿತ್ತು. ಆದರೆ ಕೆಂಪಾಗಿ ಕೆಂಡದ ಉಂಡೆಯಂತಿರುವ ಕಣ್ಣುಗಳು ಪೂರ್ತಿ ಮುಚ್ಚಿರಲಿಲ್ಲ. ಕೋಪಾವೇಶವೂ ಕಡಿಮೆಯಾಗಿರಲಿಲ್ಲ.

ಹಿಂದು ಮುಂದು ನೋಡದೆ ತೇಂಕುತ್ತ ಓಡಿ ಬರುತ್ತಿದ್ದ ಜನರೆಲ್ಲ ತೋಡಿನ ಪಕ್ಕದಲ್ಲಿ ಜಮೆಯಾದರು.

'ಹಂದಿ ಸತ್ತಿಲ್ಲ. ಯಾರೂ ಹತ್ತಿರ ಹೋಗಬೇಡಿ.'

'ಇನ್ನೊಂದು ಗುಂಡು ಎಸೆದರೆ ಏನು?'

'ಉದ್ದವಾದ ಮರದ ಕೋಲಿನಲ್ಲಿ ಕುಟ್ಟಿದರೆ ಹಂದಿ ಜೀವಂತವಾಗಿದೆಯಾ ಸತ್ತಿದೆಯಾ ಗೊತ್ತಾದೀತು.'

'ಕಂಬೊಳಿಯವರು ಬರಲಿ. ಅವರು ಹೇಳಿದ ಹಾಗೆ ಮಾಡೋಣ. '

'ಹಂದಿ ಆ ಬದಿಯಲ್ಲಿದೆ. ನೀರು ದಾಟಿ ಅಲ್ಲಿಗೆ ಹೋಗಬೇಕು. ಅಲ್ಲಿಂದ ನೀರಿಗಿಳಿದು ಉದ್ದದ ಕೋಲಲ್ಲಿ ಕುಟ್ಟಿ ನೋಡಿದರೇನು? ಪ್ರಜ್ಞೆ ಬಂದರೂ ಹಂದಿಗೆ ಮತ್ತೆ ನೀರು ದಾಟಲು ಸಾಧ್ಯವಿಲ್ಲ. ನಾನು ನೀರಿಗಿಳಿದು ನೋಡುತ್ತೇನೆ' ಅಂದ ಕಿಟ್ಟು ಮಣಿಯಾಣಿ. ಆತ ಮನುಷ್ಯ ತುಂಬ ಒರಟನೆಂದು ಪುಕಾರಿತ್ತು.

ಕಿಟ್ಟು ಕೈಯಲ್ಲಿ ದೋಟಿ ಹಿಡಿದುಕೊಂಡು ಮೆಲ್ಲನೆ ನೀರಿಗಿಳಿದು ಈಜುತ್ತ ದೋಟಿಯನ್ನು ನೀರಿನಲ್ಲಿ ಇಳಿಸಿ ಮುಂದೆ ಮುಂದೆ ಹೋದ. ಒಮ್ಮೆಗೇ ದೋಟಿಯನ್ನೆತ್ತಿ ಬೊಬ್ಬೆ ಹಾಕಿದ. 'ನೀರಿನ ಅಡಿಯಲ್ಲಿ ಮನುಷ್ಯನ ಹಾಗೆ ದೋಟಿಗೆ ತಾಗುತ್ತದೆ' ಅಂದ.

ಮತ್ತೆ ಮತ್ತೆ ದೋಟಿಯನ್ನು ನೀರಿಗಿಳಿಸಿ ತಳಕ್ಕೆ ಕುಟ್ಟಿ ಬೊಬ್ಬೆ ಹಾಕಿದ. 'ಚಿಕ್ಕ ಜೀವ. ಮಕ್ಕಳ ಹೆಣ ಇದ್ದ ಹಾಗಿದೆ.'

'ಏನು ಬೊಗಳುತ್ತೀಯಾ ಕಿಟ್ಟ. ಮುಳುಗು ಮಾರಾಯ. ಮುಳುಗಿ ಅವುಗಳನ್ನು ಮೇಲಕ್ಕೆತ್ತು.'

ಮಣಿಯಾಣಿ ನೀರಲ್ಲಿ ಮುಳುಗಿ ಆ ಶರೀರವನ್ನು ಎತ್ತಿದ. ಹಾಗೆಯೇ ತಾನು ನೀರಿಗಿಳಿದ ಬದಿಗೇ ವಾಪಸ್ಸು ಬಂದು ಹೆಣವನ್ನು ಅಂಗಾತ ಮಲಗಿಸಿದ. ಸುತ್ತ ಇದ್ದವರು ಹತ್ತಿರ ಬಂದು ಇಣುಕಿ ನೋಡಿದರು. ನೀರಿಗೆ ಬಿದ್ದು ನೆನೆದು ಮೆತ್ತಗಾಗಿ ಬಾತುಕೊಂಡು ಕೊಳೆತುಹೋದ ಗಂಡು ಹುಡುಗನ ಶವ. ಕಂಬೊಳಿಯವರ ಅವಳಿಜವಳಿ ಮಕ್ಕಳಲ್ಲಿ ಒಬ್ಬನಾದ ರಾಮನ ಹೆಣ.

'ಅಯ್ಯೋ, ಇದು ರಾಮಣ್ಣ. ಓ ದೇವರೇ, ಓ ಪಂಜುರ್ಲಿಯೇ!' ಎಂದು ಉದ್ಗರಿಸಿದ ಮಣಿಯಾಣಿ.

ಆಗಲೇ ಶ್ರೀಧರ ರೈ ಹೇಳಿದ: 'ಇನ್ನೊಮ್ಮೆ ಮುಳುಗು ಮಣಿಯಾಣಿ. ರಾಮು ಒಬ್ಬನೇ ಯಾವತ್ತೂ ಬರಲಾರ. ಮುಳುಗಿ ಸುತ್ತುಮುತ್ತು ಕೈ ಜಾಲಾಡಿಸಿ ನೋಡು.'

ಮಣಿಯಾಣಿ ಅಷ್ಟು ಕೇಳಿದ್ದೇ ಮತ್ತೆ ನೀರಿಗೆ ಮುಳುಗಿ ಸುತ್ತುಮುತ್ತು ಕೈಯಾಡಿಸಿ ನೋಡಿದ. ಎರಡು ಮೂರು ನಿಮಿಷದೊಳಗೆ ಮತ್ತೊಂದು ದೇಹವನ್ನು ಎತ್ತಿಕೊಂಡು

ಮೇಲೆ ಬಂದ. ಸುತ್ತುಮುತ್ತಲಿನ ಜನ 'ಅಯ್ಯಯ್ಯೋ' ಎಂದು ಗೋಳಿಟ್ಟರು. ಕೆಲವರು 'ಅಯ್ಯಯ್ಯಪ್ಪಾ' ಎಂದು ಬೊಬ್ಬೆ ಹಾಕಿ ಅತ್ತರು. ಅಷ್ಟು ಹೊತ್ತಿಗೆ ಹಿಂದಿನಿಂದ ಬರುತ್ತಿದ್ದ ಕಂಬೊಳಿಯವರೂ ದೂಮಣ್ಣ ಶೆಟ್ಟರೂ ಜನರು ಗೋಳಾಡುವುದನ್ನು ಕೇಳಿ 'ಏನಾಯ್ತು? ಜನರೇಕೆ ಗೋಳಾಡುತ್ತಿದ್ದಾರೆ? ಏನೋ ಆಗಬಾರದ್ದು ಆಗಿರಬೇಕು' ಎನ್ನುತ್ತ ಅವಸರವಸರವಾಗಿ ಮುಂದೆ ಬಂದರು.

ಸುತ್ತಲಿನ ಜನರೆಲ್ಲ ಸರಿದು ನಿಂತರು. ಕಂಬೊಳಿಯವರು ಬಗ್ಗಿ ನೋಡಿದರು. ಅವರ ರಕ್ತ ಹಂಚಿದ ಕರುಳಕುಡಿಗಳು ಅಲ್ಲಿ ಮಲಗಿದ್ದುವು. ಕಂಬೊಳಿಯವರು ನೋಡಿ ತಲೆಯೆತ್ತಿದವರು ಟಪ್ಪೆಂದು ಹಿಂದಕ್ಕೆ ತಿರುಗಿ ಕಂಗಿನ ಮರ ಕತ್ತರಿಸಿ ಬೀಳುವಂತೆ ನೆಲಕ್ಕೆ ಉರುಳಿದರು. ಪ್ರಜ್ಞಾಹೀನರಾದ ಅವರನ್ನೂ ಹೆಣಗಳ ಹಾಗೆಯೇ ಎತ್ತಿಕೊಂಡು ಮನೆಗೆ ತಂದರು. ಹೆಣ ತಂದಾಗ ಮನೆಯ ಅವಸ್ಥೆ ಮನುಷ್ಯರಿಂದ ತಡೆಯುವಂಥದ್ದಲ್ಲ. ಅಮ್ಮನ ಹೊಟ್ಟೆಯಲ್ಲಿ ಹುಟ್ಟಿದವರು ಸಾಯುವ ತನಕ ಮರೆಯಲಾಗದ ಸಂಗತಿ ಅದು. ಒಂದು ಬದಿಯಲ್ಲಿ ಅಂತಕ್ಕ ಹೊರಳಾಡುತ್ತ ಎದೆ ಬಡಿದು ರೋದಿಸುತ್ತಿದ್ದರು. ಮನೆಯ ಹೆಂಗಸರ ರೋದನ ಎದುರಿಗಿದ್ದ ತಲಕಾವೇರಿಯ ಬ್ರಹ್ಮಗಿರಿಯ ತುದಿಗೆ ತಲಪಿರಲೂ ಸಾಕು.

* * * * *

'ಯಜಮಾನರೇ, ಬೇಟೆ ಆಡಬೇಡಿರೆಂದು ನಾನು ಹೇಳುತ್ತೇನಾ?.. ಯಜಮಾನರು ಬೇಟೆಯಾಡಬೇಕು. ನಾವು ಹೊಟ್ಟೆತುಂಬ ಆ ಕಾಡು ಮೃಗಗಳ ಮಾಂಸ ತಿನ್ನಬೇಕು... ಆದರೆ ಈಗ ಕಾಡಿಗೆ ಹೋಗುವುದಕ್ಕೆ ಅರಣ್ಯಾಧಿಕಾರಿಗಳು ತಕರಾರು ಮಾಡುತ್ತಾರೆ. ಸುಮ್ಮನೆ ನಾಲ್ಕು ಖಾಲಿ ಡಬ್ಬಿ ತೆಗೆದುಕೊಂಡು ಹೋಗಿ ಬಡಿದು ಬೇಗ ಬೇಗ ನಾಲ್ಕು ಸುತ್ತು ಹೋಗಿ ಬರಬಹುದು. ಕಾವಲುಗಾರರಿಗೆ ಸಿಕ್ಕಿಬೀಳಬಾರದು. ಅಲ್ಲಿಂದ ಹಂದಿ ಇಳಿಯುವ ಗುಡ್ಡದ ಕಂಡಿಯ ಬಾಯಿಗೆ ಕೊಕ್ಕೆ ತಗಲಿಸಿ ಅದಕ್ಕೆ ಸ್ವಲ್ಪ ಅಂತರದಲ್ಲಿ ಸಿಡಿಮದ್ದನ್ನು ಕಟ್ಟಿದರೇನು? ಮುನ್ನಾದಿನವೇ ಹತ್ತಿರದ ಒಕ್ಕಲುಗಳಿಗೆ ಆ ದಿನ ನಾಯಿಗಳನ್ನೂ ಜಾನುವಾರುಗಳನ್ನೂ ಹೊರಗೆ ಬಿಡಬೇಡಿರೆಂದು ಹೇಳಿ ತಾಕೀತು ಮಾಡಿದರೆ ಆಯ್ತು. ಅಲ್ವಾ ಧನಿಗಳೇ?'

ನಾಯ್ಕ ಹೇಳಿದ್ದು ಸರಿಯೆಂದು ಕಂಬೊಳಿಯವರಿಗೂ ತೋರಿತು. ಒಮ್ಮೆ ತಿಂದ ಬಲಿತ ತೆನೆಗಳ ರುಚಿ ಹಂದಿಗಳನ್ನು ಮತ್ತೆ ಅಲ್ಲಿಗೇ ಕರೆತರುತ್ತದೆ. ಅವುಗಳು ಅಲ್ಲಿಗೆ ಬರುವುದಂತೂ ಖಂಡಿತ. ಹಾಗಿರುವಾಗ ಸಿಡಿಮದ್ದು ಕಟ್ಟಿ ಕಂಡಿಗೆ ಎರಡು ಗಟ್ಟಿಯಾದ ಗೆಲ್ಲುಗಳನ್ನು ಕತ್ತರಿಸಿ ಅಡ್ಡ ಬೇಲಿ ಹಾಕಿದರೆ ಸಾಕು. ಬೇಲಿ ನುಗ್ಗುವಾಗ ಸಿಡಿಮದ್ದು ಸಿಡಿಯುತ್ತದೆ. ಜನರನ್ನು ಸೇರಿಸಿ ಗಲಾಟೆ ಗದ್ದಲ ಮಾಡಿ ಅರಣ್ಯಾಧಿಕಾರಿಗಳಿಗೆ ತಿಳಿದು ಈ ರಗಳೆಗಳೆಲ್ಲ ಯಾಕೆ? ಅದು ನಷ್ಟವ್ಯಾಪಾರವಾದೀತು. ಎಲ್ಲರಿಗೂ ಅದೇ ಸರಿಯೆಂದು ತೋರಿತು.

'ಸರಿ. ಹಾಗಿದ್ದರೆ ನಾಳೆ ಸುಳ್ಯದಿಂದ ಸಿಡಿಮದ್ದು ತರಿಸುತ್ತೇನೆ. ನೀನೂ ನಾಳೆ ಸಂಜೆ ಬಾ. ಎರಡು ತುದಿಗಳಲ್ಲಿ ಮದ್ದು ಕಟ್ಟುವ. ಹಂದಿ ಜಾರುವ ಆಚೆ ಬದಿಯಲ್ಲಿ ನೀನು ವಯರಿನ ಉರುಳು ಇಡು.'

'ಏನು ನಾಳೆ ಬರ್ತೀಯಲ್ಲ? ಸುಮ್ಮನೆ ಹೂಂಗುಡುವುದು ಮಾತ್ರವೇ ಇಲ್ಲ ನಿಜಕ್ಕೂ ಬರುವ ಆಲೋಚನೆ ಇದೆಯಾ? ನಿನ್ನನ್ನು ನಂಬಬಹುದು ತಾನೇ?'

'ಯಜಮಾನರೇ, ನೀವು ಹೇಳಿದ ಮೇಲೆ ನಾನು ಬರುವುದಿಲ್ಲವೆನ್ನುತ್ತೇನೆಯೇ? ಖಂಡಿತ ಬರುತ್ತೇನೆ.'

ಕಂಬೊಳಿಯವರು ಎದ್ದು ಒಳಗೆ ಹೋಗಿ ಹತ್ತು ರೂಪಾಯಿಯ ನೋಟನ್ನು ತಂದು ನಾಯ್ಕನ ಕೈಗೆ ಕೊಟ್ಟರು. ನಾಯ್ಕ ಬರಲೇಬೇಕು ಎಂಬುದಕ್ಕೆ ಅದೊಂದು ಕಾಣಿಕೆ.

ಮರುದಿನ ಕಂಬೊಳಿಯವರು ಸಿಡಿಮದ್ದು ತರಲು ಕೆಲಸದವರನ್ನು ಸುಳ್ಯಕ್ಕೆ ಕಳುಹಿಸಿದರು. ಅದನ್ನು ತಂದು ಇಡುವುದಕ್ಕಾಗಿ ಕಂಡಿಯ ಬಾಯಿಗೂ ಹಂದಿ ಜಾರುವ ಗುಡ್ಡದ ಜಾಗಕ್ಕೂ ಅಡ್ಡಡ್ಡವಾಗಿ ಎರಡೂ ಬದಿಗೆ ಬಲವಾಗಿ ಕಂಬ ಊರಿ ಆರೇಳು ವಯರುಗಳನ್ನು ಸೋಮನೂ ಆಳುಗಳೂ ಸೇರಿ ಕಟ್ಟಿ ಬೇಲಿ ಮಾಡಿದರು. ಕಂಡಿಗೆ ಅಡ್ಡವಾಗಿ ಕಟ್ಟಿದ ಕಬ್ಬಿಣದ ವಯರಿಗೆ ಸಿಡಿಮದ್ದಿನ ಉಂಡೆಯನ್ನು ನೇತಾಡಿಸಿದರು. ಉರುಳು ಅಲ್ಲಾಡಿ ಹಂದಿ ಸಿಕ್ಕಿಹಾಕಿದಾಗ ಸಿಡಿಮದ್ದು ಸಿಡಿದು ಅವುಗಳು ಸಾಯಬೇಕೆಂಬುದು ಅವರ ಲೆಕ್ಕಾಚಾರ.

ಸೋಮನಾಯ್ಕ ಬೀಡಿನಲ್ಲಿ ಊಟಮಾಡಿ ರಾತ್ರಿ ಅವನ ಮನೆಗೆ ಹೋದ. ಹೋಗುವಾಗ ಗುಡ್ಡದ ಪಿಲಿಭೂತಕ್ಕೆ ಒಂದು ಕೋಳಿ ಕೊಡುತ್ತೇನೆಂದು ಹರಕೆ ಹೊತ್ತ. ಹಂದಿ ಬಿದ್ದರೆ ದೊಡ್ಡ ಲಾಭ. ಧನಿಯ ಹತ್ತಿರ ಸ್ವಲ್ಪ ಹಣವನ್ನೂ ಕೇಳಬೇಕೆಂದು ಭಾವಿಸಿದ. ಕುಡಿದ ಅಮಲಿನಲ್ಲಿ ಆತನಿಗೆ ಬೇಗ ನಿದ್ರೆ ಬಂತು. ನಿದ್ರೆಯಲ್ಲಿ ಒಂದು ಕನಸು. ದೊಡ್ಡ ಬಾಯಿಯ ಒಂದು ಹಂದಿ ನೆಗೆಯುತ್ತ ಬಂತು. 'ಅಯ್ಯೋ ಸತ್ತೆ' ಎಂದು ಬೊಬ್ಬಿಟ್ಟು ಓಡುವಾಗಲೇ ಎದುರಿನಿಂದ ಬಾಯಿ ಬಿಟ್ಟುಕೊಂಡು ಕೋರೆದಾಡೆಯ ಇನ್ನೊಂದು ರಕ್ಕಸ ಹಂದಿ ಹೊಡೆಯುವುದಕ್ಕೇ ಬಂತು. 'ಅಯ್ಯೋ ಪಂಜುರ್ಲಿಯೇ ಬದುಕಿಸು' ಎಂದು ಬೊಬ್ಬಿಟ್ಟಾಗ 'ಢಂ, ಢಂ' ಎಂದು ಸಿಡಿಮದ್ದು ಸಿಡಿದ ಶಬ್ದ ಕೇಳಿಸಿತು. ಕಣ್ಣು ಬಿಟ್ಟು ಹೊರಗೆ ನೋಡಿದರೆ ಕಗ್ಗತ್ತಲೆ. ಮಧ್ಯರಾತ್ರಿ, ಏನು ಮಾಡುವುದು? ಬೆಳಗಾಗಲಿ. ಹಕ್ಕಿಗಳು ಕೂಗಲಿ. ಏಟುತಿಂದ ಹಂದಿಗೆ ಏಕಾಏಕಿ ಹೋಗಲು ಸಾಧ್ಯವಿಲ್ಲ. ತನ್ನ ಹತ್ತಿರ ಇರುವುದು ಹಕ್ಕಿಗಳನ್ನು ಹಿಡಿಯುವ ಚರೆ ಮದ್ದಿನ ಗನ್ನು. ಅದು ಏನೇನೂ ಸಾಲದು. ಈಗ ಜೋಡು ನಳಿಕೆಯ ಕೋವಿಯೇ ಬೇಕು.

ಬೀಡಿನ ಉಪ್ಪರಿಗೆಯಲ್ಲಿ ಮಲಗಿದ್ದ ಕಂಬೊಳಿಯವರಿಗೂ ಸಿಡಿಮದ್ದು ಸಿಡಿದ ಢಂ, ಢಂ ಶಬ್ದ ಕೇಳಿಸಿತ್ತು. ಅವರೂ ಹಾಸಿಗೆಯಿಂದ ಎದ್ದು ಕುಳಿತರು. ಹಂದಿ ಬಿದ್ದಿದೆ. ಹುಲಿಭೂತಕ್ಕೆ ಈ ಸಲ ಒಂದು ನಾಡಹಂದಿ ಬಲಿ ಕೊಡಬೇಕು. ಸಿದ್ದು ಕುಡುಂಬಿಯನ್ನು

ಕರೆಸಿ ಗೋಂದೊಲು ಪೂಜೆಯನ್ನೂ ಮಾಡಿಸಬೇಕು. ಅವರು ಗಟ್ಟಿಯಾಗಿಯೇ ಹೇಳಿದರು. ಅಂತಕ್ಕನೂ ಎದ್ದು ಕುಳಿತರು. ಪಕ್ಕದಲ್ಲಿ ಮಲಗಿದ್ದ ನಾಲ್ಕು ವರ್ಷದ ಬಾಲಿಕೆ ಭವಾನಿಗೆ ಎಚ್ಚರವಾಗಿ 'ಅಪ್ಪ ಅಪ್ಪ' ಎಂದಳು. ಕೈಯಿಂದ ಅವಳ ಬೆನ್ನು ತಟ್ಟಿ ಸಮಾಧಾನಪಡಿಸಿದರು. ಎದ್ದು ಕುಳಿತ ಗಂಡನನ್ನು ನೋಡಿ ಹೇಳಿದರು. 'ನೀವೇಕೆ ಎದ್ದಿರಿ? ರಾತ್ರಿ ಕಳೆಯಲಿಲ್ಲ. ಬೆಳಗಾಗುವವರೆಗೂ ಹಂದಿಯ ಹತ್ತಿರ ಹೋಗುವುದು ಬೇಡ. ಜನರನ್ನು ಕರೆದುಕೊಂಡು ಹೋಗಿ.'

'ನೀನು ನನಗೆ ಬುದ್ಧಿ ಹೇಳಲು ಎದ್ದೆಯಾ? ನನ್ನ ರಕ್ತಹರಿಸಿ ಬೆಳೆದ ಆ ಕೂಳೂರು ಮಸ್ಕತಿ ಇವತ್ತು ನನ್ನ ಕೈಗೆ ಬರದಂತೆ ನಾಶಮಾಡಿದ ಆ ಹಂದಿಗಳು ಅವುಗಳ ಚಂದವನ್ನು ನೋಡಿಯೇ ಬಿಡಬೇಕೆಂದು ಇವತ್ತು ಸಿಡಿಮದ್ದು ಕಟ್ಟಿದೆ' ಕಂಬೊಳಿಯವರು ಆವೇಶದಿಂದಲೇ ಉಸುರಿದರು.

'ಅದೆಲ್ಲ ನಿಜ. ಇದು ಪ್ರಾಣಕ್ಕೆ ಸಂಚಕಾರ ತರುವ ಅಪಾಯದ ಕೆಲಸ. ಅವು ಗಾಯಗೊಂಡ ಹಂದಿಗಳು. ಯಾಕಿಷ್ಟು ಆತುರ? ಹೋದರೆ ಮಗಳ ಮೇಲಾಣೆ. ಕತ್ತಲೆ ಕಳೆಯದೆ ನೀವಿಂದು ಚಾವಡಿ ಇಳಿದು ಹೋಗಬೇಡಿ.'

ಬರುತ್ತಿದ್ದ ಕೋಪವನ್ನು ನುಂಗಿ ತಲೆದಿಂಬಿಗೆ ಒರಗಿಕೊಂಡು ಹಾಸಿಗೆಯ ಮೇಲೆ ಕುಳಿತರು ಕಂಬೊಳಿಯವರು. ಮಗಳ ಮೇಲೆ ಆಣೆ ಮಾಡಿ ಕೈಕಟ್ಟಿಬಿಟ್ಟಳು ಹೆಂಡತಿ.

ಹೇಗೋ ಕೋಳಿ ಕೂಗಿತು. ಮುಂಜಾವದ ಬೆಳ್ಳಿ ಮೂಡುದಿಕ್ಕಿನ ಪರ್ವತದ ಮೇಲೆ ಕಾಣಿಸಿತು. ಹಂದಿ ಸತ್ತ ಸುದ್ದಿಯನ್ನು ತಿಳಿಸಲು ತೇಂಕುತ್ತಿರುವಂತೆ ತಲಕಾವೇರಿಯ ಮಲೆಯ ಸೆರಗಿನಿಂದ ಸುಯಿಂ ಸುಯಿಂ ಅನ್ನುತ್ತ ಮುಂಜಾವದ ಚಳಿಗಾಳಿ ಬೀಸಲು ಶುರುವಾಯ್ತು. ಕಂಬೊಳಿಯವರು ಎದ್ದು ಅವಸರವಸರವಾಗಿ ಮುಖ ತೊಳೆದು ತಾಮ್ರದ ಕೊಂಬಿನ ಗಿಂಡಿಯಲ್ಲಿ ಬಾವಿಯಿಂದ ನೀರು ಸೇದಿ ಉಯ್ಯಾಲೆಗೆ ಇಟ್ಟು ಕೈಮುಗಿದರು. ಕೋವಿಗೆ ಎಲ್.ಜಿ. ಗುಂಡು ತುಂಬಿದರು. ದಪ್ಪ ಕೋಲುಗಳನ್ನು ಸಿದ್ಧಪಡಿಸಿ ಕೆಲಸದವರು ಬರುವುದನ್ನೇ ಕಾಯುತ್ತ ನಿಂತರು.

ಅವರಿಗೆ ಗೊತ್ತಿಲ್ಲ. ಹಂದಿ ಗುಂಡು ತಾಗಿ ಬಿದ್ದಿರುವ ಸಮಾಚಾರವನ್ನು ಸೋಮ ನಾಯ್ಕ ಬೆಳ್ಳಂಬೆಳಗಿನಲ್ಲೇ ಎದ್ದು ತನಗೆ ಸಾಧ್ಯವಾದಷ್ಟು ಜನರಿಗೆ ಹೇಳಿದ್ದಾನೆಂದು. ಇವತ್ತು ಯಥೇಚ್ಛ ಹಂದಿ ಮಾಂಸದ ಪಲ್ಯ ಮತ್ತು ಹೊಟ್ಟೆತುಂಬ ಸಾರಾಯಿ ಕುಡಿಯುವ ಅದೃಷ್ಟ ಸಿಕ್ಕಿದುದಕ್ಕೆ ಸಂತೋಷಪಟ್ಟು ಕೆಲಸದವರೆಲ್ಲ ಬಟ್ಟಲು ಮುಖ ಮಾಡಿಕೊಂಡು ಬೇಗ ಬೇಗ ಬಂದು ಅಂಗಳದಲ್ಲಿ ಸೇರಿದ್ದರು. ಕಂಬೊಳಿಯವರು ಮನೆಯ ಎದುರಿನ ತೋಡಿನ ಸಂಕ ದಾಟಿ ಹೊಸ ಹೊಲದ ತೋಟ ದಾಟಿ ಗುಡ್ಡದ ಸಮೀಪ ಬಂದರು. ಗುಡ್ಡದ ಇಳಿಜಾರಿನಲ್ಲಿ ಇಟ್ಟಿದ್ದ ಉರುಳಲ್ಲಿ ಹೊನ್ನೆದಡ್ಕದ ಸಂಕು ಮೂಲ್ಯನ ಒಕ್ಕಣ್ಣಿನ ನಾಯಿ ಟೈಗರ್ ಸಿಕ್ಕಿಬಿದ್ದು ಕುತ್ತಿಗೆ ಅಮರಿ ಅರೆಬೋಧಾವಸ್ಥೆಯಲ್ಲಿ ಸೇಂಕುತ್ತ ಇತ್ತು. ಉರುಳು ಅದರ ನಡುವಿಗೆ ಬಿಗಿದು ನಾಯಿ ಹೊರಳಾಡುತ್ತ ಬೊಗಳುತ್ತಿತ್ತು. ಮೂಲ್ಯ ಓಡಿಹೋಗಿ ನಾಯಿಯನ್ನು ಬಿಡಿಸಿದ.

ಗುಡ್ಡದ ಕಂಡಿಯ ಬಾಗಿಲಲ್ಲಿಟ್ಟ ಉರುಳಿಗೆ ದೊಡ್ಡದಾದ ಗಂಡು ಹಂದಿ ಸಿಕ್ಕಿ ಬಿದ್ದಿತ್ತು. ಸಿಡಿಮದ್ದಿನಿಂದ ಅದರ ಹಿಂದಿನ ಒಂದು ಕಾಲು ಮೂಳೆಯಿಂದ ಕತ್ತರಿಸಿ ಜಾರಿ ನೇತಾಡುತ್ತಿತ್ತು. ಕೋರೆದಾಡೆಯ ದೊಡ್ಡ ಹಂದಿ. ನೋವು ತಡೆಯಲಾರದೆ ಕೆರೆದು ಹೊರಳಾಡಿದ ಪರಿಣಾಮವಾಗಿ ನೆಲದ ಮಣ್ಣು ಹಳ್ಳತೋಡಿ ಉತ್ತಿದಂತೆ ಪುಡಿ ಪುಡಿಯಾಗಿತ್ತು. ಬಳಲಿದ್ದ ಹಂದಿ ಗಾಯದಿಂದ ಹರಿದ ರಕ್ತದ ಕೆಸರಲ್ಲಿ ಅಡ್ಡ ಬಿದ್ದಿತ್ತು. ನಾಲ್ಕು ಗೇಣುದ್ದದ ಅದರ ಮುಖದ ಕೋರೆದಾಡೆಯ ಎರಡು ಬದಿಗೂ ಕೆಸರು ಮೆತ್ತಿಕೊಂಡಿತ್ತು. ಅದನ್ನು ನೋಡಿ ಎಲ್ಲರ ಮುಖದಲ್ಲೂ ಭಯವೂ ಅಚ್ಚರಿಯೂ ಏಕಕಾಲದಲ್ಲಿ ಮೂಡಿದುವು.

ಕಂಬೊಳಿಯವರು ಉಕ್ಕಿ ಬರುವ ಸಂತೋಷದಲ್ಲಿ ಅದರ ಹತ್ತಿರ ಹೋದರು.

'ಯಜಮಾನರೇ, ಹಂದಿ ಸತ್ತಿಲ್ಲ. ಹತ್ತಿರ ಹೋಗಬೇಡಿ' ಅನ್ನುತ್ತ ಕೆಲಸದವರು ತಡೆಯಲು ಪ್ರಯತ್ನಿಸಿದರು.

'ಕೋವಿ ಸಿದ್ಧವಾಗಿಟ್ಟಿದ್ದೇನೆ. ಭಯವೇಕೆ?' ಅಂದರು ಕಂಬೊಳಿಯವರು. ಕೋವಿಯ ತುದಿಯನ್ನು ನೆಲಕ್ಕೆ ಊರಿ ಬಗ್ಗಿ ನಿಂತು ಅದರ ತುದಿಯನ್ನು ಬಿದ್ದಿದ್ದ ಪ್ರಾಣಿಯ ಮುಖಕ್ಕೆ ಚುಚ್ಚಿದರು.

ಆಮೇಲೆ ಏನಾಯ್ತೋ ಆ ಸತ್ಯದ ದೇವರು ಪಂಜುರ್ಲಿಗೇ ಗೊತ್ತು. ಬೋರಲು ಮಲಗಿದ್ದ ಹಂದಿ ಮುಂಗಾಲುಗಳಲ್ಲಿ ಧಡಕ್ಕನೆ ಎದ್ದು ನಿಂತದ್ದೇ ಬಗ್ಗಿದ್ದ ಕಂಬೊಳಿಯವರ ಕೋವಿ ಎಲ್ಲಿಗೋ ರಟ್ಟಿ ಅವರು ಆಯ ತಪ್ಪಿ ಅಂಗಾತ ಬಿದ್ದರು. ಎದ್ದು ನಿಂತ ಹಂದಿ ಮೂರು ಕಾಲುಗಳಲ್ಲಿ ದೇಹದ ಭಾರವನ್ನು ತಡೆಯಲಾಗದೆ ನೆಗೆಯುತ್ತ ಕಂಬೊಳಿಯವರ ಮೇಲೆ ಬಿತ್ತು. ತಡೆಯಲಾಗದ ನೋವಿನಲ್ಲಿ ತಾರಾಮಾರಾ ಎದ್ದು ಬಿದ್ದು ಕಂಬೊಳಿಯವರ ಎದೆಗೆ, ಪಕ್ಕಕ್ಕೆ, ಹೊಟ್ಟೆಗೆ ಮತ್ತೆ ಮತ್ತೆ ತನ್ನ ದಾಡೆಯಲ್ಲಿ ಚುಚ್ಚಿತು. ಕಂಬೊಳಿಯವರ ಪಕ್ಕೆಗಳು ಸೀಳಿ ಒಳಗಿನಿಂದ ಕರುಳುಗಳು ಹೊರಕ್ಕೆ ಸುರಿದುವು. ಅವರು ಹೊರಳಾಡುತ್ತ ಹಂದಿಯನ್ನು ಎಷ್ಟು ತಳ್ಳಿದರೂ ಆನೆಭಾರದ ಹಂದಿ ಅಲ್ಲಾಡಲಿಲ್ಲ. ಅವರಿಗೆ ಅದರ ಭಾರವನ್ನು ತಡೆಯಲಾಗಲಿಲ್ಲ. ಅದು ಗುದ್ದುವ ಏಟೂ ಸೇರಿ ಅವರ ತೊಡೆಯ ಮೂಳೆ ಮುರಿಯಿತು. ಜನಗಳು ದಿಗ್ಭ್ರಾಂತರಾದರು; ಭಯಗೊಂಡರು. ಯುವಕರು ದೊಣ್ಣೆಯಿಂದ ಹಂದಿಯನ್ನು ಹೊಡೆಯಲು ನೋಡಿದರು. ಆದರೆ ಹಂದಿ ಹೊರಳಾಡುವ ರಭಸದಲ್ಲಿ ಏಟು ಅದಕ್ಕೆ ತಾಗದೆ ಕಂಬೊಳಿಯವರಿಗೆ ತಾಗಬಹುದೆಂಬ ಭಯಕ್ಕೆ ಅವರು ಹಿಂಜರಿದರು. ಇಷ್ಟಾಗುವಾಗ ಕಂಬೊಳಿಯವರ ಉಸಿರು ನಿಂತಿತು. ಕೈಕಾಲು ಎಸೆಯುವುದು ಸ್ತಬ್ಧವಾಯ್ತು. ನರಳಾಟವೂ ಕಡಿಮೆಯಾಯ್ತು. ಇಬ್ಬರು ಹಿಂದಿನಿಂದ ಹೋಗಿ ಹಂದಿಯ ಹಿಂಗಾಲುಗಳನ್ನು ಹಿಡಿದು ಎಳೆದು ಬೀಸಿ ಹಿಂದಕ್ಕೆ ತಳ್ಳಿದರು. ಬಿದ್ದ ಹಂದಿ ಅಲ್ಲಾಡದಿರುವುದು ನೋಡಿ ಕಂಬೊಳಿಯವರ ದೇಹವನ್ನು ಈ ಕಡೆಗೆ ಎಳೆದರು. ಪೂವಣಿ ಗೌಡ ತಲೆಯ ರುಮಾಲನ್ನು ತೆಗೆದು ಕಂಬೊಳಿಯವರ ಪಕ್ಕೆಗಳಿಂದ ಹೊರಗೆ ಬಿದ್ದ ಕರುಳು ಮಾಲೆಯನ್ನು ಮೆಲ್ಲನೆ ಒಳಕ್ಕೆ ಒತ್ತಿ ಹಿಡಿದು ಸೊಂಟದ

ಸುತ್ತಮುತ್ತ ಬಿಗಿದು ಕಟ್ಟಿದರು. ಹತ್ತಿರದ ಒಕ್ಕಲು ಮನೆಯ ಪೂವ ಪೂಜಾರಿಯ ಮನೆಯಿಂದ ಕಂಬಳಿಯೊಂದನ್ನು ತಂದು ನಾಲ್ವರು ಯುವಕರು ಕಂಬೊಳಿಯವರ ಕೈಕಾಲುಗಳನ್ನು ಹಿಡಿದು ಎತ್ತಿ ಅದರಲ್ಲಿ ಮಲಗಿಸಿ ಜಾಗ್ರತೆಯಿಂದ ಗುತ್ತಿನ ಮನೆಗೆ ತಂದರು. ಚಾವಡಿಯ ಮೆಟ್ಟಲುಗಳನ್ನು ಹತ್ತಿ ಅವರನ್ನು ಮಂಚದಲ್ಲಿ ಮಲಗಿಸುವಾಗ ಮನೆಯ ಹೆಂಗಸರಿಗೆ ವಿಷಯ ಗೊತ್ತಾಯ್ತು. 'ಓ ದೇವರೇ, ಇದೇನಾಯ್ತಪ್ಪಾ' ಎನ್ನುತ್ತ ಬೊಬ್ಬೆ ಹಾಕಿ ಅಂತಕ್ಕ ಚಾವಡಿಗೆ ಓಡಿ ಬಂದರು. ಹಿಂದಿನ ಬಾಗಿಲಲ್ಲಿದ್ದ ದೂಮಕ್ಕ 'ಏನಾಯ್ತು ನನ್ನ ಕಂದನಿಗೆ' ಎನ್ನುತ್ತ ಎದ್ದೆನೋ ಬಿದ್ದೆನೋ ಎಂದು ಓಡಿ ಬರುವಾಗ ಚಾವಡಿಯ ಬಾಗಿಲಿನ ದಾರಂದ ಹಣೆಗೆ ಘಟ್ಟಿಸಿ 'ಅಯ್ಯೋ' ಅನ್ನುತ್ತ ಅಲ್ಲೇ ಕುಸಿದರು. ಕಣ್ಣು ಕತ್ತಲೆ ಬಂದಿತ್ತು ಅವರಿಗೆ. ನೆತ್ತಿ ಒಡೆದು ರಕ್ತ ಹರಿಯಿತು.

ಕಂಬೊಳಿಯವರ ದೊಡ್ಡ ಜೀವ ಆಗಲೇ ಹೋಗಿತ್ತು. ಪಕ್ಕೆಗಳಿಂದ ಕಿತ್ತ ಕರುಳಿನೊಂದಿಗೆ ಅವರ ದೇಹದಿಂದ ಕಟ್ಟ ಕಡಿದು ಹರಿಯುವ ನೀರಿನಂತೆ, ಕೊಂಬಿನ ಗಿಂಡಿಯ ಧಾರೆಯಂತೆ ರಕ್ತ ಹರಿಯುತ್ತಿತ್ತು. ಅವರ ಕಣ್ಣು ಓರೆಯಾಗಿತ್ತು. ಕಟಬಾಯಿಯಿಂದಲೂ ರಕ್ತದ ನೀರು ಇಳಿದಿತ್ತು. ಪಕ್ಕದಲ್ಲಿ ಬೊಬ್ಬೆ ಹಾಕುತ್ತಿರುವ ಅಂತಕ್ಕನ ಕಡೆಗೆ ಕಣ್ಣು ತಿರುಗಿತ್ತು. ಕಂಬೊಳಿಯವರ ಕೊನೆಯ ಉಸಿರು ಕಣ್ಣಿನಿಂದ ಹರಿದುಹೋಯ್ತು. ಬಾವೆಯ ಮನೆಯ ದುಃಖ ಮುಗಿಲು ಮುಟ್ಟಿತು. ಚಾವಡಿಯ ದೀಪ ಆರಿತು. ಅಂತಕ್ಕನಿಗೆ ಕಣ್ಣು ಕಟ್ಟಿ ಕಾಡಿಗೆ ಬಿಟ್ಟಂತಾಯ್ತು.

ಸುದ್ದಿ ಬೊಳ್ಳೂರು ಪರಾರಿಗೆ ತಲಪುವಾಗ ಮಧ್ಯಾಹ್ನ ಮೂರು ಗಂಟೆ ಕಳೆದಿತ್ತು. ದೇವಣ್ಣ ಚೌಟರಿಗೂ ಶಂಭು ಚೌಟರಿಗೂ ತಲೆಗೆ ಸಿಡಿಲು ಬಡಿದಂತಾಯ್ತು. 'ಓ ಪಂಜುರ್ಲಿಯೇ, ನಿನ್ನ ಮಾಯದ ಕಣ್ಣಿಗೆ ಅವಳ ಮುತ್ತೈದೆತನವನ್ನು ಕಾಪಾಡಲು ಆಗಲಿಲ್ಲವೇ? ನಾವು ಯಾವ ತಪ್ಪು ಮಾಡಿದೆವೆಂದು ಇಂಥ ಶಿಕ್ಷೆ ಕೊಟ್ಟೆ?' ಎಂದು ಗೋಳಾಡಿದರು. ರುಕ್ಕಕ್ಕನಿಗೆ ಚಿಕ್ಕ ಸೊಸೆ ಸೋಮಕ್ಕ ಅಳುಕಿ ಅಳುಕಿ ಇಷ್ಟು ಹೇಳಿದರು: 'ಬಾವೆಯಲ್ಲಿ ಮುಂಡಪ್ಪಣ್ಣನಿಗೆ ಹಂದಿಬೇಟೆಗೆ ಹೋದಾಗ ಏಟಾಯ್ತಂತೆ. ಅದಕ್ಕೆ ಭಾವನೂ ಇವರೂ ಸಂಪಾಜೆಗೆ ಹೋಗ್ತಾರಂತೆ.' ಕೂಡಲೇ ತಲೆ ಎದೆ ಬಡಿದುಕೊಂಡು ಗೋಳಾಡುತ್ತ ರುಕ್ಕಕ್ಕ ಚಾವಡಿಗೆ ಧಾವಿಸಿದರು. ಚೌಟರಿಬ್ಬರೂ ಅವಸರದಿಂದ ಬಟ್ಟೆ ಬದಲಿಸಿ ಮೆಟ್ಟಲು ಇಳಿದರು. ರುಕ್ಕಕ್ಕ ಅವರನ್ನು ಕರೆದು: 'ಓ ದೇವೂ, ಶಂಭೂ, ಇರಿ, ನಾನು ಬಂದುಬಿಡುತ್ತೇನೆ' ಅಂದರು.

ಶಂಭು ಚೌಟರು ಹಿಂದಕ್ಕೆ ತಿರುಗಿ ಸಮಾಧಾನಪಡಿಸುವವರಂತೆ ಹೇಳಿದರು, 'ಅಮ್ಮ ನೀವೀಗ ಅರ್ಜೆಂಟಾಗಿ ಯಾಕೆ ಬರುವುದು? ನಾವು ಸಂಪಾಜೆಗೆ ಹೋಗಿ ಏನಾಯ್ತೆಂದು ನೋಡುತ್ತೇವೆ. ಏಟು ಜೋರಾಗಿದ್ದರೆ ಪುತ್ತೂರಿನ ಅಥವಾ ಮಂಗಳೂರಿನ ದೊಡ್ಡ ಆಸ್ಪತ್ರೆಗೆ ಕರೆದುಕೊಂಡು ಹೋಗ್ತೇವೆ.'

'ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಬೇಡಿ. ಅತ್ತಾವರದಲ್ಲಿ ವೆಂಕಪ್ಪ ಅಡಪ್ಪರ ಆಸ್ಪತ್ರೆಗೆ ಕರೆದುಕೊಂಡು ಹೋಗಿ' ಕೂಗಿ ಹೇಳಿದರು ರುಕ್ಕಕ್ಕ.

ಇಷ್ಟು ಮಾತಾಗುವಾಗ ಚೌಟರಿಬ್ಬರೂ ಇಬ್ಬರು ಆಳುಗಳೊಂದಿಗೆ ಮೊಗಸಾಲೆಯ ಬದಿಯ ಬಾಗಿಲು ದಾಟಿ ಹೊರಗೆ ಬಾಕಿಮಾರಿನ ಬದುವಿನ ತುದಿಗೆ ತಲಪಿಯಾಗಿತ್ತು.

'ನಾಲ್ಕು ಮಾತು ಆಡಲೂ ಇವರಿಗೆ ತಾಳ್ಮೆಯಿಲ್ಲ. ಏನಾಯ್ತೆಂದು ಸರಿಯಾಗಿ ಕೇಳುವ ಮೊದಲೇ ಕೆಸುವಿನ ದಂಟಿನಲ್ಲಿ ಕರುವನ್ನು ಕಟ್ಟಿದ ಹಾಗೆ ಒಂದೇ ಓಟ ಓಡಿದರು. ನನ್ನ ಹತ್ತಿರ ಮಾತನಾಡಲು ಮನಸ್ಸಿದ್ದರೆ ತಾನೆ?' ರುಕ್ಕಕ್ಕ ಮಣ ಮಣ ಗೊಣಗುತ್ತಲೇ ಇದ್ದರು.

ಚೌಟರು ಪದವಿನ ಹಾಜಿ ಇಸ್ಮಾಯಿಲ್ ಬ್ಯಾರಿಯ ಅಂಬಾಸಿಡರ್ ಕಾರನ್ನು ಬಾಡಿಗೆಗೆ ತೆಗೆದುಕೊಂಡು ಸುಳ್ಯಕ್ಕೆ ಹೋಗಿ ಸಂಪಾಜೆಯ ಬಾವೆಯಲ್ಲಿ ಇಳಿದು ಅಲ್ಲಿಂದ ಸರಿಯಾಗಿ ಒಂದೂವರೆ ಮೈಲು ನಡೆದುಕೊಂಡು ಹೊಲದ ಬದುವಿನ ಕೊನೆಗೆ ತಲಪಿ ಹಿತ್ತಿಲು ದಾಟಿ ಮನೆಯ ತಟ್ಟಿಗೆ ಇಳಿಯುವಾಗ ಡೋಲಿನ ಶಬ್ದ ಕೇಳಿಸಿತು. ಕಾಲಿಡುವುದಕ್ಕೂ ಜಾಗವಿಲ್ಲದಷ್ಟು ಜನರು ಅಂಗಳದಲ್ಲಿ ತುಂಬಿದ್ದರು. ಯಾರ ಮುಖದಲ್ಲಿಯೂ ಜೀವಕಳೆ ಇರಲಿಲ್ಲ. ಅಷ್ಟು ಜನ ಸೇರಿದ್ದರೂ ಇಡೀ ವಾತಾವರಣ ನಿಶ್ಶಬ್ದವಾಗಿತ್ತು. ಚಾವಡಿಯಲ್ಲಿ ಹೆಣ ಮಲಗಿಸಿದ ಸ್ಥಳದ ಸುತ್ತಲೂ ಕುಳಿತಿದ್ದ ಹೆಂಗಸರು ಸುರುಸುರು ದುಃಖಿಸುವುದು ಮಾತ್ರ ಕೇಳಿಸುತ್ತಿತ್ತು. ಹೆಣದ ಕಾಲಬುಡದಲ್ಲಿ ಅಂತಕ್ಕ ಮತಿಯಿಲ್ಲದೆ ಹೆಣದ ಜೊತೆ ತಾವೂ ಒಂದು ಹೆಣವಾಗಿ ಬಿದ್ದಿದ್ದರು.

ಚೌಟರುಗಳು ಬಂದುದನ್ನು ನೋಡಿ ಕಂಬೋಳಿಯವರ ತಮ್ಮಂದಿರು 'ಇನ್ನು ಮುಂದಿನ ಕೆಲಸ ಶುರುಮಾಡೋಣ, ಅಲ್ಲವೇ?' ಅಂದರು. ಗ್ರಾಮದ ಜನರೆಲ್ಲರೂ ಸೇರಿದ್ದರು. ಮಡಿವಾಳ ಬಂದಿದ್ದ, ಅವನೂ ಕುಂಬಾರನೂ ಸೇರಿ ಹೊಸ ಮಡಕೆಯಲ್ಲಿ ತೆಂಗಿನ ನಾರು ಹಾಕಿ ಬೆಂಕಿ ಹಚ್ಚಲು ತಯಾರಿ ಮಾಡಿದರು.

ಬಾಗಿಲ ಹತ್ತಿರದ ಮಾವಿನ ಮರಕ್ಕೆ ಮಡಿವಾಳ ಕಾಂತು ಯಾವಾಗಲೋ ಕೊಡಲಿ ಹಾಕಿದ್ದ. ಅನಂತರ ಒಕ್ಕಲಿನ ಬೇರೆ ಜಾತಿಯವರು, ಮೂಲದ ಮಾನ್ಯರು ಎಲ್ಲರೂ ಸೇರಿ ಮಾವಿನ ಮರವನ್ನು ಕಡಿದು ಸೀಳಿ ಹೊಳಕೆ ಮಾಡಿದರು. ಚಿತೆಯ ಅಡಿಗೆ ಸೀಳಿದ ದಪ್ಪ ಹೊಳಕೆಗಳನ್ನು ಇಟ್ಟು ತೆಳ್ಳಗಿನ ಸಪೂರದ ಮರದ ಸೀಳುಗಳನ್ನು ಮೇಲಿಟ್ಟರು. ಅದರ ಮೇಲೆ ಒಣಗಿದ ತೆಂಗಿನ ಗರಿಗಳನ್ನು ತಿರುಪಿ ಸೂಟೆಗಳನ್ನು ಹೆಣೆದು ಚಿತೆಗೆ ಅಣಿಗೊಳಿಸಿದರು.

ಮಾವಿನ ಮರಕ್ಕೆ ಕೊಡಲಿ ಹಾಕಿದ ಬಳಿಕ ಬಾಕಿಮಾರಿನ ಗದ್ದೆಯಲ್ಲಿ ಚಿತೆ ತಯಾರಾಯ್ತು. ತುಪ್ಪ, ಎಣ್ಣೆಗಳನ್ನು ಹತ್ತಿರ ಇಟ್ಟರು. ಎಣ್ಣೆ ಸುರಿಯುವ ಕವಂಗ ಎಲ್ಲೋ ಅಟ್ಟದ ಮೇಲಿತ್ತು. ಅದನ್ನೂ ಗಂಧದ ಕೊರಡನ್ನೂ ಅಡುಗೆಯ ಕೋಣೆಯ ಅಟ್ಟದಿಂದ ಇಳಿಸಿದರು. ಚಿತೆಯನ್ನು ಬೇಗ ಉರಿಯುವಂತೆ ಮಾಡಲು ಹಾಕುವ ವಸ್ತುಗಳು ಅವು.

ಹೆಣವನ್ನು ಮೀಯಿಸಿ ಜರಿಯ ಪಂಚೆಯಲ್ಲಿ ಸುತ್ತಿದರು. ಅವರ ಮದುವೆಯ

ಸಿಲ್ಕ್ ಜುಬ್ಬವನ್ನು ನಡುಬೆನ್ನಿಗೆ ಸುತ್ತಿ ಹೊದಿಸಿದರು. ಜರಿಯ ಶಾಲನ್ನು ತಲೆಗೆ ಕಟ್ಟಿದರು. ಗಂಧದ ತಿಲಕವನ್ನು ಹಣೆಗಿಟ್ಟು ಮರದ ಮಂಚದಲ್ಲಿ ಸಿಂಗರಿಸಿ ಮಲಗಿಸಿದಾಗ ಕಂಬೊಳಿಯವರು ಸತ್ತಿಲ್ಲ, ನಿದ್ರೆ ಮಾಡ್ತಿದ್ದಾರೆ, ಈಗ ಎದ್ದೇಳುತ್ತಾರೆ ಎಂಬಂತೆ ಕಾಣಿಸುತ್ತಿದ್ದರು. ಸೇರಿದ ಜನರಲ್ಲಿ ಕಣ್ಣೀರು ಹರಿಸದವರೇ ಇರಲಿಲ್ಲ.

ಗಂಡ ತೀರಿ ಹೋದ ಮುದುಕಿ ತಾಳೆಯ ಮನೆಯ ಉಜ್ಜಕ್ಕ ಅಂತಕ್ಕನ ಹಣೆಯ ಕುಂಕುಮವನ್ನು ಅಳಿಸಿ ಕೈಬಳೆಗಳನ್ನು ಒಡೆದು ಹಾಕಿದರು. ಕರಿಮಣಿ ಕತ್ತರಿಸಿದರು. ತಲೆಮುಡಿಯಲ್ಲಿದ್ದ ಹೂವುಗಳನ್ನು ಕಿತ್ತು ಎಸೆದರು. ಮೂಗುತಿಯನ್ನು ಕಳಚಿ ಅದರ ತಿರುಪನ್ನು ತೆಗೆದು ಆ ಬಂಗಾರದ ತುಣುಕನ್ನು ಹೆಣದ ನಾಲಗೆಯ ಅಡಿಯಲ್ಲಿ ಹಾಕಿದರು.

ತಮ್ಮಂದಿರು ಬಿದಿರಿನ ಚಟ್ಟಕ್ಕೆ ಕೈನೀಡಿದರು. ಮೈಂದಣ್ಣನ ಕೈಯಿಂದ ಹೊಸ ಕರಟದಲ್ಲಿ ಬೆಂಕಿ ಹಚ್ಚಿಸಿದರು. ಕಂಬೊಳಿಯವರ ಅಕ್ಕನ ಮಗ ಫಾಲಾಕ್ಷ ನೀರು ಹಿಡಿದುಕೊಂಡ. ಹೆಣವನ್ನು ಮನೆಯಿಂದ ಹೊರಗೆ ತಂದು ಬಾಕಿಮಾರಿನ ತುದಿಗೆ ತಲಪಿಸಿದರು. ಕಾಡಿನವರು ಡೋಲು ಬಾರಿಸುತ್ತಲೇ ಇದ್ದರು. ಅದರ ಬಡಿತದ ರಭಸಕ್ಕೆ ಎಂಥ ಜೀವ ಹೇಗಾಗಿ ಹೋಯ್ತೆಂಬ ದುಃಖ ಕೇಳುವವರ ಎದೆಯನ್ನು ಬಡಿಯುತ್ತಿತ್ತು.

ಮೊದಲು ಮನೆಯ ಒಳಗಿನ ಹೆಂಗಸರು ಹೆಣದ ಬಾಯಿಗೆ ತುಳಸಿಯ ನೀರು ಹನಿಸಿದರು. ಬಂಧುಗಳು, ನೆಂಟರಿಷ್ಟರು ಬೀಗರು ಮತ್ತು ಎಲ್ಲ ಗಂಡಸರು ಹೆಣವನ್ನು ಚಿತೆಯ ಮೇಲೆ ಮಲಗಿಸಿದ ಬಳಿಕ ನೀರು ಬಿಟ್ಟರು. ನೀರು ಬಿಡುವಾಗ ಶಂಭು ಚೌಟರ ಕಣ್ಣಿನಿಂದಲೂ ನೀರು ಧಾರೆ ಧಾರೆಯಾಗಿ ಸುರಿದು ಆ ನೀರಿನೊಂದಿಗೆ ಬೆರೆಯುತ್ತಿತ್ತು. ಅದರಲ್ಲಿ ಕಂಬೊಳಿಯವರಿಗೆ ನೋವಾಗುವಂತೆ ವರ್ತಿಸಿದ್ದು, ಮಾತುಕತೆ ಬಿಟ್ಟದ್ದು ಇವುಗಳಿಗೆಲ್ಲ ಕ್ಷಮೆಕೋರುವ ಭಾವನೆ ತುಂಬಿದ್ದಂತೆ ತೋರುತ್ತಿತ್ತು. ಪ್ರೀತಿಯ ಮಗ, ನಾಲ್ಕು ಜನಗಳ ಮುಂದೆ ಎದ್ದು ಕಾಣುವ ಬಂಟ ಅವನನ್ನು ಈ ರೀತಿಯಲ್ಲಿ ದೇವರು ಕರೆದುಕೊಂಡರಲ್ಲ. ಎಂಥ ಕಷ್ಟ!

ಚಿತೆಯಲ್ಲಿ ಹೆಣವಿಟ್ಟು ಮೇಲೆ ಗಂಧದ ಕೊರಡಿಟ್ಟು ಸುತ್ತಲೂ ಮರದ ಸೌದೆಗಳನ್ನು ಇಟ್ಟರು. ಮೈಂದಣ್ಣನನ್ನೂ ಫಾಲಾಕ್ಷನನ್ನೂ ಚಿತೆಗೆ ಸುತ್ತುಹಾಕಿಸಿ ಮೈಂದಣ್ಣನ ಕೈಯಿಂದ ಚಿತೆಗೆ ಬೆಂಕಿ ಹಚ್ಚಿಸಿದರು. ಚಿತೆಯ ಬೆಂಕಿ ಮೇಲೆ ಮೇಲೆ ಏರುತ್ತ ತಲೆಬುರುಡೆ ಚಟಾರೆಂದು ಸಿಡಿದಾಗ ಚೌಟರುಗಳಿಗೂ ತಮ್ಮ ಎದೆಯೇ ಒಡೆದು ಹೋದಂತೆ ಭಾಸವಾಯ್ತು.

ಅಕ್ಕ ಅಂತಕ್ಕ ಇನ್ನೂ ಚಿಕ್ಕ ವಯಸ್ಸಿನವಳು. ಅವಳ ಕರಿಮಣಿ ಮತ್ತು ಮೂಗುತಿ ಗಳನ್ನು ಕಿತ್ತುಕೊಂಡು ದೇವರು ಇಷ್ಟು ಬೇಗ ಅವಳನ್ನು ಇಂಥ ಕಷ್ಟಕ್ಕೆ ಸಿಕ್ಕಿಸಿದನಲ್ಲ. ಅಯ್ಯೋ, ಬೊಳ್ಳೂರು ಪರಾರಿಗೆ ಹೋಗಿ ಅಮ್ಮನಿಗೆ ಈ ಸುದ್ದಿಯನ್ನು ಹೇಗೆ ತಿಳಿಸಲಿ? ಕಂಬೊಳಿಯವರು ಹತ್ತು ಜನಕ್ಕೆ ಬೇಕಾದವರು. ಊರಿಗೆ ಒಂದು ಆಸರೆ

ಯಾಗಿದ್ದವರು. ಬಹುದೊಡ್ಡ ಕಾರ್ಯಭಾರಗಳಿದ್ದ ಗೃಹಸ್ಥ. ನೋಡ ನೋಡುತ್ತಿದ್ದಂತೆಯೇ ಕಣ್ಮರೆಯಾದರು. ಪಂಚಭೂತಗಳಲ್ಲಿ ವಿಲೀನರಾದರು. ಯಾರೂ ಈ ಲೋಕದಲ್ಲಿ ಶಾಶ್ವತರಲ್ಲ. ಎಲ್ಲ ನಾಲ್ಕು ದಿನದ ಆಟ. ನಮ್ಮ ಮೇಲೆ ದೇವರಿಗೆ ಯಾಕಿಷ್ಟು ಕೋಪ? ಚೌಟರು ತಲೆತಲೆ ಚಚ್ಚಿದರು.

ಮೂರನೆಯ ದಿನಕ್ಕೆ ಸಂಸ್ಕಾರದ ಕೆಲಸ ಅಚ್ಚುಕಟ್ಟಾಗಿ ಮುಗಿಯಿತು. ಚೌಟರು ಆ ದಿನ ಸಾಯಂಕಾಲ ಅಂತಕ್ಕನಿಗೆ ಸಮಾಧಾನ ಹೇಳಿ, ಧೈರ್ಯದ ಮಾತನಾಡಿ ಬೊಳ್ಳೂರು ಪರಾರಿಗೆ ವಾಪಸ್ಸಾದರು. ಹದಿಮೂರನೆಯ ದಿನದ ತಿಥಿಗಾಗಿ ಕೇನ್ಯದ ಮನೆಯಲ್ಲಿ ಸಕಲ ಸಿದ್ಧತೆಗಳು ನಡೆದುವು. ಊರವರೆಲ್ಲ ಸೇರಿ ತಿಥಿ ನಡೆಸಿದರು. ಸಾವಿರ ಜನರಿಗೆ ಅಡುಗೆ. ಬೊಳ್ಳೂರು ಪರಾರಿಯಿಂದ ಮೊದಲದಿನ ಸಂಜೆಯೇ ಇಡೀ ಗುತ್ತಿನ ಮನೆಯವರೆಲ್ಲ ಬಂದರು. ತಿಥಿಯ ದಿನ ನೀರು ನೆರಳಿರುವ ಕಡೆಯಲ್ಲಿ ತುದಿಬಾಳೆ ಎಲೆಯಲ್ಲಿ ಅಣ್ಣ ಅತ್ತಿಗೆ ಬಡಿಸಿದರು. ಅದನ್ನು ಎತ್ತಿ ಕೂದಲು ತೆಗೆದ ಮೈಂದಣ್ಣನ ಬೋಳು ತಲೆ ಮೇಲೆ ಇಟ್ಟರು. ಡೋಲು ಬಾರಿಸುತ್ತ ಸ್ಮಶಾನದ ದೂಪದ ಹೊಲಕ್ಕೆ ತೆಗೆದುಕೊಂಡು ಹೋದರು. ಅಲ್ಲಿ ಬಡಿಸಿದ ಬಾಳೆಎಲೆಯನ್ನು ಇಟ್ಟು ಎಲ್ಲರೂ ದೂರ ಸರಿದು ನಿಂತರು. ಕಾಗೆ ಬಂದು ಅದನ್ನು ತಿನ್ನಬೇಕು. ಕಾಗೆಯೂ ಬಂದು ಬಾಯಿ ಹಾಕಿತು. ಎಲ್ಲರೂ ಮನೆಗೆ ಹಿಂತಿರುಗಿದರು. ಇಡೀ ಊರಿನ ಜನರಿಗೂ ಅತಿಥಿಗಳಿಗೂ ಭೋಜನ ನಡೆಯಿತು.

ಆ ದಿನ ರಾತ್ರಿಯಲ್ಲಿ ಸತ್ತವರ ಆತ್ಮವನ್ನು ಒಳಗೆ ಕರೆಯುವ ಕಾರ್ಯಕ್ರಮ. ಸಂಜೆಯೇ ಒಂದು ಕೋಳಿಯನ್ನು ಅಂಗಳದಲ್ಲಿ ಕತ್ತರಿಸಿ ಹಾಕುವರು. ಅದು ಕುಪ್ಪಳಿಸುತ್ತ ಹೊರಳಾಡುತ್ತ ಸತ್ತು ಬೀಳುತ್ತದೆ. ಆಗ ಅದು ಯಾವ ಬದಿಗೆ ಬಿದ್ದಿದೆಯೆಂದು ಲಕ್ಷಣ ನೋಡುತ್ತಾರೆ. ಅದು ಪೂರ್ವ ಪಶ್ಚಿಮವಾಗಿ ಬಿದ್ದರೆ ಶುಭಲಕ್ಷಣ. ಸತ್ತವರಿಂದ ಜನರಿಗಾಗಲೀ ಮನೆಯವರಿಗಾಗಲೀ ಯಾವ ತೊಂದರೆಯೂ ಉಂಟಾಗದು. ಅದಕ್ಕೆ ಯಾವುದೇ ಪರಿಹಾರದ ಅಗತ್ಯವಿಲ್ಲ.

ಆ ಕೋಳಿಯನ್ನು ಕುಯಿದು ಪ್ರತ್ಯೇಕವಾಗಿ ಬೇಯಿಸಿ ಗಸಿ ಮಾಡುತ್ತಾರೆ. ನೆನೆಯಲು ಇಟ್ಟ ಐದು ಕುಡ್ತೆ ಅಕ್ಕಿಯ ಕಡುಬು ಕೂಡ ಆದಿನ ತಯಾರಾಗುತ್ತದೆ. ಅದನ್ನು ರಾತ್ರಿ ಒಂಬತ್ತು ಗಂಟೆ ಕಳೆದ ಮೇಲೆ ಕುಡಿಬಾಳೆಯೆಲೆಯಲ್ಲಿ ಬಡಿಸುತ್ತಾರೆ. ಅದರ ಮುಂದೆ ದೊಡ್ಡದಾದ ಬಾಳೆಎಲೆಯಲ್ಲಿ ಸತ್ತವರಿಗೆ ಹೊಸ ಬಟ್ಟೆ, ಅವರ ಶರ್ಟ್, ಪಂಚೆ, ರುಮಾಲು, ಉಂಗುರ, ಕಿವಿಯ ಒಂಟಿ ಎಲ್ಲವನ್ನೂ ಇಟ್ಟು ತುದಿಬಾಳೆಯೆಲೆಯಲ್ಲಿ ಒಂದು ಹಿಡಿ ಬೆಳ್ತಿಗೆ ಅಕ್ಕಿ ಇಡುತ್ತಾರೆ. ಒಂದು ಚೆಂಬು ಹೊಸನೀರು ತಂದಿಟ್ಟು ದೀಪ ಹೊತ್ತಿಸುತ್ತಾರೆ.

ಹಾಗೆ ಎಲ್ಲವನ್ನೂ ಸಿದ್ಧಗೊಳಿಸಿದ ಬಳಿಕ ಕುಟುಂಬದ ವಯಸ್ಸಾದ ಮುದ್ದಣ್ಣ ಬಂಡ್ರಾಲ್ ಎಂಬವರು ಎಲ್ಲರನ್ನೂ ಕರೆದು ಸುತ್ತಲೂ ನಿಲ್ಲಿಸಿದರು. ಅನಂತರ ಅವರು ದೊಡ್ಡದಾದ ಧ್ವನಿಯಲ್ಲಿ ತೀರಿಹೋದವರನ್ನು ಕುರಿತು 'ಬಡಿಸಿದುದರಲ್ಲಿ ಹೆಚ್ಚು ಕಡಿಮೆ

ಆದರೆ ಕ್ಷಮಿಸಬೇಕು. ನಮಗೆ ಅಪ್ಪಣೆ ಕೊಟ್ಟಂತೆ ಬಡಿಸಿದ್ದೇವೆ. ಅದನ್ನು ಸ್ವೀಕರಿಸಿ ಮಕ್ಕಳು, ಮರಿಗಳಿಗೆ, ಹಸುಕರುಗಳಿಗೆ, ಮನೆಯಲ್ಲಿರುವ ಗಂಡು ಹೆಣ್ಣುಗಳಿಗೆ, ಮನೆಯ ಕೆಲಸದಾಳುಗಳಿಗೆ ರಕ್ಷಣೆ ಕೊಟ್ಟು ನೀವು ದೇವರ ಪಾದ ಸೇರಬೇಕು' ಎಂದು ಹೇಳಿ ಪ್ರಾರ್ಥಿಸಿದರು. ಬೆಳ್ತಿಗೆ ಅಕ್ಕಿಯನ್ನು ಎಸೆದು ಉಳಿದವರೂ ಪ್ರಾರ್ಥಿಸಿದರು. ಅನಂತರ ಕಿಟಿಕಿ ಬಾಗಿಲು ಮುಚ್ಚಿ ಎಲ್ಲರೂ ಹೊರಗೆ ಬಂದರು.

ಸ್ವಲ್ಪ ಹೊತ್ತಾದ ಮೇಲೆ ಫಾಲಾಕ್ಷ ಬಾಗಿಲು ತೆರೆದು ಒಳಗೆ ಹೋಗಿ ಎಲೆಯನ್ನು ತುಸು ಮುಂದಕ್ಕೆ ಎಳೆದು ಚೆಂಬಿನಲ್ಲಿದ್ದ ನೀರನ್ನು ಸುತ್ತಲೂ ಚಿಮುಕಿಸಿ ಹೊರಗಿನ ಕೋಣೆಗೆ ತಂದು ಮನೆಯ ಮಾಡಿಗೆ ಸ್ವಲ್ಪ ಚಿಮುಕಿಸಿ ಉಳಿದ ನೀರನ್ನು ಬಾಗಿಲಿನ ಬಳಿಯಲ್ಲಿದ್ದ ಕೆಂದೆಂಗಿನ ಬುಡಕ್ಕೆ ಚೆಲ್ಲಿದ.

ಮನೆಯ ಒಳಗೆ ಹರಡಿದ ಎಲೆಯ ಮುಂದೆ ಅಂತಕ್ಕನನ್ನು ಕುಳ್ಳಿರಿಸಿ ಕಂಬೊಳಿಯಾಲರ ವಿಧವೆಯಾದ ಅಕ್ಕ ದೂಮಕ್ಕ ದುಃಖಸೀರೆಯನ್ನು ತಂದು ತಲೆ ಮತ್ತು ಮೈಯನ್ನು ಆವರಿಸುವಂತೆ ಹೊದಿಸಿದರು. ಕೇಳುವವರ ಕರುಳು ಕರಗುವಂತೆ ಕಣ್ಣೀರು ಸುರಿಸಿ ಬಿಕ್ಕಿ ಬಿಕ್ಕಿ ಅತ್ತರು. ಎಂಥ ಕಠಿಣ ಮನಸ್ಸಿನವರಾದರೂ ಹಿರಿಯರು ಮಾಡಿಟ್ಟ ಈ ಕರ್ಮಕಾಂಡದ ಕಟ್ಟುಪಾಡುಗಳನ್ನು ನೋಡುವಾಗ ದುಃಖಿಸದೆ ಇರಲಾರರು. ಆ ಮನೆಯಲ್ಲಿ ಅವರಿಗೆ ದೊರಕುವ ಅಂತಿಮ ಸೀರೆ ಅದು. ಅಳಿಯ ಸಂತಾನದ ಈ ಕ್ರಮ ಕರುಳು ಕತ್ತರಿಸುವ, ಮನಸ್ಸು ಮುರಿಯುವ, ಕಣ್ಣಲ್ಲಿ ರಕ್ತವಿಲ್ಲದವರು ಒಳ್ಳೆಯತನಕ್ಕೆ ಅವಮಾನ ಬರಿಸಲು ಮಾಡಿದ ಕ್ರಮ.

ಕುಟುಂಬದ ಕಿರಿಯರನ್ನೆಲ್ಲ ಬಳಿಗೆ ಕರೆದು ಅವರಿಗೆ ಕಣ್ಣೀರಲ್ಲೇ ಕೈನೆನೆಸಿ ಕೋಳಿಯ ಗಸಿ ಮತ್ತು ಕಡುಬನ್ನು ಅಂತಕ್ಕ ಕೊಟ್ಟರು. ಆ ಮನೆಯಲ್ಲಿ ಅವರು ಕೈಯಾರೆ ಕೊಡುವ ಕೊನೆಯ ತಿನಿಸು ಅದು.

ಎಲ್ಲರ ಊಟ ಮುಗಿಯುವಾಗ ಗಂಟೆ ಹನ್ನೊಂದು ಕಳೆಯಿತು. ಶಂಭು ಚೌಟರು ಒಳಗೆ ಹೋಗಿ ಅಂತಕ್ಕನನ್ನೂ ಮಕ್ಕಳನ್ನೂ ಕಳುಹಿಸಿಕೊಡಲು ಧೂಮಕ್ಕನಿಗೂ ಕಂಬೊಳಿಯವರ ತಮ್ಮನಿಗೂ ಹೇಳಿದರು. ಅದರಂತೆ ಅಂತಕ್ಕನೂ ಅವರ ಹೆಣ್ಣುಮಕ್ಕಳಾದ ಸರಸು ಮತ್ತು ಭವಾನಿಯರೂ ನಾಲ್ಕು ಬಟ್ಟೆಯ ಗಂಟನ್ನು ಹಿಡಿದುಕೊಂಡು ಅಂತಕ್ಕನನ್ನು ಹಿಂಬಾಲಿಸಿ ಹೊರಗೆ ಬಂದರು. ಮೈಂದಣ್ಣ ಎರಡು ತಿಂಗಳ ಬಳಿಕ ಆಟಿ ತಿಂಗಳಲ್ಲಿ ತಂದೆಯನ್ನು ತೀರಿಹೋದ ಪಿತೃಗಳ ಆತ್ಮದೊಂದಿಗೆ ಸೇರಿಸಿದ ಬಳಿಕ ಬೊಳ್ಳೂರಿಗೆ ಹೋಗುವುದೆಂದು ಮಾತಾಯ್ತು. ಅಂತಕ್ಕನನ್ನು ಕಳುಹಿಸಿಕೊಡಲು ಮನೆಯವರೂ ಕೆಲಸದವರೂ ಕಾರಿನ ಹತ್ತಿರ ಬಂದರು. ಚೌಟರು ಬರುವಾಗಲೇ ಒಂದು ಬಾಡಿಗೆ ಕಾರನ್ನೂ ಜೀಪನ್ನೂ ತಂದಿದ್ದರು.

ಮಧ್ಯರಾತ್ರಿಯಲ್ಲಿ ಅವರು ಹೊರಟ ಮೇಲೆ ಮೊದಲೇ ದುಃಖದ ಮುಸುಕು ಹಾಕಿದ್ದ ಸತ್ತಮನೆ ಇನ್ನಷ್ಟು ಖಾಲಿ ಖಾಲಿಯಾಯ್ತು. ಹೊರಗಿನ ನಟ್ಟಿರುಳಿನ ಕತ್ತಲೆ ಮನೆಯೊಳಗೂ ತುಂಬಿದಂತಾಗಿ ಯಾರಿಗೂ ಯಾವುದಕ್ಕೂ ಶಕ್ತಿ ಇಲ್ಲದಂತಾಗಿತ್ತು.

ಉತ್ಸಾಹವಂತೂ ಮೊದಲೇ ಇಲ್ಲ – ಕಂಬೊಳಿಯವರ ಸಾವು ಎಚ್ಚರಿಕೆಯ ಗಂಟೆ. ಪಂಜುರ್ಲಿಗೆ ಎರಡು ವರ್ಷಗಳಿಂದ ಕೋಲ ಕೊಡದ ಕಾರಣವೇ ಈ ರೀತಿಯ ಆಪತ್ತು ಬಾವೆಯ ಮನೆಗೆ ಕವಿಯಿತು. ಇವತ್ತು ಒಂದು ಜೀವ ಹೋಯ್ತು. ಇನ್ನು ಇದರ ಬೆನ್ನಿಗೆ ಎಂಥ ಆಪತ್ತು ಬರಬಹುದೋ, ಇನ್ನು ಎಷ್ಟು ಜೀವ ಹೋಗಲಿದೆಯೋ! ಆ ದೇವರ ಕೋಪಕ್ಕೆ ಹೀಗಾಯ್ತು. ಇಲ್ಲವಾದರೆ ಹಂದಿಯಿಂದ ಕಂಬೊಳಿಯವರಂಥ ಸುಪುಷ್ಟ ಯುವಕ ಸಾಯಲು ಸಾಧ್ಯವಿಲ್ಲ. ಇದು ದೇವರೂ ಪಂಜುರ್ಲಿಯೂ ಒಟ್ಟಿಗೆ ಕೋಪಿಸಿದುದರ ಪರಿಣಾಮವಾಗಿ ಬಂದ ಆಪತ್ತೆಂದು ದೂಮಕ್ಕನೇ ಬಾಯಿ ಬಿಟ್ಟು ಹೇಳಿದರು. ಈ ಸಲದ ಪತ್ತನಾಜೆ ಕಳೆದರೆ ಮನೆ ದೇವರಿಗೂ ಗುಡ್ಡದ ದೇವರಿಗೂ ಕೋಲ ಮಾಡಿಸಿ ಕೊಡುತ್ತೇನೆಂದು ಧೂಮಕ್ಕ ತೀರ್ಮಾನಿಸಿದರು. ಪಂಜುರ್ಲಿಯನ್ನು ನೆನಸಿ ಒಂದು ನಾಣ್ಯವನ್ನು ನಿವಾಳಿಸಿ ಚಾವಡಿಯ ಉಯ್ಯಾಲೆಯ ಕಂಬಕ್ಕೆ ಕಟ್ಟಿದರು.

ವಿಧಿ ಸಂಕಲ್ಪದಿಂದ ಅಂತಕ್ಕ ಬೊಳ್ಳೂರಿಗೆ ವಾಪಸ್ಸು ಬಂದು ಸೇರಿದರು. ಅತ್ತಿಗೆಯರ ಕೈಬಾಯಿಗಳಿಗೆ ಕಾದು ನಿಂತರು. ಬ್ರಹ್ಮ ಬರೆದುದನ್ನು ತಪ್ಪಿಸಲು ಯಾರಿಂದ ಸಾಧ್ಯ? ತಲೆಯಲ್ಲಿ ಬರೆದುದನ್ನು ಎಲೆಯಲ್ಲಿ ಒರಸಲು ಸಾಧ್ಯವೇ?

* * * * *

ಕಂಬೊಳಿಯವರ ಯಜಮಾನಿಕೆಯಲ್ಲಿ ಸಂಪಾಜೆಯ ಕೇನ್ಯದ ಬಾವೆಯಲ್ಲಿ ದಿನ ಕಳೆದ ಅಂತಕ್ಕನಿಗೆ ಅತ್ತಿಗೆಯರ ಮರ್ಜಿಯಲ್ಲಿ ಮೂವರು ಮಕ್ಕಳನ್ನು ಸಾಕುವುದಕ್ಕೆ ತುಂಬ ಕಷ್ಟವಾಯ್ತು. ಕಂಬೊಳಿಯವರು ಅಷ್ಟು ಬೇಗ ಸತ್ತುಹೋಗುತ್ತಾರೆಂದು ಆಕೆ ಭಾವಿಸಿರಲೇ ಇಲ್ಲ. ಹಾಗಾಗಿ ಪೆಟ್ಟಿಗೆಯಲ್ಲಿದ್ದ ಸ್ವಲ್ಪ ಹಣ ಮತ್ತು ಅವರು ಖರ್ಚಿಗೆ ಕೊಟ್ಟುದರಲ್ಲಿ ಉಳಿಸಿದ ಪುಡಿಗಾಸಲ್ಲದೆ ಅಂತಕ್ಕ ತಂದುದು ನಾಲ್ಕು ಹೆರಿಗೆಯಲ್ಲಿ ಬದುಕುಳಿದ ಮೂವರು ಮಕ್ಕಳನ್ನು ಮಾತ್ರ. ಅದೃಷ್ಟ ಕೈಕೊಟ್ಟಂತೆ ಗಂಡ ಕೂಡ ಅವರನ್ನು ನಡುನೀರಿನಲ್ಲಿ ಕೈಬಿಟ್ಟು ಹೊರಟುಹೋದರು.

ಆದರೂ ಅಂತಕ್ಕ ಗಟ್ಟಿ ಮನಸ್ಸಿನ ಹೆಂಗಸು. ತಮ್ಮನನ್ನು ಕಾಡಿ ಬೇಡಿ ತನ್ನ ಮಕ್ಕಳಿಗೆ ಬೇಕಾದುದನ್ನು ದೊರಕಿಸುವರು. ಸರಸು ಐದನೆಯ ತರಗತಿ. ಕನ್ನಡ ಶಾಲೆಗೆ ಹೋಗಲು ಶಾಲೆ ದೂರ. ಹುಡುಗಿ ಪ್ರಾಯಕ್ಕೆ ಬರುವ ಸಮಯ. ಶಾಲೆಗೆ ಮೂರು ಮೈಲು ನಡೆದು ಒಂದು ಮೈಲು ಬೆಟ್ಟ ಹತ್ತಿ ಬೆಳಗ್ಗೆ ಹೋಗಿ ಸಂಜೆಗೆ ಬರುವುದು ಬೇಡವೆಂದರು ಚಿಕ್ಕ ಮಾವ ಶಂಭು ಚೌಟರು. ಸರಸಿ ಪಾಪ ಹೆಣ್ಣುಹುಡುಗಿ. ನಾಲ್ಕು ದಿನ ಮುಸಿ ಮುಸಿ ಅತ್ತಳು. ಆಮೇಲೆ ಬಾಯಿ ಮುಚ್ಚಿ ಸುಮ್ಮನಾದಳು. ಮುದ್ದು ಮಾಡಿ ಬಂಗಾರದೊಡವೆ ಹಾಕಿ ಕೇಳಿದ್ದನ್ನು ಕೊಡಿಸಲು ತಂದೆ ಇದ್ದರೆ ಸರಿ. ಅದು ಬೇರೆಯೇ ವಿಷಯ.

ಭವಾನಿ ಏಳನೇ ತರಗತಿಯವರೆಗೆ ಪದವು ಶಾಲೆಗೆ ಹೋದಳು. ಅವಳಿಗೂ ಐದನೇ ಕ್ಲಾಸು ಮುಗಿದಾಗ ಶಾಲೆಗೆ ಹೋಗುವುದು ಬೇಡವೆಂದಿದ್ದರು ಅತ್ತೆಯಂದಿರು.

ಆದರೆ ಒಕ್ಕಲುಮನೆಯ ಹೆಣ್ಣುಮಕ್ಕಳು ಕೂಡ ಶಾಲೆಗೆ ಹೋಗುತ್ತಾರೆ. 'ಹೆಣ್ಣುಮಕ್ಕಳನ್ನೆಲ್ಲ ಶಾಲೆಗೆ ಕಳುಹಿಸಬೇಕೆಂದು ಸರಕಾರವೇ ಆದೇಶಿಸಿರುವಾಗ, ಕಾಂಗ್ರೆಸ್ಸಿನವರು ಗಾಂಧೀಜಿಯವರ ಮಾತನ್ನು ಕೇಳಿ ಮಕ್ಕಳು ಶಾಲೆಗೆ ಹೋಗಿ ಕಲಿಯಬೇಕೆನ್ನುವಾಗ ನಮ್ಮ ಮನೆಯ ಹೆಣ್ಣುಮಕ್ಕಳನ್ನು ಕಳುಹಿಸದಿರುವುದು ಹೇಗೆ?' ಎಂದು ಶಂಭು ಚೌಟರು ಹೇಳಿದರು. ಹಾಗೆ ಭವಾನಿ ಎರಡು ವರ್ಷ ಹೆಚ್ಚಾಗಿ ಕಲಿತಳು. ಮೈಂದಣ್ಣ ಕೂಡ ನೆರೆಕರೆಯ ಮಕ್ಕಳೊಡನೆ ಶಾಲೆಗೆ ಹೋಗುತ್ತಾನೆ. ದೇವಣ್ಣ ಚೌಟರಿಗೆ ಮಕ್ಕಳಿಲ್ಲ. ಶಂಭು ಚೌಟರಿಗೆ ಒಂದು ಹೆಣ್ಣು, ಒಂದು ಗಂಡು. ಹುಡುಗನಿಗೆ ಹತ್ತು ವರ್ಷ.

ಮೈಂದಣ್ಣ ಮನಸ್ಸಿಲ್ಲದ ಮನಸ್ಸಿನಿಂದ ಶಾಲೆಗೆ ಹೋಗುತ್ತಾನೆ. ಅವನಿಗೆ ಶಾಲೆಗಿಂತ ಚಾವಡಿಯ ಸುದ್ದಿ ಸಮಾಚಾರಗಳನ್ನು ತಿಳಿಯುವುದರಲ್ಲೇ ಹೆಚ್ಚು ಆಸಕ್ತಿ. ಚಿಕ್ಕ ಮಾವ ಕೋಳಿ ಅಂಕಕ್ಕೆ ಹೋಗುತ್ತಾರೆಂದು ಗೊತ್ತಾದ ದಿನ ಅವನಿಗೆ ಹೊಟ್ಟೆನೋವು ಮತ್ತು ತಲೆನೋವು ಬರುವುದು ಖಂಡಿತ. ಶಂಭು ಚೌಟರು ಕೆಲಸದ ಐತ ಮತ್ತು ರಾಮನೊಂದಿಗೆ ಉರಿಯನನ್ನೂ ಕರ್ರೊಬ್ಬಳನನ್ನೂ ಹಿಡಿದುಕೊಂಡು ಹೊರಟು ಬಾಕಿಮಾರಿನ ಕೊನೆಯ ಗುರಿಕಾರನ ಮನೆಯ ಬಾಗಿಲಿಗೆ ತಲಪಿದರೋ ಅವನ ಬೇನೆ ಬೇಸರಿಕೆಯೆಲ್ಲ ಮಂಗ ಮಾಯ. ಆತ ದಡಕ್ಕನೆ ಎದ್ದು ಒಗೆದಿಟ್ಟ ಚಡ್ಡಿ ಮತ್ತು ಅಂಗಿ ಹಾಕಿ 'ಅಮ್ಮ, ನಾನು ಶಂಕರ ಭಟ್ಟನ ಹತ್ತಿರ ಇವತ್ತು ಬಾಕಿಯಾದ ಪಾಠ ಏನು ಎಂದು ತಿಳಿದುಕೊಂಡು ಅವನ ಪುಸ್ತಕವನ್ನು ನೋಡಿಕೊಂಡು ಬರೆಯಲು ಪದವುಗೆ ಹೋಗಿ ಬರ್ತೇನೆ.' ಎಂದು ಕೂಗಿ ಹೇಳಿ ಅಂಗಿಯ ಒಂದು ಕೈಯನ್ನು ಸಿಕ್ಕಿಸುತ್ತ ಓಡುತ್ತಾನೆ. ಹುಡುಗ ಏನು ಹೇಳಿದ ಎಂಬುದನ್ನು ಕೇಳಲು ಅಂತಕ್ಕ ಹೊರಗೆ ಬರುವುದರೊಳಗೆ ಆತ ಬಾಕಿಮಾರು ದಾಟಿಯಾಗುತ್ತಿತ್ತು. ಅವರಿಗೆ ಪಾಪ ಏನು ಗೊತ್ತು ತನ್ನ ಮಗ ಹೋದುದು ಪದವಿನ ಶಂಕರಭಟ್ಟನ ಬಳಿಗಲ್ಲ ಕೋಳಿಅಂಕ ನಡೆಯುವ ಮೈದಾನಕ್ಕೆಂದು.'ಇವನು ಏಕೆ ಹೀಗೆ ಮಾಡ್ತಾನೋ, ಹುಷಾರಿಲ್ಲವೆಂದು ಮಲಗಿದ್ದವನು ಹೇಳದೆ ಕೇಳದೆ ಪರಾರಿಯಾದನಲ್ಲ. ಇನ್ನವ ಬರಲಿ, ಹುಣಸೆಯ ಬರಲು ತೆಗೆದಿಡ್ತೇನೆ.' ಎನ್ನುತ್ತಾರೆ ಅಂತಕ್ಕ.

ಭವಾನಿಗೆ ಅವನ ಕಿತಾಪತಿಯೆಲ್ಲ ಮೊದಲೇ ಗೊತ್ತಾಗುತ್ತಿತ್ತು. ಆ ದಿನವೂ ಬೆಳಗ್ಗೆ ಎದ್ದವನೇ ಮೈಂದಣ್ಣ ಗೂಡಿನಲ್ಲಿದ್ದ ಅಂಕದ ಕೋಳಿಯನ್ನು ಮಾಲೀಸು ಮಾಡುತ್ತಿದ್ದ. ಅದಕ್ಕೆ ಭತ್ತ, ನೀರು ಕೊಟ್ಟು ಪುಕ್ಕ ಸವರುತ್ತಿದ್ದ. ಕೆಲಸದ ಮಾಂಕುವಿನ ಹತ್ತಿರ 'ಇವತ್ತು ಗುರುವಾರದ ಕೋಳಿಅಂಕದಲ್ಲಿ ಯಾವ ಬಣ್ಣದ ಕೋಳಿಗೆ ಜಯ ಸಿಗುತ್ತದೆಂದು ನಂದಪ್ಪಣ್ಣನ ಹತ್ತಿರ ಪಂಚಾಂಗ ನೋಡಿ ಕೇಳಿ ಬಾ' ಎನ್ನುತ್ತ ಎಂಟಾಣೆ ಕೊಟ್ಟಿದ್ದ. ಅದು ರುಕ್ಕಕ್ಕನಿಗೆ ಹೊಗೆಸೊಪ್ಪು ತರಲು ಕೊಟ್ಟ ಹಣದಲ್ಲಿ ಉಳಿದ ಚಿಲ್ಲರೆ. ಅದನ್ನು ಬೆಳಿಗ್ಗೆಯೇ ಮಗುವಿನ ಕೊಳೆಬಟ್ಟೆ ಒಗೆಯಲು ಬರುವಾಗ ಭವಾನಿ ನೋಡಿದ್ದಳು. ಆಗಲೇ ಅವಳಿಗೆ ಗೊತ್ತಾಗಿತ್ತು. ಇವತ್ತು ಎಲ್ಲೋ ಕೋಳಿಅಂಕ ಇರಬೇಕು, ಮೈಂದಣ್ಣನಿಗೆ ಅಲ್ಲಿಗೆ ಹೋಗಲಿಕ್ಕಿದೆ ಎಂಬುದು. ಅವನಿಗೆ ತಲೆ ತಿರುಗುವುದು ಇಲ್ಲವಾದರೆ ಹೊಟ್ಟೆನೋವು ಬರುವುದು ಖಂಡಿತವೆಂದು ಅವಳು ಆಗಲೇ ಊಹಿಸಿದ್ದಳು. ಅಮ್ಮ

ಹುಣಸೆ ಬರಲಿನ ಮಾತಾಡಿದ್ದು ಕೇಳಿ ಅವಳು ಬಾಯಿ ಮುಚ್ಚಿಕೊಂಡಳು. ಮೈಂದಣ್ಣನಿಗೆ ಸಂಜೆ ಸಿಗುವ ಸೇವೆಗೆ ತನ್ನಿಂದ ನಾಲ್ಕು ಏಟು ಹೆಚ್ಚಿಗೆ ಸೇರಿಸುವುದೇಕೆ? ಮೈಲಿಗೆ ಬಟ್ಟೆ ತೆಗೆದುಕೊಂಡು ಹೊಳೆಗೆ ಒಗೆಯಲು ಹೊರಟವಳು ಪುನಃ ಮಗುವಿನ ಕೊಳೆ ಬಟ್ಟೆ ತರಲು ಬಾಣಂತಿಯ ಕೊಟ್ಟಿಗೆಯ ಒಳಗೆ ಹೋದಳು.

ಚಿಕ್ಕ ಮಾವ ಮುಂಡಾಸು ಕಟ್ಟಿ ಕೋಳಿಗೆ ಭತ್ತ, ನೀರು ಕೊಟ್ಟು ಅವುಗಳನ್ನು ಜನರಿಂದ ಹಿಡಿಸಿಕೊಂಡು ಅಂಕಕ್ಕೆ ಹೊರಟಾಗ ಹೆಂಗಸರು ಎದುರಲ್ಲಿ ನಿಲ್ಲಬಾರದು. ಹೆಂಗಸರನ್ನು ನೋಡಿದರೆ ಮಹಾದೋಷ. ಆಗ ಅವರಿಗೆ ಬ್ರಹ್ಮಾಂಡ ಕೋಪ ಬರುತ್ತದೆ. ಗೊತ್ತಿದ್ದೂ ಅಲ್ಲಿ ನಿಲ್ಲುವುದೇಕೆಂದು ಅವಳು ಬೇಗ ಒಳಗೆ ಹೋದಳು. ಶಂಭು ಚೌಟರು ಕೆಂಪು ರುಮಾಲು ತಲೆಗೆ ಕಟ್ಟಿ ಶರ್ಟಿನ ಕೈಯನ್ನು ತೋಳಿಗೇರಿಸಿ ಬಾಯಿ ತುಂಬ ತುಂಬಿಸಿದ ತಾಂಬೂಲದ ಉಂಡೆಯನ್ನು ದವಡೆಗೆ ಒತ್ತಿ ಎರಡು ಬೆರಳಿನ ಮಧ್ಯದಿಂದ ಕೆಂಪಾಗಿದ್ದ ಎಲೆ ಅಡಿಕೆಯ ಎಂಜಿಲನ್ನು ಹಿತ್ತಾಳೆಯ ಪೀಕದಾನಿಗೆ ಸುರ್ರೆಂದು ರಟ್ಟಿಸುವ ಗತ್ತೆಂದರೆ ಗತ್ತು. ಅರಸಿನ ಕೊಂಬಿನ ಬಣ್ಣದ ಎತ್ತರದ ಯುವಕ ಆತ. ಮುಖದಲ್ಲಿ ದಪ್ಪ ಮೀಸೆ, ತಲೆತುಂಬ ಗುಂಗುರು ಗುಂಗುರಾದ ಕೂದಲು. ಹಿಂಭಾಗದಲ್ಲಿ ಸುರುಳಿ ಸುತ್ತಿದ ಜುಟ್ಟು. ಒಕ್ಕಲು ಜನಗಳ ದರ್ಪವನ್ನು ಓಡಿಸುವಂಥ ಗೃಹಸ್ಥ. ಕುಶಾಲಿನಲ್ಲೂ ಶಂಭುಚೌಟರು ಕಡಿಮೆಯೇನಲ್ಲ, ಕೆಸರು ಕಂಡಲ್ಲಿ ತುಳಿದು ನೀರು ಕಂಡಲ್ಲಿ ತೊಳೆದು ಅಲ್ಲಿದ್ದು ಅಲ್ಲಿಗೇ ಇಲ್ಲಿದ್ದು ಇಲ್ಲಿಗೇ ಬಿಡುವಂಥ ಜಾಣತನ ಅವರದ್ದು. ಅವರ ಗರ್ವ, ದರ್ಬಾರುಗಳೂ ಕಡಿಮೆಯಲ್ಲ. ಹತ್ತು ಜನರಿಗೆ ಬೇಕಾದ ವ್ಯಕ್ತಿ ಕೂಡ. ಹೆಸರಿಗೆ ದೇವಣ್ಣ ಚೌಟರು ಯಜಮಾನರಾದರೂ ಕೊಡುವ ತೆಗೆಯುವ ಉಸ್ತುವಾರಿ, ದೈವ ದೇವರುಗಳಿಗೆ ಸಲ್ಲಿಸುವ ಕಾರ್ಯಭಾರಗಳು, ಮನೆಯ ಖರ್ಚು ವೆಚ್ಚಗಳು, ಕಷ್ಟ ನಷ್ಟಗಳು ಎಲ್ಲಕ್ಕೂ ತಲೆ ಕೊಡುವವರು ಶಂಭು ಚೌಟರು. ಹಾಗೆಯೇ ದೂರು, ಆರೋಪಗಳು ಅವರಿಗೇ.

ಕೇನ್ಯದ ಬಾವೆಯಿಂದ ಬೊಳ್ಳೂರು ಪರಾರಿಗೆ ಅಂತಕ್ಕ ತನ್ನ ಮುತ್ತೈದೆ ಸೌಭಾಗ್ಯವನ್ನು ಕಳೆದುಕೊಂಡು ಬರುವಾಗ ಸರಸುವಿಗೆ ಹತ್ತು ವರ್ಷ ಕಳೆದು ಹನ್ನೊಂದು ನಡೆಯುತ್ತಿತ್ತು. ಮೈಂದಣ್ಣನಿಗೆ ಒಂಬತ್ತು ವರ್ಷ, ಭವಾನಿಗೆ ಏಳು ವರ್ಷ.

* * * * *

ವರ್ಷಗಳು ಹೇಗೆ ಕಳೆಯುತ್ತವೆಂದು ಗೊತ್ತಾಗುವುದೇ ಇಲ್ಲ. ಕಾಲ ಯಾರ ಸುಖ ದುಃಖಗಳಿಗೂ ಕಾಯುವುದಿಲ್ಲ. ಹತ್ತು ವರ್ಷ ಕಳೆಯಿತು. ಈಗ ಸರಸು ಪ್ರಾಯದ ಯುವತಿ. ಅವಳ ಬೆನ್ನಿಗೇ ಭವಾನಿಯೂ ಮದುವೆಗೆ ಸಿದ್ಧಳಾಗಿದ್ದಳು.

ಅಂತಕ್ಕ ಪ್ರತಿದಿನವೂ ಸೋಮಕ್ಕನಲ್ಲೂ ತುಂಗಕ್ಕನಲ್ಲೂ ಸರಸುಗೆ ನೆಂಟಸ್ತಿಕೆ ಹುಡುಕಲು ಹೇಳುತ್ತಾರೆ. ಅಷ್ಟು ಅವಸರವೇಕೆಂದು ಅವರಿಬ್ಬರೂ ಅಂತಕ್ಕನ ಮಾತನ್ನು ಮೂಲೆಗೆ ತಳ್ಳುತ್ತಾರೆ.

ಈ ಸಮಯದಲ್ಲೇ ಸೇನವರ (ಶ್ಯಾನುಭಾಗರ) ಮೂಲೆಯ ತ್ಯಾಂಪ ಸೇನವರು ಗುತ್ತಿನ ಮನೆಗೆ ಬಂದರು. ಮೊದಲ ಕೊಯ್ಲು ಆದಾಗ ಬೆಳೆಕಾಣಿಕೆಯನ್ನೂ ವರ್ಷದ ಗೇಣಿಯನ್ನೂ ಸಲ್ಲಿಸುವುದು ಕ್ರಮ. ಅದಕ್ಕಾಗಿ ಬಂದವರು ಅವರು.

'ಓಹೋ, ಏನು ಸೇನವರು, ನೀವು ತಮ್ಮನ ಮನೆಗೆ ಬೊಂಬಾಯಿಗೆ ಹೋಗಿದ್ದಿರೆಂದು ಯಾರೋ ಹೇಳಿದರು' ದೇವಣ್ಣ ಚೌಟರು ಮಾತನಾಡುತ್ತಲೇ ಅವರನ್ನು ಬರಮಾಡಿಕೊಂಡರು.

'ಹೌದು ಚೌಟರೇ, ಹೋಗಿ ಎರಡು ತಿಂಗಳಿದ್ದು ಬಂದೆ. ಬಂದು ಹತ್ತು ದಿವಸಗಳಾದುವು. ಬಂದ ಕೂಡಲೇ ಗದ್ದೆಯಲ್ಲಿ ಕುಯ್ಲು. ಕೆಲಸದ ಮೇಲೆ ಕೆಲಸ ಬಾಕಿಯಿತ್ತು. ಮನೆಯಲ್ಲಿರುವವಳು ಮಡದಿ ಒಬ್ಬಳೇ. ಕೊಟ್ಟಿಗೆ, ಗದ್ದೆ, ಕೆಲಸದವರು ಅನ್ನುವಾಗ ಅವಳಿಗೆ ತುಂಬ ಕಷ್ಟವಾಗುತ್ತಿತ್ತು. ಅವಳಿಂದ 'ಬೇಗ ಬನ್ನಿ, ಬೇಗ ಬನ್ನಿ' ಅಂತ ಬೊಂಬಾಯಿಗೆ ಕಾಗದದ ಮೇಲೆ ಕಾಗದ.

ಬೊಂಬಾಯಿ ದೊಡ್ಡ ಊರು. ಇರಲು ಖುಷಿಯಾಯ್ತು.

'ನಿಮ್ಮನ್ನು ನೋಡುವಾಗಲೇ ಬೊಂಬಾಯಿ ನಿಮಗೆ ಚೆನ್ನಾಗಿ ಒಗ್ಗಿದೆಯೆಂದು ಗೊತ್ತಾಗುತ್ತದೆ. ಪದ್ಮ ಏನು ಮಾಡುತ್ತಾನೆ?' ಚೌಟರು ಕೇಳಿದರು. 'ಅವನಿಗೆ ಹೋಟೆಲು ಅಲ್ಲವೇ?'

'ಹೋಟೆಲು ನಿಜವೇ. ಅದಲ್ಲದೆ ಪಾನ್ ಬೀಡದ ಒಂದು ಅಂಗಡಿಯೂ ಇದೆ. ಒಂದು ರೂಪಾಯಿಯಿಂದ ನೂರು ರೂಪಾಯಿಯವರೆಗೂ ಬೆಲೆಯಿರುವ ಬೀಡ ಇದೆಯಂತೆ. ಅದನ್ನೂ ಜನ ತೆಗೆದುಕೊಳ್ಳುತ್ತಾರೆ. ಅದಕ್ಕೆ ಬೆಳ್ಳಿಬಂಗಾರದ ದರ ಹಾಕುತ್ತಾರಂತೆ. ಅದು ಎದುರಿಗೇ ಇದೆ. ಹೋಟೆಲಿನ ವ್ಯಾಪಾರವೂ ಚೆನ್ನಾಗಿದೆ. ಪದ್ಮ ಮಾತ್ರ ಮುಂಜಾನೆ ನಾಲ್ಕು ಗಂಟೆಯಿಂದ ರಾತ್ರಿ ಹನ್ನೊಂದು ಗಂಟೆಯವರೆಗೆ ಕಾಲಿಗೆ ಚಕ್ರ ಕಟ್ಟಿದಂತೆ ತಿರುಗುತ್ತಾನೆ. ಊಟ ಮಾಡಲೂ ಬಿಡುವಿಲ್ಲದಂತೆ ದುಡಿಯುತ್ತಾನೆ.'

'ನೀವುಗಳೆಲ್ಲ ಅವನಿಗೆ ಸೊಕ್ಕು ಅಂತ ಹೇಳುತ್ತಿದ್ದಿರಿ. 'ನಿನಗೆ ಬೆನ್ನು ಬಗ್ಗುವುದಿಲ್ಲ. ಮಣ್ಣು ಕಲಸಲು ಸಂಕಟ' ಅನ್ನುತ್ತ ಗೊಣಗುತ್ತಿದ್ದಿರಿ. ಆಗ ಆತ ಹದಿನೈದು ಹದಿನಾರು ವರ್ಷದ ಯುವಕ. ಮಕ್ಕಳು ನೋಡಿ. ಪ್ರಾಯ ಬಂದಾಗ ಮಕ್ಕಳಿಗೆ ಬುದ್ಧಿ ಬರುವುದಿಲ್ವಾ?' ಚೌಟರು ಹೇಳಿದರು.

'ಅಲ್ಲದೆ ತ್ಯಾಂಪಣ್ಣ, ಅವನಿಗೂ ಮೀಸೆ ಹುಟ್ಟುವಾಗ ಒಳ್ಳೆಯವನಾಗ್ಬೇಕೆಂದು ಗೊತ್ತಿತ್ತು. ಒಳ್ಳೆಯ ಬೀಜದಲ್ಲಿ ಹುಟ್ಟಿದವರ ಲಕ್ಷಣ ಅದು.'

'ಅಣ್ಣಾ, ಏನಾದ್ರೂ ನೀವು ಹಿರಿಯರು ಆಶೀರ್ವಾದ ಮಾಡಬೇಕು. ತಂದೆ ಸತ್ತ ಮಗುವನ್ನು ತಮ್ಮನೆಂದಲ್ಲ, ಮಗನೆಂದು ಭಾವಿಸಿ ಕಷ್ಟಪಟ್ಟು ಸಾಕಿದೆ.'

'ನೀನೇನು ಸಾಕಿದ್ದು ಮಣ್ಣು. ಮೂರು ಹೊತ್ತೂ ತೆಳಿ ಗಂಜಿಯನ್ನು ಕೈಬಿಗಿ ಮಾಡಿ ಕೊಟ್ಟಿದ್ದೀಯಾ. ಅವನು ಪದವಿನ ಬಾಬುರಾಯರ ಉಚಿತವಾಗಿ ಕಲಿಸುವ ಶಾಲೆಯಲ್ಲಿ ನಾಲ್ಕು ಅಕ್ಷರ ಕಲಿತ.'

‘ಊರು ಬಿಟ್ಟು ಹೋಗಿ ನಾಯಿಯಂತೆ ಬದುಕಿ ಈಗ ಒಬ್ಬ ಮನುಷ್ಯನಾದ. ಪಾಪ, ಈತ ತಾನು ಕಷ್ಟಪಟ್ಟು ಊಟ ಹಾಕಿ ಬೆಳೆಸಿದೆ ಅನ್ತಾನೆ’ ಮನಸ್ಸಿನಲ್ಲಿ ದೇವಣ್ಣ ನೆನಪು ಮಾಡಿಕೊಂಡರೂ ಎದುರಿಗೆ ಹೇಳಿದ್ದು ಮಾತ್ರ., ‘ಆಗಲಿ ತ್ಯಾಂಪಣ್ಣ, ಇನ್ನು ನಿನಗೊಂದು ಆಸರೆ ಆಗ್ತಾನೆ.’

‘ಹೌದೇನೋ ತ್ಯಾಂಪಣ್ಣ, ಪದ್ಮನಿಗೆ ಮದುವೆ ವಯಸ್ಸು ಆಯ್ತು. ಇನ್ನು ಒಂದು ಹೆಣ್ಣು ನೋಡಿ ಮದುವೆ ಮಾಡಿಬಿಡು.’

‘ಮಾಡಬೇಕಣ್ಣ. ಆತ ಮಾತ್ರ ಊರಿಗೆ ಬರಲು ಸಮಯವೇ ಇಲ್ಲವೆನ್ನುತ್ತಾನೆ.’

‘ನಮ್ಮ ಪಂಜುರ್ಲಿ ಬಂಟನ ಕೋಲಕ್ಕೆ ಒಂದು ಹರಕೆ ಕೊಡುವುದಕ್ಕಿದೆ ಅಂದಿದ್ದ. ಭೂತದ ಕಡ್ತಲೆಗೂ ಬಂಟ ಹಿಡಿಯುವ ಚೌರಿಗೂ ಬೆಳ್ಳಿಯ ಕಟ್ಟು ಹಾಕಿಸಬೇಕೆಂದು ಹೇಳಿದ್ದೇನೆ. ಬೇಸಿಗೆಯಲ್ಲಿ ಸುಗ್ಗಿಯ ಕಾಲ ಕಳೆದಾಗ ಊರಿಗೆ ಬಂದರೂ ಬಂದಾನು ಆತ.’

‘ಬರೇ ಬೆಳ್ಳಿಯ ಕಟ್ಟು ಏಕೆ? ಸ್ಥಾನವನ್ನು ಕೆಡವಿ ಕಟ್ಟಿಸಬೇಕು. ಏನಾದರೂ ಊರಿನವರೆಲ್ಲ ವಂತಿಕೆ ಕೊಡುತ್ತಾರೆಂದು ಶಂಭು ಹೇಳಿದ್ದಾನೆ. ಆಗ ಏನಾದರೂ ಕೊಡಲಿ. ಆಗಬಹುದಲ್ಲ?’

‘ಆಗಬಹುದು ಅಣ್ಣ. ನೀವು ಹೇಳಿದ್ದಕ್ಕೆ ನಾವು ಯಾವತ್ತೂ ತಪ್ಪುವುದಿಲ್ಲ. ನಾನು ಅವನಿಗೆ ಹೇಳುತ್ತೇನೆ.’

ತ್ಯಾಂಪಣ್ಣ ಸೇನವ ಹೋದ ಮೇಲೆ ದೇವಣ್ಣ ಚೌಟರಿಗೆ ಪಕ್ಕನೆ ಒಂದು ಆಲೋಚನೆ ಬಂತು. ಅಂತಕ್ಕ ನಿನ್ನೆ ಕೂಡ ಹೇಳಿದ್ದರು, ‘ನೀವು ಇಬ್ಬರು ಮಾವಂದಿರು ಕಲ್ಲಿನಂತಿದ್ದರೂ ಈ ಕಾಲದಲ್ಲಿ ನನ್ನ ಮಗಳಿಗೆ ಎರಡು ಅಕ್ಷತೆ ಹಾಕುವ ಯೋಗ್ಯತೆ ನಿಮಗಿಲ್ವಾ? ಹುಡುಗಿಗೆ ಮೂವತ್ತು ವರ್ಷ ಆಗಲಿ ಅಂತ ಕಾಯ್ತಿದ್ದೀರೇನೋ. ಭೂಮಿಯ ಹುಟ್ಟುವಳಿ ತಿನ್ನಲು ಕಾಡುಹರಟೆ ಹೊಡೆಯಲು ನಿಮಗೆ ಜನ ಇದ್ದಾರೆ. ಗತಿ ಇಲ್ಲದೆ ಹಂಗಿನ ಕೂಳಿಗೆ ಬೀಳಲು ನನ್ನನ್ನೂ ನನ್ನ ಮೂವರು ಮಕ್ಕಳನ್ನೂ ಆ ಜುಮಾದಿಯೇ ಇಲ್ಲಿಗೆ ತಳ್ಳಿದರೇ? ಓ ಕುಪ್ಪೆ ಪಂಜುರ್ಲಿ ದೇವರೇ, ಇಂಥ ಹಂಗಿನ ಅನ್ನಕ್ಕೆ ತಳ್ಳಿದಿರೇ?’ ಎಂದು ಹೇಳಿ ಅತ್ತಿದ್ದರು.

ಮಹಡಿಯಲ್ಲಿ ಮಲಗಿದ್ದ ದೇವಣ್ಣ ಚೌಟರು ಎದ್ದು ಕುಳಿತು ತುಂಗಕ್ಕನ ಹತ್ತಿರ ಕೇಳಿದರು ‘ಎಲ್ಲಿದ್ದಾಳೆ ಅಂತಕ್ಕ? ಅದೇನು ಬೆಳ್ಳಂಬೆಳಗಿಗೇ ಅವಳ ಗೋಳು? ಅಳ್ತಿದ್ದಾಳಾ? ಇಷ್ಟು ಬೆಳಿಗ್ಗೆಯಲ್ಲೇ ಏನಾಯ್ತುವಳಿಗೆ?’

ತುಂಗಕ್ಕ ಮೂತಿ ಸೊಟ್ಟಮಾಡಿ ಕೈ ತಿರುಗಿಸುತ್ತ ಹೇಳಿದರು, ‘ಶಂಭಣ್ಣನ ಹತ್ತಿರ ಏನೋ ಕೇಳಿದರು. ಅವರು ಏನೋ ಗದರಿಸಿ ಪ್ರತಿಕ್ರಿಯಿಸುವುದು ಕೇಳಿಸಿತು. ‘ಮದುವೆ ಅಂದರೇನು ಹೇಳಿದ ಕೂಡಲೇ ಆಗಿಬಿಡುತ್ತದಾ? ಅದಕ್ಕೆ ಕಾಲ ಕೂಡಿಬರಬೇಕು’ ಅಂತ ಹೇಳುವುದು ಕೇಳಿಸಿತು. ಹಣೆಬರಹ ತಿಳಿಯಾದಾಗ, ಧಾರೆಯೆರೆಯುವ ಸಮಯ ಬಂದಾಗ ತನ್ನಷ್ಟಕ್ಕೇ ಸಂಬಂಧ ಕೂಡಿ ಬರುತ್ತದೆ. ಗಿಡುಗ ಕೋಳಿಯ ಮರಿಯನ್ನು

ಕುಕ್ಕಿಕೊಂಡು ಹೋದ ಹಾಗೆ ಆಗುತ್ತದೆ. ಶಂಭಣ್ಣ ಅಷ್ಟು ಹೇಳುವುದೇ ಅತ್ತಿಗೆ ಎದೆ ಬಡಿದುಕೊಂಡು ಬೊಬ್ಬೆ ಹಾಕಲು ಶುರುಮಾಡಿದರು.'

'ಯಾವಾಗ ಶುರುವಾಯ್ತು ಈ ಗೋಳಾಟ? ಶಂಭು ಎಲ್ಲಿದ್ದಾನೆ?'

'ಅವರು ಆವಾಗಲೇ ಬೆನ್ನುಹಾಕಿ ಗುಡ್ಡ ಹತ್ತಿದರು. ಈಗ ಪದವಿನಲ್ಲಿದ್ದಾರಾ ಇಲ್ಲ ಸೇನವೆರ ಮೂಲೆಗೆ ಸೇರಿದ್ದಾರಾ. ಅವರಿನ್ನು ಬರುವುದು ಸಂಜೆಗೇ.. ನೀವೇನೂ ಈಗ ಕೆಳಗೆ ಹೋಗುವುದು ಬೇಡ. ಅತ್ತೆಯೂ ಅತ್ತಿಗೆಯೂ ಸೇರಿ ನಿಮ್ಮನ್ನು ಜಾಲಾಡುತ್ತಾರೆ. ಹೆಚ್ಚೋ ಕಡಿಮೆಯೋ ಅವರಿಗೆ ಔದಾರ್ಯ ತೋರಿಸಲು ಸರಿಯಾದವರು ಶಂಭು ಅಣ್ಣ ಮಾತ್ರ. ನೀವು ಸುಮ್ಮನೆ ಅವರ ಬಾಯಿಗೆ ಬೀಳುವುದು ಬೇಡ' ತುಂಗಕ್ಕ ಹೇಳಿದರು.

ದೇವಣ್ಣ ಚೌಟರಿಗೂ ಅದು ಸರಿಯೆನಿಸಿತು. ಆತ ಸಜ್ಜನ. ಅಮ್ಮನಿಗಾಗಲೀ ಅಕ್ಕನಿಗಾಗಲೀ ಅವರ ಬಾಯಿಗೆ ಸರಿಯಾಗಿ ಬೊಬ್ಬೆ ಹಾಕಲು ಅವರಿಂದಾಗದು.

ದೊಡ್ಡ ಬಾಯಿಯ ಹೆಂಗಸರೊಡನೆ ಮಾತನಾಡಿ ಪ್ರಯೋಜನವಿಲ್ಲ. ಹೊರಡುವುದಕ್ಕಿಂತ ಬಾಯಿ ಮುಚ್ಚಿಕೊಂಡು ರಣರಂಗದಿಂದ ಹಿಮ್ಮೆಟ್ಟುವುದೇ ಸರಿಯೆಂದು ಅವರು ಯೋಚಿಸಿದರು.

ಶಂಭು ಚೌಟ ಹೇಗೋ ಹಿಂಜರಿದು ರಣರಂಗದಿಂದ ಹೊರಟುಹೋದ. ನಾನೂ ಸುಮ್ಮನೆ ಇರುತ್ತೇನೆಂದು ದೇವಣ್ಣ ಚೌಟರೂ ಯೋಚಿಸಿದರು.

ಶಂಭು ಚೌಟರು ಜೋರಾಗಿ ಮಾತನಾಡಿ ಅಂತಕ್ಕನನ್ನು ಗದರಿಸಿ ಮನೆಗೇ ಬರದೆ ಮಾವಿನ ಎಲೆಯಲ್ಲಿ ಹಲ್ಲುಜ್ಜಿ ಪಟ್ಲ ದಾಟಿ ಬೆಟ್ಟುಗದ್ದೆ ಏರಿ ಸೇನರಮೂಲೆಗೆ ಹೋದರು. ಕುಯ್ಲು ಆಗಿ ಖಾಲಿ ಬಿದ್ದಿರುವ ಹೊಲದಲ್ಲಿ ಹುಲ್ಲು ಬೆಳೆದಿತ್ತು. ಒಂದು ಕೊಯ್ಲು ಆಗಿ ಕೊಳಕೆ ಬೀಜ ಬಿತ್ತಬೇಕು. ಇಲ್ಲವಾದರೆ ಅದರಲ್ಲಿ ಉದ್ದು, ಹೆಸರು, ಹುರುಳಿ ಅಥವಾ ಯಾವುದಾದರೂ ಒಂದು ಧಾನ್ಯವನ್ನು ಬಿತ್ತಬೇಕು. ಹೊಲದ ರೀತಿ ನೋಡಿದರೆ ಸೇನವರು ಅದನ್ನು ಬಂಜರು ಬಿಟ್ಟಂತೆ ಕಾಣುತ್ತದೆ. ಹತ್ತಿರ ಬರುವಾಗ ತ್ಯಾಂಪ ಸೇನವರ ಹೆಂಡತಿ ದೆಯ್ಯಕ್ಕ ಹಸುವನ್ನು ಅಟ್ಟುತ್ತ ಕೈಯಲ್ಲಿ ಹಸುವಿನ ಕೊರಳಿಗೆ ಕಟ್ಟುವ ಹಗ್ಗವನ್ನು ಹಿಡಿದುಕೊಂಡು ಬರುವುದು ಕಾಣಿಸಿತು. ದೆಯ್ಯಕ್ಕ ಶ್ರಮಜೀವಿ. ಬೇಸಾಯದ ಮನೆಯಲ್ಲಿ ಅಂಥ ಹೆಂಗಸರು ಇದ್ದರೆ ಮಾತ್ರ ಆ ಮನೆ ಏಳಿಗೆಯಾಗುತ್ತದೆ.

ಅವರ ಗುತ್ತಿನಲ್ಲೂ ಅವರ ಮಡದಿ ಸೋಮಾವತಿ ಇದ್ದಾರೆ. ನೋಡಲು ತುಂಬ ಲಕ್ಷಣವಾಗಿರುವ ಹೆಂಗಸು, ಗೌರವರ್ಣ. ಆದರೆ ಕೆಲಸದ ವಿಚಾರ ಬಂದಾಗ ಸೋಮಾರಿ. ಇತ್ತೀಚೆಗೆ ಶಂಭು ಚೌಟರಿಗೂ ಇವಳನ್ನು ಕಟ್ಟಿಕೊಂಡು ಏನು ಮಾಡುವುದು ಎಂಬ ಚಿಂತೆ ಹತ್ತಿದೆ. ದೇವಣ್ಣ ಚೌಟರ ಮಡದಿ ತುಂಗಕ್ಕ ಕೊಂಕು, ಕೆಲಸಕ್ಕೆ ಹಿಂದೆ, ನಾಲಗೆ ಮುಂದೆ.

ದೆಯ್ಯಕ್ಕ ಹಸುವನ್ನು ಮುಂದೆ ನಿಲ್ಲಿಸಿ ಗೂಟವನ್ನು ನೆಟ್ಟು ಅದಕ್ಕೆ ಹಗ್ಗ ಕಟ್ಟಿದರು. ಹಸು ನೇರವಾಗಿ ನಿಂತು ಹುಲ್ಲಿಗೆ ಬಾಯಿ ಹಾಕಲು ಪ್ರಯತ್ನಿಸುತ್ತಿತ್ತು.

ರಾಶಿಹುಲ್ಲಿನ ಒಣಗಿದ ಭಾಗ ಮುಖಕ್ಕೆ ಚುಚ್ಚುವಾಗ ಪಾಪದ ಆ ಬಾಯಿ ಬಾರದ ಪ್ರಾಣಿಗೆ ಪೊದರಿನ ಬುಡದ ಎಳೆಯ ಹಸುರಿಗೆ ಬಾಯಿ ಹಾಕುವುದಕ್ಕೆ ಹೇಗೆ ಸಾಧ್ಯ?

'ಏನು ದೆಯ್ಯಕ್ಕ, ಕುಯ್ಲು ಮುಗಿದು ಭತ್ತ ಬೇಯಿಸಿ, ಒಣಗಿಸಿ ಎಲ್ಲ ಆಯ್ತಾ? ಬಹಳ ಅಚ್ಚುಕಟ್ಟಾಗಿ ಮುಗಿಸಿದಿರಲ್ಲ ಕೆಲಸ. ಜನ ಎಲ್ಲಿಂದ ಸಿಕ್ಕಿದರು? ಹೇಗೆ ಮಾಡಿ ಮುಗಿಸಿದಿರಿ? ಬಹಳ ಬೇಗನೆ ಮುಗಿಸಿದಿರಲ್ಲ!' ಶಂಭು ಚೌಟರು ಹತ್ತಿರ ಬರುತ್ತ ಹೇಳಿದರು.

'ಜನಗಳ ವಿಷಯ ಏನು ಹೇಳುವುದಣ್ಣ? ನನ್ನ ದೊಡ್ಡಪ್ಪನ ಮಗ ಇನೋಲಿಯಿಂದ ಹತ್ತು ಜನ ಕುಡುಂಬಿಯರನ್ನು ಕರೆಸಿ ಖಾಯಂ ಆಗಿ ಕೆಲಸಕ್ಕೆ ಇಟ್ಟುಕೊಂಡಿದ್ದಾನೆ. ಅವನು ಕಳುಹಿಸಿದ್ದು. ಅವರೇ ಕುಯ್ಲು ಮಾಡಿ ಬೇಯಿಸಿ, ಒಣಗಿಸಿ ಎಲ್ಲ ಕೆಲಸವನ್ನೂ ಅಚ್ಚುಕಟ್ಟಾಗಿ ಮುಗಿಸಿ ಹೋದರು. ಒಟ್ಟು ಎಂಟು ದಿನದ ಕೆಲಸ. ಅವರಿಗೆ ಬೆಳಗ್ಗೆ ಚಹಾ ಮತ್ತು ತಿಂಡಿ, ಮಧ್ಯಾಹ್ನಕ್ಕೆ ಊಟ, ಅದಕ್ಕೆ ಎರಡು ಬಗೆಯ ಪಲ್ಯ, ಸಂಜೆಗೆ ಚಹಾ ಮತ್ತು ರಾತ್ರಿಯ ಊಟ ಅನ್ನುವಾಗಲೇ ಖರ್ಚು ದುಬಾರಿ. ಆದರೂ ಕೆಲಸ ಬೇಗನೆ ಮುಗಿಯಿತು. ಇನ್ನು ಕೊಳಕೆ ಮಾಡಬೇಕು. ತೋಡಿನ ಸಮೀಪದ ಕೊಳಕೆ ಗದ್ದೆಯಲ್ಲಿ. ಅದು ಎರಡು ಮುಡಿ ಬೆಳೆಯ ಹೊಲದಲ್ಲಿ ಮಾತ್ರ. ಆಮೇಲೆ ಕೊಯ್ಯಲು ಅವರನ್ನೇ ಕರೆಯಬೇಕು. ಬಂದರೆ ನಮ್ಮ ಪುಣ್ಯ.'

'ಕೈತುಂಬ ಭತ್ತ, ಹೊಟ್ಟೆ ತುಂಬ ಅನ್ನ ಕೊಟ್ಟರೆ ಯಾಕೆ ಬರುವುದಿಲ್ಲ?' ಚೌಟರು ಹೇಳಿದರು.. 'ಇವತ್ತು ಬೆಳಿಗ್ಗೆ ಅವರಿಗೆ ಚಹಾ ಫಲಾಹಾರಕ್ಕೆ ಏನು ಮಾಡಿದೆ? ತ್ಯಾಂಪಣ್ಣ ಇದ್ದಾರಾ?'

'ಅಂಗಳಕ್ಕೇ ಇಳಿದು ಬಿಟ್ಟರಲ್ಲಣ್ಣ. ಏನಂಥ ಅವಸರ? ಒಂದು ಗುಟುಕು ಬಾಯಾರಿಕೆ ಕುಡಿಯಿರಿ. ಅಷ್ಟು ಹೊತ್ತಿಗೆ ಗದ್ದೆಯ ತುದಿಗೆ ಹೋದ ಅವರೂ ಬರ್ತಾರೆ. ಅವರು ಬಹುಶಃ ಚಿನ್ನಯ್ಯ ಆಚಾರಿಯ ಬಳಿಗೆ ಭೂತಯ್ಯನ ಕತ್ತಿಗೂ ಬಂಟನ ಚೌರಿಗೂ ಬೆಳ್ಳಿಯ ಕಟ್ಟು ಹಾಕಿಸಲು ಎಷ್ಟಾಗುತ್ತದೆಂದು ಕೇಳಲು ಹೋಗಿರಬೇಕು.'

'ಬೊಂಬಾಯಿಯಿಂದ ಅವರ ತಮ್ಮ ಪದ್ಮನ ಕಾಗದ ಬಂದಿತ್ತು. ಆಚಾರಿಯನ್ನು ಕೇಳಿ ಅದಕ್ಕೆ ಎಷ್ಟು ಖರ್ಚು ಆಗಬಹುದೆಂದು ಅವನಿಗೆ ತಿಳಿಸಲು ಹೇಳಿದ್ದಾನೆ.'

'ಹೌದಾ ದೆಯ್ಯಕ್ಕ, ಮೊನ್ನೆ ನಮ್ಮಣ್ಣ ಕೂಡ ನಿಮ್ಮ ಪದ್ಮನ ಸುದ್ದಿ ಮಾತನಾಡ್ತಿದ್ದರು. ಅವನು ಬೊಂಬಾಯಿಗೆ ಹೋಗಿ ಎಷ್ಟು ವರ್ಷ ಆಯ್ತು?'

'ಹತ್ತು ವರ್ಷ ಆಯ್ತೂಂತ ಕಾಣ್ತದೆ.'

'ಹಾಗಿದ್ದರೆ ಅವನಿಗೆ ವಯಸ್ಸು ಎಷ್ಟಾಯ್ತು?'

'ವರ್ಷವೇನು ಹಾಗೆ ಇರ್ತದಾ? ನಾಡಿದ್ದು ಪಗ್ಗು ಬಂದರೆ 27 ವರ್ಷ ಆಗ್ತದೆ. ಇಲ್ಲಿಂದ ಹೋಗುವಾಗ ಆತ ಕನ್ನಡ ಓದಲು ಕಲಿತಿದ್ದ. ಈಗ ಮುಂಬೈಯ ಮಾತುಂಗದ ಶಾಲೆಗೆ ಹೋಗಿ ಇಂಗ್ಲಿಷ್ ಕಲ್ತಿದ್ದಾನಂತೆ.'

'ಪದ್ಮ ದೊಡ್ಡ ಸಾಧಕ. ಒಂದು ಒಳ್ಳೆಯ ಮನೆತನದ ಹೆಣ್ಣು ನೋಡಿ ಅವನಿಗೆ ಮದುವೆ ಮಾಡಿಸಲು ನಿನ್ನ ಗಂಡನಿಗೆ ಹೇಳು.. ಬೊಂಬಾಯಿಯಲ್ಲಿ ಹೋಟೆಲಿಗೆ ಹಾಲು ತರುವ ಭಯ್ಯನವರು ದೊಡ್ಡ ಶ್ರೀಮಂತರಂತೆ. ಅವರ ಹೆಂಗಸರೂ ತುಂಬ ಚಾಲಾಕಿನವರು. ನಮ್ಮ ಊರಿನ ಯುವಕರನ್ನು ಮರುಳು ಮಾಡಿ ಹತ್ತಿರ ಎಳೆಯುತ್ತಾರಂತೆ. ಆಮೇಲೆ ಅವರು ಹೇಳಿದಂತೆ ನಮ್ಮ ಹುಡುಗರು ಕುಣಿಯುತ್ತಾರಂತೆ.'

ದೆಯ್ಯಕ್ಕನಿಗೆ ಈ ಸುದ್ದಿ ಕೇಳಿ ಎದೆಯೊಳಗೆಲ್ಲ ಪುಕಪುಕನೆಂದು ಆಯ್ತು. ಗಂಡ ಮನೆಗೆ ಬಂದ ಕೂಡಲೇ ಈ ವಿಚಾರ ಹೇಳಬೇಕೆಂದು ಯೋಚಿಸಿದರು. ಪದ್ಮ ಕಳುಹಿಸುವ ಹಣದಿಂದಾಗಿ ಈಗ ಐದಾರು ವರ್ಷಗಳಿಂದ ಜೀವನ ತುಂಬ ಸುಖವಾಗಿ ಸಾಗುತ್ತದೆ. ಊರಿನ ಜನಗಳ ಮುಂದೆ ಅವರಿಗೆ ಒಂದಷ್ಟು ಗೌರವವೂ ಬಂದಿದೆ. ಯಾವುದೋ ಭಯ್ಯನವರ ಬೇವರ್ಸಿ ಹೆಣ್ಣನ್ನು ಕೊರಳಿಗೆ ಕಟ್ಟಿಕೊಂಡರೆ ಆಮೇಲೆ ಊರಿಗೆ ಕಳುಹಿಸುವ ಹಣಕ್ಕೆ ಸಂಚಕಾರ ಖಂಡಿತ. ಓ ದೇವದೇವಿಯರೇ, ನಮ್ಮ ಪದ್ಮನಿಗೆ ಅಂಥ ಬುದ್ಧಿ ಕೊಡಬೇಡಿರಮ್ಮ. ಈ ಸಲದ ಕಡೆಚೆಂಡು ಉತ್ಸವದಂದು ನಿಮ್ಮ ಪಾದಮೂಲಕ್ಕೆ ಬಂದು ಒಂದು ಚೆಂಡು ಹೂವು ಒಪ್ಪಿಸಿ ಕುಂಕುಮಾರ್ಚನೆ ಮಾಡುತ್ತೇನೆಂದು ಪ್ರಾರ್ಥಿಸಿ ದೆಯ್ಯಕ್ಕ ಮನಸ್ಸಿನಲ್ಲೇ ಕೈಮುಗಿದರು.

ತಾನು ಮಾತನಾಡುತ್ತಿದ್ದಂತೆ ಮೌನವಾದ ದೆಯ್ಯಕ್ಕನ ಮುಖವನ್ನು ನೋಡಿ ಶಂಭು ಚೌಟರಿಗೆ ಅಚ್ಚರಿಯಾಯ್ತು. ಮುಖ ಒಮ್ಮೆ ಕಪ್ಪಾಗಿ ಒಮ್ಮೆ ಪೆಚ್ಚಾಗಿ ಏನೋ ನೆನಪಿನಿಂದ ದೆಯ್ಯಕ್ಕ ಹೆದರಿದ್ದಾರೆಂಬ ಭಾವನೆ ಅವರಿಗೆ ಬಂತು.

'ಏನು ದೆಯ್ಯಕ್ಕ ಹೆದರಿಕೆ ಆಯ್ತಾ? ಹಾಗೆ ಹೆದರುವಂಥದ್ದು ಏನೂ ಇಲ್ಲ. ಅದೇನೂ ಪರಿಹಾರವಿಲ್ಲದ ಅಪಾಯವೇನಲ್ಲ. ಈ ಸಲ ಮಳೆಗಾಲದ ಆರಂಭದಲ್ಲಿ ಪದ್ಮನಿಗೆ ಹೆಣ್ಣು ನೋಡಿ ಮದುವೆ ಮಾಡಿಬಿಡಿ. ಅಲ್ಲಿಗೆ ನಿನ್ನ ಭಯ ಹೊರಟುಹೋಗ್ತದೆ. ತಂದೆ ತಾಯಿ ಇಲ್ಲದ ತಮ್ಮನಿಗೆ ಮದುವೆ ಮಾಡಿಸುವುದು ಅಣ್ಣನ ಕರ್ತವ್ಯ. ತ್ಯಾಂಪಣ್ಣನಿಗೆ ನೆನಪು ಮಾಡು. ಪ್ರಾಯಕ್ಕೆ ಬಂದ ಯುವಕನನ್ನು ಹಾಗೇ ಬಿಡುವುದು ಒಳ್ಳೆಯದಲ್ಲ. ಕುತ್ತಿಗೆಗೆ ದಾರ ಕಟ್ಟಿದರೆ ಬೇಲಿ ಹಾರುವುದಕ್ಕೆ ತಡೆಯಾಗ್ತದೆ.. ನೀನೇನು ಯೋಚನೆಯಲ್ಲಿ ಮರಗಟ್ಟಿಬಿಟ್ಟೆ.. ನನಗೆ ಚಹಾ ಮಾಡಿಕೊಡುವುದೂ ಮರೆತೆಯಾ ಹೇಗೆ?'

ಹಸುವಿಗೆ ಹಗ್ಗ ಕಟ್ಟುವ ವಿಚಾರವನ್ನೇ ಮರೆತು ದೆಯ್ಯಕ್ಕ ಯೋಚನೆಯಲ್ಲಿ ಮುಳುಗಿದ್ದರು.

'ಶಂಭಣ್ಣ, ನಾನು ಹೇಳಿದರೆ ಯಜಮಾನರು ಈ ಕಿವಿಯಲ್ಲಿ ಕೇಳಿ ಆ ಕಿವಿಯಲ್ಲಿ ಬಿಡುತ್ತಾರೆ. ನೀವು ಹೇಗೂ ಇವತ್ತು ಬಂದಿದ್ದೀರಿ. ಈಗ ನನ್ನ ಮುಂದೆ ಏನು ಹೇಳಿದಿರೋ ಅದನ್ನು ಅವರ ಮುಂದೆಯೂ ಹೇಳಿ ಅವರ ಕಿವಿಗೆ ಹೋಗುವಂತೆ ಮಾಡಿ. ನಾನು ಏನು ಹೇಳಿದರೂ ಗದರಿಸಿ ನನ್ನ ಬಾಯಿ ಮುಚ್ಚಿಸುತ್ತಾರೆ... ಹಾಗೆಯೇ ಓದು ಬರಹ ಬಲ್ಲ ನೀವು.. ಪದ್ಮಣ್ಣನಿಗೆ ನೀನು ಮದುವೆಯಾಗಬೇಕೆಂದು ಒಂದು ಪತ್ರ ಬರೆಯಿರಿ. ಬೊಂಬಾಯಿಯ ವಿಳಾಸ ನಾನು ಕೊಡ್ತೇನೆ.'

ಮಾತು ಇಷ್ಟು ಮುಂದುವರಿದಾಗ ಶಂಭು ಚೌಟರ ಒಳಗೆ ಒಂದು ಹೊಸ ಆಲೋಚನೆ ಹುಟ್ಟಿತು. ಅಂತಕ್ಕನ ನಿತ್ಯ ಶ್ಲೋಕವನ್ನು ಹೇಗಾದರೂ ನಿಲ್ಲಿಸಬೇಕು. ಅಲ್ಲದೆ ಸರಸುವಿಗೂ ಇಪ್ಪತ್ತೊಂದು ವರ್ಷ ಆಯ್ತು. ಇನ್ನಿನ್ನು ಪ್ರಾಯ ಹೆಚ್ಚಾಗ್ತಿದ್ದಂತೆ ಹೆಣ್ಣಿನ ರೂಪ ಕಡಿಮೆಯಾಗ್ತಾ ಹೋಗ್ತದೆ. ಈಗಲೇ ಮದುವೆ ಮಾಡಿಸುವುದು ಒಳ್ಳೆಯದು. ಆ ಆಲೋಚನೆಯನ್ನು ಹೀಗೆ ತಿರುಗಿಸಿದರೆ ಏನು..! ಆದರೆ ಅಂತಕ್ಕ ಏನು ಹೇಳ್ತಾಳೋ, ಅವಳಿಗಿಂತ ಅಮ್ಮ (ರುಕ್ಕಕ್ಕ) ಇದನ್ನು ಒಪ್ಪುವುದು ಕಷ್ಟ. 'ಚೌಟರ ಗುತ್ತು ಅಂದರೆ ಮಾಗಣೆಯಲ್ಲಿ ಪ್ರಪ್ರಥಮ ಮನೆ. ಹಾಗಿರುವಾಗ ಒಕ್ಕಲು ತ್ಯಾಂಪಣ್ಣನ ತಮ್ಮನಿಗೆ ಇಲ್ಲಿಯ ಹುಡುಗಿಯನ್ನು ಕೊಡುವುದೆಂದರೆ ನಮಗೆ ಬುದ್ಧಿ ಇದೆಯೇ? ನಮ್ಮ ಗತಿ ಎಲ್ಲಿಗೆ ಮುಟ್ಟಿತು ಅಂತ ಊರಿಗೆಲ್ಲ ಸಾರುವ ಕೆಲಸ ಇದು' ಎನ್ನದೆ ಇರಲಾರರು. ಅಂತಕ್ಕ ಕೂಡ, 'ತಂದೆ ಇಲ್ಲದ ಸೊಸೆಯನ್ನು ಸೇನವರ ಮೂಲೆಯ ಮನೆಗೆ, ಇಲ್ಲಿನ ಒಕ್ಕಲಿಗೆ ಕೊಟ್ಟಿದ್ದಾರೆ. ಕೇನ್ಯದ ಬಾವ ಎಂಥ ಹೆಸರಿದ್ದ ಮನೆ! ಕಂಬೊಳಿಯವರು ಸತ್ತು ಸ್ವರ್ಗಕ್ಕೆ ಹೋದರು. ಅವರು ಎಂಥ ಕಾರುಬಾರಿನ ಮನುಷ್ಯ. ಅಂಥವರ ಮಗಳನ್ನು ಮಾವಂದಿರು ಹೀಗೆ ಕೊಟ್ಟು ಸುಲಭದಲ್ಲಿ ಜವಾಬ್ದಾರಿ ಕಳೆದುಕೊಂಡರು ಎಂದು ಹೇಳಿದರೆ ಬೊಳ್ಳೂರು ಪರಾರಿಯ ಮನೆಗೆ ಅಗೌರವವೆಂದು ಅವರು ಖಂಡಿತ ಹಿಂಜರಿಯುತ್ತಾರೆ. ಈಗ ಏನು ಮಾಡುವುದು? ಇದಕ್ಕೆ ಏನು ಪರಿಹಾರ?

ಇರಲಿ, ಈಗ ತ್ಯಾಂಪಣ್ಣನ ಹತ್ತಿರ ಮಾತನಾಡೋಣ. ಆಮೇಲೆ ಮುಂದಿನ ಮಾತು.

ಶಂಭು ಚೌಟರು ಅವರ ಅಣ್ಣನಂತೆ ಮುಗ್ಧನೋ ಸತ್ಯವಂತನೋ ಅಲ್ಲ. ಉಪಾಯ ದಿಂದ ಕಾರ್ಯಸಾಧನೆ ಮಾಡಬಲ್ಲ ಚತುರಮತಿ. ಈ ನೆಂಟಸ್ತಿಕೆ ಕೂಡಿ ಬಂದರೆ ಎರಡು ರೀತಿಯ ಲಾಭ. ಒಂದು ದೊಡ್ಡವರ ಸಂಬಂಧವೆಂದು ತ್ಯಾಂಪಣ್ಣ ವರದಕ್ಷಿಣೆ ಕೇಳುವ ಧೈರ್ಯ ಮಾಡಲಾರ. ಆತನಿಗೂ ಊರ ಗುತ್ತಿನ ಮನೆಯವರ ಸಂಬಂಧವೆಂದು ಮೀಸೆ ಮೇಲೆ ಹೋಗುತ್ತದೆ. ಭೂತದ ಕೋಲ, ಜಾರಂದಾಯನ ಜಾತ್ರೆ, ಕೋಳಿ ಅಂಕಗಳಲ್ಲಿ ಮರ್ಯಾದೆ, ಗೌರವಗಳು ಹೆಚ್ಚಾಗುತ್ತವೆ. ಗುತ್ತಿನ ಮನೆಯ ಚಾವಡಿಯಲ್ಲಿ ಒಕ್ಕಲಿನವರು ಕುಳಿತುಕೊಳ್ಳುವ ಕೆಳಗಿನ ಜಗಲಿಯಿಂದ ಚಾವಡಿಯ ಚಾಪೆ ಹೆಣೆದ ಮಂಚದಲ್ಲಿ ಕುಳಿತುಕೊಳ್ಳುವ ಯೋಗ್ಯತೆ ಬರುತ್ತದೆ.

ಜುಮಾದಿ ದೈವದ ಒಳಗೆ ಪ್ರಸಾದ ಸ್ವೀಕರಿಸುವಾಗ ಸ್ಥಾನದಲ್ಲಿ ಗುತ್ತಿನವರನ್ನೂ ಭಂಡಾರದವರನ್ನೂ ಕರೆದ ಬಳಿಕ ಗುತ್ತಿನವರ ಸಂಬಂಧಿಕರನ್ನು ಕರೆಯುವ ಕ್ರಮ. ಆಗ ತ್ಯಾಂಪಣ್ಣನಿಗೆ ಮೊದಲ ಸಾಲಿನಲ್ಲಿ ಬರುವುದಕ್ಕೆ ಸಾಧ್ಯವಾಗುತ್ತದೆ. ಇದನ್ನೆಲ್ಲ ಆತನಿಗೆ ಮನದಟ್ಟು ಮಾಡಿಸಬೇಕು. ಹಾಗೆ ಆದರೂ ಇನ್ನೂ ಒಂದು ತಡೆಯುಂಟು. ತ್ಯಾಂಪಣ್ಣ ಹಿಂದಿನ ಕಾಲದ ಮನುಷ್ಯ. ವರದಕ್ಷಿಣೆ ತೆಗೆದುಕೊಂಡರೆ ತನ್ನ ಗೌರವ ಹೆಚ್ಚಾಗುತ್ತದೆಂದು ನಂಬುವ ಮನುಷ್ಯ. ಆ ಒಂದು ಚಿಕ್ಕ ತಡೆಯಿಂದ ತಾನು ಮಾತನಾಡುವ

ಕೆಲಸ ಉಳಿಯಬಾರದು. ಹೀಗೆ ಯೋಚಿಸುವಾಗಲೇ ಅವರಿಗೆ ನೆನಪಾಯ್ತು. ಪದವಿನಲ್ಲಿ ಗುಡ್ಡದ ಮೇಲೆ ಒಂದೂವರೆ ಎಕ್ರೆ ಮೈದಾನ ಖಾಲಿ ಉಂಟು. ಪ್ರತಿ ವರ್ಷ ಅಲ್ಲಿ ಎದೆಯೆತ್ತರ ಮುಳಿಹುಲ್ಲು ಬೆಳೆಯುತ್ತದೆ. ಬೇಸಿಗೆಯ ಕೊನೆಯಲ್ಲಿ ಯಾರ್‍ಯಾರೋ ಕೊಯ್ದು ಮನೆಗೋ ಕೊಟ್ಟಿಗೆಗೋ ಅಲ್ಲದೆ ಕೊಟ್ಟಿಗೆಯ ನೆಲಕ್ಕೆ ಹಾಸಲೋ ಕೊಂಡೊಯ್ಯುತ್ತಾರೆ. ಈಗೀಗ ಮನೆಗಳೆಲ್ಲ ಹೆಂಚಿನದ್ದಾಗಿ ಜನರಿಗೆ ಕೊಟ್ಟಿಗೆಗೂ ನೆಲಕ್ಕೂ ಹಾಸಲು ಮಾತ್ರ ಮುಳಿಹುಲ್ಲು ಬೇಕಾಗುತ್ತದೆ. ಕೊಟ್ಟಿಗೆಯ ಸುತ್ತಲೂ ಸೋಗೆ ಕಟ್ಟುತ್ತಾರೆ. ಅದರ ದರಬರ ಸದ್ದಿಗೆ ನಾಯಿಗಳೂ ಹುಲಿಗಳೂ ನುಗ್ಗುವುದಿಲ್ಲವಂತೆ. ಯಾವತ್ತೂ ಕರುಗಳನ್ನು ಕೊಟ್ಟಿಗೆಯಲ್ಲಿ ಕಟ್ಟಬಾರದೆನ್ನುವುದು ಇದಕ್ಕೇ. ಮುಳಿಹುಲ್ಲಿನ ಮಧ್ಯೆ ನಾಲ್ಕು ಬಂಡೆಕಲ್ಲೂ ಅದರ ಬದಿಯಲ್ಲಿ ನೆರಳಿನಲ್ಲಿ ಕೇಪುಳದ ಕೆಲವು ಪೊದರುಗಳೂ ಇವೆ. ನಾಯಿಗಳಿಗಾಗಲೀ ಮನುಷ್ಯರಿಗಾಗಲೀ ಅರ್ಜೆಂಟಿಗೆ ಪ್ರಕೃತಿ ಕರೆಯನ್ನು ಪೂರೈಸಲು ತಕ್ಕನಾದ ಸ್ಥಳ. ವರ್ಷಕ್ಕೊಮ್ಮೆ ತೀರ್ವೆ ಕಟ್ಟುವುದೇ ಈ ಜಾಗದಿಂದ ಸಿಗುವ ಲಾಭ. ಈ ಮುಳಿಯ ಮೈದಾನವನ್ನು ಬರೆದುಕೊಡ್ತೇನೆ ಅಂದರೆ ಏನು? ಅದ್ಯಾಕೆ ನನಗೆ ಅಂತ ತಾತ್ಸಾರ ಮಾಡಿಯಾನಾ?

ನಾಲಗೆ ಇದ್ದರೆ ಎಲ್ಲಾದರೂ ಬದುಕಬಹುದು... ಚೌಟರು ಹೀಗೆಂದು ಯೋಚಿಸಿದರು. ತ್ಯಾಂಪಣ್ಣನ ಹತ್ತಿರ ಹೀಗೆ ಹೇಳುವುದು, ಗುರುಕಂಬ್ಳದ ಹಮೀದ್ ಸಾಹೇಬರು ಮೂರು ಸಾವಿರಕ್ಕೆ ಅದನ್ನು ಕೇಳಿದ್ದಾರೆ. ಅವರು ಮಕ್ಕಾಗೆ ಮೂರು ಸಲ ಹೋಗಿ ಹಾಜಿ ಆಗಿದ್ದಾರೆ. ಆ ನೆನಪಿಗೆ ಪುಣ್ಯ ಸಂಪಾದನೆ ಮಾಡಬೇಕೆಂದು ಮಸೀದಿ ಕಟ್ಟುತ್ತಾರಂತೆ. ಗುಡ್ಡದ ಕೆಳಗಿನ ಅವರ ಜಮಾಯತಿಗೆ ಶುಕ್ರವಾರ ಗುಡ್ಡ ಹತ್ತಿ ಮೂರು ಮೈಲು ದೂರದ ಗಂಜಿಮಠದ ಮಸೀದಿಗೆ ನಡೆದು ಹೋಗಲು ಕಷ್ಟ ಆಗ್ತದೆ. ಆದ್ದರಿಂದ ಗುಡ್ಡದ ಮೇಲೆಯೇ ಒಂದು ಚಿಕ್ಕ ಮಸೀದಿ ಕಟ್ಟಲು ಜಾಗ ಕೇಳಿದ್ದಾರೆ. ಅದಲ್ಲದೆ ಗುರಿಗದ್ದೆಯ ಬಾಬುರಾಯ ಮಾಸ್ತರರೂ ಶಾಲೆ ಕಟ್ಟಲು ಸ್ಥಳ ಕೇಳಿದ್ದಾರೆ.

ಚೌಟರು ಆ ಜಾಗ ಕೊಡುತ್ತಿದ್ದರೆ ಅಲ್ಲಿ ಒಂದು ಭಜನಾ ಮಂಡಳಿಯ ಹಾಲ್ ಕಟ್ಟಬಹುದಿತ್ತು. ವಾರಕ್ಕೊಮ್ಮೆ ಊರಿನ ಹತ್ತು ಸಮಸ್ತರೂ ಸೇರಿ ಭಜನೆ ಮಾಡಬಹುದು. ಬೇರೆ ಏನಾದರೂ ಸಭೆ ಸೇರಿಸುವುದಿದ್ದರೆ ಅದಕ್ಕೂ ಅನುಕೂಲವಾದೀತು. ನೀವು ಸ್ವಲ್ಪ ಮನಸ್ಸು ಮಾಡಿ ರಿಯಾಯಿತಿ ಮಾಡಿ ನಾಲ್ಕು ಸಾವಿರಕ್ಕೆ ಒಪ್ಪಬೇಕು. ನಿಮ್ಮ ಮನೆಯ ಹೆಸರನ್ನೇ ಅದಕ್ಕೆ ಇಡೋಣ. 'ಸಮಾಜ ಮಂದಿರ ಬೊಳ್ಳೂರು ಪರಾರಿ ಗುತ್ತಿನವರ ಸೇವೆ' ಎಂದು ಬರೆಸೋಣ. ಹೀಗೆ ಜನ ಸರದಿಯಂತೆ ಕೇಳುವ ಜಾಗ ಅದು. ಅದನ್ನು ನಿಮಗೆ ಕೊಡುತ್ತೇನೆ ಅಂದರೆ ಕೆಲಸ ಆದೀತು ಎಂದು ಮನಸ್ಸಿನಲ್ಲೇ ಯೋಚಿಸಿದರು.

ಅವರು ದೆಯ್ಯಕ್ಕನಿಗೆ ಕೇಳುವಂತೆ ಜೋರಾಗಿ ಹೇಳಿದರು, 'ದೆಯ್ಯಕ್ಕ, ನಾನು ನಿನ್ನ ಹತ್ತಿರ ಒಂದು ಮಾತು ಹೇಳಬೇಕೆಂದು ಎಷ್ಟೋ ದಿನಗಳಿಂದ ಯೋಚಿಸುತ್ತಿದ್ದೇನೆ..' ಅಷ್ಟು ಹೊತ್ತಿಗೆ ದೆಯ್ಯಕ್ಕನಿಗೆ ಶಂಭು ಚೌಟರಿಗೆ ಚಹಾ ಮತ್ತು ತಿನಿಸನ್ನು ಕೊಡ

ಬೇಕೆಂಬುದು ನೆನಪಾಯ್ತು.. 'ಈಗಲೇ ಬಂದೆ ಶಂಭು ಅಣ್ಣ, ನೀವು ಸ್ವಲ್ಪ ಹೊತ್ತು ಕುಳಿತುಕೊಳ್ಳಿ. ಯಜಮಾನರೂ ಅಷ್ಟು ಹೊತ್ತಿಗೆ ಬಂದು ಬಿಡುತ್ತಾರೆ.'

ದೆಯ್ಯಕ್ಕ ಒಳಗೆ ಹೋಗಿ ತುದಿಬಾಳೆಯೆಲೆಯಲ್ಲಿ ಅಕ್ಕಿ ಹಿಟ್ಟಿಗೆ ಕೆಸುವಿನ ಎಲೆ ಬೆರೆಸಿ ಮಡಚಿ ಮಾಡಿದ ತಿನಿಸನ್ನು ಇಟ್ಟು ಅದರ ಕೆಳಗೆ ಒಂದು ಅಲ್ಯೂಮಿನಿಯಂ ತಟ್ಟೆಯನ್ನಿಟ್ಟು ತಂದು ಚೌಟರ ಮುಂದೆ ಇಟ್ಟರು. ಕುಡಿಯುವುದಕ್ಕೆ ಹಿತ್ತಾಳೆಯ ಪಾತ್ರೆಯಲ್ಲಿ ದಪ್ಪ ಹಾಲು ಹಾಕಿ ಮಾಡಿದ ಚಹಾವನ್ನೂ ತಂದಿಟ್ಟರು. 'ದೊಡ್ಡ ಔತಣವೇ ಆಯ್ತು ದೆಯ್ಯಕ್ಕ. ಮೊದಲು ಒಂದು ಚೆಂಬು ನೀರು ಕೊಡು. ಬಾಯಿ ಮುಕ್ಕಳಿಸಿ ಬರ್ತೇನೆ.'

ದೆಯ್ಯಕ್ಕ ನೀರು ತೆಗೆದುಕೊಂಡು ಚಾವಡಿಗೆ ಬರುವಾಗ ತ್ಯಾಂಪಣ್ಣ ಬೇಲಿ ದಾಟಿ ಅಂಗಳಕ್ಕೆ ಕಾಲಿಟ್ಟರು. 'ಹಾಂ. ಅಕೋ ಬಂದರು ಸಾಮನಿಯವರು' ಶಂಭು ಚೌಟರು ಉದ್ಗರಿಸಿದರು. ಅಷ್ಟು ಹೇಳುವಾಗ ತ್ಯಾಂಪಣ್ಣ ಸಾಮನಿಯವರು ಚಾವಡಿಯ ಮೆಟ್ಟಲು ಹತ್ತಿ ಒಳಗೇ ತಲಪಿದರು. ಶಂಭು ಚೌಟರು ಕುಳಿತಿರುವುದನ್ನು ನೋಡಿ 'ಓ ಚೌಟರು, ಇದೇನು ಬೆಳಗ್ಗೆಯೇ ಸವಾರಿ ಈಕಡೆಗೆ ಬಂತು?'

'ಕೊಳಕೆಯ ಗದ್ದೆಗೆ ಅತ್ತರಿ ನೀರು ಕಟ್ಟಿದ್ದಾನಾಂತ ನೋಡಲು ಬೆಳಗ್ಗೆಯೇ ಬಂದೆ. ಆ ನಾಯಿಮಗ, ನಿನ್ನೆ ರಾತ್ರಿ ಹೆಂಡ ಕುಡಿದು ಪದವುನಲ್ಲೇ ಬಾಕಿಯಾಗಿದ್ದಾನೋ ಏನೋ. ನೀರೂ ಕಟ್ಟದಿದ್ದರೆ ಕೊಳಕೆ ಸುಟ್ಟು ಹೋಗ್ತದೆ. ಅದನ್ನು ನೋಡೋಣಾಂತ ಹೋದೆ. ಇಲ್ಲವಾದರೆ ಮಾಡಿದ್ದೆಲ್ಲ ವ್ಯರ್ಥವಾದೀತು. ಪುಣಿ ಕಟ್ಟಿ ನೀರು ನಿಲ್ಲಿಸಿ ಬಂದೆ. ನೀವು ಈ ಸಲ ಕೊಳಕೆ ಮಾಡಿಲ್ವಾ?'

'ಎಂದಿನಂತಿದ್ದರೆ ಕೊಳಕೆ ಮಾಡಬಹುದಿತ್ತು. ಈ ಸಲ ಮಳೆಯೂ ಕಡಿಮೆ. ಅಂತೊನಿ ಪ್ರಭುವಿನ ಕಾಟದಿಂದ ಕಣ್ಣಿಗೆ ಎಣ್ಣೆ ಬಿಟ್ಟು ಕಾಯಬೇಕು ಕಟ್ಟದ ನೀರನ್ನು. ತೆನೆ ತುಂಬುವ ಸಮಯಕ್ಕೆ ನೀರು ಕಡಿಮೆಯಾದರೆ ಜಾಳು ಬೆಳೆದು ಅರ್ಧಕ್ಕರ್ಧ ಬೆಲೆ ಕಡಿಮೆಯಾಗುತ್ತದೆ. ಕೋಳಿಗಳಿಗೆ ತಿನ್ನುವುದಕ್ಕೂ ಆಗದಂಥ ಬತ್ತ ಸಿಗುತ್ತದೆ...' ಅದಕ್ಕೆ ಪದ್ಮ ಬೊಂಬಾಯಿಯಿಂದ ಬರೆದಿದ್ದಾನೆ. 'ಸುಮ್ಮನೆ ಕಷ್ಟ ಪಡಬೇಡಿ. ನಾನು ತಿಂಗಳು ತಿಂಗಳು ದುಡ್ಡು ಕಳುಹಿಸುತ್ತೇನೆ. ಸ್ವಲ್ಪ ಸುಮ್ಮನಿರಿ' ಅಂತ. ಹಾಗಾಗಿ ಈ ಸಲ ಕೊಳಕೆಗೆ ಯಾವುದೇ ತಯಾರಿಮಾಡಲು ಹೋಗಿಲ್ಲ. ಹೌದಾ ದೆಯ್ಯಕ್ಕ, ನನಗೂ ಸ್ವಲ್ಪ ಬಾಯಾರಿಕೆಗೆ ಕೊಡು' ಎಂದರು ಸಾಮನಿಯವರು.

ತ್ಯಾಂಪಣ್ಣನ ಮಾತು ಕೇಳಿ ಶಂಭು ಚೌಟರಿಗೆ ಒಮ್ಮೆಗೆ ಸ್ವಲ್ಪ ಹೊಟ್ಟೆಕಿಚ್ಚಾಯ್ತು. ಈ ಪದ್ಮನ ಬೊಂಬಾಯಿಯ ಹಣ ದೊಡ್ಡ ಕಾರುಬಾರೇ ಆಯ್ತಲ್ಲ ಎಂದು ಯೋಚಿಸಿದರು. ಪದ್ಮನಿಗೆ ಹೆಣ್ಣು ಕೊಡಬೇಕೆಂದು ಯೋಚಿಸಿದ್ದು ಕೂಡ ಇದನ್ನು ಕೇಳಿ ಇನ್ನಷ್ಟು ಗಟ್ಟಿಯಾಯ್ತು.

ತೋರಿಕೆಗೆ ಅವರಂದರು: 'ಪದ್ಮ ಹೇಳುವುದು ಸರಿಯಾಗಿಯೇ ಇದೆ ತ್ಯಾಂಪಣ್ಣ. ಎಷ್ಟು ಸಮಯದಿಂದ ದುಡಿದು ದುಡಿದು ಕಷ್ಟ ಅನುಭವಿಸುವುದು. ಪ್ರಾಯದ ಸಮಯದಲ್ಲಾದರೂ ಸ್ವಲ್ಪ ಸುಖ ಸಿಗಬೇಕು, ನೆಮ್ಮದಿ ಸಿಗಬೇಕು.'

'ಅಂದಹಾಗೆ ಪದ್ಮ ಯಾವಾಗ ಊರಿಗೆ ಬರುವುದು? ತ್ಯಾಂಪಣ್ಣ, ನೀವು ಒಂದು ವಿಷಯ ಯೋಚನೆಯನ್ನೇ ಮಾಡಿಲ್ಲ. ನಿಮ್ಮ ತಮ್ಮನನ್ನು ಹೀಗೇ ಬಿಟ್ಟುಬಿಡ್ತೀರಾ? ಅವನ ಹತ್ತಿರ ಹಣವಿದೆಯೆಂದು ತಿಳಿದರೆ ಯಾರಾದರೂ ಬೆನ್ನು ಹತ್ತುತ್ತಾರೆ. ಇನ್ನೂ ಒಂದು ಸಂಗತಿ ಇದೆ. ಬೊಂಬಾಯಿಯಲ್ಲಿ ಹಾಲು ಮಾರುವ ಭಯ್ಯನವರು ದೊಡ್ಡ ಚಾಣಾಕ್ಷರಂತೆ. ಅವರ ಹೆಣ್ಣುಮಕ್ಕಳು ನಮ್ಮೂರಿನ ಗಂಡುಗಳನ್ನು ಚೆನ್ನಾಗಿ ಮರುಳು ಮಾಡ್ತಾರಂತೆ. ಹಾಗಿರುವಾಗ ಪದ್ಮನಂಥ ಸುಂದರ ಯುವಕ ಸಿಕ್ಕಿದರೆ ಅವನನ್ನು ಸುಮ್ಮನೆ ಬಿಡ್ತಾರಾ? ಇಷ್ಟು ಹೊತ್ತಿಗೇ ಎಲ್ಲಾದರೂ ಯಾರಾದರೂ ಅವನಿಗೆ ತಗಲಿದ್ದಾರೋ ಏನೋ! ಒಮ್ಮೆ ತಗಲಿದ್ರೆ ಆ ಹೆಂಗಸರು ಉಡದ ಹಾಗೆ. ಆಮೇಲೆ ನಿಮ್ಮ ಬಾಯಿಗೂ ಮಣ್ಣು. ಪದ್ಮ ಊರಿಗೆ ಬರುವುದೇ ಕಷ್ಟ. ಅವನನ್ನು ಹಿಡಿದ ಭೂತ ಅಷ್ಟು ಬಿಗಿಯಾಗಿದ್ದರೆ ಅವನೇನು ಮಾಡ್ತಾನೆ ಪಾಪ!'

'ತ್ಯಾಂಪಣ್ಣ, ನಿಮ್ಮ ಒಳ್ಳೆಯದನ್ನು ಯೋಚಿಸಿಯೇ ನಾನೀ ಮಾತನ್ನು ಹೇಳುವುದು. ನೀವೇ ಚೆನ್ನಾಗಿ ಯೋಚಿಸಿ' ಎಂದರು ಸಮಯಸಾಧಕ ನರಿಬುದ್ಧಿಯ ಶಂಭು ಚೌಟರು.

ತ್ಯಾಂಪಣ್ಣ ಸ್ವಭಾವತಃ ಪುಕ್ಕಲು. ವ್ಯವಹಾರದಲ್ಲಿ ಬೊಗಳೆ. ಚೌಟರು ಹೇಳಿದ ಮಾತು ಕೇಳಿ ಅವರಿಗೆ ದಿಗಿಲಾಯ್ತು. ಎದೆಯಲ್ಲಿ ಪುಕುಪುಕು ಆಗಿ ಅವರು ಮಡದಿಯ ಮುಖವನ್ನು ನೋಡಿದರು. ಅಷ್ಟು ಹೊತ್ತು ಬಾಯಿಮುಚ್ಚಿ ಕುಳಿತಿದ್ದ ದೆಯ್ಯಕ್ಕ ಈಗ ಬಾಯಿ ಬಿಟ್ಟರು.

'ಪದ್ಮನಿಗೆ ಇಪ್ಪತ್ತೇಳು ಕಳೆಯಲು ಇನ್ನು ಸ್ವಲ್ಪ ಬಾಕಿ ಇದೆ. ಇನ್ನೂ ಮದುವೆ ಮಾಡದೆ ಇರುವುದು ಸರಿಯಲ್ಲವೆಂದು ಚೌಟರು ಹೇಳುವುದು. ಅವರು ಸರಿಯಾಗಿಯೇ ಹೇಳಿದ್ದಾರೆ. ಒಂದು ಒಳ್ಳೆಯ ನೆಂಟಸ್ತಿಕೆ ಅವರಿಗೆ ಗೊತ್ತಿದೆಯಾ ಕೇಳಿ. ನೀವು ಬಾಯಿ ಮುಚ್ಚಿದ್ದರೆ ಯಾರಿಗಾದರೂ ಗೊತ್ತಾಗುವುದು ಹೇಗೆ?'

ತ್ಯಾಂಪಣ್ಣ ಚೌಟರಿಗೆ ಹೇಳಿದರು: 'ಶಂಭಣ್ಣ, ನಮ್ಮ ಯಜಮಾನಿಗೂ ಈ ಸಂಗತಿ ಒಪ್ಪಿಗೆ ಇದ್ದಂತೆ ಕಾಣುತ್ತದೆ. ನಿಮಗೆ ತಿಳಿದಿರುವ ಯಾವುದಾದರೂ ನೆಂಟಸ್ತಿಕೆ ಇದೆಯಾ ಹೇಳಿ. ನನ್ನಿಂದ ಯಾವ ಅಡ್ಡಿಯೂ ಇಲ್ಲ.'

'ನೀವು ಏನು ಹೇಳುವುದು ತ್ಯಾಂಪಣ್ಣ. ಹೆಣ್ಣಿಗೆ ಬರವೇ? ನೀವು ಹೇಳುವುದೇ ತಡ, ನಂಟೂ ಹೆಣ್ಣೂ ಈಗಲೇ ತಯಾರು.'

ದೆಯ್ಯಕ್ಕ ಆಗ ಮಧ್ಯದಲ್ಲೇ ಮಾತನಾಡಿದರು. 'ಸ್ವಲ್ಪ ಅನುಕೂಲಸ್ಥರ ಹೆಣ್ಣಿನ ಬಗ್ಗೆ ಮಾತನಾಡಿ. ಓದು ಬರಹ ಕಲಿತ ಹೆಣ್ಣಾದ್ರೆ ಉತ್ತಮ. ಕಲಿತ ಹೆಣ್ಣಿದ್ದಾರಾ ನೋಡಿ.'

'ನಿಮ್ಮ ಅರಿವಿನಲ್ಲಿ ಯಾರಾದರು ಹೆಣ್ಣಿದ್ದಾರಾ ಸಾಮನಿಯವರೇ?' ಚೌಟರು ಕೇಳಿದರು. ತ್ಯಾಂಪಣ್ಣ ಅಡ್ಡ ಅಡ್ಡ ತಲೆಯಾಡಿಸಿ ಇಲ್ಲವೆಂದು ಸೂಚಿಸಿದರು. ಅಷ್ಟಾಗುವಾಗ ಶಂಭು ಚೌಟರು ಒಮ್ಮೆ ಸ್ವರ ಸರಿಮಾಡಿ ದೆಯ್ಯಕ್ಕನ ಮುಖದತ್ತ ತಲೆ ತಿರುಗಿಸುತ್ತ ಎಚ್ಚರಿಕೆಯಿಂದ ಹೇಳಿದರು.

'ಸಾಮನಿಯವರೇ, ಹಾಗಿದ್ದರೆ ನಾನೊಂದು ಮಾತು ಹೇಳ್ತೇನೆ.' ಮಾತು ನಿಲ್ಲಿಸಿ

ಅವರು ತ್ಯಾಂಪಣ್ಣನ ಮುಖ ನೋಡಿದರು. 'ನಮ್ಮಲ್ಲೇ ಹೆಣ್ಣಿರುವಾಗ ದೂರ ಹೋಗುವುದು ಯಾಕೆ?'

ದೆಯ್ಯಕ್ಕ ತಟಕ್ಕನೆ ಕೇಳಿದರು. 'ನೀವು ಯಾರ ವಿಷಯ ಹೇಳ್ತಿದ್ದೀರಿ ಶಂಭಣ್ಣ? ಸರಸುವಿನ ವಿಷಯವೇ? ಅಂತಕ್ಕನ ಹಿರಿಮಗಳು?'

ಶಂಭು ಚೌಟರ ಮುಖದಲ್ಲಿ ಮುಗುಳು ನಗೆ ತೇಲಿತು. 'ನಿನಗೆ ಹೇಗೆ ಗೊತ್ತಾಯ್ತಕ್ಕ? ಸರಸು ತಂದೆಯಿಲ್ಲದ ಹುಡುಗಿ. ಅವಳಂಥ ಸಾಧು ಸ್ವಭಾವದ ಹುಡುಗಿ ಪಕ್ಕನೆ ಸಿಗುವುದಿಲ್ಲ. ನೀವು ಏನು ಹೇಳ್ತೀರಿ? ಮೊದಲು ಮನೆಯ ಹೆಂಗಸರಿಗೆ ಒಪ್ಪಿಗೆ ಆದರೆ ಎಲ್ಲರಿಗೂ ಆದ ಹಾಗೆ.. ನೀವು ಏನು ಹೇಳ್ತೀರಾ ತ್ಯಾಂಪಣ್ಣ?'

ದೆಯ್ಯಕ್ಕ ಅಳುಕುತ್ತ ಹೇಳಿದರು. 'ಶಂಭಣ್ಣ, ನೀವು ಹೇಳುವುದೆಲ್ಲ ಸರಿ. ಆದರೆ.. ಅಂತಕ್ಕನೂ ರುಕ್ಕಕ್ಕನೂ ಈ ಸಂಬಂಧವನ್ನು ಒಪ್ತಾರಾ?'

'ಅದು ಏನಾದರೂ ಆಗಲಿ.. ಅವರನ್ನೆಲ್ಲ ನಾನು ಸರಿ ಮಾಡ್ತೇನೆ..'

'ನೀವು ಆಸ್ತಿ ಬದುಕಿನಲ್ಲಿ ಕಡಿಮೆ ಇರಬಹುದು. ಆದರೆ ಇವತ್ತು ನಿಮ್ಮ ಪದ್ಮನ ಬಳಿಯಲ್ಲಿರುವ ಹಣದ ಅನುಕೂಲ ನಮ್ಮ ಗುತ್ತಿನ ಜನರಲ್ಲೂ ಇಲ್ಲ. ಹೆಣ್ಣು ಕೊಟ್ಟರೆ ಅವಳಿಗೆ ಹೋದ ಮನೆಯಲ್ಲಿ ಸುಖ ಸಂಪತ್ತು ಸಿಗಬೇಕೆಂದು ತಾನೆ ಮನೆಯ ಹಿರಿಯರ ಆಸೆ?'

'ಈ ಗುತ್ತಿನ ವಂಶದವರ ದರ್ಬಾರೆಲ್ಲ ಈಗ ಕಡಿಮೆಯಾಗಿದೆ. ಇನ್ನಿನ್ನು ಸಂಪೂರ್ಣ ಕಡಿಮೆಯಾಗ್ತದೆ. ವಿದ್ಯಾವಂತರಾಗಿ ಹಳ್ಳಿಯ ಜನರು ಹೊಸ ಹೊಸ ಉಪಾಯಗಳನ್ನು ಕಲಿತಿದ್ದಾರೆ. ಸರಕಾರೀ ಕೆಲಸಕ್ಕೆ ಸೇರಿ ಹೊಸ ಹೊಸ ಊರು ನೋಡ್ತಾರೆ. ಅವರ ಆಲೋಚನೆಗಳು ಬೇರೆಯೇ ಆಗ್ತವೆ..'.

'ಅಲ್ಲ ದೆಯ್ಯಕ್ಕ, ನಿನ್ನ ಮೈದುನನಿಗೆ ಏನು ಕಮ್ಮಿಯಾಗಿದೆ? ಮಡದಿ ಮಕ್ಕಳನ್ನು ಚೆನ್ನಾಗಿ ನೋಡ್ತಾನೆ ಎಂಬುದಕ್ಕೆ ಯವ ಸಂಶಯವೂ ಇಲ್ಲ. ಅಂತಕ್ಕನ ವಿಷಯ ಬಿಡಿ. ಮತ್ತೆ ನಿಮ್ಮ ಆಲೋಚನೆ ಏನು?' ಕಂತ್ರಿ ಶಂಭು ಚೌಟರು ಹೇಳಿದರು.

'ಮನೆಗಿಂತ ಮೆಟ್ಟುಕಲ್ಲು ದೊಡ್ಡದಾಗುವುದಿಲ್ಲವೇ ಚೌಟರೇ?' ತ್ಯಾಂಪಣ್ಣ ಸ್ವರ ತಗ್ಗಿಸಿ ಉಸುರಿದರು.

'ಮೆಟ್ಟುಕಲ್ಲಿನ ವಿಷಯ ಬಿಡಿ. ಮುಂಡಪ್ಪ ಕಂಬೊಳಿ ಬದುಕಿರುತ್ತಿದ್ದರೆ ದೊಡ್ಡ ಮನೆವಾರ್ತೆಯ ವಿಚಾರ ಅವರಲ್ಲಿ ಹೇಳಬಹುದಿತ್ತು. ದೊಡ್ಡ ಗುತ್ತಿನ ವಂಶಜರ ಸಂಬಂಧ ಬೇಕೆಂದಾದರೆ ವರದಕ್ಷಿಣೆ ಕೊಡಬೇಕು. ಚಿನ್ನಾಭರಣ ಹಾಕಿ ಅವಳ ಅಮ್ಮ ಅಂತಕ್ಕನ ಮದುವೆ ಮಾಡಿದಂತೆ ಆಡಂಬರವಾಗಿ ಮದುವೆ ಮಾಡಿಸಬಹುದಿತ್ತು. ಈಗ ಕಾಲ ಬದಲಾಗಿದೆ. ಗುತ್ತಿನ ಮನೆಯಲ್ಲಿ ತಿನ್ನುವ ಬಾಯಿ ಹೆಚ್ಚಾಗಿದೆ. ದುಡಿಯುವ ಕೈಗಳು ಕಡಿಮೆಯಾಗಿವೆ. ಖರ್ಚು ಹೆಚ್ಚಾಗಿ ಭೂಮಿಯ ಕಂದಾಯ ಕಟ್ಟುವುದಕ್ಕೇ ಕಷ್ಟವಾಗ್ತಿದೆ. ಬೆಳೆದ ಬೆಳೆಯ ಕಾಲುಭಾಗ ಸರಕಾರಕ್ಕೆ ಕೊಡಬೇಕೆಂದು ಸೇನೆ, ಪಟೇಲರು, ಸರಕಾರದವರು ಬಂದು ಆದೇಶ ಓದಿ ಬಲವಂತವಾಗಿ ತೆಗೆದುಕೊಂಡು ಹೋಗ್ತಾರೆ.'

‘ಹೊಲದಲ್ಲಿ ಬೆಳೆದದ್ದೂ ಎಲ್ಲ ಮನೆಯೊಳಗೆ ಬರುವುದಿಲ್ಲ. ಇನ್ನು ಭೂಮಿಯ ಹಿರಿತನ, ಗುತ್ತು ದರ್ಬಾರುಗಳನ್ನು ಮಾತನಾಡಿ ಪ್ರಯೋಜನವಿಲ್ಲ. ನೀವು ನನ್ನ ಮಾತನ್ನು ಚೆನ್ನಾಗಿ ಯೋಚಿಸಿ. ಆಮೇಲೆ ಆದಷ್ಟು ಬೇಗ ಪದ್ಮನಿಗೂ ಒಂದು ಮಾತು ತಿಳಿಸಿ. ಇತ್ತೀಚೆಗೆ ಕಾಲ ಬದಲಾಗಿ ಇಡೀ ಲೋಕವೇ ಅಡಿಮೇಲಾಗುತ್ತಿದೆ.’

‘ಯಾವುದಾದರೂ ಹಾಗೇ ಇರಲಿ. ಒಮ್ಮೆಗೇ ಆಕಾಶ ನೋಡುವುದೇಕೆ? ದೊಡ್ಡವರ ಸಂಬಂಧಕ್ಕೆ ಕೈನೀಡಿದರೆ ಮರ್ಯಾದೆ ಹೋಗುವ ಸಂದರ್ಭ ಬರಬಹುದು. ನಮ್ಮ ಎಚ್ಚರಿಕೆಯಲ್ಲಿ ನಾವಿರಬೇಕು’ ತ್ಯಾಂಪಣ್ಣ ತಮ್ಮ ಲೋಕಾನುಭವದ ಮಾತು ಹೇಳಿದರು.

‘ಏಕೆ ತ್ಯಾಂಪಣ್ಣ, ನಿಮ್ಮ ತಮ್ಮನಿಗೆ ಒಳ್ಳೆಯ ವರದಕ್ಷಿಣೆ ಸಿಗುತ್ತದೆ. ನಮ್ಮ ಸಂಬಂಧ ಬೆಳೆಸಿದರೆ ಅದಕ್ಕೆ ತೊಂದರೆ ಆದೀತೆಂದು ಭಯವೇ? ನೀವು ಅದಕ್ಕಾಗಿ ಚಿಂತಿಸಬೇಕಾಗಿಲ್ಲ. ಒಂದು ರೀತಿಯ ವರದಕ್ಷಿಣೆ ನಾವೂ ಕೊಡುತ್ತೇವೆ. ಈಗ ನೀವು ನಿಮ್ಮ ತಮ್ಮನಿಗೊಂದು ಪತ್ರ ಬರೆದು ಊರಿಗೆ ಬರಲು ಹೇಳಿ. ಆತ ಬಂದು ಭೂತಗಳ ಕತ್ತಿಗೂ ಚೌರಿಗೂ ಬೆಳ್ಳಿಯ ಕಟ್ಟು ಮಾಡಿಸಿ ಭೂತದ ಕೋಲದ ಸಮಯದಲ್ಲಿ ಒಪ್ಪಿಸಲಿ.’

‘ಅವನಿಗೆ ಈ ಮದುವೆ ವಿಚಾರವನ್ನು ಅವನು ಬರುವ ಮೊದಲೇ ತಿಳಿಸಿ. ಕೋಲ ಕಳೆದ ಮೇಲೆ ಮಾತು ನಿಶ್ಚೈಸಿ ದಿನ ಗೊತ್ತು ಮಾಡೋಣ. ಕಾರ್ತೆಲ್ ಕೊನೆಗೆ ಮದುವೆಗೆ ಒಳ್ಳೆಯ ಮುಹೂರ್ತವಿದೆ. ಅವನಿಗೂ ಹೆಚ್ಚು ದಿನ ಊರಲ್ಲಿರಲು ಸಾಧ್ಯವಿಲ್ಲ. ಆದ್ದರಿಂದ ಇದನ್ನೆಲ್ಲ ಮೊದಲೇ ಯೋಚಿಸಿದರೆ ಒಳ್ಳೆಯದು’ ಚೌಟರು ಇಷ್ಟು ಹೇಳಿ ಹೊರಟುಹೋದರು. ತ್ಯಾಂಪಣ್ಣ ಆಲೋಚನೆಯಲ್ಲಿ ಬಿದ್ದರು. ದೆಯ್ಯಕ್ಕನಿಗೆ ಒಳಗಿಂದೊಳಗೇ ಅಳುಕು. ಹೊರಗೆ ಮಾತ್ರ ಸಂತೋಷದ ಮುಖವಾಡ ಹಾಕಿದರು.

ಅಂತಕ್ಕನಿಗೂ ರುಕ್ಕಕ್ಕನಿಗೂ ಚೌಟರು ಮಾಡಿದ ಆಲೋಚನೆಯ ವಾಸನೆ ಹತ್ತಲು ಬಹಳ ದಿನ ಬೇಕಾಗಲಿಲ್ಲ. ದೆಯ್ಯಕ್ಕ ತನಗೆ ಗೊತ್ತಾದ ಯಾವುದೇ ವಿಚಾರವನ್ನೂ ಮನಸ್ಸಿನೊಳಗೇ ಇಟ್ಟುಕೊಳ್ಳುವವರಲ್ಲ. ಶಂಭು ಚೌಟರು ಹೋದ ಬೆನ್ನಿಗೇ ಮೈರೆ ಬೈದ್ಯದಿ ಹೆಂಡ ತುಂಬಿಸಿಕೊಂಡು ಗುರುಕಂಬಳದ ಗಡಂಗಿಗೆ ವರ್ತನೆ ಹೆಂಡ ಕೊಡುವವರಿಗೆ ಕೊಟ್ಟು ಹಿಂತಿರುಗುವಾಗ ದೆಯ್ಯಕ್ಕ ಅವಳನ್ನು ಕರೆದರು.

‘ಹೊತ್ತಾಯ್ತು, ಏಕೆ ಕರೆದದ್ದೆಂದು ಅಲ್ಲಿಂದಲೇ ಹೇಳಿ’ ಮೈರೆ ವೈದ್ಯತಿ ಹೇಳಿದಳು.

‘ಅದೇನಂಥ ಅವಸರ ನಿನಗೆ? ಬಾ ಇಲ್ಲಿಗೆ ಚಾ ಕುಡಿದು ಹೋಗು’ ದೆಯ್ಯಕ್ಕ ಹೇಳಿದರು.

ಚಾ ಕುಡಿಯುವ ಮಾತು ಕೇಳಿದ್ದೇ ಮೈರೆಯ ಆತುರ ಕಡಿಮೆಯಾಯ್ತು.

‘ಬೇಗ ಹೇಳಬೇಕು. ಇನ್ನೂ ಒಂದು ಕಡೆಯ ಗಡಂಗಿಗೆ ಕೊಡಬೇಕು. ಬೈದ್ಯರು ಮನೆಯಲ್ಲಿ ಹೆಂಡ ಇಟ್ಟು ಕಾಯ್ತಾರೆ’ ಮೈರೆ ಒಳಗೆ ಹೆಜ್ಜೆಯಿಡುತ್ತ ಹೇಳಿದಳು.

‘ಏನೂ ಇಲ್ಲ ಮೈರೆ. ನೀನು ವಾಪಸ್ಸು ಗಡಂಗಿಗೆ ಹೋಗುವಾಗ ನನಗೆ ಒಂದು ಪೋಸ್ಟು ಕವರು ತೆಗೆದುಕೊಂಡು ಬರ್ತೀಯಾ? ಹಣ ಕೊಡ್ತೇನೆ. ಅದಕ್ಕೆ 20 ಪೈಸೆ ಅಲ್ಲವಾ?’

‘ಏನು ಮೈದುನನಿಗೆ ಕಾಗದ ಬರೆಯುತ್ತೀರಾ? ಏನು ವಿಶೇಷ? ಮೈದುನ

ನಿಗೇನಾದರೂ ಮದುವೆ ಮಾಡಿಸುವ ಆಲೋಚನೆ ಇದೆಯಾ? ಹೆಣ್ಣು ನೋಡಿದಿರಾ?'

'ಬಾ. ಒಂದು ಮಾತನಾಡಿದರೆ ಹತ್ತು ಉತ್ತರ ಕೊಡ್ತೀಯಾ. ಬಾ. ಮೊದಲು ಚಾ ಕುಡಿ' ದೆಯ್ಯಕ್ಕ ಒಳಗೆ ಹೋಗಿ ಚಹಾದ ಗ್ಲಾಸಿನೊಂದಿಗೆ ಕುಡಿಬಾಳೆಯೆಲೆಯಲ್ಲಿ ಅಕ್ಕಿರುಬ್ಬಿ ಮಾಡಿದ ತಿನಿಸನ್ನೂ ತಂದು ಮೈರೆಗೆ ಕೊಟ್ಟರು.

'ಇದೇನಕ್ಕಾ, ಚಾವನ್ನೂ ತಿಂಡಿಯನ್ನೂ ತಯಾರು ಮಾಡಿಯೇ ಇಟ್ಟಿದ್ದೀರಾ?'

'ಹಾಗಲ್ಲ ಮೈರೆ, ಹಿತ್ತಿಲಲ್ಲಿ ಹಸುವನ್ನು ಗೂಟಕ್ಕೆ ಕಟ್ಟುವಾಗ ಚಿಕ್ಕ ಚೌಟರು ಹಲ್ಲುಜ್ಜುತ್ತ ಬಂದರು. ಒಂದು ಲೋಟ ಚಾ ಕೊಡು ಅಂದರು. ಹಾಗೆ ಅವರಿಗೆ ಮಾಡಿ ಕೊಟ್ಟೆ.'

'ಹಲ್ಲುಜ್ಜುತ್ತ ಅದೇನು ಅವರ ಸವಾರಿ ಈ ಕಡೆಗೆ ಬಂದುದು? ಅವರ ಹೆಂಡತಿ ಸೋಮಕ್ಕ ಮಂಗಳೂರಲ್ಲಿ ಮನೆ ಮಾಡಿದ ಮೇಲೆ, ಹಿರಿಯ ಧನಿಯವರ ಮಡದಿ ತುಂಗಕ್ಕನ ಚಹಾ ಆಗುವವರೆಗೆ ಕಾಯಬೇಕು. ಅಂತಕ್ಕನ ಚಹಾ ಸಕಾಲದಲ್ಲಿ ಸಿಗಬೇಕೆಂದರೆ ಅವರಿಗೆ ಒಳ್ಳೆಯ ಮನಸ್ಸು ಬರಬೇಕು. ಬೆಳಿಗ್ಗೆಯೇ ಮನೆಯಲ್ಲಿ ಗಲಾಟೆ ಶುರುಮಾಡಿದರೆ ಶಂಭು ಅಣ್ಣ ಕಿವಿಗೆ ಕೈಯಿಟ್ಟು ಓಡಿಹೋಗಬೇಕು. ಅಂತಕ್ಕನೂ ಅಜ್ಜಮ್ಮನೂ ಇಬ್ಬರ ಜೋಡು ಮೇಳದ ಎದುರು ಏನು ನಡೆದೀತು?'.

'ಅದು ಹಾಗಿರಲಿ ಮೈರೆ, ಅಂತಕ್ಕನ ಮಕ್ಕಳು ಬಾಯಿಬಡುಕಿಯರಲ್ಲ. ಅಲ್ವಾ?'

'ಯಾರು ಹೇಳಿದ್ದು! ಅವರಲ್ಲಿ ಸರಸಕ್ಕ ಸಾಧು. ಹತೋಟಿ ತಪ್ಪಿ ಮಾತನಾಡುವವರಲ್ಲ. ಭವಾನಿ ಅಕ್ಕನಿಗೆ ಕೋಪ ಬಂದರೆ ಅವರ ಅಮ್ಮನೂ ಇಲ್ಲ. ಸರಿ, ನಮಗೇಕೆ ದೊಡ್ಡವರ ಸಂಗತಿ. ನಾನು ಬರ್ತೇನೆ.'

'ಹೌದಾ ಮೈರೆ, ಸರಸು ನಿಜಕ್ಕೂ ಸಾಧು ಹುಡುಗಿಯಾ?'

'ಹೌದು ಕಣ್ರೀ. ನಾನೇಕೆ ಸುಳ್ಳು ಹೇಳಲಿ? ಆ ಹೆಣ್ಣುಮಗಳಿಗೆ ಬೈಯುವುದು, ಗದರಿಸಿ ಮಾತನಾಡುವುದೆಲ್ಲ ಇಷ್ಟವಾಗುವುದಿಲ್ಲ. ತಂಗಿಗೂ ಬುದ್ಧಿ ಹೇಳುತ್ತಾರೆ.'

'ಹೌದಾ, ಹಾಗಿದ್ದರೆ ಪರವಾಗಿಲ್ಲ.'

'ಏನಕ್ಕಾ, ಬಾರಿ ಗುತ್ತು ಮನೆಯ ಕತೆ ಕೇಳ್ತಿದ್ದೀರಿ. ದೊಡ್ಡವರ ಸಂಗತಿ ನಾವು ಮಾತನಾಡಿದ್ದು ನಮ್ಮೊಳಗೇ ಇರಲಿ.'

'ಹಾಗಲ್ಲ ಮೈರೆ, ಶಂಭುಣ್ಣ ಇವತ್ತು ಬೆಳಿಗ್ಗೆ ನಮ್ಮ ಪದ್ಮನ ವಿಷಯ ಮಾತನಾಡಿದರು. ನಮ್ಮ ಯಜಮಾನರು ಯಾವುದಕ್ಕೂ ಅಂಥ ಮುತುವರ್ಜಿ ತೋರಿಸುವುದಿಲ್ಲ. ಆದರೆ ಒಳಗಿನ ಸಂಗತಿ ಏನೆಂದು ನಿನ್ನನ್ನು ಕೇಳಿ ತಿಳಿಯೋಣಾಂತ ಯೋಚಿಸಿದೆ... ಈ ವಿಚಾರವನ್ನು ನೀನೇನೂ ಯಾರಲ್ಲೂ ಹೇಳ್ಬೇಡ. ಸುಮ್ಮನೆ ಸುದ್ದಿ ಹಬ್ಬಿಸುವುದು ಬೇಡ. ಅಲ್ಲವೇ?'

'ಓ. ಹಾಗೋ ವಿಚಾರ. ನಾನು ಯಾರಿಗೆ ಹೇಳ್ತೇನೆ. ಸುಮ್ಮನೆ ಒಂದು ಗಾಳಿಸುದ್ದಿ ಅಂತ ತಿಳಿದರೆ ಸಾಕು. ಸರಿ, ದುಡ್ಡು ಕೊಡಿ. ನನಗೆ ಹೊತ್ತಾಯ್ತು. ಹೊಟ್ಟೆ ತಂಪಾಯ್ತು. ಬೈದ್ಯರ ಬಾಯಿಗೆ ಸಿಕ್ಕಿದರೆ ಹೊಟ್ಟೆಯ ತಂಪು ಬತ್ತುವಷ್ಟು ಬೈಗಳನ್ನು ತಿನ್ಬೇಕಾದೀತು.'

ಮೈರೆ ಹೊರಟುಹೋದಳು. ಸುದ್ದಿ ಕೂಡ ಗಾಳಿಗೆ ಕಟ್ಟಿದಂತೆ ಹೊರಟುಹೋಯ್ತು.

ಮೈಂದಣ್ಣನ ದೌಲತ್ತು

ಶಂಭು ಚೌಟರ ಮಡದಿ ಸೋಮಾವತಿ ಪೇಟೆಯ ಹತ್ತಿರದ ಊರಿನಾಕೆ. ಅವರ ತಂದೆ ನಚ್ಚದ ಪಟೇಲರು. ಅವರಿಗೆ ಸೋಮಾವತಿ ಯೆಂಬ ಒಬ್ಬಳು ಮಗಳು ಮತ್ತು ಮೂವರು ಗಂಡು ಮಕ್ಕಳು. ಸೋಮಾವತಿ ನೋಡಲು ಬೆಳ್ಳಗಿನ ಚೆಲುವೆ. ಪಟೇಲರ ಮನೆಯಲ್ಲಿ ಸಾಗುವಳಿ ಇದ್ದರೂ ತೆನೆ ಕುಯ್ದು ಭತ್ತ ಹೊಡೆಯುವಾಗ ಸೋಮಾವತಿ ಯನ್ನು ಪದವಿನ ಮೇಲಿರುವ ಮಂಗಳೂರಿನ ಸಮೀಪದ ಅವಳ ಅಜ್ಜಿಯ ಮನೆಗೆ ಕಳುಹಿಸುತ್ತಾರೆ. ಸೋಮಾವತಿಗೆ ಭತ್ತ ಹೊಡೆಯುವ ಸಮಯದಲ್ಲಿ ಅದರ ಸೊಗಡಿಗೆ ಉಬ್ಬಸ ಶುರು ಆಗ್ತದೆ. ಯಾವ ಮದ್ದು ಮಾಡಿದರೂ ನಿಲ್ಲುವುದಿಲ್ಲ. ಮಂಗಳೂರಿನ ಡಾಕ್ಟರ್ ಅದು ಎಲರ್ಜಿಯಿಂದ ಬರುವ ಕಾಯಿಲೆ ಅನ್ನುತ್ತಾರೆ.

ಶಂಭು ಚೌಟರಿಗೆ ದೌಲತ್ತು, ಯೌವ್ವನ, ರೂಪು, ಕುಟುಂಬದ ಘನಸ್ತಿಕೆ, ತಕ್ಕಮಟ್ಟಿಗಿನ ಹಿರಿತನವೆಲ್ಲ ಇದೆಯೆಂದು ಪಟೇಲರು ಹೆಣ್ಣು ಕೊಟ್ಟಿದ್ದರು. ಸೋಮಾವತಿಗೆ ಕುಳವೂರಿನ ಸಾಗುವಳಿಯ ಮನೆ ಒಗ್ಗುವುದಿಲ್ಲ. ಯಾವಾಗಲೂ ಕಾಯಿಲೆ. ಹಾಗಾಗಿ ಏನು ಮಾಡುವುದೆಂದು ಶಂಭು ಚೌಟರು ಕೂಡ ಆಲೋಚನೆ ಮಾಡುತ್ತಿದ್ದರು. ಮಕ್ಕಳು ಸ್ವಲ್ಪ ದೊಡ್ಡವರಾದರು. ಗುರಿಕಂಡದ ಶಾಲೆಯ ಓದು ಸಾಲದೆಂದು ನಚ್ಚದ ಪಟೇಲರ ಭಾವ ನೀಲಯ ಶೇಖರ್ ಒಂದು ಹೊಸ ಆಲೋಚನೆ ಮಾಡಿದರು. ಮಂಗಳೂರಿನಲ್ಲಿ ಪದವಿನ ಮೇಲೆ ಅವರ ಮನೆ. ಮಂಗಳೂರಿನ ಹೈಸ್ಕೂಲಿಗೆ ಮೊಮ್ಮಕ್ಕಳನ್ನು ಸೇರಿಸುವುದು. ಕದ್ರಿಯಲ್ಲಿ ಒಂದು ಬಿಡಾರ ಮಾಡಿಸಿ ಸೊಸೆಯನ್ನೂ ಮೊಮ್ಮಕ್ಕಳನ್ನೂ ಇರಿಸುವುದು. ಶಂಭು ಚೌಟರಿಗೆ ಹೊಸ ಖರ್ಚಿನ ಹಾದಿ ಬೇಡ. ಪದವು ಮೇಲಿನ ತಮ್ಮ ತಂಗಿಯ ಪಾಲಿನ ಅಕ್ಕಿಯ ಮುಡಿಯನ್ನು ಸೊಸೆಯ ಬಿಡಾರಕ್ಕೆ ಸಾಗಿಸಿದರೆ ಆಯ್ತು. ಪಟೇಲರ ಚಿಕ್ಕ ಮಗ ರಘುವೀರ ವಕೀಲ. ಅವನು ಅಕ್ಕನ ಹತ್ತಿರ ಇದ್ದರೆ ಅವನಿಗೂ ಅನುಕೂಲ. ಮಂಗಳೂರಿನ ಕೋರ್ಟಿನಲ್ಲಿ ಆತನ ಪೂರಾ ವ್ಯವಹಾರ ನಡೆಯುತ್ತದೆ. ಪ್ರತಿದಿನವೂ ನಚ್ಚಕ್ಕೆ ಹೋಗಿ ಬರುವುದು ಅವನಿಗೂ

ತೊಂದರೆ. ಹಾಗಿರುವಾಗ ಅಕ್ಕನ ಬಿಡಾರದಲ್ಲಿ ರಾತ್ರಿ ತಂಗಿದರೆ ಸೋಮಾವತಿಗೂ ಒಂದು ಧೈರ್ಯ.

ಶಂಭು ಚೌಟರೂ ಆಲೋಚನೆ ಮಾಡಿದರು. ಮಾವನ ಈ ಯೋಜನೆಯಿಂದ ಅವರಿಗೂ ಲಾಭವೇ. ಅವರ ಮಗ ಸಂತೋಷ ಈಗ ಎಂಟನೆಯ ತರಗತಿಯಲ್ಲಿ ಕಲಿಯುವುದು. ಮೂರು ಮೈಲಿ ನಡೆದು ಗುಡ್ಡ ಹತ್ತಿ ಹೋಗಿ ಮಧ್ಯಾಹ್ನ ಬೆಳಿಗ್ಗೆ ತೆಗೆದುಕೊಂಡು ಹೋದ ತಣ್ಣಗಾದ ಬುತ್ತಿಯ ಅನ್ನ ತಿಂದು ಹುಡುಗ ಮೂಳೆ ಹಂದರ ಆಗಿದ್ದಾನೆ. ಮಗಳು ಭಾರತಿ ಏನೂ ಅನ್ನುವುದಿಲ್ಲ. ಆದರೆ ಸಂಜೆ ಗುತ್ತು ತಲಪುವಾಗ ಸೋತು ಸುಣ್ಣವಾಗುತ್ತಾಳೆ. ಅವಳ ಬೆಳವಣಿಗೆ ಕೂಡ ಕುಸಿಯುತ್ತಿತ್ತು. ಇದಕ್ಕೇನು ಪರಿಹಾರವೆಂದು ಅವರು ಆಲೋಚನೆ ಮಾಡುತ್ತಲೇ ಇದ್ದರು.

ಅವರ ಅಳಿಯ ಮೈಂದಣ್ಣ ಕೂಡ ಅವರೊಟ್ಟಿಗೆ ಪದವು ಶಾಲೆಗೆ ಹೋಗುತ್ತಾನೆ. ಮೈಂದಣ್ಣನ ಕಲಿಕೆಯ ವಿಧಾನವೇ ಬೇರೆ. ಪ್ರತೀ ತರಗತಿಯಲ್ಲೂ ಎರಡೆರಡು ವರ್ಷ ಕುಳಿತು ನಿಧಾನವಾಗಿ ಮೇಲಿನ ಕ್ಲಾಸಿಗೆ ಹೋಗುತ್ತಾನೆ. ಇನ್ನೂ ಎಂಟನೆಯ ಕ್ಲಾಸು ದಾಟಿ ಮುಂದಕ್ಕೆ ಹೋಗಲು ಅವನಿಂದ ಆಗಲಿಲ್ಲ. ಅಂತಕ್ಕ ಎಷ್ಟು ಬೈದರೂ ಎಷ್ಟು ಹುಣಸೆಯ ಬರಲು ಪುಡಿ ಮಾಡಿದರೂ ಅವನನ್ನು ಸುಧಾರಿಸಲು ಅವರಿಗೆ ಸಾಧ್ಯವಾಗಲಿಲ್ಲ.

ಸೋಮಾವತಿ ಮಂಗಳೂರಿನ ಕದ್ರಿಯಲ್ಲಿ ಮನೆ ಮಾಡಿದ್ದೇ ಮೂರು ಜನ ಮಕ್ಕಳೂ ಅಲ್ಲಿಗೆ ಬಂದು ಮಂಗಳೂರಿನ ಶಾಲೆಗೆ ಸೇರಿದರು. ಭವಾನಿ ಪಾಪ ಅತ್ತು ಕರೆದು ರಂಪ ಮಾಡಿದರೂ ಊಟ ಬಿಟ್ಟರೂ ಶಂಭು ಚೌಟರು ಏನೂ ಹೇಳಲಿಲ್ಲ. ಅಂತಕ್ಕನ ಮನಸ್ಸಿನಲ್ಲಿ ಮಗಳೂ ಮಂಗಳೂರಿನ ಶಾಲೆಗೆ ಹೋದರೆ ಚೆನ್ನಾಗಿತ್ತೆಂದು ಅನ್ನಿಸಿತ್ತು. ಪ್ರಾಯಕ್ಕೆ ಬರಲು ಸಿದ್ಧವಾದ ಹೆಣ್ಣನ್ನು ಶಾಲೆಗೆ ಕಳುಹಿಸುವುದು ಏಕೆ? ಅಲ್ಲದೆ ಪಟೇಲರೇ ಬಿಡಾರದ ಖರ್ಚನ್ನು ವಹಿಸಿದ್ದಾರೆ. ಹಾಗಾಗಿ ಅಂತಕ್ಕನೂ ಸ್ವಲ್ಪ ಹಿಂದೇಟು ಹಾಕಿದರು. ಗಂಡು ಮಗ ಮೈಂದಣ್ಣ ಮಾತ್ರ ಮನಸ್ಸಿಲ್ಲದ ಮನಸ್ಸಿನಿಂದ ಮಂಗಳೂರಿಗೆ ಹೋದ.

ಶಂಭು ಚೌಟರಿಗೆ ಖಂಡಿತ ಗೊತ್ತಿತ್ತು. 'ಎಷ್ಟು ದಿನ ಮೈಂದಣ್ಣ ಮಂಗಳೂರಲ್ಲಿ ನಿಲ್ಲುತ್ತಾನೆ?' ಅವನಿಗೂ ಇಂಗ್ಲಿಷ್ ವಿದ್ಯಾಭ್ಯಾಸಕ್ಕೂ ಎಣ್ಣೆಸೀಗೆ.

ಅವರು ಎಣಿಸಿದಂತೆಯೇ ಆಯ್ತು. ವಾರದ ಕೊನೆಗೆ ಮೈಂದಣ್ಣ ಕುಳವೂರಿಗೆ ಬರುತ್ತಿದ್ದ. ಯುದ್ಧದ ಸಮಯ. ಜಪಾನಿನವರು ಪೂರ್ವದ ಚೀನಾ ರಾಜ್ಯದ ಮೇಲೆ ಸೈನ್ಯ ಕಳುಹಿಸಿದರು. ಅದನ್ನು ಧ್ವಂಸ ಮಾಡಿ ಮುಂದೆ ಮುಂದೆ ಬಂದು ಅದರ ಹತ್ತಿರದ ರಾಜ್ಯದ ಮೇಲೆ ಬಿದ್ದರು. ವಿಯಟ್ನಾಮ್, ಲಾವೋಸ್, ಕಾಂಬೋಡಿಯಾ, ಥೈಲಾಂಡ್, ಮಲೇಷ್ಯಾಗಳನ್ನು ದಾಟಿ ಸಿಂಗಾಪುರದ ಮೇಲೆ ಬಿದ್ದರು. ನೋಡ ನೋಡುತ್ತಿದ್ದಂತೆ ಬರ್ಮಾದ ಮೇಲೆ ಬಿದ್ದರು. ಅವರ ಒಟ್ಟಿಗೆ ನಮ್ಮ ಜನರೂ ಸೇರಿದರು. ಸುಭಾಷ್ ಚಂದ್ರ ಬೋಸರ ಐ.ಎನ್.ಎ. ಎನ್ನುವ ಸೈನ್ಯ ಬರ್ಮಾದ ಹತ್ತಿರ ಜಪಾನಿನ

ಸೈನ್ಯದ ಬಳಿಗೆ ಬಂದಿದೆ ಎನ್ನುವ ಬಿಸಿಬಿಸಿ ಸುದ್ದಿ ಪ್ರತಿದಿನವೂ ಪತ್ರಿಕೆಗಳಲ್ಲಿ ಬರುತ್ತಿತ್ತು. ಯುವಕರು ಸೈನ್ಯಕ್ಕೆ ಸೇರಿದರೆ ಒಳ್ಳೆಯದು. ಸರಕಾರ ಕೂಡ ಸೈನ್ಯಕ್ಕೆ ಸೇರುವಂತೆ ಒತ್ತಾಸೆ ಕೊಡುತ್ತಿತ್ತು. ಮೈಂದಣ್ಣನಿಗೆ ಸೈನ್ಯಕ್ಕೆ ಸೇರುವ ಮನಸ್ಸು. ಮಾವಂದಿರನ್ನು ಕೇಳಲು ಭಯ. ಅಮ್ಮನಲ್ಲಿ ಹೇಳಿದ. ಅಂತಕ್ಕ ಒಮ್ಮೆಗೇ ಬೈಯಲು ಆರಂಭಿಸಿದರು.

'ನಿನಗೆ ಶಾಲೆ ಹಿಡಿಸುವುದಿಲ್ಲ. ರೇಷನ್ ಹಂಚುವ ಅಂಗಡಿ ಮಾಡೋಣವೆನ್ನುತ್ತಾರೆ ನಿನ್ನ ಮಾವಂದಿರು. ನಿನಗೆ ವಯಸ್ಸು 21 ಆಯ್ತು. ಮೀಸೆ ಬಂದಿದೆ. ಕೋಳಿಯ ಪುಕ್ಕ ಸವರಲು ಮಾತ್ರ ಯೋಗ್ಯ ನೀನು. ನನ್ನ ಅದೃಷ್ಟ, ಮನೆಯಲ್ಲಿ ಮದುವೆಗೆ ಬಂದ ಇಬ್ಬರು ಹೆಣ್ಮಕ್ಕಳಿದ್ದಾರೆ. ಅವರ ಮದುವೆ ಯೋಚನೆ ನಿನಗಿದೆಯಾ? ನಿನ್ನ ಮಾವಂದಿರೋ ಸುಲಭದಲ್ಲಿ ಕಾರ್ಯಸಾಧನೆ ಆಗುವುದನ್ನೇ ನೋಡುತ್ತಾರೆ. ನನ್ನ ತಲೆಯಲ್ಲಿ ಆ ಬ್ರಹ್ಮ ಕೂಡ ಒನಕೆಯಲ್ಲಿ ಬರೆದಿದ್ದಾನೆ. ಅದಕ್ಕೇ ನನಗೀ ದುರ್ದೆಸೆ ಬಂದಿರುವುದು.'

'ನಾನು ಶಂಭುವಿನ ಜತೆ ಮಾತನಾಡ್ತೇನೆ. ರೇಷನ್ ಅಂಗಡಿಯಲ್ಲಿ ನಿನ್ನನ್ನು ಕುಳಿತುಕೊಳ್ಳಿಸಲಿ. ಸಾಗುವಳಿ ಮಾಡಿ ನಾಲ್ಕು ಕಾಸು ಸಂಪಾದಿಸಲು ನಿನ್ನಿಂದ ಆಗದು. ಬೆನ್ನು ಬಗ್ಗದು. ಕುರ್ಚಿಯಲ್ಲಿ ಕುಳಿತುಕೊಳ್ಳುವ ಕೆಲಸವಾದರೂ ಆಗ್ತದೆಯೋ ನೋಡೋಣ.'

ಶಂಭು ಚೌಟರು ಮಂಗಳೂರಿನಲ್ಲಿ ಯಾರ್ಯಾರನ್ನೋ ಹಿಡಿದು ಕುಳವೂರಿನಲ್ಲಿ ಒಂದು ರೇಷನ್(ಪಡಿತರ) ಅಂಗಡಿಗೆ ಅನುಮತಿಗಾಗಿ ಬಂದಾಗ ಅವರ ಮಾವನೂ ಅವರ ಭಾವನೂ ಸೇರಿ ರೇಷನ್ ಅಂಗಡಿ ತೆರೆಯಲು ಪರವಾನಗಿ ಮಾಡಿಸಿಕೊಟ್ಟರು. ಚೌಟರಿಗೂ ಮೈಂದಣ್ಣನ ಮಂಗಳೂರಿನ ಓದು ಸಾಕೆನಿಸಿತ್ತು. 'ಮೊಲಕ್ಕೆ ಕಾಲು ಸೋತಾಗ ನಾಯಿಗೆ ಹೇಲು ಬಂತಂತೆ' ಎಂಬ ಗಾದೆಯಂತಾಯ್ತು.

ಸೋಮಕ್ಕನಿಗೂ ಒಮ್ಮೆ ಈ ದಡ್ಡನನ್ನು ಊರಿಗೆ ಸಾಗಿಸಿದರೆ ಒಳ್ಳೆಯದೆಂದು ಅನ್ನಿಸಿತ್ತು. ಸುಮ್ಮನೆ ತಿರುಗಾಡಿಕೊಂಡು ತಿನ್ತಾನೆ. ಏನೋ ಚಿಕ್ಕ ಪುಟ್ಟ ಕೊಡುವ ಕೊಳ್ಳುವ ವ್ಯವಹಾರಕ್ಕೆ ಸೇರುತ್ತಿದ್ದ ನಿಜ. ಆಮೇಲೆ ಊರಲ್ಲಿ ಎಲ್ಲಿ ಕೋಳಿಅಂಕ ಆಗಲಿ, ಶಾಲೆಯ ಆಟ ಆಗಲಿ, ಅಲ್ಲದೆ ಸರ್ಕಾರದವರು ಯುದ್ಧದ ಸುದ್ದಿ ಹೇಳಿ ಸೈನ್ಯಕ್ಕೆ ಸೇರಲು ಹೇಳಲಿ ಅಲ್ಲಿಗೆಲ್ಲ ಇವನ ಸವಾರಿ ಹೋಗಲೇಬೇಕು. ಇನ್ನು ಈತ ಎಲ್ಲಾದರೂ ಹೇಳದೆ ಕೇಳದೆ ಸೈನ್ಯಕ್ಕೆ ಸೇರಲು ಊರು ಬಿಟ್ಟು ಓಡಿದರೂ ಓಡಿದ. ಆಮೇಲೆ ಅಂತಕ್ಕ ಅತ್ತಿಗೆಯ ಬಾಯಿಗೆ ಕೋಲುಹಾಕಿದ ಹಾಗೆ ಆದೀತು. 'ನನ್ನ ಮಗನಿಗೆ ಹೊಟ್ಟೆಗೆ ಹಾಕದೆ ಕಣ್ಣು ಹಾಯದ ಊರಿಗೆ ಯುದ್ಧದಲ್ಲಿ ಸಾಯಲಿ ಅಂತ ಕಳುಹಿಸಿದ್ದಾಳೆ. ಅವಳ ಕಣ್ಣಿಗೆ ನನ್ನ ಕಣ್ಣೀರು ಕಾಸರಕನ ಮುಳ್ಳಾಗಿ ಚುಚ್ಚಲಿ. ನನ್ನ ಮಗುವಿಗೆ ಊರಿಲ್ಲದಂತೆ ಮಾಡಿದಳು. ಅವನು ಯಾವಾಗ ಕಣ್ಣ ಮುಂದೆ ಬಿದ್ದು ಹಾಳಾಗ್ತಾನೆ ಅಂತ ಕಾಯುತ್ತ ಕುಳಿತಿದ್ದಳೋ ಏನೋ. ಓ ದೇವರೇ, ಆ ದೈವಗಳು ನೋಡಲಿ, ಆ ದೈವ ಪಂಜುರ್ಲಿಗೆ ಸಲ್ಲಲಿ, ರಥದಲ್ಲಿ ಕುಳಿತ ಜಾರಂದಾಯನೇ ಅದಕ್ಕೆ ಸರಿಯಾದ ಪ್ರತಿಫಲ ಕೊಡಲಿ' ಎಂದು ಖಂಡಿತ ಶಾಪ ಹಾಕುತ್ತಾರೆ ಎಂದು ಸೋಮಾವತಿ

ಯೋಚಿಸಿದ್ದರು. ಅಷ್ಟಾಗುವಾಗ ರೇಷನಿನ ಅಂಗಡಿಯಲ್ಲಿ ಮೈಂದಣ್ಣ ಕುಳಿತುಕೊಳ್ಳುವುದು ತೀರ್ಮಾನವಾಯ್ತು. ಶಂಭು ಚೌಟರಿಗೆ ಮನಸ್ಸಿಲ್ಲದಿದ್ದರೂ ಮೈಂದಣ್ಣ ಮಂಗಳೂರು ಬಿಟ್ಟು ಊರು ಸೇರಿದ.

ಮೈಂದಣ್ಣ ಮಂಗಳೂರಲ್ಲಿದ್ದು ಮಾಡುವುದಾದರೂ ಏನನ್ನು? ಅವನಿಗೆ ಅಲ್ಲಿಯ ವಿದ್ಯೆ ತಲೆಗೆ ಹತ್ತುವುದಿಲ್ಲ. ಇಂಗ್ಲಿಷ್ ಕಲಿತು ಕಾಲೇಜಿಗೆ ಸೇರಿ ಸರ್ಕಾರದ ಕೆಲಸ ಮಾಡಬೇಕೆಂಬ ದೊಡ್ಡ ದೊಡ್ಡ ಆಸೆ ಅವನಿಗಿಲ್ಲ. ಸಂಪಾಜೆಯಲ್ಲೇ ಇರುತ್ತಿದ್ದರೆ ಬಹುಶಃ ತಂದೆಯ ಭಯಕ್ಕೆ ಏನಾದರೂ ಕಲಿಯುತ್ತಿದ್ದನೇನೋ. ಇಲ್ಲಿ ಅವನಿಗೆ ಯಾರ ಭಯವೂ ಇಲ್ಲ. ಮನೆಯ ಜವಾಬ್ದಾರಿಯಂತೂ ಮೊದಲೇ ಇಲ್ಲ. ಹೊತ್ತು ಹೊತ್ತಿಗೆ ತಿನ್ನುವ ಕುಡಿಯುವ ಯೋಚನೆ ಮಾತ್ರ ಅವನಿಗೆ. ಮತ್ತೆ ಆತ ಸಮಯ ಕಳೆಯುವುದಾದರೂ ಹೇಗೆ? ಹುಟ್ಟಿದ ಸೂರ್ಯ ಮುಳುಗುವುದೇ ಅವನಿಗೆ ದೊಡ್ಡ ಸಂಗತಿ. ಅಷ್ಟಕ್ಕೆ ಅವನಿಗೆ ತೃಪ್ತಿ. ಬೇರೆ ಕೆಲಸಗಳನ್ನೆಲ್ಲ ನೋಡಲು ಶಂಭುಮಾವ ಇದ್ದಾರೆ. ಅವನು ಮನೆಯಲ್ಲಿ ಬಾಯಿ ತೆರೆಯುವುದೇ ಇಲ್ಲ. ಅಂತಕ್ಕನೇ ಎಲ್ಲರ ಪರವಾಗಿ ಮಾತನಾಡುವವರು. ಹೊತ್ತು ಹೊತ್ತಿಗೆ ತಿನ್ನುವುದಕ್ಕೂ ಕುಡಿಯುವುದಕ್ಕೂ ಬಾಯಿ ತೆರೆಯುವುದಲ್ಲದೆ ಬೇರೆ ಯಾವುದಕ್ಕೂ ಬಾಯಿ ತೆರೆಯುವ ಕೆಲಸ ಅವನಿಗಿಲ್ಲ.

ಮೈಂದಣ್ಣ ಅತ್ತೆಯ ಬಳಿಯಲ್ಲಿ ಏನು ಬೇಕಾದರೂ ಕುಶಾಲು ಮಾತನಾಡುತ್ತಾನೆ. ಅವರಿಗೆ ಊರಿನ ಸುದ್ದಿ ಸಮಾಚಾರವೆಲ್ಲ ಹೇಳುವವನು ಅವನೇ. ಸಂಬಂಧಿಕರ, ಊರಿನವರ ಗುಸುಗುಸು ಕತೆಗಳನ್ನು ಅತ್ತೆಗೆ ರಸವತ್ತಾಗಿ ಹೇಳಬೇಕು ಅವನಿಗೆ, ಶಂಭು ಚೌಟರ ಕಿರಿಬಾಗಿಲಿನಲ್ಲಿ ನಡೆಯುವ ಕುರುಕುರು ಸುದ್ದಿಯನ್ನೂ ಸೋಮಾವತಿ ಅತ್ತೆಗೆ ಪಿಸುಮಾತಿನ ಮೂಲಕ ತಿಳಿಸುವುದೂ ಅವನೇ. ಹಾಗೆಂದು ಅವನಿಗೆ ನಾರದ ಬುದ್ಧಿ ಮಾತ್ರ ಇಲ್ಲ.

ಶಂಭು ಚೌಟರು ತಿಂಗಳಿಗೆ ಎರಡು ಮೂರು ಸಲ ಮಂಗಳೂರಿಗೆ ಬರುತ್ತಾರೆ. ಬಿಡಾರದ ಸೋಮಾವತಿಯ ಬೇಕು ಬೇಡಗಳನ್ನು ವಿಚಾರಿಸುತ್ತಾರೆ. ಯುದ್ಧದ ಸುದ್ದಿಗಳನ್ನು ತಿಳಿಯಲು ಪೇಟೆಗೆ ಹೋಗುತ್ತಾರೆ. ಜಪಾನಿನವರು ಎಲ್ಲಿಗೆ ತಲಪಿದರು, ನಮ್ಮ ದೇಶಕ್ಕೆ ಬರಲು ಎಷ್ಟು ದಿನ ಬೇಕಾಗಬಹುದು ಎಂಬುದನ್ನೆಲ್ಲ ವಿಚಾರಿಸುತ್ತಾರೆ. ವಿಚಾರಿಸಿ ಹೆದರುವುದೇನೂ ಇಲ್ಲ. ಅವರ ಜತೆಯಲ್ಲಿ ಮಾತನಾಡುವವರನ್ನು ಮಾತ್ರ ಹೆದರಿಸುತ್ತಾರೆ. ಕುಳವೂರಿನಲ್ಲಿ ಅವರು ಹೇಳುವುದು: 'ಇನ್ನು ಮುಂದೆ ಮನೆಯಲ್ಲಿ ಒಂದು ಗಟ್ಟಿಯಾದ ಕರಿಮರದ ಬೆತ್ತ ಇಟ್ಟುಕೊಂಡಿರಬೇಕು. ಜಪಾನಿನವರು ನಮ್ಮ ಊರಿಗೆ ನುಗ್ಗಿದರೆ ಅವರು ಬಾಂಬ್ ಹಾಕುವ ಮುನ್ನ ಒಬ್ಬನ ತಲೆಯಾದರೂ ಹಾರಿ ಹೋಗಲಿ, ಅಲ್ವೇ?'

ಅವರು ಚೀನಾದಲ್ಲಿ ಏನೇನೆಲ್ಲ ಅನ್ಯಾಯಗಳನ್ನು ಮಾಡಿದ್ದಾರಂತೆ. ಹಾಗೆಯೇ ಎಲ್ಲ ಊರಿನಲ್ಲೂ ಮಾಡಿದ್ದಾರೆ. ಈಗ ಬರ್ಮಾ ತಲಪಿದ್ದಾರಂತೆ. ಇನ್ನು ಭಾರತ ದೇಶಕ್ಕೆ ನುಗ್ಗಲು ಎಷ್ಟು ಸಮಯ ಬೇಕು! ಆದರೆ ಒಂದು ಸಂಗತಿ ಉಂಟು. ಅವರ

ಜೊತೆಯಲ್ಲಿ ಸುಭಾಷ್ ಚಂದ್ರ ಬೋಸ್ ಎನ್ನುವ ಸಮರ್ಥರಾದ ನಮ್ಮವರು ಒಬ್ಬರು ಇದ್ದಾರಂತೆ. ಅವರು ಜಪಾನೀಯರು ಭಾರತಕ್ಕೆ ನುಗ್ಗಿ ಅನ್ಯಾಯ ಮಾಡಲು ಬಿಡಲಾರರು. ಆದರೆ ಹೇಗೆ ಹೇಳುವುದು? ಆ ಜನರು ಹಸಿ ಮೀನು ತಿನ್ನುವವರಂತೆ. ಅಲ್ಲದೆ ಕಪ್ಪೆ, ಹಾವು, ಚೇಳು, ಇಲಿ ಏನು ಸಿಕ್ಕಿದರೂ ತಿನ್ತಾರಂತೆ. ಯಾವ ಮಾಂಸವೂ ಸಿಗದಿದ್ದರೆ ಮನುಷ್ಯರ ಮಾಂಸವನ್ನೂ ತಿನ್ನುತ್ತಾರಂತೆ' ಹೀಗೆಲ್ಲ ಶಂಭು ಚೌಟರು ಸುದ್ದಿ ಹರಡುತ್ತಾರೆ. ಮಂಗಳೂರಿಗೆ ಬಂದು ಹೋಗುವಾಗ ರಾಶಿ ರಾಶಿ ಸುದ್ದಿಗಳನ್ನು ಹೊತ್ತುಕೊಂಡು ಹೋಗಿ ಪದವಿನಲ್ಲಿ ಹರಡಿ ವರ್ಣರಂಜಿತವಾದ ಸುದ್ದಿಗಳಿಂದ ಊರಿನ ಜನರ ಮೆಚ್ಚುಗೆ ಗಳಿಸುತ್ತಾರೆ. ಜನರ ಕಿವಿ ನಿಮಿರುವಂತೆ ಮಾಡಿ ಜಪಾನಿನವರೆಂದರೆ ಯಮದೂತರು, ಯುದ್ಧವೇನಾದರೂ ಆದರೆ ನಾವು ಎಲ್ಲರೂ ಮಕ್ಕಳು ಮರಿ ಸಮೇತ ಊರು ಬಿಟ್ಟು ಓಡಬೇಕು ಇಲ್ಲ ಸಮುದ್ರದಲ್ಲಿ ಬಿದ್ದು ಮುಳುಗಬೇಕೆಂಬಷ್ಟು ಪುಕಾರು ಹಬ್ಬಿಸುತ್ತಾರೆ.

ಅವರು ಮಂಗಳೂರಿಗೆ ಹೊರಟರೆ ಊರಿನ ಯುವಕರಿಗೆ ತಮಾಶೆ ಮಾಡಲು ಒಂದು ಅವಕಾಶ ಸಿಗುತ್ತದೆ. 'ಇವರಿಗೆ ಇಲ್ಲಿಗೆ ಬಂದರೆ ಅರ್ಕಾವತಿ, ಅಲ್ಲಿಗೆ ಹೋದರೆ ಸೋಮಾವತಿ'. ಗುರುಪುರದ ಹೊಳೆ ದಾಟಿದ ಕೂಡಲೇ ಮಾವನನ್ನು ಹೀಗೆ ಯುವಕರು ಹಾಸ್ಯ ಮಾಡುತ್ತಾರೆಂದು ಮೈಂದಣ್ಣ ಸೋಮಾವತಿ ಅತ್ತೆಗೆ ಸುದ್ದಿ ಮುಟ್ಟಿಸುತ್ತಾನೆ. ಹಾಗೆ ಕಿವಿ ನಿಮಿರುವ ಸುದ್ದಿ ಕೊಟ್ಟರೆ ಮಧ್ಯಾಹ್ನ ಮಂಗಳೂರಿನ ಸಿನಿಮಾ ಟಾಕೀಸಿನಲ್ಲಿ ಮೆಟನಿ ಷೋ ನೋಡಲು ಅತ್ತೆ ಅವನಿಗೆ ಒಂದು ರೂಪಾಯಿ ಕೊಡುವುದು ಖಂಡಿತ. ಮೈಂದಣ್ಣನ ಈ ಕಿಲಾಡಿತನದಿಂದಾಗಿ ಶಂಭು ಚೌಟರಿಗೆ ತಾನ್ಯಾಕೆ ಮಂಗಳೂರಿಗೆ ಬಂದೆನೋ ಎನಿಸುವಷ್ಟು ಸೋಮಾವತಿಯ ಕಿರಿಕಿರಿ ಮಧ್ಯೆ ಮಧ್ಯೆ ಅಳು ಮಾತ್ರವೇ ಸಿಗುತ್ತದೆ. ಹೊಳೆಮೀನಿನ ಬಿಸಿಬಿಸಿ ಸಾರೂಟ ಮಾಡಿಯೂ ದೇಹಕ್ಕೆ ಹಿಡಿಸದಷ್ಟು ದೂರು ದುರ್ಜನ ಕೇಳಿ ನಾಲ್ಕು ದಿನ ಇರಬೇಕೆಂದು ಬಂದ ಶಂಭು ಚೌಟರು ಎರಡೇ ದಿನಕ್ಕೆ ಹೊರಟು 'ವಕೀಲರಲ್ಲಿ ಕೆಲಸವಿದೆ, ಕಲೆಕ್ಟರ್ ಆಫೀಸಿಗೆ ಹೋಗಿ ಒಂದು ಸ್ಟೋರು ಸಿಕ್ಕುತ್ತದಾ ವಿಚಾರಿಸಬೇಕು' ಎಂದು ಅಡ್ಡಿ ಹೇಳಿ ಅವಸರವಸರವಾಗಿ ಹಿಂತಿರುಗುತ್ತಾರೆ. ಅವರು ಆಗಾಗ್ಗೆ ಪೇಟೆಗೆ ಬರುತ್ತಾರಾದರೂ ಸುಖ ಇಲ್ಲ, ಕುಳಿತು ಕೊಳ್ಳುವಷ್ಟು ಸಮಾಧಾನವಿಲ್ಲ.

ಶಂಭು ಚೌಟರ ಅದೃಷ್ಟ ಮಾತ್ರ ಚೆನ್ನಾಗಿತ್ತು. ಅವರು ಬೆನ್ನು ಬಿಡದೆ ಮಾಡಿದ ಸಾಧನೆಗೆ ಫಲ ಸಿಕ್ಕಿತು. ಕುಳವೂರಿನಲ್ಲಿ ಒಂದು ಪಡಿತರ ಚೀಟಿಯ ಅಂಗಡಿ ತೆರೆಯಲು ಸರ್ಕಾರ ಪರವಾನಗಿ ನೀಡಿತು. ರೇಷನ್ ಇಲಾಖೆಯ ಅನುಮತಿಯೂ ಸಿಕ್ಕಿದ ಮೇಲೆ ಶಂಭು ಚೌಟರು ಅಂಗಡಿಯ ಸಿದ್ಧತೆ ಮಾಡಿದರು. ಪದವಿನ ಇಸ್ಮಾಯಿಲ್ ಬ್ಯಾರಿ ಎಂಬವರು ಒಂದು ಅಂಗಡಿಯಲ್ಲಿ ಅಡಿಕೆ, ತೆಂಗು, ಒಳ್ಳೆಮೆಣಸು, ಅಂಟುವಾಳ ಕಾಯಿ, ಸೀಗೆ, ಕೊಬ್ಬರಿ–ಹೀಗೆ ವ್ಯಾಪಾರದ ವಸ್ತುಗಳನ್ನು ದಾಸ್ತಾನು ಮಾಡಿ ಅವುಗಳನ್ನು ಮಂಗಳೂರಿಗೆ ಸಾಗಿಸಿ ಅಲ್ಲಿಂದ ಒಣಗಿದ ಮೀನು ತಂದು ವ್ಯಾಪಾರ ಮಾಡುತ್ತಿದ್ದರು.

ಆತನ ಭಾವ ಸೌದಿಯಲ್ಲಿದ್ದವರು ಈಗ ಊರಿಗೆ ಬಂದಿದ್ದರು. ಆತ ಹೇಳಿದರು, 'ನಿನ್ನ ಮೂವರು ಹೆಂಡತಿಯರನ್ನೂ ಒಂಬತ್ತು ಜನ ಮಕ್ಕಳನ್ನೂ ಸಾಕಲು ಆ ಅಲ್ಲಾಹುವಿನ ದಯೆಯಿಂದಲೇ ಆಗಬೇಕು. ಅಲ್ಲದೆ ನಿನ್ನ ಈ ಜುಜುಬಿ ವರಮಾನ ಮತ್ತು ಒಣಮೀನಿನ ವ್ಯಾಪಾರದಿಂದ ಏನೂ ಆಗುವುದಿಲ್ಲ. ಅರೆ ಹೊಟ್ಟೆ ತುಂಬಿಸಲು ಕೂಡ ನಿನ್ನ ಹೆಂಡತಿಯರು ರಾತ್ರಿ ಹಗಲು ಬೀಡಿ ಕಟ್ಟುತ್ತಾರೆ, ಮಕ್ಕಳನ್ನು ಸಾಕುತ್ತಾರೆ. ಆದರೆ ಅವರೇನು ಯಾವುದೇ ಚಿಂತೆಯಿಲ್ಲದೆ ಸಂತೋಷವಾಗಿದ್ದಾರಾ? ಪ್ರತಿದಿನ ಅವರು ಅನುಭವಿಸುವ ಹೊಟ್ಟೆಯ ಸಂಕಟದಲ್ಲಿ ನಿನಗೆ ಶಾಪ ಹಾಕಿದರೆ ನೀನು ಉದ್ಧಾರವಾಗ್ತೀಯಾ?'

'ಆದ್ದರಿಂದ ನಾನು ನಿನ್ನನ್ನು ಸೌದಿಗೆ ಕಳುಹಿಸುತ್ತೇನೆ' ಎಂದರು ಆ ಭಾವ ಇಬ್ರಾಹಿಂ.

ದಿನದ ಕೂಳಿಗೆ ಇಷ್ಟೆಲ್ಲ ಕಷ್ಟಪಡುವುದು ಇಸ್ಮಾಯಿಲ್‌ಗೂ ಸಾಕಾಗಿತ್ತು. ಆತ ಕೂಡಲೇ ಒಪ್ಪಿದ. ಅದೇ ಸಮಯಕ್ಕೆ ಶಂಭು ಚೌಟರು ಕೂಡ ಅಂಗಡಿಯ ಹುಡುಕಾಟ ದಲ್ಲಿದ್ದರು. ಎರಡೂ ಒಂದಕ್ಕೊಂದು ಸರಿಯಾಯ್ತು. ಎರಡು ಕೋಣೆಯ ಅಂಗಡಿಯ ಹಿಂದೆ ಆತನ ಎರಡು ಕೋಣೆಗಳ ಮನೆ ಇತ್ತು. ಹೆಚ್ಚೆಂದರೆ ಮೂರು ಸೆಂಟ್ಸಿನ ಸ್ಥಳ. ಅದನ್ನು ಒಂದೂವರೆ ಸಾವಿರಕ್ಕೆ ಚರ್ಚೆ ಮಾಡಿ ಮಾಡಿ ಶಂಭು ಚೌಟರಿಗೆ ಮಾರಿದ. ಮಡದಿಯರನ್ನು ಅವರವರ ತವರಿಗೆ ಕಳುಹಿಸಿದ. ದುಬೈಗೆ ಹೋಗಿ ತಿಂಗಳು ತಿಂಗಳು ಹಣ ಕಳುಹಿಸುತ್ತೇನೆಂದು ಧೈರ್ಯ ಹೇಳಿದ. ಒಂದು ವರ್ಷ ಕಳೆದ ಬಳಿಕ ಎಲ್ಲರನ್ನೂ ಸೌದಿಗೆ ಕರೆಸಿಕೊಳ್ಳುವುದಾಗಿ ಮಾತು ಕೊಟ್ಟ. ಒಬ್ಬೊಬ್ಬರಿಗೂ ತಲಾ 500/ರೂ. ಕೈಗೆ ಕೊಟ್ಟ. ಎರಡು ಡ್ರಾವರುಗಳಿರುವ ಅವನ ಒಂದು ಬೀಟಿ ಮರದ ಮೇಜು, ಎರಡು ಮರದ ಕುರ್ಚಿಗಳು, ಎರಡು ಬೆಂಚುಗಳು, ಅನಂತರ ಸಾಮಾನು ತುಂಬಿಸುವ ಎಂಟು ಕಬ್ಬಿಣದ ಡ್ರಮ್ಮುಗಳು (ಚಿಮಿಣಿ ಎಣ್ಣೆ ಶೇಖರಿಸಿಡಲು ಶಂಭು ಚೌಟರಿಗೆ ಆ ಡ್ರಮ್ಮುಗಳು ಅಗತ್ಯವಾಗಿದ್ದುವು), ಒಂದು ತಕ್ಕಡಿ, ತೂಕದ ಕಲ್ಲು ಇದಕ್ಕೆಲ್ಲ ಸೇರಿ ಪುನಃ ಆರುನೂರು ರೂ.ಗಳನ್ನು ಚೌಟರು ಇಸ್ಮಾಯಿಲ್‌ಗೆ ಕೊಟ್ಟರು. ಸಾಬ ಅಲ್ಲಿಗೆ ಪದವಿನ ಋಣ ಹರಿದು ಬೊಂಬಾಯಿ ದಾರಿ ಹಿಡಿದ. ಅಲ್ಲಿ ದಾರುಖಾನೆ ಎಂಬ ಊರಿನಲ್ಲಿ ಆತನ ಪರಿಚಯದ ಪಣಂಬೂರಿನ ಸಸಿಹಿತ್ತಲಿನ ಮೂಸೆ ಬ್ಯಾರಿಯ ಅಳಿಯನ ಬಳಿಗೆ ಹೋದ. ಆತ ಹೆಂಚಿನ ಮಧ್ಯೆ ಹಾಕುವ ಹುಲ್ಲಿನ ಹೋಲ್‌ಸೇಲ್ ವ್ಯಾಪಾರ ಮಾಡುತ್ತಿದ್ದ. ಹಡಗಿನೊಳಗೆ ತುಂಬಿಸುವ ಹೆಂಚಿನ ಮಧ್ಯೆ ಹುಲ್ಲು ಹಾಕದಿದ್ದರೆ ನೀರಿನ ಮೇಲೆ ದೋಣಿ ಹೊರಳುವಾಗ ಹೆಂಚುಗಳು ಗಾಜು ಪುಡಿಯಾಗುವಂತೆ ಪುಡಿಯಾಗುತ್ತವೆ. ಬಹಳಷ್ಟು ಹೆಂಚುಗಳು ಅರಬ್ ದೇಶಕ್ಕೂ ಆಫ್ರಿಕಾ ದೇಶಕ್ಕೂ ರವಾನೆಯಾಗುತ್ತವೆ.

ಬೊಂಬಾಯಿಯ ದಾರುಖಾನೆಯ ಅಲೆಕ್ಸಾಂಡರ್ ಬಂದರಿನಲ್ಲಿ ಇಸ್ಮಾಯಿಲ್ ಹೆಂಚು ಸಾಗಿಸುವ ಒಂದು ದೋಣಿಯಲ್ಲಿ ಕುಳಿತು ವೀಸಾ ಇಲ್ಲದೆ ವಿಮಾನದ

ಖರ್ಚಿಗೂ ಕಡಿಮೆ ಖರ್ಚಿನಲ್ಲಿ ಊರು ಬಿಟ್ಟು ಗಲ್ಫ್ ದೇಶಕ್ಕೆ ಪ್ರಯಾಣ ಮಾಡಿದ. ಟಿಕೆಟ್ ಇಲ್ಲದ ಕಳ್ಳ ಸಾಗಾಣಿಕೆ ಅದು.

ಶಂಭು ಚೌಟರು ಒಣಮೀನಿನ ವಾಸನೆ ಹೋಗಲು ಇಡೀ ಅಂಗಡಿಗೆ ಲೋಷನ್ ಹಾಕಿ ತೊಳೆದರು. ಆಮೇಲೆ ಮಣ್ಣಿನ ಇಟ್ಟಿಗೆಯಲ್ಲಿ ಕಟ್ಟಿದ ಗೋಡೆಗೆ ಎರಡು ಸುತ್ತು ವೈಟ್ ವಾಷ್ ಬಳಿದರು. ಮಾಡಿಗೆ ಮೊದಲೇ ಹೆಂಚು ಹಾಕಿತ್ತು. ಮಾಡಿನ ಪಕ್ಕಾಸು ಮಾತ್ರ ಬಿದಿರಿನಿಂದ ನಿರ್ಮಿಸಿದ್ದು. ಅದನ್ನು ಬದಲಿಸಬೇಕು. ಆದರೆ ಈ ಬಿಸಿಯಲ್ಲಿ ಮಾಡುವುದು ಬೇಡ. ಅವಸರದಲ್ಲಿ ಎಲ್ಲವನ್ನೂ ಮಾಡಲು ಹೋಗಿ ಕೈ ಖಾಲಿಯಾದರೆ ಕಷ್ಟ. ನಿಧಾನಕ್ಕೆ ಮರದ ಪಕ್ಕಾಸು, ರೀಪು ಹಾಕಿ ಗಟ್ಟಿ ಮಾಡಿಸಿದರೆ ಆಯ್ತೆಂದು ಯೋಚಿಸಿದರು.

ಅಂಗಡಿಯಲ್ಲಿ ಕುಳಿತುಕೊಳ್ಳಲು ಒಬ್ಬರು ಜನ ಬೇಕು. ಮೈಂದಣ್ಣನಿಗೂ ಒಂದು ಕೆಲಸ ಬೇಕು. ಶಾಲೆಯ ಓದು ಅವನಿಗೆ ಹತ್ತುವುದಿಲ್ಲ. ಮಂಗಳೂರಿನಲ್ಲಿ ಏಕಿರಬೇಕು? ಅವನು ಮಂಗಳೂರಿಗೆ ಹೋಗಿ ಕ್ಷೀಣಿಸಿದ್ದಾನೆಂದು ಅಂತಕ್ಕನೂ ಬೇಸರ ಮಾಡುತ್ತಾರೆ. ಸೋಮಾವತಿಗೂ ಅವನು ಮಂಗಳೂರಲ್ಲೇ ಇರಬೇಕೆಂಬ ಹಟ ಇಲ್ಲ. ಶಂಭು ಚೌಟರಿಗೆ ಈ ಮೈಂದಣ್ಣನೇ ಸೋಮಾವತಿಗೆ ಬೇಡದಿರುವ ಸುದ್ದಿಯನ್ನೆಲ್ಲ ತಲಪಿಸುತ್ತಾನೆಂಬ ಅನುಮಾನವಿದೆ. 'ಸ್ಟೋರಿನಲ್ಲಿ ಕುಳಿತುಕೊಳ್ಳುತ್ತೀಯಾ?' ಅಂತ ಕೇಳಿದ್ದೇ ತಡ ಮೈಂದಣ್ಣ ಒಂದು ಕಾಲಲ್ಲಿ ನಿಂತು ಊರಿಗೆ ಹೋಗಲು ತಯಾರಾದ.

ನಿನ್ನ ಸಹಾಯಕ್ಕೆ ಒಬ್ಬ ಜನವನ್ನು ಗೊತ್ತುಮಾಡಿ ಕೊಡುತ್ತೇನೆಂದು ಶಂಭು ಚೌಟರು ಹೇಳಿದರು. ಅದರಂತೆ ಮಾಡಿಕೊಟ್ಟರು ಕೂಡ. ಜನವನ್ನು ನೋಡಿ ಮೈಂದಣ್ಣ ಪೆಚ್ಚಾದ. ಮಾವ ಯಾರಾದರೂ ಗಂಡಸರನ್ನು ಮಾಡಿಕೊಡುತ್ತಾರೆಂದು ಅವನು ಭಾವಿಸಿದ್ದ. ಈಗ ನೋಡಿದರೆ ಬಂದವರು ಹೆಂಗಸು. ಅದೂ ಯುವತಿ. ಅಲ್ಲದೆ ಆಕೆ ಮಾವನ ಹೊಸ ಸಂಬಂಧ. ಚಿಕ್ಕತ್ತೆಗೆ ಗೊತ್ತಾದರೆ ಕಿವಿ ಇಡಲು ಸಾಧ್ಯವಿಲ್ಲ ಖಂಡಿತ. ಮಾವನ ಬಗ್ಗೆ ಚಾಡಿ ಹೇಳಿದರೆ ಕತೆಯೇ ಬೇರೆಯಾದೀತು. ಇಷ್ಟು ದಿನ ಮೀನಿನ ಬಿಸಿ ಸಾರು ಮಾಡಿ ಹೊಟ್ಟೆ ತುಂಬ ಊಟ ಹಾಕ್ತಿದ್ದರು ಅತ್ತೆ. ಈಗ ಮಾವನ ಇಲ್ಲಿಯ ಸುದ್ದಿ ಹೇಳಿದರೆ ಮಾವನ ಕಣ್ಣು ಕೆಂಪಾಗಬಹುದು. ಹೇಳದೆ ಬಾಯಿ ಮುಚ್ಚಿದ್ದರೆ ಅತ್ತೆಯ ಬಾಯಿಗೆ ಬೀಳ್ತೇನೆ. ಅಯ್ಯೋ, ಪಂಜುರ್ಲಿಯೇ, ನನ್ನನ್ನು ಕಾಪಾಡಪ್ಪ ಎಂದು ಪ್ರಾರ್ಥಿಸಿದ ಮೈಂದಣ್ಣ. ಉಮಿಯ ಬೆಂಕಿಗೆ ಬಿದ್ದೆನೇ ಎಂದು ಅವನಿಗೆ ಅನ್ನಿಸಿತು.

ಸರಸುವಿನ ಮದುವೆ ಸುದ್ದಿ ಕೇಳಿ ಅಂತಕ್ಕನ ಕೋಪ ತಾರಕಕ್ಕೇರಿತ್ತು. ಮಗಳನ್ನು ಇಲ್ಲಿಯ ಒಕ್ಕಲು ತ್ಯಾಂಪಣ್ಣನ ತಮ್ಮನಿಗೆ ಕೊಡಲು ಅವರಿಗೆ ಸುತರಾಂ ಇಷ್ಟವಿಲ್ಲ. ಬೇಸಿಗೆಯ ಹತ್ತಾಗುವಾಗ ಪದ್ಮ ಊರಿಗೆ ಬಂದ. ಶಂಭು ಚೌಟರು ಅವಸರದಲ್ಲೇ ನಿಶ್ಚಯ ಮುಗಿಸಿದರು. ಮುಹೂರ್ತ ನೋಡಿದರು. ಬೇಸಗೆ ಇಪ್ಪತ್ತು ಕಳೆದಾಗ ಮಳೆಗಾಲದ ನೀರು ಬರುವ ಮೊದಲು ಸರಸುವನ್ನು ಪದ್ಮನಾಭ ಸಾಮನಿಗೆ ದೇವಣ್ಣ ಚೌಟರು ಧಾರೆ ಎರೆದುಕೊಟ್ಟರು. ಪದವು ಶಾಲೆಯ ಆವರಣದಲ್ಲಿ ಚಪ್ಪರ ಹಾಕಿ

ಮದುವೆಯ ಸಕಲ ಸನ್ನಾಹ ನಡೆಸಿದರು. ಒಂದು ತಿಂಗಳಲ್ಲಿ ಪದ್ಮ ಸರಸುವನ್ನು ಕರೆದುಕೊಂಡು ಬೊಂಬಾಯಿಗೆ ಹೋದ.

ಅವರು ಹೋದ ಮೇಲೆ ತ್ಯಾಂಪ ಸಾಮನಿಯವರು ಅನಂತರ ನಡೆದ ಸಂಗತಿಗಳನ್ನೆಲ್ಲ ಆಲೋಚನೆ ಮಾಡಿದರು. ಭೂತಸ್ಥಾನದ ಜೀರ್ಣೋದ್ಧಾರದ ಕೆಲಸ ಭರದಿಂದ ಸಾಗುತ್ತಿತ್ತು. ಶಂಭು ಚೌಟರು ಬಹಳ ಮುತುವರ್ಜಿಯಿಂದ ಕೆಲಸವನ್ನು ಮುಂದುವರಿಸುತ್ತಿದ್ದರು. ಪದ್ಮ ಖರ್ಚು ವಹಿಸಿದ್ದಾನಲ್ಲ! ಮತ್ತೆ ಅವನಿಗೆ ದೊಡ್ಡಸ್ತಿಕೆ ತೋರಿಸಲು ಏನಡ್ಡಿ? ತ್ಯಾಂಪಣ್ಣ ಸಾಮನಿಗಳ ಮನಸ್ಸಿನಲ್ಲಿ ತನ್ನ ತಮ್ಮ ಖರ್ಚು ಮಾಡಿ ಮಾಡಿಸುವ ಕೆಲಸವಾಗಿರುವಾಗ ತನಗೆ ಸಲ್ಲಬೇಕಾಗಿದ್ದ ಮರ್ಯಾದೆ ಕಡಿಮೆಯಾಯ್ತೆಂಬ ಕೊರತೆಯ ಭಾವ ಚುಚ್ಚುತ್ತಿತ್ತು.

* * * * *

ಹೋರಾಟದ ಬೆಂಕಿಯಲ್ಲಿ ಊರು. ಬರ್ಮಾದ ಸಮೀಪ ಬಂದ ಜಪಾನೀಯರ ಸೈನ್ಯವನ್ನು ಬ್ರಿಟಿಷರು ಸೋಲಿಸಿದ್ದರು. ನಮ್ಮವರೇ ಆಗಿದ್ದ ಬ್ರಿಟಿಷರ ವಿರುದ್ಧ ನಿಂತಿದ್ದ ಸುಭಾಷ್‌ಚಂದ್ರ ಬೋಸರ ಐ.ಎನ್.ಎ. ಸೈನ್ಯ ಕೂಡ ಸೋತುಹೋಯ್ತೆಂಬ ವಾರ್ತೆ ಹಬ್ಬಿತ್ತು. ಅಲ್ಲದೆ ಹಿರೋಶಿಮಾ ಮತ್ತು ನಾಗಸಾಕಿ ಎಂಬ ಊರಿನ ಜಪಾನೀಯರ ಮೇಲೆ ಅಮೇರಿಕಾ ಆಟಂಬಾಂಬ್ ಅನ್ನುವ ಬಹಳ ದೊಡ್ಡ ಬಾಂಬನ್ನು ಹಾಕಿ ಊರಿನ ಜನರೆಲ್ಲ ಸತ್ತರಂತೆ. ಅಮೇರಿಕಾದ ಹಡಗುಗಳಿರುವ ಪರ್ಲ್ ಹಾರ್ಬರಿಗೆ ಜಪಾನೀಯರೂ ಬಾಂಬ್ ಹಾಕಿದ್ದರಂತೆ.ಅದಕ್ಕಾಗಿಯೇ ಅಮೇರಿಕಾ ಬಹಳ ಕೋಪ ಬಂದು ಜಪಾನೀಯರ ಮೇಲೆ ಬಾಂಬ್ ಹಾಕಿದ್ದಂತೆ. ಜಪಾನೀಯರು ನಮ್ಮ ಊರಿಗೆ ಬಂದು ತೊಂದರೆ ಮಾಡದ ಹಾಗೆ ನಮ್ಮ ದೈವಗಳೇ ಆ ಅಮೇರಿಕದ ಬಿಳಿ ಜನರಿಗೆ ಬಾಂಬ್ ಹಾಕಲು ಮನಸ್ಸು ಕೊಡಲಿ ಎಂದು ಶಂಭು ಚೌಟರು ಭೂತಸ್ಥಾನದ ಎದುರು ಸೇರಿದ ನಾಲ್ಕು ನಗರದ ಜನರಿಗೆ ಹೇಳಿದ್ದರು. ಜನ ಅಚ್ಚರಿಯಿಂದ ಶಂಭು ಚೌಟರ ಬುದ್ಧಿವಂತಿಕೆಯ ಮಾತಿಗೆ ಕಿವಿಗೊಟ್ಟು ನಂಬಿದರೋ ಬಿಟ್ಟರೋ?

ಇನ್ನೊಂದು ಸುದ್ದಿ ಸ್ವಲ್ಪ ಗುಟ್ಟಿನಲ್ಲಿದೆ. ಸ್ವಾತಂತ್ರ್ಯ ಸಿಗಬೇಕೆಂದು ನಮ್ಮ ಜನರು, ಗಾಂಧಿ, ನೆಹರು, ರಾಜಾಜಿ ಇವರೆಲ್ಲ ಉಪವಾಸ ಕುಳಿತಿದ್ದಾರಂತೆ. ಇಂಗ್ಲಿಷಿನವರೊಂದಿಗೆ ಮೆರವಣಿಗೆ ಹೋಗಿ ಸಲ ಸಲವೂ ಮೀಟಿಂಗ್‌ನಲ್ಲಿ ಮೈದಾನದಲ್ಲಿ ಭಾಷಣ ಮಾಡಿದಾಗ ಇಂಗ್ಲಿಷ್‌ನವರ ಮಿಲಿಟ್ರಿ ಮತ್ತು ಪೋಲೀಸಿನವರು ಅವರನ್ನು ಜೈಲಿನಲ್ಲಿ ಹಾಕುತ್ತಿದ್ದರಂತೆ. ಈಗ ಅದೆಲ್ಲ ನಿಂತಿದೆಯಂತೆ. ಇನ್ನು ನಾವೆಲ್ಲರೂ ಸ್ವತಂತ್ರರಾಗುತ್ತೇವೆ.

'ಅದರಿಂದ ನಮಗೆ ಏನು ಸಿಗುತ್ತದಂತೆ?' ಉಗ್ರಾಣಿ ಐತಪ್ಪ ಕೇಳಿದ.

'ಅನಂತರ ನಮ್ಮ ರೇಷನ್ ಎಲ್ಲ ಹೋಗುತ್ತದೆ. ಪೋಲೀಸರ ಅಧಿಕಾರ ಕಡಿಮೆಯಾಗ್ತದೆ. ರಾಜ್ಯ ನಮ್ಮದಾದರೆ ನಾವು ಯಾರಿಗೂ ಹೆದರಿ ನಡೆಯಬೇಕಾಗಿಲ್ಲ' ಚೌಟರು ಹೇಳಿದರು.

‘ತೀರ್ವೆ ಕಟ್ಟುವುದೂ ಬೇಡವೇ?’ ಮಲರಾಯನ ಪೂಜಾರಿ ರಾಮಣ್ಣ ಕೇಳಿದ.

‘ಅದೆಲ್ಲ ಹೇಳುವುದಕ್ಕಾಗುವುದಿಲ್ಲ. ಒಟ್ಟಾರೆ ನಮ್ಮ ಮಕ್ಕಳು ಮರಿಗಳಿಗೆ ಭವಿಷ್ಯದಲ್ಲಿ ಉತ್ತರೋತ್ತರ ಒಳ್ಳೆಯದಾಗುತ್ತದೆ’ ಎನ್ನುತ್ತ ಪಂಚಲಿಂಗೇಶ್ವರ ದೇವಸ್ಥಾನದ ಭಟ್ಟರು ಪರಮೇಶ್ವರ ಕೇಕುಣ್ಣಾಯರು ಚರ್ಚೆಗೆ ಮುಕ್ತಾಯ ಹಾಡಿದರು.

ಅವರು ಜೀರ್ಣೋದ್ಧಾರದ ಆರಂಭದಲ್ಲಿ ಆಗಬೇಕಾಗಿದ್ದ ಬ್ರಹ್ಮಕಲಶ, ಅಷ್ಟೋತ್ತರ, ಅನಂತರದ ಎಲ್ಲ ಬಗೆಯ ಶುದ್ಧಾಚಾರ, ನಾಗಬನದ ಶುದ್ಧಸೇಚನ ಇತ್ಯಾದಿಗಳಿಗೆಲ್ಲ ಮುಹೂರ್ತ ನೋಡುವುದು ಮುಂತಾದುವನ್ನೆಲ್ಲ ಮುಗಿಸಿ ಬಂದವರು. ಅವರಿಗೆ ಯುದ್ಧದ ವ್ಯವಹಾರ ಗೊತ್ತಿಲ್ಲದಿದ್ದರೂ ಆ ಊರಿನ ಅವಿದ್ಯಾವಂತರಿಗಿಂತ ಲೋಕಜ್ಞಾನವಿತ್ತು. ಕೆಲವೇ ಮಾತುಗಳಲ್ಲಿ ಅರ್ಥವಾಗುವ ಸಂಗತಿ ಇದಲ್ಲವೆಂದು ಅವರಿಗೆ ಗೊತ್ತು. ಆದ್ದರಿಂದಲೇ ಈ ಬೇಡದ ವ್ಯರ್ಥ ಚರ್ಚೆಯನ್ನು ನಿಲ್ಲಿಸಲು ಅವರು ಮಾತು ಮುಗಿಸಿದಂತೆ ಉತ್ತರಿಸಿದರು.

ತ್ಯಾಂಪಣ್ಣ ಸಾಮನಿಯವರಿಗೆ ಈಗ ವಿಚಾರ ಸ್ವಲ್ಪ ಅರ್ಥವಾಯ್ತು. ಲೋಕರೂಢಿ ಹೀಗೆ ತಿರುಗಾಮುರಗಾ ಆಗುವಾಗ ಚೌಟರನ್ನು ಸುಲಭದಲ್ಲಿ ಬಿಡಬಾರದೆಂದು ಅವರು ಯೋಚಿಸಿದರು. ಪದ್ಮನಿಗೆ ಹೆಣ್ಣು ಕೊಡುವ ವಿಷಯ ಮಾತನಾಡುವಾಗ ವರದಕ್ಷಿಣೆಯನ್ನೂ ಕೊಡುವ ಬಗ್ಗೆ ಸೂಚಿಸಿದ್ದರು. ಅಂತಕ್ಕನ ಪಿರಿಪಿರಿ ತುಸು ಶಾಂತವಾದ ಬಳಿಕ ಅವರು ಮದುವೆಯ ವಿಲೇವಾರಿಗೆ ಹೊರಟರು. ಅಂತಕ್ಕ ಹುಡುಗಿಗೆ ಬಂಗಾರ ಹಾಕಬೇಕು, ವರದಕ್ಷಿಣೆ ಕೊಡಬೇಕು ಎಂದು ಹೇಳಿದಾಗ ‘ವರದಕ್ಷಿಣೆ ಕೊಡೋಣ, ಖಾಲಿ ಕೈಯಲ್ಲಿ ಮದುವೆ ಮಾಡಿ ಕೊಡುವಷ್ಟು ಸಾಧಾರಣ ಜನ ನಾವಲ್ಲ’ ಎಂದು ಶಂಭು ಚೌಟರು ಡಂಬಾಚಾರದ ಮಾತು ಆಡಿದ್ದರು. ಮದುಮಗಳಿಗೆ ಹೊಸ ಬಂಗಾರ ಕೊಳ್ಳಬೇಕೆಂದರೆ ಅದರ ದರಕ್ಕೆ ಕೈ ಹಾಕುವಂತಿಲ್ಲ. ಪವನಿನ ಬೆಲೆ ಬೆಂಕಿಯಂತೆ ಏರಿದೆ. ಒಳಗೆ ನಿನ್ನ ಮದುವೆಗೆ ಹಾಕಿದ ಹತ್ತು ಪವನಿನ ಅವಲಕ್ಕಿ ಸರ, ನಾಲ್ಕು ಗಟ್ಟಿಯಾದ ಬೊಂಬಾಯಿ ಬಳೆಗಳು, ಕೊಪ್ಪು, ಬುಗುಡಿ ಇವೆಯಲ್ಲ. ಅವಲಕ್ಕಿ ಸರ ಈಗ ಹಳೆಯ ನಮೂನೆ. ಅದನ್ನು ಕರಗಿಸಿ ಒಂದು ಪಿಟೀಲು ಸರ, ಎರಡು ಎಳೆಯ ನಾಲ್ಕು ಪವನಿನ ಚಕ್ರಸರ ಮಾಡಿಸುವ. ನಿನ್ನ ಕರಿಮಣಿ ಸರ ಕರಗಿಸಿ ನಾಲ್ಕು ಬಳೆ ಮಾಡಿಸುವ. ಅದರಲ್ಲಿ ಎರಡು ಪವನಿನ ಕರಿಮಣಿಯನ್ನೂ ಕಾಲು ಪವನಿನ ಕಾಲುಂಗುರವನ್ನೂ ಮಾಡಿಸಲು ಹೇಳುವ’ ಅಂದರು ಶಂಭು ಚೌಟರು. ಅಂತಕ್ಕನಿಗೆ ಕೋಪದಿಂದ ದುಃಖವೇ ಬಂತು. ‘ನನ್ನ ಬಂಗಾರದ ಮೇಲೇಕೆ ನಿನ್ನ ಕಣ್ಣು? ನಿನ್ನ ಕಣ್ಣಿಗೆ ಕಾಸರಕನ ಮುಳ್ಳು ಚುಚ್ಚಲಿ. ಹಾಗಿದ್ದರೆ ಒಂದು ಗುರುಗುಂಜಿ ತೂಕದ ಬಂಗಾರವನ್ನೂ ಈ ಮನೆಯಿಂದ ನನ್ನ ಮಗಳಿಗೆ ಹಾಕುವುದಕ್ಕಿಲ್ವಾ? ವರದಕ್ಷಿಣೆ ಹೇಗೂ ಇಲ್ಲ. ಇಲ್ಲಿನ ಒಕ್ಕಲಿನವನಿಗೇ ಕೊಟ್ಟು ವರದಕ್ಷಿಣೆ ಇಲ್ಲದಂತೆ ಮಾಡಿ ನಿನ್ನ ಎದೆ ತಂಪು ಮಾಡ್ಕೊಂಡೆ’ ಕೋಪದಿಂದ ಮುಖ ಊದಿಸಿದರು ಅಂತಕ್ಕ. ಅದನ್ನು ಕೇಳಿ ಶಂಭು ಚೌಟರಿಗೆ ಕೋಪ ಕೆರಳಿತು.

‘ಯಾರು ಹೇಳಿದ್ದು ವರದಕ್ಷಿಣೆ ಇಲ್ಲವೆಂದು? ಮದುವೆ ಮಾತು ಶುರು

ಮಾಡುವಾಗಲೇ ತ್ಯಾಂಪಣ್ಣ ಸಾಮಾನಿಗೂ ದೆಯ್ಯಕ್ಕನಿಗೂ ಪದವಿನ 15 ಸೆಂಟ್ಸ್ ಜಾಗ ವರದಕ್ಷಿಣೆ ಲೆಕ್ಕದಲ್ಲಿ ಬರೆದು ಕೊಡುತ್ತೇವೆಂದು ನಾನು ಅಣ್ಣ ಹೇಳಿದ್ದೇವೆ' ಶಂಭು ಚೌಟರು ಒಂದು ಹಸಿಹಸಿ ಸುಳ್ಳು ಹೇಳಿದರು.

ಅದನ್ನು ಅನಂತರ ಅಂತಕ್ಕ ಮರೆಯುವುದುಂಟೇ! ಪದ್ಮ ಸ್ಥಾನದ ಕಲಶಕ್ಕೆ ಬರುತ್ತಾನೆ. ಅಲ್ಲದೆ ಈಗ ಸರಸು ಆರು ತಿಂಗಳ ಬಸುರಿ. ಏಳನೆಯ ತಿಂಗಳಿನ ಸೀಮಂತ ಕಳೆದು ಅವಳನ್ನು ಊರಲ್ಲಿ ಬಿಟ್ಟು ಹೋಗುತ್ತಾನಂತೆ. ಹಾಗಂತ ಭವಾನಿ ಹಿಂದಿನ ದಿನ ಭಾವನ ಪತ್ರ ಓದಿ ಹೇಳಿದ್ದಳು. ಅಂತಕ್ಕ ಈ ಸಲ ಅದನ್ನು ಖಚಿತ ಮಾಡಿದರು. ಪದ್ಮ ವಾಪಸ್ಸು ಬೊಂಬಾಯಿಗೆ ಹೋಗುವ ಮುನ್ನ ಪದವು ಜಾಗವನ್ನು ಅವನ ಹೆಸರಿಗೆ ರಿಜಿಸ್ಟ್ರಿ ಮಾಡಿಸಬೇಕು. ಮಸೀದಿ ಕಟ್ಟಲು ಬ್ಯಾರಿಗಳು ಕೇಳುತ್ತಾರೆ, ಶಾಲೆ ಕಟ್ಟಲು ಬ್ರಾಹ್ಮಣರು ಕೇಳುತ್ತಾರೆಂದು ಶಂಭು ಚೌಟ ಅಡ್ಡಿ ಮಾಡ್ತಿದ್ದಾನೆ.

ದೇವಸ್ಥಾನದಲ್ಲಿ ಹೋಮಕ್ಕೆ, ಅಷ್ಟ ದಿಕ್ಕಿನ ಶುದ್ಧಿ ಪೂಜೆಗೆ, ಗಣಹೋಮಕ್ಕೆ, ಆಮೇಲೆ ದೈವಗಳ ಕೋಲಕ್ಕೆ ಎನ್ನುತ್ತ ಒಂದೊಂದು ಕಾರಣ ಹೇಳಿ ಅಡಿಕೆ ಮಾರಿದ ದುಡ್ಡೆಲ್ಲ ಖರ್ಚಾಯ್ತು, ಮುಗಿಯಿತು ಅನ್ನುತ್ತಾನೆ. ಹಣ ತೆಗೆದುಕೊಂಡು ಹೋಗಿ ಮಂಗಳೂರಿನ ಅವನ ಹೆಂಡತಿಗೂ ನೀಲಯ್ಯ ಆಚಾರಿಯ ಮಗಳು ರಂಭೆ ಅರ್ಕಾವತಿಗೂ ಖರ್ಚು ಮಾಡುತ್ತಾನೆ. ಈ ಸಲ ಕೆಲಸ ಆಗಲೇ ಬೇಕು. ಅಂತಕ್ಕ ನಿರ್ಧಾರ ಮಾಡಿದರು.

ಸರಸುವಿನ ಮದುವೆ ಸಮಯದಲ್ಲಿ ಶಂಭು ಚೌಟರು ನೀಲಯ್ಯ ಆಚಾರಿಯನ್ನು ಹುಡುಕಿಕೊಂಡು ಹೊಯಿಗೆತೋಟಕ್ಕೆ ಹೋಗಿದ್ದರು. ಮದುಮಗಳಿಗೆ ಕಾಲುಂಗುರ, ಸೊಂಟಕ್ಕೆ ಬೆಳ್ಳಿಯ ದಾರ ಮಾಡಿಸಲು ಅವರು ಹೋದದ್ದು. ನೀಲಯ್ಯ ಆಚಾರಿ ಬೆಳಗ್ಗೆ ಬೆಳಗ್ಗೆಯೇ ಬಜ್ಪೆಯ ಸಂತೆಗೆ ಕತ್ತಿಯನ್ನು ಮಾರಾಟ ಮಾಡಲು ಹೋದುದಾಗಿ ಅವನ ಮಗಳು ಅರ್ಕಾವತಿ ಹೇಳಿದಳು.

'ಈಗ ಅವರು ವಾಪಸ್ಸು ಬರುವ ಸಮಯವಾಯ್ತು' ಅಂದಳು.

'ಹಾಗಿದ್ದರೆ ನಾನು ಆಮೇಲೆ ಸಂಜೆ ಬರ್ತೇನೆ' ಅವಳನ್ನು ಅಡಿಯಿಂದ ಮುಡಿಯವರೆಗೆ ದಿಟ್ಟಿಸುತ್ತ ಶಂಭು ಚೌಟರು ಹೇಳಿದರು.

'ನೀವು ಸ್ವಲ್ಪ ಬಾಯಾರಿಕೆ ತೆಗೆದುಕೊಂಡು ಹೋಗಿ. ಅಷ್ಟು ಹೊತ್ತಿಗೆ ಅಪ್ಪ ಬರುತ್ತಾರೆ' ಎನ್ನುತ್ತ 'ಕಾಫಿ ತಯಾರಾಗಿದೆ. ತೆಗೆದುಕೊಂಡು ಬರ್ತೇನೆ' ಎಂದಳು ಅರ್ಕಾವತಿ.

ಅವಳು ಅಷ್ಟು ಒತ್ತಾಯ ಮಾಡುವಾಗ ಬೇಡವೆನ್ನುವುದು ಹೇಗೆ? ಶಂಭು ಚೌಟರು ಚಾವಡಿಯಲ್ಲಿದ್ದ ಹಳೆಯ ಕುರ್ಚಿಯಲ್ಲಿ ಕುಂಡೆ ಊರಿದರು.

ಬಿಸಿ ಬಿಸಿಯಾದ ಮನೆಯ ಹಸುವಿನ ಹಾಲಿನಿಂದ ಮಾಡಿದ ಕಾಫಿಯನ್ನು ಅರ್ಕಾವತಿ ತಂದುಕೊಟ್ಟಳು.

'ಇದು ಮೈಸೂರು ಕಾಫಿಯಾ? ನಮ್ಮ ಊರಲ್ಲಿ ಇಂಥ ಕಾಫಿ ಸಿಗುವುದಿಲ್ಲ'

ಎಂದರು ಚೌಟರು. ಕಾಫಿಯನ್ನೂ ಹೆಣ್ಣನ್ನೂ ನೋಡುತ್ತ ಕಣ್ಣಲ್ಲೇ ಮೆಚ್ಚುಗೆ ಸೂಸಿದರು.

ಚೌಟರ ಮಾತಿನ ಅರ್ಥ, ಕಣ್ಣಿನ ಕರೆ ಅರ್ಥವಾಗದ ಹೆಣ್ಣಲ್ಲ ಅರ್ಕಾವತಿ. ಅವಳ ಮುಗುಳು ನಗುವಿನಿಂದಲೇ ತನ್ನ ಮಾತನ್ನು ಅವಳು ಅಂಗೀಕರಿಸಿದಳೆಂದು ಚೌಟರಿಗೆ ಅರ್ಥವಾಯ್ತು. ಇನ್ನೊಮ್ಮೆ ನೋಡಿದರಾಯ್ತೆಂದು ಯೋಚಿಸಿದರು.

'ಸಂಜೆ ಮತ್ತೆ ಬರ್ತೇನೆ, ನೀಲಯ್ಯ ಆಚಾರಿಯ ಹತ್ತಿರ ಮಾತನಾಡಬೇಕು' ಎನ್ನುತ್ತ ಅವಳ ಮುಖ ನೋಡಿ ನಗುತ್ತ ಹೇಳಿ ಬಂದರು. ಕಾಲುಂಗುರ, ಉಡಿದಾರವೆಂದು ಚೌಟರು ಹೊಯಿಗೆ ತೋಟಕ್ಕೆ ಪದೇ ಪದೇ ಹೋದರು. ಚೌಟರ ಉರುಳಿಗೆ ಮಿಕ ಸಿಕ್ಕಿಬಿತ್ತು. ಮೈಂದಣ್ಣನ ರೇಷನ್ ಸ್ಟೋರಿಗೆ ಅಸಿಸ್ಟೆಂಟ್ ಆಗಿ ಅರ್ಕಾವತಿಯೇ ಬಂದಳು.

ನೀಲಯ್ಯ ಆಚಾರಿಗೆ ಅಕ್ಕಮ್ಮನೂ ಅವಳ ತಮ್ಮ ಜನಾರ್ದನನೂ ಇಬ್ಬರು ಮಕ್ಕಳು. ಅಕ್ಕಮ್ಮನನ್ನು ಮಣೇಲದ ರಂಗಪ್ಪಾಚಾರಿಯ ಮಗ ರಾಮಚಂದ್ರನಿಗೆ ಹದಿನೆಂಟು ವರ್ಷಕ್ಕೇ ಮದುವೆ ಮಾಡಿ ಕೊಟ್ಟಿದ್ದರು. ರಂಗಪ್ಪಾಚಾರಿ ಬೆಳ್ಳಿಯ ಕೆಲಸದಲ್ಲಿ ಪರಿಣಿತ. ಹಾಗಾಗಿ ಆನೆಯ ಮೇಲೆ ಹಾಕುವ ಕಿನ್ಕಾಪಿನ ಬಟ್ಟೆಗೆ ಬೆಳ್ಳಿಯ ಅಲಂಕಾರದ ಕೆಲಸಕ್ಕಾಗಿ ಅವನ ಗೆಳೆಯರು ಅವನನ್ನು ಮೈಸೂರಿಗೆ ಕರೆದುಕೊಂಡು ಹೋಗಿದ್ದರು. ಆಚಾರಿಯ ಮಗ ರಾಮಚಂದ್ರ ಮೈಸೂರಿಗೆ ಹೋದಮೇಲೆ ಯುದ್ಧ ಶುರುವಾಗಲು ಸೈನ್ಯಕ್ಕೆ ಸೇರಿದ.

ಮೈಸೂರಿಗೆ ಹೋದ ಮೇಲೆ ಅಕ್ಕಮ್ಮನನ್ನು ಅರ್ಕಾವತಿಯೆಂದು ಎಲ್ಲರೂ ಕರೆಯುತ್ತಿದ್ದರು. ಬೆಳ್ಳಿಯ ಲೇಪ ಕೊಡುವುದರಲ್ಲಿ ಅವಳು ನಿಪುಣೆಯಾದಳು. ರಾಮಚಂದ್ರ ಬರ್ಮಾದ ಯುದ್ಧಕ್ಕೆ ಹೋದ ಸ್ವಲ್ಪ ಸಮಯಕ್ಕೆ ಅಲ್ಲಿಂದ ಆತ ಬದುಕಿದ್ದಾನೋ ಸತ್ತಿದ್ದಾನೋ ತಿಳಿಯದೆಂಬ ವಾರ್ತೆ ಬಂತು.

ಸ್ವಲ್ಪ ಸಮಯದಲ್ಲೇ ವಾಂತಿಭೇದಿ ಬಂದು ರಂಗಪ್ಪಾಚಾರಿ ತೀರಿಹೋದ. ಅರ್ಕಾವತಿ ಯುವತಿ. ಮೈಸೂರಿನಲ್ಲಿ ಒಬ್ಬಳೇ ಇರುವುದಕ್ಕೆ ಸಾಧ್ಯವಾಗದೆಂದು ಅವಳು ಕುಳವೂರಿನ ತವರುಮನೆಗೇ ವಾಪಸ್ಸಾದಳು. ಬೆಳ್ಳಿಯ ಕೆಲಸದಲ್ಲಿ ನೀಲಯ್ಯ ಆಚಾರಿಗೆ ಅವಳು ಬಲಗೈಯಾದಳು. ಅವಳು ಬೆಳ್ಳಿಯ ಒಡವೆಗಳಿಗೆ ಬಂಗಾರದ ಒಪ್ಪ ಹಾಕಲೂ ಪರಿಣತಿ ಹೊಂದಿದ ಮಗಳಾದಳು.

ಈ ಕಡೆ ಶಂಭು ಚೌಟರಿಗೂ ಅರ್ಕಾವತಿ ನೆರವಾದಳು. ಅವರು 'ರೇಷನ್ ಅಂಗಡಿಯಲ್ಲಿ ಮೈಂದಣ್ಣ ಒಬ್ಬನೇ ಕುಳಿತರೆ ಕೆಲಸ ಸಮರ್ಪಕವಾಗಿ ನಡೆಯದು. ಅದರ ಲೆಕ್ಕಪತ್ರಗಳನ್ನು ನೋಡಲೂ ಇಟ್ಟುಕೊಳ್ಳಲೂ ಅವನಷ್ಟು ಸಮರ್ಥನಲ್ಲ. ಹಾಗಾಗಿ ನಾಲ್ಕಾರು ಊರಿಗೆ ಹೋಗಿ ಚಾಲಾಕು, ಚುರುಕು ಗಳಿಸಿದ ಅರ್ಕಾವತಿ ರೇಷನ್ ಅಂಗಡಿಗೆ ಸರಿಯಾದ ಜನ' ಎಂದು ತೀರ್ಮಾನಿಸಿದರು. ಅರ್ಕಾವತಿ ಅಲಂಕಾರ ಮಾಡಿಕೊಂಡು ಬೆಟ್ಟವೇರಿ ಬೆಳಗ್ಗೆಯೇ ಅಂಗಡಿಗೆ ಬಂದರೆ ಸಂಜೆ ಆರು ಗಂಟೆಗೆ ಬೆಟ್ಟವಿಳಿದು ಹೊಯಿಗೆ ತೋಟಕ್ಕೆ ಹಿಂತಿರುಗುತ್ತಾಳೆ.

ಮೈಂದಣ್ಣನಿಗೆ ಮೊದಮೊದಲು ಅರ್ಕಾವತಿ ಬರುವುದು ಒಂದು ರೀತಿಯ

ಉಪದ್ರವವೆಂದೇ ಅನಿಸಿತ್ತು. ಅರ್ಕಾವತಿ ಮಾತಿನ ಮಲ್ಲಿ, ತಮಾಷೆಯಾಗಿ ಮಾತನಾಡುವುದರಲ್ಲಿ ಚಾಲಾಕಿನ ಹೆಂಗಸು. ಹಾಗಾಗಿ ಜನವಿಲ್ಲದೆ ಅವರಿಬ್ಬರೇ ಇರುವಾಗ ಮೈಸೂರಿನ ವಿಚಾರವನ್ನೆಲ್ಲ ಅವಳು ಮೈಂದಣ್ಣನಿಗೆ ಹೇಳುತ್ತಿದ್ದಳು. ಮೈಂದಣ್ಣನ ಕಿವಿಯೂ ನಿಮಿರುತ್ತಿತ್ತು. ಅರ್ಕಾವತಿಗೂ ಮೈಂದಣ್ಣನಿಗೂ ಒಂದೇ ವಯಸ್ಸು. ಅವನನ್ನು ನಗಿಸುತ್ತ ಕಾಲ ಕಳೆಯುತ್ತಿದ್ದಳು. ಮೈಂದಣ್ಣ ಪದವು ಅಂಗಡಿಯಲ್ಲಿ ಖುಷಿಯಾಗಿ ಇರುವುದನ್ನು ಬಹಳ ಸುಲಭವಾಗಿಯೇ ಕಲಿತ.

* * * * *

ಅಂತಕ್ಕ ಸುಮ್ಮನೆ ಕುಳಿತುಕೊಳ್ಳಲಿಲ್ಲ. ತ್ಯಾಂಪಣ್ಣ ಸಾಮನಿಯನ್ನು ಕರೆದು ಮಾತನಾಡಿದರು. 'ಬ್ರಹ್ಮಕಲಶ ಆಗುವಾಗ ಪದ್ಮ ಬರುತ್ತಾನಾ?' ಎಂದು ವಿಚಾರಿಸಿದರು. ನೀಲಪ್ಪಾಚಾರಿಯಿಂದ ಜಾರಂದಾಯ ಭೂತಕ್ಕೆ ಅಣಿಯನ್ನು ಮಾಡಿಸುವ ಕೆಲಸ ಎಲ್ಲಿಗೆ ಮುಟ್ಟಿತೆಂದು ಕೇಳಿದರು. ಅದಕ್ಕೂ ಪಂಜುರ್ಲಿಯ ಖಡ್ಗಕ್ಕೂ ಬೆಳ್ಳಿ ಚಾಮರಕ್ಕೂ ಸಾಧಾರಣ ಎಷ್ಟು ಹಣ ಆದೀತೆಂದು ಕೇಳಿದರು. ತ್ಯಾಂಪಣ್ಣನಿಗೆ ಆ ವಿಚಾರ ಏನೂ ಗೊತ್ತಿಲ್ಲ. ಅದೆಲ್ಲ ಗುತ್ತಿನವರ ಮತ್ತು ಬಿಡಾರದವರಿಗೆ ಸೇರಿದ್ದು, ಶಂಭು ಚೌಟರನ್ನು ಕೇಳಿದರೆ ತಿಳಿದೀತೆಂದು ಸಾಮನಿ ಉತ್ತರಿಸಿದರು.

ಮದುವೆ ಸಮಯದಲ್ಲಿ ವರದಕ್ಷಿಣೆಯ ಹೆಸರಲ್ಲಿ ಕೊಡುತ್ತೇನೆಂದ ಮಾತು ಬಾಕಿ ಇದೆ.

ಪದ್ಮ ಸಾಮನಿಗೆ 15 ಸೆಂಟ್ಸ್ ಅಳೆದು ಬರೆದುಕೊಡುತ್ತೇನೆಂದಿದ್ದರು ಶಂಭು ಚೌಟರು. ಅದು ಪಟೇಲರೂ ಉಗ್ರಾಣಿಯೂ ಸೇರಿ ದಾರ ಹಿಡಿದು ಅಳೆಯಬೇಕು. ಫಸಲನ್ನು ಸರ್ಕಾರ ಸ್ವಾಧೀನಪಡಿಸುತ್ತದಂತೆ. ಹಾಗಾಗಿ ಈಗ ಪಟೇಲರಿಗೂ ಉಗ್ರಾಣಿಗೂ ಸಮಯವಿಲ್ಲ. ಅವರಿಗೆ ಸ್ವಲ್ಪ ಬಿಡುವಾದ ಕೂಡಲೇ ಕೆಲಸ ಮಾಡಿಸುತ್ತೇನೆಂದು ಚಿಕ್ಕ ಚೌಟರು ಹೇಳಿದ್ದಾರೆಂದು ಸಾಮನಿ ಅಂತಕ್ಕನಿಗೆ ಹೇಳಿದರು.

'ಅವನ ಕಾರುಬಾರು ಈಗ ದಿನದಿಂದ ದಿನಕ್ಕೆ ಏರುತ್ತಲೇ ಹೋಗ್ತದೆ. ಕುಂದಾಪುರ ದಿಂದ ಒಬ್ಬ ಹಿಡಿಂಬನನ್ನು ಕರೆದುಕೊಂಡು ಬಂದಿದ್ದಾನೆ ಈಗ. ನೋಡಲು ಸುಂದರಾಂಗ. ಹೆಸರು ಗಣಪ ಖಾರ್ವಿ. ಕೂತರೆ ಮೂರು ಸೇರು ಅಕ್ಕಿಯ ಅನ್ನವನ್ನೆಲ್ಲ ಕಬಳಿಸುತ್ತಾನೆ. ಮೊಗಸಾಲೆಯ ಚಾವಡಿಯ ಹಿಂದಿರುವ ಜಗಲಿಯಲ್ಲಿ ಅವನಿಗೂ ಇನ್ನೊಬ್ಬನಿಗೂ ಠಿಕಾಣಿ. ಇನ್ನೊಬ್ಬ ತಾಳೆಬುಡದಂತೆ ಇದ್ದಾನೆ. ಊಟವೆಂದರೆ ಅಗೋಳಿ ಮಂಜಣ್ಣನೇ. ಎಷ್ಟು ಪಲ್ಯ ಹಾಕಿದರೂ ನುಂಗುತ್ತಾನೆ. ಅವನ ಹೆಸರು ತಮ್ಮು ಮರಕಲ. ಪಣಂಬೂರಿನ ಹತ್ತಿರದವ. ಸುಮ್ಮನೆ ಆಟಕ್ಕುಂಟು ಲೆಕ್ಕಕ್ಕಿಲ್ಲ. ಮಲಗಿದರೆ ಅವನ ಗೊರಕೆ ಬಾಕಿಮಾರಿನ ಕೊನೆಯ ಅಂಗರ ಗುರಿಕಾರನ ಮನೆಯವರೆಗೂ ಕೇಳಿಸುತ್ತದೆ.'

'ಅವರನ್ನು ಹಿಂದೆ ಮುಂದೆ ಇರಿಸಿಕೊಂಡು ಶಂಭು ಚೌಟ ಮನೆಯಿಂದ ಹೊರಡುತ್ತಾನೆ. ಅವರ ಕಾರುಬಾರು ಮಿತಿ ಮೀರುತ್ತಿದೆ. ಇವನಿಗೆ ಹಿಂದೆ ಮುಂದೆ

ಕಾವಲಿಗೆ ಜನ ಬೇಕು. ಇರಲಿ, ನೀವು ಪದ್ಮನಿಗೆ ಒಂದು ಪತ್ರ ಬರೆದು ದೈವಸ್ಥಾನದ ಸಮಾರಂಭಕ್ಕೆ ಅವನು ಊರಿಗೆ ಬಂದಾಗ ಪದವು ಜಾಗದ ವಿಲೇವಾರಿ ಆಗಿ ರಿಜಿಸ್ಟ್ರಿ ಆಗಬೇಕೆಂದು ಹೇಳಬೇಕು. ಏನು?' ಅಂತಕ್ಕ ಒತ್ತಿ ಹೇಳಿದರು.

ತ್ಯಾಂಪಣ್ಣ ಸಾಮನಿಗೆ ಭೂಮಿ ಸಿಗ್ತದೆ ಅಂದರೆ ಅದೇನು ಕಹಿಯಾಗ್ತದೆಯೇ! ಅವರು ಸಂತೋಷದಿಂದ ಹೋದರು. ಅವರು ಹೋಗುವಾಗ ಚಾವಡಿಯ ಹಿಂಭಾಗದ ಜಗಲಿಯಲ್ಲಿ ಅಂಗಳಕ್ಕೆ ಕಾಲು ನೀಡಿ ಖಾರ್ವಿ ಕುಳಿತಿದ್ದ. ಅಂಗಳದ ಇನ್ನೊಂದು ಬದಿಯಲ್ಲಿ ಅಡುಗೆಕೋಣೆಯ ಆಚೆ ಉದ್ದಕ್ಕೆ ಹಗ್ಗ ಕಟ್ಟಿತ್ತು. ಕಿರುಬಾಗಿಲಿನ ಪಕ್ಕದ ಕೆರೆಯಲ್ಲಿ ಒಗೆದ ಒದ್ದೆ ಬಟ್ಟೆಗಳನ್ನು ತಂದು ಭವಾನಿ ಆ ಹಗ್ಗದಲ್ಲಿ ಒಣಗಲು ಹಾಕುತ್ತಿದ್ದಳು.

ಭವಾನಿಗೆ ಹತ್ತೊಂಬತ್ತು ವರ್ಷ ಕಳೆದಿತ್ತು. ಮಡಿ ಬೆಳ್ಳಗಿನ ಬಣ್ಣ. ಎರಕ ಹೊಯ್ದು ನಿರ್ಮಿಸಿದಂಥ ಮೈಕಟ್ಟು. ಕಣ್ಣು ತಾಗುವಷ್ಟು ಅಂದದ ಹುಡುಗಿ. ಚೌಟರಿಗೆ ಇನ್ನೊಂದು ಸಲ ವರದಕ್ಷಿಣೆಯ ತಯಾರಿ ಮಾಡುವ ಸಮಯ ಬಂತೆಂದು ಸಾಮನಿಯಾಲರು ಯೋಚಿಸಿದರು. ಅಂಗಳದ ಹೊರಗಿನ ನೆಲದಲ್ಲಿ ಎಂಟು ಹತ್ತು ಹೆಂಗಸರು ಹಾಡು ಹೇಳುತ್ತ ಭತ್ತ ಕೇರುವುದು, ಹೊಡೆಯುವುದು ಮಾಡುತ್ತಿದ್ದರು. ಅವರು ಏನನ್ನೋ ಕಿಸಪಿಸ ಹೇಳುತ್ತ ನಗುತ್ತಿದ್ದರು. ಅಂಗಳದತ್ತ ತಿರುಗಿ ನೋಡುತ್ತಿದ್ದರು. ಸಾಮನಿಯಾಲರು ಅದೇನೆಂದು ತಿರುಗಿ ನೋಡಿದರೆ ಗಣಪ ಖಾರ್ವಿ ಕಾಲು ಅಲ್ಲಾಡಿಸುತ್ತ ಕೈಯೆತ್ತಿ ಬಟ್ಟೆ ಒಣಹಾಕುತ್ತಿದ್ದ ಭವಾನಿಯನ್ನೇ ರೆಪ್ಪೆ ಮುಚ್ಚದೆ ನೋಡುತ್ತಿದ್ದ.

ಅಬ್ಬಾ, ಇವನ ಅಹಂಕಾರವೇ! ಅಂತಕ್ಕನಿಗೆ ಯಾರೂ ಈ ವಿಚಾರ ಹೇಳಿಲ್ಲವೇ? ಚೌಟರು ಇಂಥ ಗುಳಿಗನನ್ನು ಮನೆಯೊಳಗೆ ಏಕೆ ತಂದಿಟ್ಟಿದ್ದಾರೆ? ತಪ್ಪು ತಪ್ಪು' ಸಾಮನಿಯಾಲರು ಯೋಚಿಸಿದರು.

ಸಾಮನಿಯಾಲರು ಅಂತಕ್ಕನಿಗೆ ಹೇಳಿದಂತೆಯೇ ಬೊಂಬಾಯಿಗೆ ಪತ್ರ ಬರೆದರು. ಪದ್ಮನಿಗೆ ಬೇಕಾದಷ್ಟು ಕೆಲಸ ತಲೆಯ ಮೇಲೆ ಕೂತಿತ್ತು. ಸರಸು ಊರಲ್ಲೇ ಇದ್ದಳು.

ಸೀಮಂತ ಮುಗಿದು ಸೇನರ ಮೂಲೆಯಿಂದ ಗುತ್ತಿಗೆ ಬಂದಳು ಸರಸು. ತಿಂಗಳಿಗೊಮ್ಮೆ ಪದವುನಲ್ಲಿರುವ ಚಿಕ್ಕ ಆಸ್ಪತ್ರೆಯ ಒಬ್ಬ ಬ್ರಾಹ್ಮಣ ಡಾಕ್ಟರ ಬಳಿಗೆ ಹೋಗಿ ತಪಾಸಣೆ ಮಾಡಿಸುತ್ತಿದ್ದಳು.

ಕಾರ್ತೆಲ್ ಮುಗಿದು ಸೋಣದಲ್ಲಿ ಇಪ್ಪತ್ತು ದಿನ ಕಳೆದಾಗ ಸರಸುಗೆ ಹೆರಿಗೆ ನೋವು ಬಂತು. ಪದವು ಆಸ್ಪತ್ರೆಯ ನರ್ಸ್ ಸಿಸಿಲಾ ಸಿಕ್ವೇರಾ ಗುತ್ತಿನ ಮನೆಗೆ ಬಂದು ಹೆರಿಗೆ ಮಾಡಿದಳು. ಏನೂ ಸಮಸ್ಯೆಯಾಗದಂತೆ ಎಲ್ಲವನ್ನೂ ಮಾಡಿಕೊಟ್ಟು ಹೋದಳು.

ತ್ಯಾಂಪಣ್ಣ ಸಾಮನಿಯವರು ಬೊಂಬಾಯಿಗೆ ಪತ್ರ ಬರೆದರು. ಪದ್ಮನಿಗೆ ಹೆಣ್ಣುಮಗು ಜನಿಸಿತ್ತು. ಗುತ್ತಿನ ಸಂತಾನ ವೃದ್ಧಿಸಿತ್ತು. ತಾಯಿ ಮಗು ಆರೋಗ್ಯವಾಗಿದ್ದಾರೆ. ಯಾವ ತೊಂದರೆಯೂ ಇಲ್ಲ.

ಆದರೆ ತಾನು ಕಳೆದ ಸಲ ಬರೆದ ಪತ್ರಕ್ಕೆ ಉತ್ತರ ಬರೆಯಲಿಲ್ಲವೇಕೆ? ವರದಕ್ಷಿಣೆಯ

ಹಣದ ವಿಲೇವಾರಿ ಏನು? ಸಾಮನಿಯವರು ಒತ್ತಿ ಕೇಳಿದರು.

ಮನೆಯಲ್ಲಿ ಈ ಸಲ ಸರ್ಕಾರ ಫಸಲನ್ನು ವಶಮಾಡಿದ ಕಾರಣ ಅವರ ಕೈ ಕಟ್ಟಿದಂತಾಗಿತ್ತು. ಖರ್ಚಿಗೂ ತುಂಬ ತೊಂದರೆಯಾಗಿತ್ತು.

ಹಾಲು ಕರೆಯುವ ಹಸು ಕ್ಷಯಿಸಿದೆ. ಒಂದು ಎಳೆಯ ಕರುವಿರುವ ಹಾಲು ಕರೆಯುವ ಹಸುವನ್ನು ಕೊಂಡರೆ ಒಳ್ಳೆಯದು. ಇಲ್ಲವಾದರೆ ಸರಸುವನ್ನು ಮನೆಗೆ ಕರೆತಂದ ಬಳಿಕ ಹಾಲಿಗೆ ತೊಂದರೆಯಾಗುವುದು ಖಂಡಿತ. ಹೀಗೆಲ್ಲ ಬರೆದಿದ್ದರು. ಕೊನೆಯಲ್ಲಿ ಪದವು ಜಾಗದ ವಿಚಾರದಲ್ಲಿ ನೀನು ಯಾವ ತೀರ್ಮಾನಕ್ಕೆ ಬಂದಿದ್ದೀಯಾ ಎಂಬುದನ್ನು ಕೂಡಲೇ ತಿಳಿಸಬೇಕು ಎಂದೂ ಬರೆದಿದ್ದರು.

ಪದ್ಮ ಹೋಗಿ ಪದ್ಮನಾಭ ಸಾಮನಿ ಆದವನು ಅಷ್ಟು ಹೆಡ್ಡನಲ್ಲ. ಅಂಥ ಹೆಡ್ಡನಾಗಿರುತ್ತಿದ್ದರೆ ಬೊಂಬಾಯಿಯಂಥ ಊರಿಗೆ ಬರೀ ಕೈಮೈಯಲ್ಲಿ ಹೋದವನು ಈಗ ಇಷ್ಟು ದೊಡ್ಡ ವಹಿವಾಟು ನಡೆಸುವಷ್ಟು ಎತ್ತರಕ್ಕೆ ಮುಟ್ಟುತ್ತಿರಲಿಲ್ಲ. ಅವನು ಶಂಭು ಚೌಟರಿಗೆ ಕಾಗದ ಬರೆದು ಕೇಳಿದ್ದ. ಅದಕ್ಕವರು 'ಆ ವಿಷಯ ತಕ್ಷಣ ಮಾಡಲಾಗುವುದಿಲ್ಲ. ಸರ್ಕಾರ ಕುಮ್ಕಿ ಜಾಗವನ್ನು ಹರಿಜನರಿಗೂ ಅಲ್ಪಸಂಖ್ಯಾತರಿಗೂ ದರ್ಖಾಸ್ ಮಾಡಲು ಕೊಡುತ್ತಿದ್ದಾರಂತೆ. ಆದ್ದರಿಂದ ಸದ್ಯದಲ್ಲಿ ಆ ವಿಷಯ ಮಾತನಾಡುವುದು ಬೇಡ' ಎಂದಿದ್ದರು. ಏನು ಮಾಡುವುದು? ಅವರ ಎದುರೆದುರಿಗೆ ನಿಷ್ಠುರ ಕಟ್ಟಿಕೊಳ್ಳುವುದು ಒಳ್ಳೆಯದಲ್ಲ. ಹಾಗಾಗಿ ಅವನು ಸುಮ್ಮನಾಗಿದ್ದ. ಆದರೆ ಅದನ್ನು ತ್ಯಾಂಪ ಸಾಮನಿಗೆ ಹೇಳಿದರೆ ವಿಷಯ ಅಂತಕ್ಕನಿಗೆ ತಲಪುತ್ತದೆ. ಅವರ ಬಾಯಿಗೆ ಕೋಲು ಹಾಕುವುದು ಬೇಡವೆಂದು ಆತ ಯೋಚಿಸಿದ. ಪದ್ಮನಿಗೆ ಲೋಕಾನುಭವವಿದೆ. ಹಿಂದೆ ಮುಂದೆ ಯೋಚಿಸುವಷ್ಟು ತಾಳ್ಮೆ, ಬುದ್ಧಿ, ವಿವೇಕ ಇದೆ. ಹೆಚ್ಚು ನೀರಿನಲ್ಲಿ ಈಜಿ ಬದುಕುವ ಮೀನಿನಂತೆ ಆತ.

* * * * *

ಭವಾನಿಬಾಯಿ ಗಡಸು ಹೆಣ್ಣು. ದೊಡ್ಡ ಮನೆಯ ಮಗಳಾಗಿ ತನ್ನ ತೂಕವೇನೆಂದು ಬಲ್ಲವಳು. ಚಿಕ್ಕ ಮಾವ ಶಂಭು ಚೌಟರು ಏನಾದರೂ ಕೆಟ್ಟ ಉದ್ದೇಶದಿಂದಲೇ ಈ ಇಬ್ಬರು ಚಂಡಮುಂಡರನ್ನು ತನ್ನ ಕಾವಲಿಗೆ ಕರೆಸಿ ಮನೆಯಲ್ಲಿಟ್ಟು ಸಾಕುತ್ತಿದ್ದಾರೆ. ಅವರು ಯಾವ ವಿಷಯಕ್ಕೆ ಯಾರನ್ನು ಕುರಿತು ಹೆದರುತ್ತಾರೆ? ಇಲ್ಲವಾದರೆ ಈ ದುಷ್ಟರು ಬಾವದ ಮನೆಯಲ್ಲಿ ಯಾಕಿರಬೇಕು? ತಾನು ಮುಂದೆ ಹೊರಟಾಗ ಈ ಗಣಪ ಖಾರ್ವಿಯ ಕಣ್ಣು ತನ್ನನ್ನೇ ಹಿಂಬಾಲಿಸುತ್ತದೆ. ಅದು ಒಳ್ಳೆಯವರ ಕಣ್ಣಿನ ನೋಟವಲ್ಲ. ಅಚಿಮು ಅಡುಗೆಕೋಣೆಯ ಮೊಗಸಾಲೆಯ ಹತ್ತಿರವಿರುವ ಚಿಕ್ಕ ಕೆರೆಯಲ್ಲಿ ಪಾತ್ರೆ ಪಗಡಿ ತೊಳೆದು ಅವನ್ನೆಲ್ಲ ಮನೆಯ ಹಿಂಭಾಗದ ಪುಟ್ಟ ಜಗಲಿಯಲ್ಲಿ ಒಣಗಲು ಇಡುವಾಗ, ಭವಾನಿಯಾದರೂ ಮಗುವಿನ ಒದ್ದೆ ಬಟ್ಟೆ ತರಲು ಹೋಗುವಾಗ ಈ ರಾಕ್ಷಸ ಅಲ್ಲೆಲ್ಲ ಸುಳಿದಾಡುತ್ತಾನೆಂದು ಗೊತ್ತು. ಕೆರೆಯ ಮೇಲಿನ ಜಾಗದಲ್ಲಿ ಉದ್ದಕ್ಕೆ

ಕರುಗಳ ಕೊಟ್ಟಿಗೆ ಇದೆ. ಅದರ ಕೊನೆಯಲ್ಲಿ ಉಳುವ ಮತ್ತು ಓಟದ ಎತ್ತು ಕೋಣಗಳ ಕೊಟ್ಟಿಗೆ. ಈ ಚಂಡಮುಂಡರನ್ನು ಕರೆಸುವ ಸ್ವಲ್ಪ ಮೊದಲು ಶಂಭು ಚೌಟರು ಎರಡು ಓಟದ ಕೋಣಗಳನ್ನು ಬಿದಿರೆಯಿಂದ ಖರೀದಿಸಿ ತಂದಿದ್ದರು. ಚಂಡಮುಂಡರನ್ನು ಅವುಗಳನ್ನು ಸಾಕಲು ಕರೆತಂದುದಾಗಿ ಎಲ್ಲರ ಹತ್ತಿರ ಹೇಳಿದ್ದರು. ಆದರೆ ಅವುಗಳನ್ನು ಸಾಕುವವಳು ತನಿಯರುವಿನ ಮಡದಿ ಮದರ. ಅವುಗಳ ಬೆನ್ನಿಗೆ ಎಳ್ಳಿನ ಎಣ್ಣೆ, ಕಾಲಿಗೆ ಹೊನ್ನೆಯ ಎಣ್ಣೆಯನ್ನು ದಿನಬಿಟ್ಟು ದಿನ ಹಚ್ಚುವುದು ಗಣಪ ಖಾರ್ವಿ. ನಾಯರ್‌ಮಾರ್‌ನ ಸಮೀಪದ ಹೊಲದಂಡೆಯ ಕಟ್ಟದ ನೀರಲ್ಲಿ ಇಳಿದು ಅವುಗಳ ಮೈ ತೊಳೆಯುವಾಗ ಆ ಇಬ್ಬರೂ ಮದರೂ ಒಟ್ಟಿಗೆ ಸೇರುತ್ತಾರೆ. ಆಮೇಲೆ ದಿನ ಬಿಟ್ಟು ದಿನ ಬಾಕಿಮಾರಿನಲ್ಲಿ ಅವುಗಳ ಬಾಲ ಹಿಡಿದು ಓಡಿಸುವಾಗ ತಮ್ಮು ಮರಕಲನೇ ಅವುಗಳ ಹಿಂದೆ ಓಡುತ್ತಾನೆ. ಅವನಿಗಿರುವ ಅಭ್ಯಾಸ ಖಾರ್ವಿಗಿಲ್ಲ.

ಕೋಣಗಳ ವಿಷಯ ಬಿಟ್ಟರೆ ಬಾಕಿ ಹೊತ್ತಿನಲ್ಲಿ ತಮ್ಮು ಮರಕಲನಿಗೆ ಜಗಲಿಯಲ್ಲಿ ಮಲಗಿ ಗೊರಕೆ ಹೊಡೆಯುವ ಕೆಲಸ.

ಗಣಪ ಖಾರ್ವಿ ದಿನವೂ ಎಲ್ಲಿಂದಲೋ ಸಂಪಾದಿಸಿ ಒಂದು ಪತ್ರಿಕೆ ತಂದು ಮುಖದ ಮುಂದೆ ಹಿಡಿದು ಕಾಲನ್ನು ಅಂಗಳಕ್ಕೆ ಇಳಿಸಿ ಪೇಪರು ಓದುವಂತೆ ನಟಿಸುತ್ತಾನೆ. ಆತ ಪೇಪರಿನ ಕಡೆಗೆ ನೋಡುವ ನೆಪದಲ್ಲಿ ತನ್ನನ್ನೇ ನೋಡುತ್ತಿದ್ದಾನೆಂದು ಭವಾನಿಗೆ ಅನುಮಾನ. ಅವಳು ಓರೆಕಣ್ಣಿನಲ್ಲಿ ನೋಡಿದರೆ ಅವನ ಅಮಲು ತುಂಬಿದ ನೋಟ ಮೀಸೆಯ ತುದಿಯಲ್ಲಿ ಮಿಂಚುವ ಮುಗುಳು ನಗೆಗಳನ್ನು ಕಂಡು ಅವಳಿಗೆ ಬ್ರಾಹ್ಮಾಂಡ ವನ್ನು ಸುಡುವಷ್ಟು ಕೋಪ ಬರುತ್ತಿತ್ತು. ಸಾಯಂಕಾಲ ಮನೆಯೊಳಗೆ ಉರಿಸುವ ಬೆಂಕಿಯನ್ನು ಅವನ ಮುಖಕ್ಕೆ ಇಟ್ಟು ಅವನ ಮೀಸೆಯನ್ನು ಸುಟ್ಟು ಹಾಕಬೇಕೆಂದು ತೋರುತ್ತಿತ್ತು. ಸಂಕಲೆ ಗುಳಿಗನ ಕೈಯ ಜೋಡಿ ಸೂಟೆಗಳನ್ನು ಅವನ ಎದೆಗೆ ಇಡಬೇಕೆಂದು ಅನ್ನಿಸುತ್ತಿತ್ತು.

ಆ ದಿನ ತಿಂಗಳ ಮೊದಲ ದಿನ. ಭವಾನಿ ಮುನ್ನಾದಿನ ಸಂಕ್ರಾಂತಿಯಂದು ಸ್ಥಾನದ ಬಾಗಿಲು ತೆರೆದು ದೀಪ ಹಚ್ಚಿ ಹೂವು ಹಾಕಲು ಮಠದ ಭಟ್ಟರು ಬರ್ತ್ತಾರೆ ಎಂದು ಕೆಲಸದವರಿಗೆಲ್ಲ ಸ್ಥಾನದ ಸುತ್ತಲೂ ಚೆನ್ನಾಗಿ ಗುಡಿಸಿ ಬಲೆಯನ್ನೆಲ್ಲ ತೆಗೆದು ಶುಭ್ರವಾಗಿ ಇಡಬೇಕೆಂದು ಹೇಳಿದ್ದಳು. ತನಿಯರುಗೆ ಸ್ಥಾನದ ಸುತ್ತೂ ಇರುವ ಅಂಗಳಕ್ಕೆ ಸೆಗಣಿ ಸಾರಿಸಲೂ ಹೇಳಿದ್ದಳು. ಹೇಳಿದ ಕೆಲಸ ಏನಾಯ್ತೆಂದು ತಿಳಿಯುವ ಸಲುವಾಗಿ ಅವಳು ಸಂಜೆ ಹೊತ್ತು ಬಾಕಿಮಾರು ದಾಟಿ ತೋಡಿನ ಕಲ್ಲ ಹಾಸನ್ನು ದಾಟಿ ಗುಡ್ಡ ಹತ್ತಿದಳು. ಸ್ಥಾನದ ಹತ್ತಿರ ಬರುವಾಗ ತನಿಯರು ಸೆಗಣಿ ಸಾರಿಸಿ ಹೋದಳೆಂದು ಗೊತ್ತಾಯ್ತು. ಸುತ್ತುಮುತ್ತ ಯಾರೂ ಇಲ್ಲ. ಗೇರುಮರದ ಹೂವಿನ ಪರಿಮಳದಿಂದ ತುಂಬಿ ಸಂಜೆಯ ಗಾಳಿ ಬೀಸುತ್ತಿತ್ತು. ಒಗರು ವಾಸನೆ. ಜೀವ, ಮನಸ್ಸುಗಳಿಗೆ ಅಮಲೇರಿಸುವ ಭೂಮಿಯ ಗಮಲು. ಒಂದು ಕ್ಷಣ ಭವಾನಿ ಎಲ್ಲವನ್ನೂ ಮರೆತು ಸುತ್ತಮುತ್ತ ನೋಡುತ್ತ ತಿರುಗಿದಳು. ಸ್ಥಾನದ ಸುತ್ತಲೂ ಬಸಿರಿ, ಅರಳಿ, ಆಲ,

ನಾಗಸಂಪಿಗೆಗಳ ಮರಗಳು ಬೆಳೆದು ಮಲೆತಿದ್ದುವು. ಸ್ಥಾನದ ಸ್ವಲ್ಪ ದೂರದಲ್ಲಿ ಅಶ್ವತ್ಥದ ಹಳೆಯ ಮರ ಸೊಂಪಾಗಿ ಬೆಳೆದು ಅಗಲವಾಗಿ ಹಬ್ಬಿತ್ತು. ಅದರ ಸುತ್ತಲಿನ ಕೆಂಪು ಕಲ್ಲುಗಳಲ್ಲಿ ತೆಂಕು ದಿಕ್ಕಿನ ಮೇಸ್ತ್ರಿಗಳು ಕೆತ್ತಿ ಕಟ್ಟಿದ ಒಂದು ಕಟ್ಟೆಯುಂಟು. ಬಹಳ ಹಿಂದೆ ಆ ಕಲ್ಲಿನ ಮೇಲೆ ಕುಳಿತುಕೊಂಡು ನ್ಯಾಯತೀರ್ಮಾನ ಕೊಡುತ್ತಿದ್ದರಂತೆ. ಅದರಲ್ಲಿ ಐವತ್ತು ಜನ ಆರಾಮವಾಗಿ ಕುಳಿತುಕೊಳ್ಳಬಹುದು. ಸ್ಥಾನದ ಒಳಗೆ ಜಾರಂದಾಯೆ. ಆ ಸ್ಥಾನದಿಂದ ಐವತ್ತು ಮಾರು ದೂರದಲ್ಲಿ ಒಂದು ಪುಟ್ಟ ಕೆರೆ. ಅದಕ್ಕೆ ಆರೇಳು ಮೆಟ್ಟಲುಗಳು. ನೀರು ವರ್ಷಕ್ಕೊಮ್ಮೆ ತಾಗುವುದರಿಂದ ಪಾಚಿಕಟ್ಟಿ ನೀರಿನ ಆಳ ಎಷ್ಟಿದೆಯೆಂದು ಗೊತ್ತಾಗುವುದಿಲ್ಲ. ನೀರಾಟ ಆಡುವಲ್ಲಿ ಕೆರೆಯಲ್ಲಿ ಹಸುರು ಕಂಬಳಿ ಹಾಸಿದಂತೆ ಕಾಣುತ್ತದೆ. ಅದರ ಹತ್ತಿರದಲ್ಲೇ ಹುಲಿ ಭೂತದ ಚಿಕ್ಕ ಗುಡಿ. ಅದಕ್ಕೆ ಸಂಕ್ರಾಂತಿಯ ಗೌರವ ಸಲ್ಲುತ್ತದೆ. ವರ್ಷಾವಧಿಯ ಕೋಲ ಇಲ್ಲದಿದ್ದರೆ ತಂಬಿಲ. ರಾತ್ರಿ ಅದರ ಹತ್ತಿರ ಹುಲಿ ಬಂದು ಮಲಗುತ್ತದೆಂಬ ಪ್ರತೀತಿ ಇದೆ. ಆ ಭೂತದ ಖಡ್ಗ, ಅಣಿ, ಸೊಂಟದ ಅಣಿ, ತಲೆಪಟ್ಟಿ, ಬೆಳ್ಳಿಯ ಮುಖ ಎಲ್ಲವೂ ಆ ಗುಡಿಯಲ್ಲೇ ಇವೆ. ಅಲ್ಲದೆ ಅದರ ಬಾಗಿಲಿಗೆ ಬೀಗವನ್ನೂ ಹಾಕುವುದಿಲ್ಲ. ಕುಂಟಲದ ಪೊದೆಗಳು, ಕಾಸರಕನ ಪೊದೆಗಳು, ಚೂರಿ ಮುಳ್ಳಿನ ಬಲ್ಲೆಗಳು, ಮಧ್ಯೆ ಮಧ್ಯೆ ನೇರಳೆಯ, ರೆಂಜೆಯ ಮರಗಳು ಯದ್ವಾತದ್ವಾ ಬೆಳೆದು ಸಂಜೆ ಆರು ಗಂಟೆ ಆಗುವಾಗಲೇ ಸುತ್ತುಮುತ್ತ ಕತ್ತಲೆ ಆಗಲು ಆರಂಭವಾಗುತ್ತಿತ್ತು. ಭವಾನಿಗೆ ಇದ್ದಕ್ಕಿದ್ದಂತೆ ತಾನೆಲ್ಲಿದ್ದೇನೆಂಬುದು ನೆನಪಾಯ್ತು. ಅವಳು ಕೂಡಲೇ ಹಿಂತಿರುಗಿ ಜಾರಂದಾಯನ ಸ್ಥಾನದ ಬಳಿಗೆ ಓಡುತ್ತ ಬಂದಳು. ಅಲ್ಲಿ ನಿಲ್ಲದೆ ಗುಡ್ಡ ಇಳಿದು ಕಲ್ಲಿನ ಸಂಕದ ಬಳಿಗೆ ಬಂದಾಗ ಅದೇ ದಾರಿಯಾಗಿ ಬಾಕಿಮಾರ್ ದಾಟಿ ತೋಡಿನ ಹೊಲದ ದಂಡೆಯಲ್ಲಿ ಗಣಪ ಖಾರ್ವಿ ಭರಭರನೆ ಬರುವುದು ಕಾಣಿಸಿತು. ಕಲ್ಲಿನ ಸೇತುವೆ ಒಬ್ಬರಿಗೆ ನಡೆಯುವಷ್ಟೇ ಅಗಲವುಳ್ಳದು. ಬೇಗ ಬಂದು ಸೇತುವೆ ದಾಟಬೇಕೆಂದು ಭವಾನಿ ದಾಪುಗಾಲು ಹಾಕುತ್ತ ಕಲ್ಲಿನ ಸೇತುವೆಯ ಹತ್ತಿರ ಬಂದಳು. ಅಷ್ಟಾಗುವಾಗ ಖಾರ್ವಿಯೂ ವೇಗವಾಗಿ ನಡೆದುಕೊಂಡು ಬಂದವನು ಸೇತುವೆಯ ಮೇಲೆ ಕಾಲಿಟ್ಟ. ಮಧ್ಯಕ್ಕೆ ತಲಪಿದ ಭವಾನಿಯನ್ನು ಅವನು ನೋಡಿದ್ದ. ಆದರೂ ಕಲ್ಲಿನ ಸೇತುವೆ ಹತ್ತಿದ್ದು ಅವನ ಸೊಕ್ಕು. ಭವಾನಿಗೆ ವಾಪಸ್ಸು ಹೋಗಲು ಸ್ವಾಭಿಮಾನ ಬಿಡಲಿಲ್ಲ. ಮುಂದೆ ಹೋಗಬೇಕೆಂದರೆ ಖಾರ್ವಿ ಮುಂದೆ ಮುಂದೆ ಹೆಜ್ಜೆಯಿಟ್ಟು ಬರುತ್ತಿದ್ದಾನೆ. ಖಾರ್ವಿಯ ಮುಖದಲ್ಲಿ ನಗುವಿರಲಿಲ್ಲ. ಆತ ಅವಳನ್ನು ಇಡಿಯಾಗಿಯೇ ನುಂಗುವಂತೆ ನೋಡುತ್ತ ಹೆಜ್ಜೆಯಿಡುತ್ತಿದ್ದ. ಅಷ್ಟಾಗುವಾಗ ಕಲ್ಲಿನ ಸೇತುವೆಯ ಕೆಳಗಿನಿಂದ ಒಂದು ಧ್ವನಿ ಕೇಳಿತು. "ಏನು ಸ್ವಾಮಿ, ಯಜಮಾನ್ತಿಯಮ್ಮ ಸೇತುವೆಯಲ್ಲಿ ಬರುತ್ತಿದ್ದಾರೆ. ನೀವೇಕೆ ಅವರ ಎದುರೆದುರು ಹೋಗುತ್ತಿದ್ದೀರಿ? ಹೊಲವನ್ನೂ ಚೆಂಡನ್ನೂ ಒಟ್ಟಿಗೆ ತುಳಿಯುತ್ತಾರಾ? ತಿಂದ ಅನ್ನ ಕಣ್ಣಿಗೆ ಚುಚ್ಚುತ್ತಾ? ಭೂಮಿಯನ್ನೂ ಆಕಾಶವನ್ನೂ ನೋಡಿಕೊಂಡು ನಡೆಯಬೇಕು. ಮನೆಯ ಮಣ್ಣಿನಲ್ಲಿ ಎಡವಿ ನಡೆಯುವವರು ಬಹಳ ದಿನ ಬಾಳುವುದಿಲ್ಲ.

ಅಯ್ಯಾ, ತಲೆತುದಿ ನೋಡಿ ಜಾಗ್ರತೆಯಿಂದ ನಡೆಯಿರಿ. ಕೈ ಎಣ್ಣೆ ಕಣ್ಣಿಗೆ ತಾಗುತ್ತದೆ.' ನೋಡಿದರೆ ಮುದುಕಿ ತನಿಯರು. ಆಕೆ ಮೈತೊಳೆಯಲು ತೋಡಿಗೆ ಇಳಿದು ಕಲ್ಲಿನ ಸೇತುವೆಯ ಕೆಳಗೆ ಕುಳಿತಿದ್ದಳು. ಗಂಡಸರು ಬಂದರೆಂದು ಎದ್ದು ನಿಂತು ಮೇಲಿಟ್ಟ ಬಟ್ಟೆಯನ್ನು ಕೆಳಗೆ ತೆಗೆಯುವ ಆತುರ ಮಾಡಿದ್ದಳು. ಬಂದ ಗಂಡಸು ಯಾರೆಂದು ನೋಡಿದರೆ ಖಾರ್ವಿ. ಭವಾನಿ ಬಂದದ್ದನ್ನು ಅವಳು ಮೊದಲೇ ನೋಡಿದ್ದಳು. ಖಾರ್ವಿ ರಭಸದಿಂದ ಮುಂದೆ ಮುಂದೆ ಬರುವುದನ್ನು ನೋಡಿ ತಡೆಯುವ ಉದ್ದೇಶದಿಂದ ನಾಲ್ಕು ಮಾತು ಆಡಿದಳು.

ಅನಿರೀಕ್ಷಿತವಾಗಿ ಅಡ್ಡಿ ಬಂದುದನ್ನು ನೋಡಿ ಖಾರ್ವಿ ಒಮ್ಮೆಗೇ ಗಾಬರಿಯಾದ. ಅವನಿಗೆ ಏನು ಉತ್ತರಿಸಬೇಕೆಂದೇ ತಕ್ಷಣಕ್ಕೆ ಹೊಳೆಯಲಿಲ್ಲ. ಗಡಿಬಿಡಿಯಿಂದ ಹಿಂತಿರುಗಿ ಹೋದ. ಅಲ್ಲಿದ್ದ ತೆಂಗಿನ ಮರದ ಬುಡದಲ್ಲಿ ದಂಡೆಗೆ ಬೆನ್ನು ಹಾಕಿ ನಿಂತ.

ಭವಾನಿ ಒಂದು ನೆಮ್ಮದಿಯ ಉಸಿರು ಬಿಟ್ಟಳು. ತನ್ನ ಗಾಬರಿಯನ್ನು ಹೊರಗೆ ತೋರಿಸದೆ ಹೇಳಿದಳು, 'ನೀನು ಪುನಃ ಅಷ್ಟು ಬೇಗ ಎಲ್ಲಿ ಮಾಯವಾದೆ ತನಿಯರು? ನೀನಿದ್ದೀಯಾ ಅಂತಲೇ ನಾನು ಸ್ಥಾನದ ಬಳಿಗೆ ಬಂದೆ.'

'ನಾನು ಬೇಗನೆ ಕೆಲಸ ಮುಗಿಸಿದೆ. ದೊಡ್ಡ ಯಜಮಾನಿ ಹೇಳಿದ್ದರು. ಸ್ವಲ್ಪ ಬೇಂಗದ ಕೆತ್ತೆಯನ್ನೂ ಸ್ವಲ್ಪ ಇಲಿಕಿವಿಯ ಕೆತ್ತೆಯನ್ನೂ ಗುಡ್ಡದಿಂದ ತೆಗೆದುಕೊಂಡು ಬಾ ಅಂತ. ಕಟ್ಟದ ಅಂಗರ ಗುರಿಕಾರನ ಬಳಿಯಲ್ಲಿ ಪೀಲಿ ಇದೆ. ಅವನ ಬಳಿಯಲ್ಲಿ ನ್ಯೋಳಿಸರವೂ ಸಿಗುತ್ತದೆ. ಅವನೇ ನೆಟ್ಟದ್ದು. ಅವುಗಳನ್ನೂ ಕೇಳಿ ತೆಗೆದುಕೊಂಡು ಬಾ ಅಂದರು. ಹಾಗೆ ಬೇಗ ಸೆಗಣಿ ಸಾರಿಸಿ ಇಲ್ಲಿಗೆ ಬಂದೆ. ಅಲ್ಲಿ ನೋಡಿ ಮುಂಡಿಯ ಪೊದರಿನ ಕೆಳಗೆ ಎಲ್ಲ ಕೆತ್ತೆಗಳನ್ನೂ ಎಲೆಯಲ್ಲಿ ಸುತ್ತಿ ಇಟ್ಟಿದ್ದೇನೆ. ಅವುಗಳನ್ನು ನೀವೇ ತೆಗೆದುಕೊಂಡು ಗುತ್ತಿಗೆ ಹೋಗುವುದಿದ್ದರೆ ನಾನು ನಿಮ್ಮನ್ನು ಆನೆಬಾಗಿಲು ತಲಪಿಸಿ ಮನೆಗೆ ಹೋಗ್ತಿದ್ದೆ.'

'ಆ ಕೆತ್ತೆಗಳೆಲ್ಲ ಅವರಿಗೆ ಯಾಕಂತೆ?'

'ಅಮ್ಮಾ, ಕರೆಯುವ ಹಸುವಿನ ಮೈಯ ರೋಮ ಉದುರುತ್ತದಂತೆ. ಅದಕ್ಕೆ ನಮ್ಮ ಹಳೆಯ ಔಷಧಿ ಅದು. ನುಚ್ಚಕ್ಕಿ ಮೂರು ಕುಡ್ತೆ ಇಟ್ಟು ಅದಕ್ಕೆ ಆ ಕೆತ್ತೆಗಳೆಲ್ಲವನ್ನೂ ಹಾಕಿ ಮೂರು ದಿನಗಳ ಕಾಲ ಹಸುವಿಗೆ ಮಡ್ಡಿ ಕೊಡಬೇಕು. ನಿನ್ನ ಅಮ್ಮನಿಗೆ ಅದೆಲ್ಲ ಗೊತ್ತಿದೆ. ಈ ಕೆತ್ತೆಯನ್ನು ಮೂರು ಭಾಗ ಮಾಡಿ ಮೂರು ದಿನ ಅಕ್ಕಿಯ ಜತೆಯಲ್ಲಿ ಬೇಯಿಸಿ ಬೆಳಗ್ಗೆ ಕುಡಿಯಲು ಕೊಡಿ.'

'ಬನ್ನಿ ಹೋಗೋಣ. ಇಷ್ಟು ಕತ್ತಲೆಯಾಗುವಾಗ ಇನ್ನು ಮುಂದೆ ನೀವು ಸ್ಥಾನದ ಕಡೆಗೆ ಹೆಜ್ಜೆ ಇಡಬೇಡಿ. ಈಗ ಮನುಷ್ಯನಿಗೆ ಮೊದಲಿನಂತೆ ಯಾರು ಏನು ಎಂಬ ಮುಲಾಜೇ ಇಲ್ಲ. ಬನ್ನಿ ಹೋಗೋಣ' ಎಂದಳು ತನಿಯರು.

'ಭಯ ಭಕ್ತಿ ಇರಲು ಅವರಿಗೆ ಏನಾದರೂ ಅಡೆತಡೆ ಇದ್ದರಲ್ಲವೇ? ಅವುಗಳನ್ನು ಬಳೆಯಲು ಬಿಟ್ಟವರು ಚಿಕ್ಕ ಮಾವ. ದೊಡ್ಡ ಮಾವನಿಗೆ ಕುಳಿತುಕೊಳ್ಳುವ ಪಟ್ಟ ಮಾತ್ರ

ತಾನೆ? ಗಂಟು ನೋವು, ಬೆನ್ನುನೋವು ಎನ್ನುತ್ತ ಯಾವ ಒಂದು ವಿಷಯಕ್ಕೂ ತಲೆ ಹಾಕುವುದಿಲ್ಲ. ಏನು ಕೇಳಿದರೂ ಶಂಭುವನ್ನು ಕೇಳಿ ಅನ್ತಾರೆ. ಹಾಗಾಗಿಯೇ ಅಂಗಳದ ಮೂಲೆಯಲ್ಲಿರುವ ಪೊರಕೆ ಕೂಡ ಎದ್ದು ನಿಲ್ಲುತ್ತದೆ.'

'ಮೈಂದ ಯಜಮಾನರು ಯಾವುದಕ್ಕೂ ತಲೆ ಕೊಡುವುದಿಲ್ಲ. ರೇಷನ್ ಸ್ಟೋರೆಂದು ಬೆಳಗ್ಗಿನಿಂದ ಸಂಜೆ ತನಕ ಪದವುನಲ್ಲಿ ಕಳೆಯುತ್ತಾರೆ. ಅವರ ತಲೆ ತಿರುಗಿಸಲು ಆಚಾರಿಯ ಮಗಳಿದ್ದಾಳಲ್ಲ. ಯಾವಾಗ ನೋಡಿದರೂ ಇಬ್ಬರೂ ಕಿಸಪಿಸನೆಂದು ಹರಟುತ್ತ ಇರ್ತಾರೆ. ಚಿಕ್ಕ ಯಜಮಾನರು ಎದುರಿಗಿದ್ದರೆ ಮಾತ್ರ ಮಾತು ಕಡಿಮೆ.'

'ಅಲ್ಲ ಯಜಮಾನಿ, ಮೈಂದ ಯಜಮಾನರಿಗೆ ಒಂದು ಮದುವೆ ಮಾಡಿಸಿದರೆ ಒಳ್ಳೆಯದಲ್ಲವೇ? ಆದರೆ ನಿಮಗಾಗದೆ ಅವರಿಗೆ ಮೊದಲು ಮಾಡಲು ದೊಡ್ಡ ಯಜಮಾನಿ ಒಪ್ಪಲಾರರು ಅಲ್ವೇ? ಇತ್ತೀಚೆಗೆ ಒಂದು ಸುದ್ದಿ ಕೇಳಿದೆ. ಸರಸು ಯಜಮಾನಿಯ ಯಜಮಾನರು ಬೊಂಬಾಯಿಗೂ ಆಚೆ ಇರುವ ಅದೇನೋ ಪುನದಿಂದ ನಿಮಗೆ ಒಂದು ನೆಂಟಸ್ತಿಕೆ ತಂದಿದ್ದಾರಂತೆ? ಪುನ ಅಂದರೆ ಯಾವೂರು ಯಜಮಾನಿ?'

'ಪುನ ಅಲ್ಲ ತನಿಯರು, ಅದು ಪೂನಾ. ಅದು ಬೊಂಬಾಯಿಯಿಂದ ಆಚೆಗಿಲ್ಲ. ಅದಕ್ಕಿಂತ ತುಂಬ ಈಚೆಗಿದೆ. .. ಅಲ್ಲ, ನಿನಗೆ ಯಾರು ಈ ತರ ಸುದ್ದಿ ಮುಟ್ಟಿಸಿದವರು?'

'ಅದು ದೆಯ್ಯಕ್ಕ ಯಜಮಾನಿ. ನಿಮ್ಮ ಹತ್ತಿರ ಹೇಳಬೇಕಾ ಬೇಡವಾ ಅಂತ.. ಉಂ. ಹೇಳುತ್ತೇನೆ.'

'ಸರಸು ಯಜಮಾನಿಗೆ ವರದಕ್ಷಿಣೆ ಕೊಡ್ತೇನೆ ಎಂದರು. ಕೊಡ್ತೇನೆ ಕೊಡ್ತೇನೆ ಅನ್ನುತ್ತ ತಿಪ್ಪೆ ಕೋಲು ಕೊಟ್ಟರು. ಇನ್ನು ಭವಾನಿಯಮ್ಮನಿಗೆ ಮದುವೆ ಮಾಡಿಸಲು ಬಿಟ್ಟಿಯಾಗಿ ಹೆಣ್ಣು ಕೊಡಲು ಇನ್ನೊಂದು ಮಲೆಮಂಗ ಯಾರು ಸಿಗ್ತಾರೆ ಅಂತ ಚಿಕ್ಕ ಯಜಮಾನರು ಕಾಯುತ್ತಿದ್ದಾರೋ ಏನೋ ಅಂದರು.'

ತನಿಯರು ಹೇಳಿದ ಈ ಮತನ್ನು ಕೇಳಿ ಭವಾನಿಗೆ ಕಾಲಿನ ಉಂಗುಷ್ಠದಿಂದ ತಲೆ ಕೂದಲಿನವರೆಗೆ ಉರಿಯಿತು.

ಮಾವ ನಮ್ಮನ್ನು ಹಗುರ ಮಾಡಿದರಲ್ಲ. ಬೊಳ್ಳೂರು ಬಾವದ ಹಂಗಿನ ಕೂಳುಣ್ಣುವ ಗತಿಗೇಡಿಗಳು ನಾವಾದೆವಲ್ಲ. ಖಾರ್ವಿಯಂಥ ಬೀದಿನಾಯಿ ನೆಕ್ಕಲು ಬಾಯಿ ಹಾಕುವ ಪರಿಸ್ಥಿತಿ ನಮಗೆ ಬಂತಲ್ಲ. ಎರಡರಲ್ಲಿ ಒಂದು ಆಗಬೇಕು. ಅಮ್ಮನಲ್ಲಿ ಹೇಳಿ ನಮ್ಮ ಪಾಲನ್ನು ತೆಗೆದುಕೊಳ್ಳಬೇಕು. ಮೈಂದಣ್ಣ ಬಳೆ ತೊಟ್ಟುಕೊಂಡಿದ್ದರೆ ದೊಡ್ಡಮಾವ ಶರಮಂಚದಲ್ಲಿ. ಚಿಕ್ಕಮಾವನ ಕಾರುಬಾರೆಲ್ಲ ಕಡಿಮೆಯಾಗುವಂತೆ ಮಾಡಬೇಕು. ಅವರ ಇಬ್ಬರು ದೂತರನ್ನು ಮೊದಲು ಎತ್ತಂಗಡಿ ಮಾಡಿಸಬೇಕು. ಅವರ ಅಹಂಕಾರ ಮಣ್ಣು ಮುಕ್ಕಬೇಕು. ಭವಾನಿ ಅವಡು ಗಚ್ಚಿ ಮನಸ್ಸಿನಲ್ಲೇ ಹುಲಿಭೂತಕ್ಕೆ ಹರಕೆ ಕಟ್ಟಿದಳು. ಬೀಜ ಬಿತ್ತಿ ಗಿಡವಾದರೂ ಅದು ಫಲ ನೀಡಲು ಅದರ ಬುಡಕ್ಕೆ ಹಾಕುವ ಕೆಲಸ ಆಗಲೇಬೇಕು!

* * * * *

ಗುತ್ತಿನ ಮನೆಯ ಹುಡುಗಿ ಭವಾನಿಯ ಛಲ, ರೋಷ ಏರುತ್ತಿತ್ತು. ಸರಸು ಹೆತ್ತು ತಿಂಗಳೊಂದು ಕಳೆಯಿತು. ಇನ್ನು ಸ್ವಲ್ಪ ದಿನದಲ್ಲೇ ಬಾವಿ ಮುಟ್ಟುತ್ತಾಳೆ. ಮಠದ ಪಂಚಲಿಂಗೇಶ್ವರ ದೇವಸ್ಥಾನಕ್ಕೆ ಹೋಗುತ್ತಾಳೆ. ಹದಿಮೂರು ದಿನಕ್ಕೆ ಮಗುವನ್ನು ತೊಟ್ಟಿಲಿಗೆ ಹಾಕಿದ್ದರು. ಅದಕ್ಕೆ ಸಾಮನಿಯವರೂ ದೆಯ್ಯಕ್ಕನೂ ಬಂದು ಕೈಗೆ ಬಳೆಗಳನ್ನೂ ಕತ್ತಿಗೆ ಒಂದೆಳೆ ಸರವನ್ನೂ ತೊಡಿಸಿದ್ದರು. ಅನಂತರ ಹೆರಿಗೆಯ ಖರ್ಚಿಗೆಂದು ಮೂರು ಬಾಟ್ಲಿ ತುಪ್ಪ, ಎರಡು ಬಾಟ್ಲಿ ಗಾಣದಲ್ಲಿ ತೆಗೆಸಿದ ತೆಂಗಿನೆಣ್ಣೆ, ಬಾಣಂತಿಗೆ ಸೂಪು ಮಾಡಿಕೊಡಲು ಮತ್ತು ಪಲ್ಯಕ್ಕೆಂದು ಹನ್ನೆರಡು ಕೋಳಿಮರಿಗಳು, ಏಳು ಸೇರು ಗಂಧಸಾಲಿ ಅಕ್ಕಿ, ಒಂದು ಸೇರು ಒಳ್ಳೆ ಮೆಣಸು, ಐದು ಕಟ್ಟು ಓಲೆಬೆಲ್ಲ ಇವನ್ನೆಲ್ಲ ಕೊಟ್ಟು ಹೋಗಿದ್ದರು. ಸೀಮಂತ ಕಳೆದು ಸರಸು ಬಾವೆಯ ಗುತ್ತಿನ ಮನೆಗೆ ಬರುವಾಗಲೇ ಹೆರಿಗೆಗೆ ಬೇಕಾದ ಪರಿಕರಗಳನ್ನೆಲ್ಲ ಕಟ್ಟಿ ಕಳುಹಿಸಿ ಕೊಟ್ಟಿದ್ದರು. ಬಾಣಂತಿಗೆ ಕೊಡುವ ಕಾಳುಜೀರಿಗೆ, ಪಳದ್ಯದ ಓಮ, ಬಾಣಂತಿ ಸಾಮಗ್ರಿ ಎಲ್ಲವನ್ನೂ ತಂದಿದ್ದರು.

ದೆಯ್ಯಕ್ಕನಿಗೆ ಬಾಯಿ ತುಂಬ ಮಾತನಾಡಬೇಕು. ಅವತ್ತು ಬಂದವರು ಕೋಳಿ ಗಸಿ, ರೊಟ್ಟಿ, ಕೋಳಿ ಪಲ್ಯ, ಹುರುಳಿ ಮತ್ತು ಬಂಗುಡೆ ಸಾರು, ತುಪ್ಪದನ್ನದ ಸನ್ಮಾನ ಆಗಿ ಸಂಜೆ ಹಿಂತಿರುಗಿದ್ದರು. ಅಂತಕ್ಕನ ಜೊತೆಯಲ್ಲಿ ಸುಖದುಃಖ ಮಾತನಾಡಿದ್ದರು.

ದೆಯ್ಯಕ್ಕ ಹೇಳಿದರು. 'ನಾವು ಮೂರು ದಿನ ಮೊದಲೇ ಬರುತ್ತಿದ್ದೆವು. ಮನೆಯಲ್ಲಿ ಅಪರೂಪದ ಅತಿಥಿಗಳು ಬಂದಿದ್ದಾರೆ. ನನ್ನ ತಂಗಿಯ ಗಂಡ ಸಂಕಣ್ಣ ಕೆಲ್ಲರು ಪುರಾಲಿನ ಸಮೀಪದ ಮಣೇಲಿನಲ್ಲಿದ್ದಾರೆ. ಸ್ವಲ್ಪ ಜೈನರ ಜಮೀನು ಸಾಗುವಳಿ ಮಾಡುತ್ತಾರೆ. ಪ್ರವಾಹದ ಬಾಯಿಯ ಜಮೀನು. ಮಳೆಗಾಲದಲ್ಲಿ ಜೋರಾಗಿ ನೆರೆ ಬಂದರೆ ಆ ವರ್ಷ ಗೇಣಿ ಬಾಕಿ. ಆದರೆ ಧನಿ ಒಳ್ಳೆಯವರು. ನಷ್ಟಬಿದ್ದ ವರ್ಷ ಗೇಣಿ ಕಡಿಮೆ ತೆಗೆದುಕೊಳ್ತಾರೆ. ಅವರಿಗೂ ಹೊಲಗದ್ದೆಗಳ ಬೇಸಾಯದಲ್ಲಿ ಮನೆವಾರ್ತೆ ನಡೆಯುವುದಿಲ್ಲ. ಬೇರೆ ಕೆಲವು ವ್ಯಾಪಾರ ವಹಿವಾಟುಗಳಿವೆ. ಬೀಡಿಯ ಬ್ರಾಂಚ್ ನಡೆಸುತ್ತಾರೆ. ಹಳೆಯ ಸೌಪರ್ಣಿಕ ನದಿಯ ನಡುವಿನಲ್ಲಿ ಮಣೇಲ್‌ಗೆ ಹತ್ತಿರ ಒಂದು ದ್ವೀಪವಿದೆ. ಅಲ್ಲಿ ಅವರ ರಹಸ್ಯವಾದ ಕಾರ್ಯಚಟುವಟಿಕೆಗಳು ನಡೆಯುತ್ತವೆ. ಅಲ್ಲಿ ಹೆಂಡ ಕಾಯಿಸಿ ಮಾರ್ತಾರೆ ಎಂಬ ಸುದ್ದಿಯೂ ಇದೆ. ಸರ್ಕಾರದ ಕಣ್ಣು ತಪ್ಪಿಸಿ ಮಾಡುವ ಅಡಾವುಡಿ ಕೆಲಸ. ಭಾರಿ ಚಾಲಾಕಿನ ಮನುಷ್ಯ ಸಂಕಣ್ಣ ಭಾವ.'

'ಅದು ಸರಿ. ಆದರೆ ಅವರೇನು ಅತಿಥಿಗಳಲ್ಲವಲ್ಲ. ಅವರು ಮಾತ್ರ ಬಂದಿದ್ದಾರಾ ಇಲ್ಲ ಅವರ ಜೊತೆಯಲ್ಲಿ ಬೇರೆ ಯಾರಾದರೂ ಬಂದಿದ್ದಾರಾ?' ರುಕ್ಕಕ್ಕ ಕೇಳಿದರು.

'ಹಾಂ. ಹೇಳಲು ಮರೆತೆ. ಅವರೊಟ್ಟಿಗೆ ಅವರ ತಂಗಿಯ ಅತ್ತಿಗೆಯ ಮಗ ಕೂಡ ಬಂದಿದ್ದಾನೆ. ಯುವಕ, ಬುದ್ಧಿವಂತ. ಸಬರ್ಮತಿ ಆಶ್ರಮದಲ್ಲಿದ್ದು ಗಾಂಧಿ ತತ್ವಗಳನ್ನೆಲ್ಲ ಕಲಿತು ಬಂದಿದ್ದಾನೆ. ಖಾದಿ ಬಟ್ಟೆ ಧರಿಸುತ್ತಾನೆ. ನಮಗೆ ಸ್ವಾತಂತ್ರ್ಯ ಸಿಗಬೇಕು. ಎಲ್ಲರೂ ಗಾಂಧೀಜಿಯವರ ಮಾತನ್ನು ಕೇಳಬೇಕು. ಮುಖ್ಯವಾಗಿ ಯುವಕರೆಲ್ಲ

ಅವರ ಮಾತಿನಂತೆ ನಡೆಯಬೇಕು. ಇತ್ತೀಚೆಗೆ ಗಾಂಧೀಜಿಯವರು ಪುತ್ತೂರಿಗೆ ಬಂದು ಅಲ್ಲಿಂದ ನಮ್ಮ ಊರು ದಾಟಿ ಮಂಗಳೂರಿಗೆ ಬಂದಿದ್ದರಂತೆ. ಇಂಗ್ಲಿಷರಿಗೆ ಬಗ್ಗಿ ನಾವು ಅವರ ಗುಲಾಮರಾಗುವುದು ಸರಿಯಲ್ಲ ಅಂದ. ಅವನೂ ಸೈನ್ಯಕ್ಕೆ ಸೇರಿದ್ದನಂತೆ. ಕಾಲಿಗೆ ಗುಂಡು ತಾಗಿ ಎಡದ ಕಾಲು ಸ್ವಲ್ಪ ಕುಂಟುತ್ತದೆ. ಈಗ ಸೈನ್ಯದಿಂದ ಅವನನ್ನು ಕಳುಹಿಸಿದರಂತೆ. ಸೈನ್ಯದಲ್ಲೂ ನಮ್ಮ ಕಪ್ಪುಜನರನ್ನು ತುಂಬ ತಾತ್ಸಾರದಿಂದ ನೋಡುತ್ತಾರಂತೆ. ನಮಗೆ ಸ್ವಾತಂತ್ರ್ಯ ಸಿಗಬೇಕೆಂದರೆ ಇದೇ ಸುಸಮಯ. ಬಿಳಿಜನರು ಒಂದು ಕಡೆಯಲ್ಲಿ ಜಪಾನೀಯರ ಸೈನ್ಯವನ್ನು ಸೋಲಿಸಬೇಕು. ಯೂರೋಪಿನಲ್ಲಿ ಜರ್ಮನಿಯವರು ಕೂಡ ಹಿಟ್ಲರ್ ಎಂಬಾತನ ನೇತೃತ್ವದಲ್ಲಿ ಭಾರೀ ಜೋರಿನಿಂದ ಅವರನ್ನು ಬಗ್ಗುಬಡಿಯುತ್ತಿದ್ದಾರಂತೆ.

'ಅಲ್ಲ ದೆಯ್ಯಕ್ಕ ಮಾಮಿ, ನೀವು ಚೆನ್ನಾಗಿ ಹೇಳಿದಿರಿ. ಅವನ್ಯಾರೋ ಹೇಳ್ತಾನೆ ಅಂತ ಸರ್ಕಾರದ ಎದುರುನಿಂತು ಸತ್ಯಾಗ್ರಹ ಮಾಡಿ, ಗಾಂಧಿ ಒಟ್ಟಿಗೆ ಸೇರಿದರೆ ಪೋಲೀಸಿನವರು ಗುಂಡು, ಲಾಠಿಗಳಿಂದ ಸತ್ಯಾಗ್ರಹ ಮಾಡುವವರ ಬೆನ್ನು ಮಾತ್ರವಲ್ಲ ಮೂಳೆಯನ್ನೂ ಪುಡಿ ಪುಡಿ ಮಾಡ್ತಾರೆ. ಕಳೆದ ವರ್ಷ ಮಂಗಳೂರಿನ ಮೈದಾನದಲ್ಲಿ ಧರ್ಮರಾಜನೆಂಬ ಅಧಿಕಾರಿಗೆ ಹೊಡೆದು ತಲೆಯನ್ನೇ ಚೆಂಡಾಡಿದರಂತೆ. ಬೆಳ್ಳಿಪಾಡಿ ತ್ಯಾಂಪಣ್ಣ ರೈಯವರನ್ನೂ ಲಕ್ಷ್ಮಿ ಅಕ್ಕನವರನ್ನೂ ಸೆರೆಹಿಡಿದು ಜೈಲಿಗೆ ಹಾಕಿದರಂತೆ. ಕಾರ್ನಾಡು ಸದಾಶಿವ ರಾಯರಿಗೆ ಕಾಯಿಲೆ ಬಂತು. ಅವರು ಸರ್ವಸ್ವವನ್ನೂ ಕಳಕೊಂಡು ಬದುಕುವುದಕ್ಕೂ ಗತಿಯಿಲ್ಲದೆ ಸತ್ತುಹೋದರಂತೆ. ಕೈಕಟ್ಟಿ ಪೆಟ್ಟು ತಿನ್ನಿ ಅನ್ತಾರೆ ಗಾಂಧೀಜಿ. ಏಟಿಗೆ ಎದಿರೇಟು ನೀಡಿ ಅವರ ಸೈನ್ಯದ ಬಲವನ್ನು ಕುಂದಿಸಿ ಸ್ವಾತಂತ್ರ್ಯ ಪಡೆಯೋಣ ಅನ್ತಾರೆ ಸುಭಾಷ್ ಚಂದ್ರಬೋಸ್. ನನಗೇಕೋ ಈ ಕೈಕಟ್ಟಿ ಪೆಟ್ಟು ತಿನ್ನುವ ಸತ್ಯಾಗ್ರಹಕ್ಕಿಂತ ಮಾರಾಮಾರಿ ಯುದ್ಧ ಮಾಡುವ ಬೋಸರ ಸೈನ್ಯವೇ ಒಳ್ಳೆಯದೆಂದು ತೋರುತ್ತದೆ' ಎಂದಳು ಭವಾನಿ.

ಅಷ್ಟು ಹೊತ್ತಿಗೆ ತೊಟ್ಟಿಲಲ್ಲಿ ಮಗು ಅಳುವುದು ಕೇಳಿಸಿ ಅಂತಕ್ಕ ಒಳಗಿನ ಕೋಣೆಗೆ ಹೋದರು. ದೆಯ್ಯಕ್ಕ ಮೆಲ್ಲ ತಲೆಬಗ್ಗಿಸಿ ಭವಾನಿಗೆ ಹೇಳಿದರು. 'ನಿನಗೆ ಒಂದು ಸತ್ಯ ಹೇಳ್ತೇನೆ. ಯಾರಿಗೂ ಹೇಳಬೇಡ. ನಮ್ಮನೆಗೆ ಬಂದಿರುವ ನೆಂಟ ಇಂಗ್ಲಿಷರ ಸೈನ್ಯದವನಲ್ಲ. ಬರ್ಮಾದಲ್ಲಿ ಇಂಗ್ಲಿಷ್ ಸೈನ್ಯದೊಂದಿಗೆ ಐ.ಎನ್.ಎ. ಎನ್ನುವ ಬೋಸರ ಸೈನ್ಯದ ಮೊದಲ ಯುದ್ಧದಲ್ಲಿ ಅವನ ಕಾಲಿಗೆ ಗುಂಡುಬಿದ್ದು ಕಾಲಿನ ಮಂಡಿ ಪುಡಿಯಾಯ್ತು. ಅವನನ್ನು ಅಂಡಮಾನಿನ ತಮಿಳು ಜನರು ಮೀನು ಹಿಡಿಯುವ ದೋಣಿಯಲ್ಲಿ ಕುಳ್ಳಿರಿಸಿ ಸಿಂಹಳದ ತಲೈಮನ್ನಾರಿಗೆ ಕಳುಹಿಸಿದರಂತೆ. ಅಲ್ಲಿ ಮಾಡಿದ ಆಪರೇಷನ್ ಸರಿಯಾಗದೆ ಕಾಲು ಕುಂಟಾಯ್ತಂತೆ. ಅಲ್ಲಿಂದ ಮೀನು ಹಿಡಿಯುವ ದೋಣಿಯಲ್ಲಿ ರಾಮೇಶ್ವರಕ್ಕೆ ಬಂದು ಅಲ್ಲಿಂದ ಕೇರಳಕ್ಕೆ ಬಂದು ಕೊಚ್ಚಿಯಲ್ಲಿ ಇದ್ದನಂತೆ. ಈಗ ಊರುಗೋಲಿನಿಂದ ನಡೆಯುತ್ತಾನೆ. ಹೆಗಲಿಗೆ ಬೆಲ್ಟ್ ಹಾಕುವ ಹೊಸ ನಮೂನೆಯ ಕೋಲನ್ನು ಆಸ್ಪತ್ರೆಯಿಂದ ಕೊಟ್ಟಿದ್ದಾರೆ. ಅದನ್ನು ಹಿಡಿದುಕೊಂಡು ನಡೆಯುತ್ತಾನೆ.

ಈಗ ಗಾಂಧೀಜಿಯ ಜತೆ ಸೇರಿ ಎಲ್ಲರೂ ಒಟ್ಟಾಗಿ ಹೋರಾಡಿದರೆ ಸ್ವತಂತ್ರ ಸಿಕ್ಕುವುದು ಖಂಡಿತ. ಇಂಗ್ಲಿಷಿನವರು ಮಾಡಿದ ಅನ್ಯಾಯಕ್ಕೆ ಸೇಡು ತೀರಿಸಬಹುದು ಅನ್ತಾನೆ.'

'ಮಾಮಿ, ನಾಳೆ ಮಧ್ಯಾಹ್ನ ನಾನು ನಿಮ್ಮ ಮನೆಯ ಹತ್ತಿರ ಬರುತ್ತೇನೆ. ನೀವು ಅಲ್ಲಿಗೆ ಬನ್ನಿ. ನಿಮ್ಮ ಮನೆಗೆ ನನ್ನನ್ನು ಕರೆದುಕೊಂಡು ಹೋಗಿ. ನನಗೆ ಆ ಜನವನ್ನು ನೋಡಬೇಕು' ಎಂದಳು ಭವಾನಿ.

'ನೋಡಬಹುದು. ಅದಕ್ಕೇನಂತೆ. ಆದರೆ ಅವನು ಯಾವಾಗ ಇಲ್ಲಿಂದ ಹೊರಡುತ್ತಾನೆಂದು ಹೇಳಲು ಸಾಧ್ಯವಿಲ್ಲ. ಇವತ್ತು ಬೆಳಗ್ಗೆಯೇ ಕಿಲ್ಲೆಯವರು ಅವನ ಹತ್ತಿರ ಏನೋ ಗುಟ್ಟಾಗಿ ಮಾತನಾಡುತ್ತಿದ್ದರು. ಹಾಗಿದ್ದರೆ ಅವನನ್ನು ಇರಲು ಹೇಳಬೇಕೇ?'

'ನೀವು ಏನೆಂದು ಹೇಳುವುದು? ನಾನು ಹೇಳುವುದು ಕೇಳಿ. ನಾಳೆ ನಾನು ನಿಮ್ಮ ಮನೆಯ ಹತ್ತಿರ ಬರುತ್ತೇನೆ. ನೀವೇ ಅವರನ್ನು ಏನಾದರೂ ಉಪಾಯದಿಂದ ಅಲ್ಲಿಗೆ ಕರೆದುಕೊಂಡು ಬನ್ನಿ. ನನಗೆ ಅವರನ್ನು ಕಂಡು ಒಂದೇ ಒಂದು ಮಾತು ಹೇಳುವುದಿದೆ ಆಯ್ತಾ. ಎಷ್ಟು ಹೊತ್ತಿಗೆ ಬರಬೇಕು ಹೇಳಿ.'

'ನಿನಗೆ ಯಾವಾಗ ಬರಲು ಸಾಧ್ಯ? ನಿನ್ನ ಅಮ್ಮನಿಗೆ ಗೊತ್ತಾದರೆ ಬಯ್ತಾರೆ.'

'ಅದು ನನಗೆ ಬಿಡಿ. ಮಧ್ಯಾಹ್ನ ಸುಮಾರು ಹನ್ನೊಂದೂವರೆ ಗಂಟೆಗೆ ಬರ್ತೇನೆ. ತಲೆಗೆ ಬಟ್ಟೆ ಮುಚ್ಚಿಹಾಕಿ ಬರ್ತೇನೆ.'

'ಆಯ್ತು ಬಾ. ನಿನಗೆ ಅವನನ್ನು ಏನು ಕೇಳಬೇಕಾಗಿದೆ?'

'ನಾಳೆ ನಿಮಗೇ ಅದು ಗೊತ್ತಾಗುತ್ತದೆ' ಅನ್ನುತ್ತ ಭವಾನಿ ಒಳಗೆ ಹೋದಳು. ಅಂತಕ್ಕ ಮಗಳನ್ನು ಕರೆದು ಮಗುವಿನ ಮೂತ್ರದ ಬಟ್ಟೆಗಳನ್ನು ಒಗೆಯುವ ಬುಟ್ಟಿಯಲ್ಲಿಡಲು ಹೇಳಿದರು.

ಮರುದಿನ ಅಚಿಮುವನ್ನು ಕರೆದು ಭವಾನಿ ಹೇಳಿದಳು, 'ಅಕ್ಕನನ್ನು ಮೀಯಿಸಿ ನೀನು ಸೀದ ಮನೆಗೆ ಹೋಗು. ನಾನು ಬಾಣಂತಿಯದ್ದೂ ಮಗುವಿನದ್ದೂ ಒಗೆಯುವ ಬಟ್ಟೆಗಳನ್ನು ಬಾಕಿಮಾರಿನ ಪಕ್ಕದ ಹಳ್ಳದಲ್ಲಿ ಒಗೆದು ತರುತ್ತೇನೆ. ಮಗುವಿನ ಮಲದ ಬಟ್ಟೆಗಳನ್ನು ಅಡುಗೆಯ ಮನೆಯ ಚಿಕ್ಕ ಕೆರೆಯಲ್ಲಿ ಒಗೆದರೆ ಪಾತ್ರೆ ತೊಳೆಯಲು ಸರಿಯಾಗುವುದಿಲ್ಲ. ಹಳ್ಳದಲ್ಲಿ ನೀರು ಧಾರಾಳವಾಗಿ ಇದೆ. ನೀನು ಮತ್ತೆ ಸಂಜೆಯವರೆಗೂ ಗುತ್ತಿಗೆ ಬರಬೇಡ. ಅಮ್ಮ ನಿನ್ನನ್ನು ನಾನೆಲ್ಲಿ ಅಂತ ಕೇಳುವುದಿಲ್ಲ. ನೀನು ಸೀದ ನಿನ್ನ ಮನೆಗೆ ಹೋಗು. ಜಗಲಿಯ ಮೇಲೆ ಎರಡು ತೆಂಗಿನಕಾಯಿ ಇಟ್ಟಿದ್ದೇನೆ. ಅವು ನಿನಗೆ. ಮೀನು ಸಾರಿಗೆ ಹಾಕು. ಸಂಜೆ ಹೊಳೆಯ ಗಾಳದ ಮೀನು ಬರುತ್ತದೆ ತಾನೆ?"

ಅಚಿಮು ಬಾಣಂತಿಯನ್ನು ನೋಡಿಕೊಳ್ಳುವ ಹೆಂಗಸು. ಸರಸುವನ್ನು ಎಣ್ಣೆ ಹಚ್ಚಿ ಸ್ನಾನ ಮಾಡಿಸುತ್ತಾಳೆ, ಹೆತ್ತವಳ ಬಟ್ಟೆಯನ್ನು ಒಗೆದು ಹಾಕಿ ಹಿಂದಿನ ದಿನದ ಪಲ್ಯ ವೇನಾದರೂ ಉಳಿದಿದ್ದರೆ ತೆಗೆದುಕೊಂಡು ಹೋಗ್ತಾಳೆ. ಇವತ್ತು ಭವಾನಿ ಅನಾಯಾಸವಾಗಿ ಕೆಲಸ ಕಡಿಮೆ ಮಾಡಿದ್ದಾಳೆ. ಅಚಿಮು ಖುಷಿಯಾಗಿಯೇ ಮನೆಗೆ ಹೋದಳು.

ಬಟ್ಟೆಯ ಬುಟ್ಟಿಯನ್ನೆತ್ತಿಕೊಂಡು ಭವಾನಿ ಕೂಡಲೇ ಬಾಕಿಮಾರಿನ ದೊಡ್ಡ ಹಳ್ಳದ ಕಡೆಗೆ ಹೋದಳು. ಅಲ್ಲಿ ತನಿಯರು ಹುಲ್ಲು ಹೆರೆಯುತ್ತ ಇದ್ದಳು. ಅವಳ ಹತ್ತಿರ ಹೇಳಿದಳು, 'ತನಿಯರು, ಒಂದು ತುರ್ತು ಮಾತನ್ನು ದೆಯ್ಯಕ್ಕಮಾಮಿಗೆ ಹೇಳಿ ಬಾ ಅಂತ ಅಕ್ಕನೂ ಅಮ್ಮನೂ ಹೇಳಿದರು. ಹೀಗೆ ಹೋಗಿ ಹಾಗೆ ಬರ್ತೇನೆ. ಮನೆಗೇನೂ ಹೋಗುವುದಿಲ್ಲ. ಹೊಲದ ಬಳಿಗೆ ಹೋಗಿ ಹೇಳಿ ಬರ್ತೇನೆ. ನಿನಗೆ ಆದರೆ ಈ ದೊಡ್ಡ ಬಟ್ಟೆಗಳನ್ನು ಒಗೆದು ಹಾಕು. ಮಗುವಿನ ಬಟ್ಟೆಗಳನ್ನು ನಾನೇ ಸೋಪು ಹಾಕಿ ಒಗೆಯುತ್ತೇನೆ. ಸಂಜೆ ಒಂದು ಲೋಟ ಬಿಸಿ ಚಹಾವನ್ನೂ ನಿನ್ನೆಯ ಪಲ್ಯವನ್ನೂ ನಿನಗೆ ಕೊಂಡು ಹೋಗಲು ಕೊಡ್ತೇನೆ. ಆಯ್ತಾ?'

'ಆಯ್ತು ಅಮ್ಮಾವ್ರೇ. ನೀವು ಹೋಗಿ ಬನ್ನಿ. ಈ ಮಟಮಟ ಬಿಸಿಲಲ್ಲಿ ಹೇಗೆ ಹೋಗ್ತೀರಾ? ಸೆರಗು ತಲೆಗೆ ಹಾಕಿಕೊಳ್ಳಿ.'

ಭವಾನಿ ಸೆರಗನ್ನು ತಲೆಗೆ ಮುಸುಕು ಹಾಕಿ ಬೇಗಬೇಗನೆ ಹೋದಳು. ನಿಧಾನಕ್ಕೆ ಹೋದರೆ ಪಟ್ಲ ದಾಟಿ ಸೇನರಮೂಲೆಯ ಮನೆಯ ಬಳಿಗೆ ಬರಲು ಹದಿನೈದು ಇಪ್ಪತ್ತು ನಿಮಿಷವಾದರೂ ಬೇಕು. ತಲೆ ಕೆಳಗೆ ಹಾಕಿ ಒಂದೇ ಉಸಿರಿಗೆ ಬಂದು ಅಲ್ಲಿಗೆ ತಲಪುವಾಗ ಇಬ್ಬರು ಗದ್ದೆಯ ಬದುವಿನಲ್ಲಿ ಹತ್ತಿ ಬರುವುದು ಕಾಣಿಸಿತು. ಒಬ್ಬರು ಹೆಂಗಸು, ಇನ್ನೊಬ್ಬರು ಕೋಲು ಕುಟ್ಟಿಕೊಂಡು ಬರುವ ಗಂಡಸು. ಹತ್ತಿರ ಬಂದಾಗ ಅವರಲ್ಲಿ ಒಬ್ಬರು ದೆಯ್ಯಕ್ಕನೆಂದೂ ಇನ್ನೊಬ್ಬರು ಸೊಂಟದ ಮೇಲೆ ಕಟ್ಟುಮಸ್ತಾಗಿರುವ ಎಣ್ಣೆಗೆಂಪು ಬಣ್ಣದ ಮುಖದಲ್ಲಿ ಒಳ್ಳೆ ಲಕ್ಷಣವಿರುವ ಯುವಕನೆಂದೂ ಗೊತ್ತಾಯ್ತು. ಇವಳನ್ನು ನೋಡಿ ಆತನಿಗೆ ಏನು ಅನ್ನಿಸಿತೋ ಅವನ ಮುಖದಲ್ಲಿ ಮುಗುಳುನಗೆ ಮೂಡಿತು. ಈಗ ಸ್ವಲ್ಪ ಗಡಿಬಿಡಿಗೊಂಡವಳು ಭವಾನಿಯೇ. ಆತ ಕೋಲನ್ನು ದರೆಗೆ ಆನಿಸಿಟ್ಟು ಎರಡೂ ಕೈಗಳನ್ನು ಮುಗಿದು ನಮಸ್ಕಾರ ಎಂದ. ಸ್ವಲ್ಪ ಮೆತ್ತಗಿನ ಸ್ವರದಲ್ಲಿ ಕೆಳಗೆ ನೋಡಿ ಕೈಮುಗಿದು ಅದಕ್ಕೆ ಪ್ರತ್ಯುತ್ತರವಾಗಿ ಅವಳೂ ನಮಸ್ಕಾರ ಅಂದಳು. ಆತ ಸುಮ್ಮನಿದ್ದ.

ಆಗ ದೆಯ್ಯಕ್ಕನೇ ಹೇಳಿದರು. 'ನಿನಗೆ ಏನು ಕೇಳಬೇಕೆಂದಿದೆಯೋ ಕೇಳು. ಇಲ್ಲದಿದ್ದರೆ ನೀನು ಒಳಗೇ ಬರ್ತೀಯಾ?'

ಭವಾನಿ ಎಚ್ಚರಗೊಂಡವಳಂತೆ ಉತ್ತರಿಸಿದಳು. 'ಬೇಡ. ನಾನು ಕೇಳಲಿರುವ ಎರಡು ಮಾತುಗಳನ್ನು ಇಲ್ಲೇ ಕೇಳಿ ಹೋಗ್ತೇನೆ.'

ಮನಸ್ಸು ಗಟ್ಟಿಮಾಡಿ ತಲೆಯೆತ್ತಿ ಹೊಸಬನ ಮುಖ ನೋಡಿ ಹೇಳಿದಳು, 'ನಮ್ಮ ದೇಶಕ್ಕೆ ಸ್ವಾತಂತ್ರ್ಯ ಸಿಗಬೇಕಿದ್ದರೆ ನಾವು ಶತ್ರುಗಳೊಂದಿಗೆ ಹೋರಾಡಬೇಕು. ಹೌದು ತಾನೆ? ಅದೇ ರೀತಿ ಯಾರು ನಮ್ಮ ಸ್ವಾತಂತ್ರ್ಯಕ್ಕೆ ಅಡ್ಡಿಯಾಗ್ತಾರೋ ಅವರ ಜತೆಗೂ ಹೋರಾಡುವುದರಲ್ಲಿ ಅಡ್ಡಿಯಿಲ್ಲ. ಅದು ನ್ಯಾಯಕ್ಕಾಗಿ ಮಾಡುವ ಯುದ್ಧ. ಆದ್ದರಿಂದ ನಮಗೆ ತೊಂದರೆ ಕೊಡುವ, ಮಾನ ಕಳೆಯುವ ಜನಗಳನ್ನು ಕ್ಷಮಿಸಬೇಕಾದ ಅಗತ್ಯ ಇಲ್ಲ ಅಲ್ಲವೇ? ಅದರಲ್ಲಿ ಜೀವ ಕಳೆದುಕೊಂಡರೂ ಅದೊಂದು ಪುಣ್ಯದ ಕಾರ್ಯ.

ಸತ್ಯಾಗ್ರಹ, ಅಹಿಂಸೆ ಎನ್ನುತ್ತ ಪೂರ್ತಿ ಗಾಂಧೀಜಿ ಹೇಳುವುದನ್ನೇ ಕೇಳಬೇಕಾದ ಅಗತ್ಯ ಇಲ್ಲ. ಅಲ್ವೇ?'

'ಖಡಾಖಡಿ ಯುದ್ಧಮಾಡಿ ನಮ್ಮ ಸ್ವಾತಂತ್ರ್ಯವನ್ನು ಪಡೆಯುವುದು ವೀರನ ಕರ್ತವ್ಯ. ಅದು ಪುಣ್ಯದ ಕಾರ್ಯ' ಶಂಕರ ಹೇಳಿದ.

ಕೈ ಮುಗಿಯುತ್ತ ಭವಾನಿ ಹೇಳಿದಳು, 'ಈಗ ನನ್ನ ಮನಸ್ಸಿಗೆ ನೆಮ್ಮದಿ ಆಯ್ತು. ನೀವು ನನಗೆ ದೊಡ್ಡ ಉಪಕಾರ ಮಾಡಿದಿರಿ. ನಾನು ಬರುತ್ತೇನೆ. ಮಾಮಿ, ನಿಮ್ಮ ಉಪಕಾರ ನಾನು ಮರೆಯಲಾರೆ' ಎನ್ನುತ್ತ ಬೆನ್ನು ಹಾಕಿ ಹಿಂತಿರುಗಿ ನೋಡದೆ ಅವಳು ಸರಸರನೆಂದು ಹೆಜ್ಜೆ ಹಾಕುತ್ತ ಹೊರಟೇಹೋದಳು.

ಅವಳು ಏನು ಹೇಳಿದಳೆಂದು ದೆಯ್ಯಕ್ಕನಿಗೆ ತಲೆಬುಡ ಗೊತ್ತಾಗಲಿಲ್ಲ.

ಇವಳು ಅದ್ಯಾವ ರಣವೀಳ್ಯ ತೆಗೆದುಕೊಂಡು ಹೋದಳೆಂದು ಶಂಕರನಿಗೂ ಅರ್ಥವಾಗಲಿಲ್ಲ.

'ಅದ್ಯಾರು ಹುಡುಗಿ? ನೀವು ಒಬ್ಬರು ನಿನ್ನ ಹತ್ತಿರ ಮಾತನಾಡಬೇಕೆಂದು ಹೇಳಿದ್ದಾರೆ ಅಂದಿರಿ. ಇವರೇನಾ ಅವರು?'

'ಹೌದು ಶಂಕರ. ಆದರೆ ಅವಳು ಏನು ಹೇಳಿದಳು, ಏಕೆ ಹೇಳಿದಳು ಗೊತ್ತಾಗಲಿಲ್ಲ' ಎಂದರು ದೆಯ್ಯಕ್ಕ.

ಈಗ ಆಲೋಚನೆಯಲ್ಲಿ ಮುಳುಗಿದ್ದ ಶಂಕರ. ಸುಂದರಿಯಾದ ಈ ಹುಡುಗಿ ಈ ರೀತಿಯಲ್ಲಿ ಮಾತನಾಡಬೇಕಿದ್ದರೆ ಅವಳಿಗೆ ಮನೆಯಲ್ಲಿ ಯಾವ ಬಗೆಯ ತೊಂದರೆ ಇದೆ? ಅವಳು ಯಾರು?

ಶಂಕರ ಬರ್ಮಾದಲ್ಲಿ ಚೆಲುವಿನ ಅದೆಷ್ಟೋ ಹುಡುಗಿಯರನ್ನು ನೋಡಿದ್ದಾನೆ. ಆದರೆ ಅವರು ಯಾರೂ ಅವನ ಮನಸ್ಸಿಗೆ ತಟ್ಟಿರಲಿಲ್ಲ. ಅವರೆಲ್ಲ ಪರದೆಯಲ್ಲಿ ಕಂಡು ಮಾಯವಾಗುವ ಬೊಂಬೆಗಳಂತೆ ಎಂದು ಅವನು ಯೋಚಿಸುತ್ತಿದ್ದ.

'ಈ ಯುವತಿ ಯಾರು ?' ಅವನು ಕೇಳಿದ.

'ಅವಳು ನಮ್ಮ ಪದ್ಮನ ಹೆಂಡತಿ ಸರಸುವಿನ ತಂಗಿ. ಗುತ್ತಿನ ಅಂತಕ್ಕನ ಕೊನೆಯ ಮಗಳು. ಗಾಂಧಾರಿ ಮೆಣಸಿನಂಥ ಚೂಟಿ ಹುಡುಗಿ. ಬಾ ಒಳಗೆ ಹೋಗೋಣ. ಅವರು ಯಾರಾದರೂ ಕೇಳಿದರೆ ನೀನು ಏನು ಹೇಳ್ತೀಯಾ? ಕೊಟ್ಟಿಗೆಗೆ ತಂದಿರುವ ಹೊಸ ಜೋಡಿ ಕೋಣಗಳನ್ನು ನೋಡಿ ಬಂದೆ ಅನ್ನು. ಅವು ಕುಳಕುಂದದ ಜಾನುವಾರು ಸಂತೆಯಲ್ಲಿ ಕಳೆದ ವಾರ ತಂದ ಜೋಡು ಕೋಣಗಳು.'

ಶಂಕರನ ಮನಸ್ಸು ಅಲ್ಲೋಲಕಲ್ಲೋಲವಾಗಿತ್ತು. ಎಲ್ಲೋ ಮನಸ್ಸಿಟ್ಟು 'ಹೂಂ, ಹೂಂ' ಅಂದ. ಈಗ ಅವನ ಮನಸ್ಸಿನಲ್ಲಿ ಏನಾದರೂ ಆಗಬಾರದ್ದು ಆಗಬಹುದೋ ಎಂಬ ಗುಮಾನಿ ಎದ್ದಿತ್ತು. ಆ ದಿನವೇ ಸಂಜೆ ಸಂಕಣ್ಣ ಕಿಲ್ಲೇರರೂ, ಶಂಕರನೂ ಮಣೇಲಿಗೆ ವಾಪಸ್ಸಾದರು. ಯುವಕರನ್ನು ಸತ್ಯಾಗ್ರಹಕ್ಕೆ ಸೇರಿಸಲು, ಒಕ್ಕೂಟ ಮಾಡಲು ಮತ್ತೆ ಬರುತ್ತೇನೆನ್ನುತ್ತ ಶಂಕರ ಹಿಂತಿರುಗಿದ.

ಶಂಕರನ ಮನಸ್ಸು ಭವಾನಿಯ ಹಿಂದೆ ಅಲೆಯತೊಡಗಿತು. ಅಂಥ ಸ್ವಾಭಿಮಾನದ, ಧೈರ್ಯದ ಹೆಣ್ಣನ್ನು ಅವನು ಅದೇ ಮೊದಲ ಸಲ ನೋಡಿದ್ದು. ಮತ್ತೆ ಮತ್ತೆ ಅವಳ ನೆನಪು ಬರುವಾಗ ಅದುವರೆಗೂ ಯೋಚನೆಗೆ ಎಟಕದ ಕೆಲವು ಸಂಗತಿಗಳು ಅವನಿಗೆ ಹೊಳೆಯತೊಡಗಿದುವು. ಮೊದಲನೆಯದು ಅವಳ ರೂಪ. ಆಕೆ ಹಳ್ಳಿಯ ಸಾಮಾನ್ಯ ಹೆಣ್ಣು ಅಲ್ಲವೇ ಅಲ್ಲ. ಕೇದಗೆಯ ಬಣ್ಣ, ಬಿಸಿಲಲ್ಲಿ ನಡೆದು ಮುಖ ಬಾಡಿತ್ತು. ಎರಡು ಕೆನ್ನೆಗಳೂ ಅರೆಗೆಂಪಾಗಿ ಬೆವರಿನ ಹನಿಗಳಿಂದ ಒದ್ದೆಯಾಗಿದ್ದುವು. ಹಣೆಯ ಭಾಗ ಒದ್ದೆಯಾಗಿ ಬಿಸಿಲಲ್ಲಿ ನಡೆದು ಆಯಾಸವಾದುದನ್ನು ಒತ್ತಿ ಹೇಳುತ್ತಿತ್ತು. ಬಂದ ಉದ್ದೇಶವನ್ನು ಹೇಳಲೇಬೇಕೆಂಬ ಹಟದಲ್ಲಿ ಆಯಾಸಗೊಂಡು ಮಾತು ತಡವರಿಸಿದರೂ ಆ ಮಾತಿನ ಖಚಿತತೆ, ಕಣ್ಣಿನ ನೋಟ ಅವಳ ಮನಸ್ಸು ಬಹಳ ಗಟ್ಟಿಯಾಗಿದೆ ಎಂಬುದನ್ನು ಸ್ಪಷ್ಟಪಡಿಸಿದ್ದುವು. ಅವಳಲ್ಲಿ ಸೈನ್ಯವನ್ನು ಸಾಗಿಸುವ ವೀರನ ಸಾಹಸವಿತ್ತು. ದೇಶಕ್ಕೆ ಇಂದಿನ ಪರಿಸ್ಥಿತಿಯಲ್ಲಿ ಈ ಬಗೆಯ ಯುವಜನರ ಅಗತ್ಯವಿದೆ. ಅಂಥ ಹೋರಾಡಬಲ್ಲ ಚಾಕಚಕ್ಯತೆಯುಳ್ಳ ಯುವಜನರನ್ನು ಕಲೆಹಾಕಲು ಶಂಕರ ಹೊರಟಿದ್ದ. ಅವನಿಗೆ ಇವತ್ತು ನೋಡಲು ಸಿಕ್ಕಿದ್ದು ಒಬ್ಬಳು ಹೆಣ್ಣು ಅಂಬಾಭವಾನಿ. ಹೌದು ದೆಯ್ಯಕ್ಕ ಹೇಳಿದ್ದು ಅವಳ ಹೆಸರು ಭವಾನಿ.

ಶಂಕರ ಅಂತರಂಗದಲ್ಲಿ ದಂಗಾದ. ಅದರ ಬೆನ್ನಿಗೇ ಅವನ ಮನಸ್ಸು ಏನೆಂದು ಹೇಳಲಾಗದ ಅಪಾಯವನ್ನು ಎಣಿಸಿ ನಡುಗಿತು.

* * * * *

ಶಂಭು ಚೌಟರು ಬೆಳಗ್ಗೆಯೇ ಎದ್ದು ಹೊರಡಲು ಸಿದ್ಧರಾದರು. ಜರಿಯ ಅಂಚುಳ್ಳ ಕಚ್ಚೆ ಧೋತ್ರವುಟ್ಟು, ಇಡೀ ಕೈಯ ಅಂಗಿ, ತಲೆಗೆ ಬೆಳ್ಳಿಯ ಸರಿಗೆಯುಳ್ಳ ಮುಂಡಾಸು ಕಟ್ಟಿ ಚಾವಡಿಯ ಎದುರಿನ ಜೋಡು ಜಗಲಿಯಲ್ಲಿ ಕುಳಿತು ಎದುರು ಮೊಗಸಾಲೆಯ ಕಡೆಗೆ ತಮ್ಮ ಚಂಡಮುಂಡರು ಎಲ್ಲಿದ್ದಾರೆಂದು ನೋಡಲು ಕಣ್ಣು ಹಾಯಿಸಿದರು. ಗಣಪ ಖಾರ್ವಿ ಆ ಕಡೆ ಈ ಕಡೆ ಅಡ್ಡಾಡುವುದು ಕಾಣಿಸಿತು. ಇವತ್ತು ಸುತ್ತಲಿನ ಗ್ರಾಮದವರೆಲ್ಲ ಸೇರಿ ನಡೆಸುವ ಜಾರಂದಾಯನ ರಥೋತ್ಸವದ ಚರ್ಚೆ ಆಗಬೇಕು. ಭೂತ ಕುಳಿತುಕೊಳ್ಳುವ ಮರದ ಹಳೆಯ ತೇರು ಈಗ ಕುಂಬಾಗಿತ್ತು. ದೈವಕ್ಕೆ ಕುಳಿತುಕೊಳ್ಳುವ ವ್ಯಕ್ತಿ ಉಂಗುರ ಹಾಕಿ ಉಂಗುರ ತೆಗೆಯುವಷ್ಟು ಗಟ್ಟಿಮುಟ್ಟಾಗಿರುವ ಸದೃಢ ಯುವಕ. ಆತ ಕುಳಿತರೆ ತೇರು ಒಂದಿದ್ದುದು ನಾಲ್ಕಾದೀತು. ಆಮೇಲೆ ಅವನನ್ನು ನೆಲದಿಂದ ಸೈಂಗೋಲು ಹಾಕಿ ಎಬ್ಬಿಸಬೇಕಾದೀತು. ಎಷ್ಟೋ ವರ್ಷಗಳಿಂದ ಸ್ಥಾನವನ್ನು ಜೀರ್ಣೋದ್ಧಾರ ಮಾಡಿಸಬೇಕೆಂದು ಹೇಳುವಾಗಲೇ ಇದರ ಪ್ರಸ್ತಾಪವು ಯಾಕೆ ಬರಲಿಲ್ಲ? ಸ್ವಲ್ಪ ಸ್ವಲ್ಪ ಬಂದಿತ್ತು. ಆದರೂ ಈ ವಿಷಯದಲ್ಲಿ ಹೆಚ್ಚು ತಿಳಿದವರು ಐತಪ್ಪ ಕಾಂಜವರು. ಅವರಿಗೆ ಪಾರ್ಶ್ವವಾಯು ಬಡಿದು ನಾಲಗೆ ಹೊರಳುವುದಿಲ್ಲ. ಭೂತ ಕಟ್ಟುವವನನ್ನು ಕೇಳಿದರೆ 'ನಾನು ಹೊಸಬ. ಮಂಡಕೋಲಿನಲ್ಲಿ

ನಮ್ಮ ಹಿರಿಯರು ಇದ್ದಾರೆ. ಯಾವ ಮರದಿಂದ ಅದನ್ನು ಮಾಡಿಸಬೇಕೆಂದು ಅವರನ್ನು ಕೇಳಿ ಹೇಳ್ತೇನೆ' ಅಂತ ಹೇಳಿ ಹೋದವನು ಇವತ್ತಿನವರೆಗೂ ಪತ್ತೆಯಿಲ್ಲ. ನಿನ್ನೆ ತೇರಿನ ಕೊಟ್ಟಿಗೆಯ ಮಾಡನ್ನು ಸರಿ ಮಾಡುವಾಗ ಮಾಡಿನ ಪಕ್ಕಾಸು ತುಂಡಾಗಿ ಕೆಳಗಿದ್ದ ತೇರಿನ ಮೇಲೆ ಬಿದ್ದುದೇ ತಡ ಅದೂ ಒಡೆದು ನೆಲಸಮವಾಯ್ತು. ಇನ್ನು ಕೋಲಕ್ಕಿಂತ ಮೊದಲು ಹೊಸ ತೇರು ಆಗಬೇಕು. ಇನ್ನು ಯಾರನ್ನೂ ಕಾಯಲೂ ಆಗುವುದಿಲ್ಲ. ಇವತ್ತಿನ ಸಭೆಯಲ್ಲಿ ಈ ವಿಷಯ ತೀರ್ಮಾನ ಆಗಬೇಕು. ಮರದ ವಿಲೇವಾರಿ ಹೇಗೆಂದು ತುರ್ತಾಗಿ ತಿಳಿಯಬೇಕು.

ಗುತ್ತು ಮೊದಲ ಮನೆ. ಗುತ್ತಿನವರೇ ಮುತುವರ್ಜಿ ವಹಿಸಬೇಕೆಂದು ಊರಿನ ಹತ್ತು ಸಮಸ್ತರು ಸೇರಿ ಹೇಳಿದರೆ ಇಕ್ಕಟ್ಟಿನ ವಿಷಯ. ಆಗುವುದಿಲ್ಲ ಅನ್ನುವ ಹಾಗಿಲ್ಲ. ಖರ್ಚಿಗೆ ಏನು ಮಾಡುವುದು? ಪದ್ಮನನ್ನು ಕೇಳಬಹುದು. ಪದವುನಲ್ಲಿ ಜಾಗ ಕೊಡುವ ಮಾತಿನಲ್ಲಿ ಅಂತಕ್ಕ ಮತ್ತು ಸಾಮನಿ ಅವನಿಗೆ ಚೆನ್ನಾಗಿ ಹೇಳಿಕೊಟ್ಟು ಅವನ ಕಿವಿಯೂದಿ ಆತ ಮೊದಲಿನಂತೆ ಎಲ್ಲ ವಿಷಯಕ್ಕೂ ಮುಂದೆ ಬರುತ್ತಿದ್ದವನು ಈಗ ಹಿಮ್ಮೆಟ್ಟುತ್ತಿದ್ದಾನೆ. ಈ ಅಂತಕ್ಕ ಇರುವಲ್ಲಿ ಸುಖವಿಲ್ಲ. 'ಮಡೆಂಜಿ(ಒಂದು ಜಾತಿಯ ಮೀನು) ಹೋದಲ್ಲಿ ಕಳಂಕ ತಪ್ಪದು' ಎನ್ನುವ ಹಳೆಯ ಗಾದೆ ಸುಳ್ಳಲ್ಲ.

ಅಲ್ಲಾ, ಈ ಗಣಪನೂ ತಮ್ಮುವೂ ಎಲ್ಲಿ ಹಾಳಾಗಿ ಹೋದರಪ್ಪಾ.. ಕರೆಯುತ್ತೇನೆ. ಬಿಸಿಲು ಬಲಿಯುವ ಮೊದಲೇ ಗುಡ್ಡಹತ್ತಿ ಪದವು ಸೇರಿದರೆ ಉತ್ತಮ. ಬೈದ್ಯನ ಮನೆಯಿಂದ ಹೊಟ್ಟೆ ತುಂಬುವಷ್ಟು ಸಿಹಿ ಹೆಂಡ ಕುಡಿದರೆ ಸಮ. ಹೊತ್ತಾದರೆ ಅವನು ಕಿತಾಪತಿ ಮಾಡಿ ಹೆಂಡ ಹುಳಿಯಾಗಿ ಅದಕ್ಕೆ ನೀರು ಹಾಕಿ ಕೊಡುತ್ತಾನೆಂಬ ಯೋಚನೆ ಬಂದು 'ಓ ಗಣಪ, ಓ ತಮ್ಮು' ಎಂದು ಕರೆದರು.

'ತಮ್ಮು ಕೊಟ್ಟಿಗೆಯಲ್ಲಿದ್ದವನು ಬಾಕಿಮಾರಿನ ಕಡೆಗೆ ಹೋದ. ಗಣಪ ಮೊಗಸಾಲೆಯ ಚಾವಡಿಯಲ್ಲಿ ಇದ್ದನಲ್ಲ..' ಎನ್ನುವ ಅಂತಕ್ಕನ ಧ್ವನಿ ಕೇಳಿಸಿತು.

'ನೀವು ಯಾವಾಗ ಬಂದಿರಿ ಅಕ್ಕ?' ಕೇಳಿದರು ಚೌಟರು.

'ನೀನೇನು ಬೆಳಗ್ಗೆ ಬೆಳಗ್ಗೆ ಎಲ್ಲೋ ಹೊರಟಹಾಗಿದೆ?'

'ಪದವು ಸುತ್ತಲಿನ ನಾಲ್ಕು ಗ್ರಾಮದವರ ಸಭೆ ಇವತ್ತು. ರಥೋತ್ಸವಕ್ಕೆ ಯಾವಾಗ ದಿನವಿಡುವುದೆಂದು ಗೊತ್ತು ಮಾಡಬೇಕು, ಮೊನ್ನೆ ಒಡೆದು ಹೋದ ದೈವದ ತೇರು ಹೊಸದಾಗಿ ನಿರ್ಮಿಸಬೇಕು. ಮರ ಇಲ್ಲಿ ಸಿಗುವುದಿಲ್ಲ. ಅದಕ್ಕೆ ಯಾವ ಮರ ಬೇಕೆಂಬುದೂ ಗೊತ್ತಿಲ್ಲ' ಶಂಭು ಚೌಟರು ಪೂರ್ತಿ ಭಾರವನ್ನು ತಲೆಯ ಮೇಲೆ ಹೊತ್ತುಕೊಂಡವರಂತೆ ಎಲ್ಲವನ್ನೂ ತಾವೊಬ್ಬರೇ ನಿಭಾಯಿಸುವವರಂತೆ ವ್ಯಥೆ ತುಂಬಿದ ಧ್ವನಿಯಿಂದ ಉತ್ತರಿಸಿದರು.

ಅಂತಕ್ಕ ಮಾತನಾಡಲು ಬಂದರೆ ಆ ಸಂಗತಿ ಅಷ್ಟು ಬೇಗ ಮುಗಿಯುವುದಿಲ್ಲವೆಂದು ಅವರಿಗೆ ಗೊತ್ತು. ಈ ಖಾರ್ವಿಯೂ ತಮ್ಮುವೂ ಎಲ್ಲಿ ಮಾಯವಾದರು, ಇವರ ಬಾಯಿಗೆ ಸಿಕ್ಕಿಸಿದರಲ್ಲ ನನ್ನನ್ನು. ಇವತ್ತು ಸಭೆ ಸೇರಬೇಕು. ಇಲ್ಲಿಂದ ಹೊರಡುವಾಗಲೇ

ಬಾಯಿ ಹಾಳು ಮಾಡಿಕೊಂಡು ಹೊರಟರೆ ಚೆನ್ನಾಗಿರುವುದಿಲ್ಲ. ಹೀಗೆ ಯೋಚಿಸುತ್ತಲೇ ಶಂಭು ಚೌಟರು ಬಿಡಿಸಿದ ಶಾಲನ್ನು ಮಡಚುತ್ತ ಚಾವಡಿಯ ಪಕ್ಕದ ಜಗುಲಿಯ ಎದುರಿರುವ ಮೂರು ಮೆಟ್ಟಲುಗಳನ್ನು ಇಳಿದರು. ಹಿಂದೆ ನೋಡದೆ ಅಂಗಳಕ್ಕೆ ಹೋದಾಗ ಅಲ್ಲಿ ಗಣಪ ಇರುವುದು ನೋಡಿದರು. 'ಓ ಗಣಪ, ತಮ್ಮು ಎಲ್ಲಿದ್ದಾನೆ? ನಾನು ಪದವುಗೆ ಹೋಗ್ತಿದ್ದೇನೆ. ನೀವಿಬ್ಬರೂ ಬಾಯಾರಿಕೆ ಕಳೆದು ಕೋಣಗಳ ಕೆಲಸ ಮುಗಿಸಿ ಅಲ್ಲಿಗೆ ಬನ್ನಿ... ಮೈಂದಣ್ಣನನ್ನು ಬೇಗ ರೇಷನ್ ಅಂಗಡಿಗೆ ಬರಲು ಹೇಳಿ.' ಉಸಿರು ಬಿಡದೆ ಹೇಳಿ ಆನೆ ಬಾಗಿಲು ದಾಟಿದರು. ಅಂತಕ್ಕ ನಿಂತು ನೋಡುತ್ತಿದ್ದಂತೆಯೇ ಅವರು ಬಾಕಿಮಾರಿನ ಗದ್ದೆಗೆ ತಲಪಿ ಆಗಿತ್ತು.

ಅಂತಕ್ಕ ನಿಂತಲ್ಲಿಯೇ ಮರಗಟ್ಟುದನ್ನು ಚಾವಡಿಗೆ ಬಂದ ಭವಾನಿ ನೋಡಿದಳು. ಉಜ್ಜಾಲದ ನೀರನ್ನೂ ಬದಲಿಸಿರಲಿಲ್ಲ. ಮುಖ ತೊಳೆದು ಒಂದು ಹನಿ ನೀರನ್ನೂ ಕುಡಿದಿರಲಿಲ್ಲ, ಅಲ್ಲ ದಿನದಿಂದ ದಿನಕ್ಕೆ ಈ ಚಿಕ್ಕ ಮಾವ ಯಾಕೆ ಹೀಗಾಡ್ತಾರೆ? ಮನೆಯ ಯಾವ ಜವಾಬ್ದಾರಿಯೂ ಅವರಿಗೆ ಈಗ ಇಲ್ಲ. ಅವರದ್ದೇ ದರ್ಬಾರು. ಅವರು ಹೇಳಿದ್ದೇ ನಡೆಯುವುದು.

ಅಂಗಳದಲ್ಲಿ ಗಣಪ ಖಾರ್ವಿ ಚಾವಡಿಯ ಮರೆಯಿಂದ ಕೆಳಗಿಳಿದು ಬಂದು ಆಚೆ ಈಚೆ ನೋಡಿದ. 'ಈ ಗುಳಿಗ ಇಲ್ಲೇನು ಇಣುಕಿ ನೋಡ್ತಿದ್ದಾನೆ?' ಅಂದರು ಅಂತಕ್ಕ.

'ಬಹುಶಃ ತನ್ನ ಎಣೆದೈವವನ್ನು ಹುಡುಕುತ್ತಿರಬೇಕು' ಎನ್ನುತ್ತ ಅಂತಕ್ಕ ಮಗಳನ್ನು ಕರೆದು 'ಅವರಿಬ್ಬರಿಗೂ ಚಾ ಮತ್ತು ಓಡುಪ್ಪಳೆ ಕೊಡು ಭವಾನಿ. ಅವರ ಹರಕೆ ತೀರಲಿ. ಇಲ್ಲಿರುವವರ ಗಂಟಲು ಆರಿದರೂ ಈ ಎರಡು ಸೈಂಧವರನ್ನು ತಂದು ಮನೆಯಲ್ಲಿಟ್ಟಿದ್ದಾನಲ್ಲ ಶಂಭು. ಇವರು ಇನ್ನು ಯಾರ ಜೀವ ತೆಗೆದು, ಏನೆಲ್ಲ ಅವಾಂತರ ಮಾಡಿ ಹೋಗಲಿಕ್ಕಿದ್ದಾರೋ! ಯಾಕಿವರನ್ನು ಈತ ಸಾಕ್ತಿದ್ದಾನೋ.. ಆ ಪಂಜುರ್ಲಿಗೇ ಗೊತ್ತು. ಚಾವಡಿಯ ಕಲ್ಲಿನಲ್ಲಿ ಕುಳಿತು ಕಾಲಾಡಿಸುವುದೇನು, ಆಚೀಚೆ ಹೋಗುವ ಹೆಂಗಸರನ್ನು ನೋಡಿ ಸಿಳ್ಳು ಹಾಕುವುದೇನು, ಇದೆಲ್ಲ ಅವನ ಹಿಂದೆ ನಡೆಯುತ್ತದೆಂದು ಶಂಭುಗೆ ಗೊತ್ತಿದೆಯಾ? ದೇವಣ್ಣ ಹೇಗೋ ಬಾಣಗಳ ಮಂಚದಲ್ಲಿ ಮಲಗಿ ಶಸ್ತ್ರ ಸನ್ಯಾಸ ಮಾಡಿ ಯಾರು ಕೇಳಿದರೂ, ಹೇಳಿದರೂ 'ಶಂಭು ಇದ್ದಾನೆ, ಅವನಿಗೆ ಹೇಳಿ' ಎಂದುಬಿಡುತ್ತಾನೆ.

'ಈ ಕರ್ಮದ ಊಟಕ್ಕೆ ದೇವರು ನನ್ನನ್ನು ಕಳುಹಿಸಿದ್ದಾರೆ. ಆ ಜಾರಂದಾಯನೂ ಪಂಜುರ್ಲಿಯೂ ಸತ್ಯದ ದೇವರು ಅವರಿಗೂ ಗೊತ್ತಾಗುವುದಿಲ್ಲವಾ' ಎನ್ನುತ್ತ ಸೆರಗಿನಲ್ಲಿ ಕಣ್ಣೀರೊರಸುತ್ತ ಅಂತಕ್ಕ ಚಾವಡಿ ಇಳಿದು ಅಕ್ಕಿ ಹಸನು ಮಾಡುವಲ್ಲಿಗೆ ಹೋದರು.

ಭವಾನಿ ಒಳಗಿನ ಕೋಣೆ ದಾಟಿ ಅಡುಗೆ ಕೋಣೆಗೆ ಬಂದಳು. ಚಿಕ್ಕ ಬಾಗಿಲಿನಲ್ಲಿ ಕುಳಿತು ಅಕ್ಕಿ ಕೇರುವ ಮೈರುವನ್ನು ಕರೆದಳು. 'ಮೈರು ಅಕ್ಕ, ಸ್ವಲ್ಪ ಇಲ್ಲಿಗೆ ಬನ್ನಿ.'

ಮೈರು, 'ಏಕೆ? ನನ್ನ ಕೆಲಸ ನಿಧಾನವಾದರೆ ಆಮೇಲೆ ಎರಡನೆ ಸುತ್ತಿಗೆ ಅಕ್ಕಿ

ಸಿಗುವುದಿಲ್ಲ. ಕೆಲಸ ನಿಧಾನವಾದರೆ ನಿಮ್ಮ ಅಮ್ಮ ಕಣ್ಣುಮುಖ ನೋಡದೆ ಬೈಯ್ತಾರೆ. ನಾಲ್ಕು ಸೇರು ಬತ್ತ, ಒಂದು ಊಟ, ಎರಡು ಚಾ ಎಲ್ಲ ಹಾಗೇ ಪುಕ್ಕಟೆ ಬರುತ್ತದಾ ಅಂತ ಕೇಳ್ತಾರೆ. ಎಲ್ಲರೂ ಕೆಲಸಗಳ್ಳಿಗಳೇ ಬರುವುದು. ಈ ಕರ್ಮ ಅನುಭವಿಸುವುದನ್ನೇ ದೇವರು ನನ್ನ ಹಣೆಯಲ್ಲಿ ಬರೆದಿದ್ದಾನೆ ಎಂದು ಬೈಯುತ್ತಾರಕ್ಕ.'

'ಹಾಗೇನೂ ತಡವಾಗುವುದಿಲ್ಲ ಮಹಾರಾಯ್ತಿ. ಆ ಎರಡು ರಾಕ್ಷಸರಿಗೆ ಎರಡು ಚಾ ಮತ್ತು ಕುಡಿಬಾಳೆಯೆಲೆಯಲ್ಲಿ ನಾಲ್ಕು ನಾಲ್ಕು ಓಡುಪ್ಪಳೆ ಮತ್ತು ಚಟ್ನಿಯನ್ನು ಕೊಟ್ಟು ಬನ್ನಿ. ಇಲ್ಲಿಗೆ ಕರಿಬೇಡಿ. ಮೊಗಸಾಲೆಯ ಚಾವಡಿಯ ಪಕ್ಕಕ್ಕೆ ತೆಗೆದುಕೊಂಡು ಕೊಟ್ಟು ಬನ್ನಿ. ಆಮೇಲೆ ನೀವೂ ಒಂದು ಲೋಟ ಚಾ ಕುಡಿಯಿರಿ. ಆ ರಾಕ್ಷಸರಿಗೆ ಕೊಟ್ಟು ಬರಲು ನನಗೆ ಇಷ್ಟವಾಗುವುದಿಲ್ಲ. ಅದನ್ನು ಅಮ್ಮನಿಗೆ ಹೇಳಿದರೆ ರಣರಂಗ ಆದೀತು. ಬನ್ನಿ ಮೈರಕ್ಕ..'

ಮೈರೆ ಚಾ ತೆಗೆದುಕೊಂಡು ಹೋಗಿ ಇಡುವಾಗ ತಮ್ಮು ಕೇಳಿದ, 'ಏನು ಚಿಕ್ಕಮ್ಮಾವ್ರು ಒಳಗೆ ಇಲ್ವೇ?'

'ಹಾಗೇನೂ ಇಲ್ಲ. ಒಳಗೆ ಅವರಿಗೆ ಕೆಲಸದ ತುರ್ತು. ಅದಕ್ಕೆ ನನ್ನ ಹತ್ತಿರ ಕೊಟ್ಟು ಬಾ ಅಂದರು' ಮೈರಕ್ಕ ಅವರಿಗೆ ಉತ್ತರಿಸಿದರು. ಗಣಪ ಖಾರ್ವಿ ಸಣ್ಣ ನಗುವಿನೊಂದಿಗೆ ಏನೂ ಮಾತನಾಡದೆ ಓಡುಪ್ಪಳೆಯನ್ನು ಮುರಿದು ಚಟ್ನಿಯಲ್ಲಿ ಮುಳುಗಿಸುತ್ತ ಕುಳಿತ. ಮಾತನಾಡಲು ಯಾವ ವಿಷಯವೂ ಇಲ್ಲ. ಭವಾನಿ ಕಿಟಕಿಯಿಂದ ನೋಡುತ್ತಲೇ ಇದ್ದಳು. ಅವಳ ಮನಸ್ಸಿನ ಒಳಗೆ ಎರಡು ಬಾಯಿಯ ಕತ್ತಿ ಸಾಣೆ ಹಿಡಿಯುತ್ತಲೇ ಇತ್ತು

ಆ ದಿನ ಮಧ್ಯಾಹ್ನ ಊಟಕ್ಕೆ ಬಂದ ಮೈಂದಣ್ಣ ಒಳಗಿನ ಕೋಣೆಯ ನಾಗಂದಿಗೆ ಯಲ್ಲಿ ಇಟ್ಟಿದ್ದ ಚೂರಿಯ ಪಟ್ಟಿಯನ್ನು ತೆಗೆದುಕೊಂಡು ಹೊರಟ. ಅಂತಕ್ಕ ಕೇಳಿದರು, 'ಏನೋ ಮಗಾ, ಕೋಳಿಯ ಬಾಳಿನ ಪಟ್ಟಿಯನ್ನು ತೆಗೆದುಕೊಂಡು ಈ ಮಟ ಮಟ ಬಿಸಿಲಿಗೆ ಎಲ್ಲಿಗೆ ಹೊರಟೆ?'

ನಾಡಿದ್ದು ಸಂಕ್ರಾಂತಿಯ ಬೆನ್ನಿಗೇ ಪದವುನಲ್ಲಿ ಬಹಳ ಜೋರಾದ ಕೋಳಿ ಅಂಕ ಇದೆಯಂತೆ. ಮಣೇಲು, ಸಂಗೊಟ್ಟು ಅಲ್ಲದೆ ನೋಣಾಲ್, ಮುತ್ತೂರು, ಕೆಯಿತ್ರೋಡಿಯ ಹತ್ತಿರದವರೆಲ್ಲ ಕೋಳಿ ತರುತ್ತಾರಂತೆ. ಒಂದು ವೇಳೆ ಸಾಲಿನಲ್ಲಿ ನಿಲ್ಲಿಸಿ ಕೋಳಿಕಟ್ಟಕ್ಕೆ ನಮ್ಮನ್ನೂ ಆಹ್ವಾನಿಸಿದರೆ ನಾವು ಹಿಂಜರಿಯುವುದಕ್ಕಾಗುತ್ತದೆಯೇ? ನಾವು ಕೋಳಿ ಕಟ್ಟು ನಡೆಸುವವರು. ಯಜಮಾನರ ಸ್ಥಾನದಲ್ಲಿರುವಾಗ ನೇರವಾಗಿ ಅಂಥ ಸವಾಲು ಗಳನ್ನೂ ಸ್ವೀಕರಿಸಬೇಕಾಗುತ್ತದೆ. ಅದಕ್ಕೆ ನೀಲಯ್ಯಾಚಾರಿಯ ಹತ್ತಿರ ಈ ಚೂರಿಗಳನ್ನು ಕೊಟ್ಟು ಕಾಯಿಸಿ ನೀರು ಹಾಕಿ ಹರಿತ ಮಾಡಿಸಬೇಕೆಂದು ಮಾವ ಹೇಳಿದರು. ಈಗ ನಿಮ್ಮ ಹತ್ತಿರ ಮಾತನಾಡಿ ಕುಳಿತರೆ ಆಗುವುದಿಲ್ಲ. ನಾನು ಹೋಗುತ್ತೇನೆ' ಎನ್ನುತ್ತ ಮೈಂದಣ್ಣ ಕಿನ್ ಕಾಪಿನ ಬಟ್ಟೆಯಲ್ಲಿ ಸುತ್ತಿದ ಬಾಳುಗಳನ್ನು ತೆಗೆದುಕೊಂಡು ಹೋದ.

ಸಂಜೆ ಐದೋ ಆರೋ ಗಂಟೆಯ ವೇಳೆಗೆ ಮೈಂದಣ್ಣನ ಸವಾರಿ ಪುನಃ

ಬಂತು. ಅವನ ಕಟ್ಟಿನಲ್ಲಿ ಬಟ್ಟೆಯಲ್ಲಿ ಸುತ್ತಿದ ಹದಿನೆಂಟು ಚೂರಿಗಳಿದ್ದುವು. ಇಪ್ಪತ್ತು ಚೂರಿಗಳಲ್ಲಿ ಎರಡರ ತುದಿ ಮೊಂಡಾಗಿತ್ತು. ಅದನ್ನು ಕೋಳಿಗೆ ಕಟ್ಟುವುದಕ್ಕೆ ಆಗುವುದಿಲ್ಲ. ಹಾಗಾಗಿ ಮೈಂದಣ್ಣ ಅವುಗಳನ್ನು ಬೇರೆ ಬಟ್ಟೆಯಲ್ಲಿ ಸುತ್ತಿಕೊಂಡು ತಂದಿದ್ದ.

ಮೈಂದಣ್ಣ ಆ ಎರಡು ಚೂರಿಗಳನ್ನು ಭವಾನಿಯ ಕೈಗೆ ಕೊಟ್ಟು ಅವಳಿಗೆ ಹೇಳಿದ 'ಈ ಎರಡು ಚೂರಿಗಳನ್ನು ಅಲ್ಲಿರುವ ನಾಗಂದಿಗೆಯಲ್ಲಿ ಇಡು. ಜಾಗ್ರತೆ. ತುಂಬ ಹರಿತವಾಗಿವೆ. ಮೈಗೆ ಒಂದಿಷ್ಟು ತಾಗಿದರೂ ಒಳಗೆ ಹೋದುದೇ ಗೊತ್ತಾಗುವುದಿಲ್ಲ. ಏನಾದರೂ ತಾಗಿ ಒಳಗೆ ಹೋದರೆ ಅಸಾಮಿ ಬದುಕುವುದೇ ಕಷ್ಟ. ಕೋಳಿಯ ಕತ್ತಿಯೆಂದರೆ ವಿಷ. ಚುಚ್ಚಿಸಿಕೊಂಡ ಯಾರೂ ಬದುಕಿದ್ದಾರೆಂಬುದನ್ನು ಇದುವರೆಗೆ ಎಲ್ಲೂ ಕೇಳಿಲ್ಲ.'

ಹದಿನೆಂಟು ಚೂರಿಗಳನ್ನು ಕೋದಿಟ್ಟ ಪಟ್ಟಿಯನ್ನು ಚಾವಡಿಯ ಮಾಡಿನ ಜಂತೆಗೆ ಸಿಕ್ಕಿಸಿದ ಮೈಂದಣ್ಣ ಪುನಃ ಪದವುಗೆ ಹೋಗಲು ಗುಡ್ಡವೇರಿದ. ಅವನು ಆ ದಿನ ಬಹಳ ತುರ್ತಿನಲ್ಲಿದ್ದ.

ಮೈಂದಣ್ಣ ತನ್ನ ಕೈಗೆ ಕೊಟ್ಟ ಎರಡು ಕತ್ತಿಗಳನ್ನು ನೋಡಿದ ಭವಾನಿಗೆ ಒಂದು ಹೊಸ ಆಲೋಚನೆ ಬಂತು. ಇವುಗಳನ್ನು ಇನ್ನು ಮೈಂದಣ್ಣ ಸದ್ಯಕ್ಕೆ ಕೇಳಲಾರ.

ಅಂಗಳದ ಪಕ್ಕದ ಹೊಲಕ್ಕೆ ಬಾಗಿದ ಮೂರು ತೆಂಗಿನ ಹಸಿ ಸೋಗೆಗಳನ್ನು ಕರುವದಿಯ ಮೂಲಕ ಶಂಭು ಚೌಟರು ಕಡಿಸಿದ್ದರು. ಶಾಲೆಯ ಮಕ್ಕಳು ಹೊಲದ ಬದುವಿನಲ್ಲಿ ನಡೆಯುವಾಗ ಅವುಗಳನ್ನು ಹಿಡಿದು ಜೋತಾಡುತ್ತಿದ್ದರು. ಬದುವಿನ ಇನ್ನೊಂದು ಬದಿಗೆ ಕಟ್ಟೆ ಕಟ್ಟಿದ ತೋಡಿದೆ. ಅದರಲ್ಲಿ ತುಂಬ ನೀರೂ ಇದೆ. ಈಚೆಗೆ ಕೆಸರಿನ ಹೊಲ. ಒಂದೂವರೆ ಆಳು ಕೆಳಗಿದೆ. ಮಕ್ಕಳು ಬಿದ್ದರೆ ಕಷ್ಟ. ಆ ತುಂಟರನ್ನು ಕಾಯುವವರು ಯಾರು?

'ಆ ಸೋಗೆಗಳನ್ನು ಕತ್ತರಿಸಿ ಹಾಕು' ಶಂಭು ಚೌಟರು ಕಂಬಳದ ಬದಿ ಕಡಿಯುತ್ತಿದ್ದ ಕರುವದಿಯ ಹತ್ತಿರ ಹೇಳಿದರು.

ಅಂತಕ್ಕ ಅದನ್ನು ನೋಡಿ ಅಂಗಳಕ್ಕೆ ತೆಗೆದುಕೊಂಡು ಬರುವವರಿದ್ದರು. ಹಸಿ ಸೋಗೆ ಅಂಗಳಕ್ಕೆ ತಂದರೆ ಅನಿಷ್ಟವೆಂದು ಹೇಳಿ ಅವುಗಳ ಗರಿಗಳನ್ನು ಬಿಡಿಬಿಡಿಯಾಗಿ ಕತ್ತರಿಸಿದರೆ ಪೊರಕೆಕಡ್ಡಿ ಮಾಡಲು ಆದೀತೆಂದು ಮೈರುವಿಗೆ ಹೇಳಿ ಅವಳಿಗೆ ಎರಡು ಸೇರು ನುಚ್ಚಕ್ಕಿ ಕೊಡುವ ಏರ್ಪಾಡು ಮಾಡಿದರು. ಮೈರು ಸೋಗೆಯ ಗರಿಗಳನ್ನು ಒಂದೊಂದಾಗಿ ಕೊಯ್ದು ಮಧ್ಯದ ಕೊತ್ತಲಿಗೆಯನ್ನು ಎರಡೆರಡು ತುಂಡು ಮಾಡಿ ಬಿಸಿಲಿಗೆ ಹಾಕಿದಳು. ಒಂದೊಂದೂ ಎರಡು ಮಾರು ಉದ್ದದ ತುಂಡು. ಭವಾನಿ ಒಂದು ಕತ್ತಿಯನ್ನು ಒಂದು ಕೊತ್ತಲಿಗೆಯ ತುಂಡಿನ ತುದಿಗೆ ಸಿಕ್ಕಿಸಿ ಕಲ್ಲಿನಲ್ಲಿ ಹೊಡೆದು ಗಟ್ಟಿಯಾಗಿ ನಿಲ್ಲುವಂತೆ ಮಾಡಿದಳು. ಹಾಗೆಯೇ ಇನ್ನೊಂದು ಕೊತ್ತಲಿಗೆಯ ತುಂಡಿಗೂ ಕತ್ತಿಯನ್ನು ಸಿಕ್ಕಿಸಿ ಆಯುಧವನ್ನು ತಯಾರಿಸಿದಳು. ಅದನ್ನು ಏಕೆ ಮಾಡಿದ್ದೀಯಾ ಅಂತ ಕೇಳಿದರೆ ಅದಕ್ಕೆ ಸರಿಯಾದ ಉತ್ತರ ಅವಳಿಗೂ ಗೊತ್ತಿಲ್ಲ.

ತನ್ನ ಜೀವ ರಕ್ಷಣೆಗೆ, ತನ್ನ ಮಾನ ರಕ್ಷಣೆಗೆ ಅಂಥ ಆಯುಧದ ಅಗತ್ಯವಿದೆಯೆಂದು ಅವಳ ಒಳಮನಸ್ಸಿಗೆ ತೋಚಿತ್ತು. ಮರ್ಯಾದೆಯ ಮಿತಿಯನ್ನು ಮೀರದ ಹೆಣ್ಣುಮಗಳು ಭವಾನಿ. ಮರ್ಯಾದೆಗೆ ಚ್ಯುತಿ ಬಂದೀತೆಂದು ಅವಳಿಗೇಕೆ ಅನ್ನಿಸಿತೋ, ದೇವರಿಗೇ ಗೊತ್ತು. ಅದನ್ನು ತಂದು ಮಾಡಿನ ಅಡಿಯಲ್ಲಿ ಅಡ್ಡಕ್ಕೆ ಚುಚ್ಚಿ ಇಟ್ಟಳು.

ಎಣಿಸಿದಂತೆಯೇ ಆದಿನ ಶಂಭು ಚೌಟರು ಗುತ್ತುಮನೆಗೆ ಹಿಂತಿರುವಾಗ ಮಧ್ಯರಾತ್ರಿ ಕಳೆದಿತ್ತು. ಅವರೊಂದಿಗೆ ರಾತ್ರಿ ಮಾತನಾಡಲು ಸಾಧ್ಯವಿಲ್ಲ, ನಾಳೆ ಹಗಲು ಮಾತನಾಡೋಣವೆಂದು ಅಂತಕ್ಕ ಭಾವಿಸಿದರು. ಮರುದಿನ ಬೆಳಗ್ಗೆ ಹತ್ತೂವರೆ ಗಂಟೆಯ ಹೊತ್ತಿಗೆ ಚಿಕ್ಕ ಚೌಟರ ಸವಾರಿ ಮಹಡಿಯಿಂದ ಇಳಿದು ಕೆಳಗೆ ಬಂತು. ಮುಖ ತೊಳೆದು ಚಾ ಫಲಹಾರ ಮುಗಿಯುವಾಗ ಹನ್ನೊಂದು ಕಳೆಯಿತು.

ಅಷ್ಟು ಹೊತ್ತಿಗೆ ಅಂತಕ್ಕ ಮನೆಯೊಳಗಿನಿಂದ ಹೊರಗೆ ಬಂದರು. ಚೌಟರನ್ನು ಕೇಳಿದರು, 'ಶಂಭು, ಸರಸುವಿನ ಮಗುವಿಗೆ ಸೊಂಟದ ನೂಲು, ಕತ್ತಿನ ಸರ, ಕೈಗಳಿಗೆ ಬಂಗಾರದ ಬಳೆ ಮಾಡಿ ಹಾಕಲು ನೀಲಯ್ಯ ಆಚಾರಿಯನ್ನು ನಾಳೆ ಬರಲು ಹೇಳಿದ್ದೇನೆ. ಅವನಿಗೆ ಮುಂಗಡ ಹಣ ಕೊಡಬೇಕು. ನಿನಗೆ ನಾನು ಮೊನ್ನೆಯೇ ಹೇಳಿದ್ದೇನಲ್ಲ.'

ಶಂಭು ಚೌಟರು ಚಾವಡಿಯ ಮೊಗಸಾಲೆಯಲ್ಲಿದ್ದ ಹಲಗೆಯೊಂದರ ಮೇಲೆ ಮಲಗಿದ್ದವರು ಅಕ್ಕನ ಧ್ವನಿ ಕೇಳಿ ಇನ್ನೊಂದು ಮಗ್ಗುಲಿಗೆ ತಿರುಗಿ ಅವರಿಗೆ ಬೆನ್ನು ಹಾಕಿ ಹೊರಗೆ ಅಂಗಳದತ್ತ ನೋಡಲು ಶುರುಮಾಡಿದರು.

'ನಾನು ಹೇಳಿದ್ದು ಕೇಳಿಸುತ್ತದಾ ಶಂಭು? ಇನ್ನು ಆಚೀಚೆ ನೋಡುವುದರೊಳಗೆ ನೀನು ಹೊರಟು ಪದವು ಗುಡ್ಡ ಹತ್ತಿಬಿಡ್ತೀಯಾ. ನಿನಗೆ ಈ ತರ ಹಂಚಿಕೆ ಮಾಡುವುದೇ ಅಭ್ಯಾಸವಲ್ಲವೇ?' ಅಂತಕ್ಕ ಒಂದೇ ಸಮನೆ ಮಾತಿನ ಮಣಿ ಪೋಣಿಸುತ್ತಲೇ ಹೋದರು.

'ಅಲ್ಲ, ಯಾರನ್ನು ಕೇಳಿ ನೀನು ನೀಲಯ್ಯ ಆಚಾರಿಯನ್ನು ಬರಲು ಹೇಳಿದ್ದು? ಬಂಗಾರದ ಕತ್ತಿನ ಸರ ಅನ್ತೀಯಲ್ಲ. ಒಳಗೆ ಕಟ್ಟಿಟ್ಟ ಹಣ ಇಲ್ಲ. ನಿನ್ನ ಹತ್ತಿರ ಕಂಬೋಳಿಯಾಲರ ಮನೆಯಿಂದ ತಂದ ಗಂಟಿದ್ದರೆ ಆಚಾರಿಗೆ ಕೊಟ್ಟು ಮಾಡಿಸು.'

'ಅಲ್ವೋ, ತಂದ ಗಂಟಿದ್ದರೆ ನನ್ನ ಮಗುವಿಗೆ ಹಾಕಲು ನಿನ್ನನ್ನು ಬೇಡಬೇಕಾ? ನಿನ್ನ ಕೈಯಿಂದ ಕೊಡಬೇಡ. ಮನೆಯ ಹುಟ್ಟುವಳಿಯಿಂದ ಕೊಡು. ಇಲ್ಲಿಯ ನಲವತ್ತು ಕೋರ್ಜಿ ಹುಟ್ಟುವಳಿಯಿಂದ ನನ್ನ ಮಗುವಿಗೆ 5 ಪವನಿನ ಬಂಗಾರ ಮಾಡಿಸಲು ನಿನಗೆ ದಾರಿದ್ರ್ಯವೇ? ನನ್ನ ಬಾಯಿಗೆ ಮಣ್ಣು ಹಾಕಿ ನಿನ್ನ ಹಾರಾಟವಾ?' ಶಂಭು ಚೌಟರು ಬೆನ್ನು ಅಲುಗಾಡಿಸದೆ ಅಕ್ಕನ ಮಾತನ್ನು ಕೇಳುತ್ತ ಇದ್ದರು.

'ನಿನ್ನ ನಾಲಗೆ ಎಷ್ಟುದ್ದ ಹೋದೀತೆಂದು ನನಗೆ ಗೊತ್ತುಂಟು. ನಿನ್ನ ಹಾರಾಟ ತಡೆಯುವುದಕ್ಕೇ ಕಣ್ಣು ಮುಟ್ಟದ ಊರಿಗೆ ಮದುವೆ ಮಾಡಿಸಿ ಕೊಟ್ಟೆವು. ಅಲ್ಲೂ ನೀನು ಉದ್ಧಾರ ಆಗಲಿಲ್ಲ. ಮುತ್ತೈದೆ ಭಾಗ್ಯ ಕಳಕೊಂಡು ನಮ್ಮನ್ನು ಬದುಕಲು ಬಿಡಬಾರದು ಅಂತ ಗಟ್ಟದ ಸಂದಿಯಿಂದ ಗುತ್ತಿನ ಮನೆಗೆ ಮತ್ತೆ ಬಂದೆ. ನಮ್ಮನ್ನು ಸರ್ವನಾಶ ಮಾಡಲು ಇಲ್ಲಿ ಬಂದು ಸೇರಿದೆ. ಇನ್ನೂ ನಿನ್ನ ಗೋಳು ಮುಗಿಯಲಿಲ್ಲ.

ಈಗ ಬಾಯಿ ಮುಚ್ಚಿಕೊಂಡು ಒಳಗೆ ಹೋಗು.'

'ಏನಂದೆ? ನಾನು ಬಾಯಿ ಮುಚ್ಚಬೇಕಾ? ಇಡೀ ಹುಟ್ಟುವಳಿಯನ್ನು ಒಬ್ಬನೇ ನುಂಗಿಹಾಕ್ತೀಯಾ. ನನ್ನ ಮಗನನ್ನೂ ನೀನು ಒಳಗೆ ಹಾಕಿ ನಿನ್ನ ಇಟ್ಟುಕೊಂಡವಳ ಚಾಕರಿಗೆ ನಿಲ್ಲಿಸಿಕೊಂಡೆ. ಅವನನ್ನು ಅವಳ ಗುಲಾಮನನ್ನಾಗಿ ಮಾಡಿದೆ. ನನ್ನ ಮಗ ನಿನಗೆ ಹಾಳೆ ಹಿಡಿಯುವವನಾದನಲ್ಲ.'

'ಮುಚ್ಚು ಬಾಯಿ. ಬೆಳಿಗ್ಗೆ ಬೆಳಿಗ್ಗೆಯೇ ಶುರುವಾಯ್ತು ನಿನ್ನ ಗೋಳು. ಹೀಗೆ ಮಾಡಿ ಮಾಡಿ ಮನೆಗೇ ಬೆಂಕಿ ಇಟ್ಟು ನಾಶಮಾಡಿದೆ. ನಿನ್ನ ಗಂಟಲಿಗೆ ಆ ಜಾರಂದಾಯ ಗಂಟಲು ಬೇನೆ ಕೊಡುವುದಿಲ್ಲವಲ್ಲ...' ಚೌಟರು ರೋಷಾವೇಶದಿಂದ ಕೂಗಾಡಿದರು.

'ಏನು ಬಗುಳುತ್ತೀಯಾ ಬದ್ಮಾಶ್, ಮೂರು ಕಾಸಿನವ. ನಿನ್ನ ಹಣೆಯನ್ನು ಒಡೆದು ಈ ಮನೆಗೆ ತೋರಣ ಕಟ್ತೇನೆ. ಕಾಡಿನ ಬನದೇವತೆಗೆ ನಿನ್ನ ರಕ್ತ ಕೊಡ್ತೇನೆ' ಎನ್ನುತ್ತ ಗಡಗಡ ನಡುಗುತ್ತ ಅಂತಕ್ಕ ತಮ್ಮನ ತಲೆ ಕತ್ತರಿಸಲು ಆಯುಧವನ್ನು ಹುಡುಕಿದರು. ಅಂತಕ್ಕನಿಗೆ ಆಗ ಚಾವಡಿಯಲ್ಲಿ ಕಾಣಿಸಿದ ಆಯುಧವಾದರೂ ಏನು? ಉಯ್ಯಾಲೆಯಲ್ಲಿಟ್ಟ ಕೊಂಬಿರುವ ಕಂಚಿನ ಗಿಂಡಿ. ಅದರ ಕೊಂಬನ್ನು ಹಿಡಿದು ಗಿಂಡಿಯಲ್ಲಿ ಹೊಡೆಯುವುದಕ್ಕೆಂದು ಅದನ್ನು ಎತ್ತಲು ಹೋದರು. ಇವಳ ಮಾತೇಕೆ ತಡೆಯಿತೆಂದು ಚೌಟರು ತಿರುಗಿ ನೋಡಿದರೆ ಅವರು ಮಣೆಯಲ್ಲಿ ಇಟ್ಟಿದ್ದ ಕೊಂಬಿನ ಗಿಂಡಿಯನ್ನು ತೆಗೆಯಲು ಕೈ ನೀಡುವುದು ಕಾಣಿಸಿತು.

'ಅಯ್ಯೋ ರಾಕ್ಷಸಿ, ರಕ್ತೇಶ್ವರಿ ನಿನ್ನ ವಶಕ್ಕೆ ಬಂದುಬಿಟ್ಟಳಾ? ನಿನ್ನ ಎದೆಗೆ ಒದ್ದು ಹಣೆಯನ್ನು ಸೀಳುತ್ತೇನೆ. ಇರು...' ಎನ್ನುತ್ತ ನೆಗೆದು ಬಂದು ಅಂತಕ್ಕ ಬಗ್ಗಿಕೊಂಡಿರು ವಾಗಲೇ ಅವರ ಬಲಗೈಯಲ್ಲಿದ್ದ ಕೊಂಬಿನ ಗಿಂಡಿಯನ್ನು ಹಿಡಿದುಕೊಂಡರು. ಬಗ್ಗಿದ್ದ ಅಂತಕ್ಕನ ತಲೆಕೂದಲು ಅವರ ಎಡಗೈಗೆ ಸಿಕ್ಕಿತು.

ಬಾಯಿಗೆ ಬಾಯಿ ಮಾತಿಗೆ ಮಾತು ಮಾರಾಮಾರಿ ನಡೆಯುತ್ತಿದ್ದುದನ್ನು ಒಳಮನೆಯಲ್ಲಿ ಗೋಡೆಗೆ ಒರಗಿ ಬಾಗಿಲ ಬಳಿಯಲ್ಲಿ ನಿಂತು ಕಿವಿಗೊಡುತ್ತಿದ್ದಳು ಭವಾನಿ. ಶಬ್ದ ಇಲ್ಲ, ಅಮ್ಮ ಜೋರಾಗಿ ಉಸಿರುಬಿಡುತ್ತ 'ಲೋ, ಕುಟುಂಬ ದ್ರೋಹಿ, ನೀನು ಸಂಕಪ್ಪ ಚೌಟರಿಗೆ ಹುಟ್ಟಿದವನೇ ಆದರೆ ಸತ್ಯನಾಶವಾಗಿ ಹೋಗು. ನನ್ನ ತಲೆಕೂದಲು ಬಿಡು. ನಿನ್ನ ಆ ಕೈ ಹುಲಿಭೂತಕ್ಕೆ ಸಲ್ಲಲಿ' ಎಂದು ಶಪಿಸಿದರು. ಕೋಪ ಮತ್ತು ದುಃಖ ಎರಡೂ ಅವರ ಮಾತುಗಳಲ್ಲಿ ಉಕ್ಕಿ ಹರಿಯುವಂತೆ ಕಾಣಿಸಿತು.

ಭವಾನಿಗೆ ಭೂಮಿ ಮತ್ತು ಆಕಾಶ ಒಂದಾದಂತೆ ಅನಿಸಿತು. ಏನು ಮಾಡುವುದೀಗ? ಮಾಡಿನ ಎಡೆಯಲ್ಲಿ ಸಿಕ್ಕಿಸಿದ ಕೋಳಿಕಟ್ಟದ ಕತ್ತಿ ನೆನಪಾಯ್ತು. ಕುರುಬಾಗಿಲಿನಿಂದ ಹೊರಗೆ ಓಡಿಹೋಗಿ ಮಾಡಿನ ಅಡಿಯಲ್ಲಿ ಕೊತ್ತಲಿಗೆಗೆ ಸಿಕ್ಕಿಸಿದ ಎರಡೂ ಕತ್ತಿಗಳನ್ನು ಹಿಡಿದುಕೊಂಡು ಒಂದೇ ಉಸುರಿಗೆ ಓಡಿ ಒಳಗೆ ಬಂದಳು. ಒಳಬಾಗಿಲಿನಿಂದ ಬಾಗಿಲು ದಾಟಿ ಚಾವಡಿಗೆ ಕಾಲಿಟ್ಟಾಗ ಅಲ್ಲಿನ ದೃಶ್ಯವನ್ನು ನೋಡಿ ಅವಳ ನೆತ್ತರು ಕುದಿಯಿತು. ಅಮ್ಮ ಪ್ರಜ್ಞೆ ತಪ್ಪಿ ಬಿದ್ದಿದ್ದರು. ಅವರ ಬಲಗೈಯಲ್ಲಿ ಎತ್ತಿ ಹಿಡಿದಂತೆ

ಕೊಂಬಿನ ಗಿಂಡಿ ಇತ್ತು. ಅದನ್ನು ಒತ್ತಿ ಹಿಡಿದಿದ್ದರು ಮಾವ. ಗಿಂಡಿಯ ನೀರು ಚೆಲ್ಲಾಡಿ ಅಮ್ಮನ ತಲೆ, ಮೈಯೆಲ್ಲ ಒದ್ದೆಯಾಗಿತ್ತು. ಮಾವ ಎಡಗೈಯಲ್ಲಿ ಅಮ್ಮನ ಕೂದಲನ್ನು ಎಳೆದು ಹಿಡಿದುದರಿಂದ ಇನ್ನೇನು ಅಮ್ಮನ ಕುತ್ತಿಗೆ ಮುರಿಯುತ್ತದೆಂದೇ ಭವಾನಿ ಹೆದರಿದಳು. 'ಬಿಡಿ ಬಿಡಿ' ಎಂದು ಬೊಬ್ಬೆ ಹಾಕುತ್ತ ಭವಾನಿ ಬಲಗೈಯಲ್ಲಿ ಇದ್ದ ಕೊತ್ತಲಿಗೆಯ ಕಡೆಯಲ್ಲಿದ್ದ ಚೂರಿಯನ್ನು ಸಾಧ್ಯವಿದ್ದಷ್ಟು ಬಲದಿಂದ ಶಂಭು ಚೌಟರ ಕಂಕುಳಿಗೆ ಚುಚ್ಚಿದಳು.

ರೌದ್ರಾವೇಶ ಮತ್ತು ಭಯ ಎರಡೂ ಸೇರಿ ಭವಾನಿ ನಿಜಕ್ಕೂ ಅಂಬಾಭವಾನಿಯೇ ಆದಳು. ಕೈಯಲ್ಲಿದ್ದ ಕೊತ್ತಲಿಗೆಯನ್ನು ಎಳೆದು ತೆಗೆಯಲಾರದೆ ಶರೀರ ನಡುಗುತ್ತಿತ್ತು. ಕೊತ್ತಲಿಗೆಯ ತುದಿ ಅಷ್ಟು ಆಳವಾಗಿ ಶಂಭು ಚೌಟರ ದೇಹದೊಳಗೆ ನಾಟಿತ್ತು.

'ಓ ಅಪ್ಪಾ, ಓ ಪಂಜುರ್ಲಿಯೇ, ಈ ರಂಡೆ ನನ್ನನ್ನು ಸರ್ವನಾಶ ಮಾಡಿದಳೆಂದು ಪೂರ್ತಿ ಹೇಳುವುದರೊಳಗಾಗಿ ಚೌಟರ ಕೈ ಅಂತಕ್ಕನ ಹೆರಳಿನಿಂದ ಜಾರಿತು. ಅಂತಕ್ಕನ ಕೈಯಲ್ಲಿದ್ದ ಕೊಂಬಿನ ಗಿಂಡಿಯನ್ನು ಒತ್ತುತ್ತಿದ್ದ ಬಲಗೈ ಸಡಲಿತು. ಬುಡ ಕಡಿದ ಬಾಳೆಯಂತೆ ಶಂಭು ಚೌಟರ ಜೀವ ಚಾವಡಿಯ ನೆಲಕ್ಕೆ ಜಾರಿತು. ಅಂತಕ್ಕ ಮೈಜಾಡಿಸಿ ನೇರವಾಗಿ ಕುಳಿತರು.

ಚಾವಡಿಯ ಎದುರಿನ ಮೊಗಸಾಲೆಯ ಹಿಂದಿರುವ ಚಿಕ್ಕ ಜಗಲಿಯಲ್ಲಿ ಕಾಲನ್ನು ಅಂಗಳಕ್ಕೆ ಇಳಿಸಿ ಕುಳಿತುಕೊಂಡು ಮನೆಯ ಚಾವಡಿಯಲ್ಲಿ ನಡೆಯುತ್ತಿದ್ದ ಕುರುಕ್ಷೇತ್ರದ ಉರುಳಾಟವನ್ನು ಕಣ್ಣುಬಾಯಿ ಬಿಟ್ಟುಕೊಂಡು ನೋಡುತ್ತಲೇ ಇದ್ದ ಗಣಪ ಖಾರ್ವಿ ಕುಳಿತಲ್ಲೇ ಮರಗಟ್ಟಿದ. ಅಂಗಳಕ್ಕಿಳಿದು ಚಾವಡಿಗೆ ಹೋಗುವ ಸಾಮರ್ಥ್ಯವಾಗಲೀ ಧೈರ್ಯವಾಗಲೀ ಅವನಿಗಾಗಲಿಲ್ಲ. ಅಕ್ಕ ತಮ್ಮನ ಜಗಳದ ಮಧ್ಯೆ ತಾನು ಹೋಗುವುದು ಹೇಗೆ? ಎಂದು ಅವನಿದ್ದ. ಚಾವಡಿಯ ಒಳಗೆ ಬೆಳಕೂ ಚೆನ್ನಾಗಿರಲಿಲ್ಲ. ಬಾಗಿಲ ಹತ್ತಿರ ಬರುವಾಗಲೇ ಭವಾನಿ ಚೌಟರಿಗೆ ಹೊಡೆದಿದ್ದಳು. ಅವಳು ಹೇಗೆ ಬಂದಳು ಹೇಗೆ ಮಿಂಚು ಸುಳಿದಂತೆ ಬಂದು ಚೌಟರಿಗೆ ಹೊಡೆದಳು ಎಂಬುದು ಆ ಪಂಜುರ್ಲಿಗೇ ಗೊತ್ತು.

ಚೌಟರು 'ಓ ಅಪ್ಪಾ, ಓ ಪಂಜುರ್ಲೀ' ಎಂದು ಕಿರುಚುತ್ತ ನರಳುವಾಗ ಖಾರ್ವಿ ನೆಗೆದು ಬಿದ್ದ.

ಏನೋ ಆಗಬಾರದ ಘಟನೆ ಆಗಿದೆಯೆಂದು ಅವನಿಗೆ ಗೊತ್ತಾಯ್ತು. ಮರಗಟ್ಟಿದವನಿಗೆ ಎಚ್ಚರವಾದ ಕ್ಷಣದಲ್ಲಿ ಹಿಂದೆ ಮುಂದೆ ಯೋಚಿಸದೆ ಅಂಗಳಕ್ಕೆ ನೆಗೆದು ಚಾವಡಿಯ ಎದುರಿನ ಜೋಡು ಜಗಲಿಯನ್ನು ದಾಟಿ ಒಂದೇ ನೆಗೆತಕ್ಕೆ ಚಾವಡಿಯ ಮೂರು ಮೆಟ್ಟಿಲುಗಳನ್ನೂ ಏರಿ ಚೌಟರು ಬಿದ್ದಲ್ಲಿಗೆ ಓಡಿಬಂದ.

ಭವಾನಿ ರೋಷಾವೇಶದಿಂದ ಮಾವನಿಗೆ ಕತ್ತಿಯಲ್ಲಿ ಹೊಡೆದಿದ್ದಳು. ಆದರೆ ಅದಾದ ಮೇಲೆ ಕಲ್ಲಿನಂತೆ ಕುಳಿತಿದ್ದಳು. ಅವಳ ಶರೀರವಿಡೀ ಷಷ್ಠಿಯ ಚಳಿ ಹಿಡಿದಂತೆ ಥರಥರ ನಡುಗುತ್ತಿತ್ತು.

ಖಾರ್ವಿ ನೆಗೆಯುತ್ತ ಬಂದವನು ಚೌಟರು ಹೊರಳಿ ನೆಲಕ್ಕೆ ಬಿದ್ದುದನ್ನು ನೋಡಿದ.

ಪಂಚೆ ಹಾಸಿ ಅವರ ಪಕ್ಕ ಕುಳಿತು, 'ಹಡೆರಂಡೆಗ್ಳ್, ಇವರ್ಗೆ ಗುಳಿಗೆ ಹೊಡ್ಯೋಕೆ, ಧನಿಗ್ಳನ್ನ ಹೊಡ್ದ್ ಅಮರಿಸ್ಲೆಕ್ ಹೆಂಗ್ ಧೈರ್ಯ ಬಂತ್, ಇವ್ರ ರಕ್ತ ಕುಡೀತ್ತೀನಿ, ಹೊಡ್ದು ಹಾಕ್ತೀನಿ. ಧನಿಗ್ಳೆ.. ಧನಿಗ್ಳೇ.. ಮಾತ್ನಾಡಿ, ನಾನ್ ಎಂತ ಮಾಡ್ಬೇಕ್ ಅಂತ್ ಅಪ್ನೆ ಕೊಡಿ' ಎನ್ನುತ್ತ ಚೌಟರ ಕಂಕುಳು ಸವರಿದ. ರಕ್ತ ಬುಳಬುಳನೆ ಕೈತುಂಬ ಹರಿಯಿತು. 'ಹಡಬೆ ರಂಡೆ, ಎಲ್ಲವ್ಳು' ಎಂದು ಹೇಳಿ ಏಳಲು ಹೊರಟಾಗ ಇಷ್ಟು ಹೊತ್ತು ಮರಗಟ್ಟಿದಂತೆ ಕಲ್ಲಾಗಿದ್ದ ಭವಾನಿಯ ಮೈಯಲ್ಲಿ ಆ ಪುಲಿಭೂತದ ಆವೇಶವೇ ಆಗಿರಬೇಕು ಎಂಬಂತೆ ಖಾರ್ವಿಯ ಮೇಲಿದ್ದ ಅವಳ ಕೋಪ ನಾಗಸರ್ಪದ ದ್ವೇಷದಂತೆ ಜ್ವಲಿಸಿತು. ಎದೆಯಲ್ಲಿ ಹಗೆಯ ಸರ್ಪ ಬುಸುಗುಟ್ಟಿತು. ಬಂಟರ ಹೆಣ್ಣಿನ ನಿಜ ಸಾಹಸದಲ್ಲಿ ಮಲೆತು ಕೆರಳಿ 'ಹೌದೇನೋ ನೀಚ, ನಿನಗಿವತ್ತು ಕಾದಿದೆ.. ನಿನ್ನ ರಕ್ತ ಇವತ್ತು ಗುತ್ತಿನ ಮಣ್ಣನ್ನು ನೆನೆಯಿಸಲಿ...' ಎಂದವಳೇ ಒಂದು ಹೆಜ್ಜೆ ಮುಂದೆ ಬಂದು ಎಡದ ಕೈಯಲ್ಲಿದ್ದ ಕೊತ್ತಲಿಗೆಯ ಚೂರಿಯನ್ನು ಬಲದ ಕೈಗೆ ತಂದು ಒಂದೇ ಏಟಿಗೆ ಅವನ ಹತ್ತಿರ ನೆಗೆದು ಕತ್ತಿಯನ್ನು ಅವನ ಹೆಗಲಿಗೆ ಚುಚ್ಚಿ ಬಲವಾಗಿ ತಳ್ಳಿದಳು. ಅವಳ ಒಳಗೆ ಹೆಪ್ಪುಗಟ್ಟಿದ್ದ ಅವನ ಮೇಲಿದ್ದ ಸೇಡು, ತಿರಸ್ಕಾರಗಳು ಆ ತಳ್ಳುವಿಕೆಗೆ ಗುಳಿಕನ ಶಕ್ತಿಯನ್ನು ದಯಪಾಲಿಸಿದುವು. ರಕ್ತೇಶ್ವರಿ ಕುಣಿದು ಬಂದಳು.

ಖಾರ್ವಿ, 'ಏನ್ ಏನ್, ಹೆಂಗ್ ಬರ್ತೀಯಾ ನೋಡ್ಕೋತೇ' ಎನ್ನುತ್ತ ತಿರುಗಿದಾಗ ಆತನ ಮೈಗೆ ಚುಚ್ಚಿದ ಕತ್ತಿ ಅವನ ಬಲಭುಜದ ಒಳಗೆ ನುಗ್ಗಿ ಮತ್ತೂ ಆಳಕ್ಕೆ ಇಳಿಯಿತು.

'ಅಯ್ಯೋ, ಕಾಳಮ್ಮ ದೇವಿ, ನನ್ನ ಅಬ್ಬೆ.. ಅಬ್ಬೆ... ಸತ್ತೇ' ಎಂದು ಬೊಬ್ಬಿಟ್ಟು ಖಾರ್ವಿ ದಡಾರನೆ ಮಗುಚಿ ಬಿದ್ದ. ನಾಲ್ಕು ದಿಕ್ಕಿಗೂ ರಕ್ತದ ಓಕುಳಿ ಚೆಲ್ಲಿತು. ಅಂತಕ್ಕ ಎದ್ದು ಕುಳಿತವರು ಸುತ್ತ ನಡೆದ ರಣರಂಗವನ್ನು ನೋಡಿ ದಿಗ್ಭ್ರಾಂತರಾದರು. ನಾಲಗೆ ಸತ್ತು ಹೋದಂತಾದರು. ಭವಾನಿ ಕೈಸೋತು, ಅರೆಹುಚ್ಚಿಯಂತೆ ನಾಲ್ಕು ದಿಕ್ಕಿಗೂ ಕಣ್ಣು ಹಾಯಿಸುತ್ತ ನಡುಗುತ್ತ ನಿಂತವಳು ಅಲ್ಲಿಗೇ ಶಕ್ತಿಗುಂದಿದವಳಂತೆ ನೆಲಕ್ಕೆ ಕುಸಿದಳು.

ಅಂತಕ್ಕ ಎಷ್ಟಾದರೂ ಪ್ರಾಯಸ್ಥರು. ಲೋಕಾನುಭವ ಉಳ್ಳವರು. ಬುದ್ಧಿಯನ್ನು ಉಪಯೋಗಿಸಿದರು. ಕೆಲಸ ಹಾಳಾಯ್ತು! ಈ ಹೆಣ್ಣು ಅದೇಕೆ ಇದಕ್ಕೆ ಪ್ರವೇಶಿಸಿದಳು? ಈಗ ಏನು ಮಾಡುವುದು! ಜನರು ಗುಂಪು ಸೇರುವ ಮೊದಲು ಈ ಕೊಡಗೂಸು ಹೆಣ್ಣನ್ನು ಇಲ್ಲಿಂದ ತಪ್ಪಿಸಬೇಕು ಎಂದು ಯೋಚಿಸುತ್ತ ಅವರು ಅವಡು ಗಚ್ಚಿದರು.

'ಭವಾನಿ, ಭವಾನಿ' ಅವರು ಕರೆದರು. ಅವಳ ಹೆಗಲನ್ನು ಹಿಡಿದು ಅಲ್ಲಾಡಿಸಿದರು. ಅವಳು ಕಲ್ಲಾಗಿದ್ದಳು. ಕಣ್ಣು ಬಿಟ್ಟಳು. ಆದರೆ ಮಾತಿಲ್ಲ. ಟಪ್ಪೆಂದು ಕೆನ್ನೆಗೆ ಒಂದು ಏಟು ಹೊಡೆದರು.

'ಆಂ, ಆಂ..' ಎಂದು ನಿದ್ರೆಯಿಂದ ಎಚ್ಚತ್ತವಳಂತೆ ಹೂಂಗುಟ್ಟಿದಳು. ಅವಳ ಏರಿದ ರೋಷಾವೇಶ ಇಳಿದಿತ್ತು.

'ಏಳು, ಎಚ್ಚರ ಮಾಡ್ಕೋ. ಎದ್ದು ಓಡು. ಅಡುಗೆಮನೆಯ ಹೊರಗಿನ ಕುರುಬಾಗಿಲಿ

ನಿಂದ ಹೊರಟು ಹಿತ್ತಿಲು ದಾಟಿ ಗುಡ್ಡದಲ್ಲಿ ಎಲ್ಲಾದರೂ ಅಡಗಿ ಕುಳಿತುಕೋ. ಕತ್ತಲೆಯಾದರೂ ಬರಬೇಡ. ನಾನು ಯಾರನ್ನಾದರೂ ನಿನ್ನ ಬಳಿಗೆ ಕಳುಹಿಸುತ್ತೇನೆ. ಅಷ್ಟರವರೆಗೆ ಮನೆಗೆ ಬರಬೇಡ. ಏಳು, ಓಡು.. ಹೋಗು..' ಕೈ ಹಿಡಿದು ಎಳೆದು ಎಬ್ಬಿಸಿದರು. ಅಡುಗೆಮನೆಗೆ ಎಳೆದುಕೊಂಡು ಹೋಗಿ ಒಂದು ಚೆಂಬು ನೀರಿನಿಂದ ಅವಳ ಕಾಲುಗಳನ್ನು ತೊಳೆದು ನೀರನ್ನು ಮುಖಕ್ಕೂ ಚಿಮುಕಿಸಿದರು. 'ಆಚೀಚೆ ನೋಡಬೇಡ, ಬೇಗ ಓಡು' ಎಂದರು. 'ಎರಡು ಹೆಣ ಬಿದ್ದಿದೆ. ನೀನು ಮೊದಲು ಇಲ್ಲಿಂದ ಹೋಗು. ಏನೂ ಮಾತನಾಡಬೇಡ. ಬೇಗ ಹೋಗು. ಹಿತ್ತಿಲು ದಾಟಿ ಗುಡ್ಡಕ್ಕೆ ಹೋಗುವಾಗ ಓಡಬೇಡ. ವೇಗವಾಗಿ ಹೆಜ್ಜೆ ಇಟ್ಟು ನಡಿ. ಅಡಗಿ ಕುಳಿತುಕೋ. ಯಾರ ಜತೆಗೂ ಮಾತನಾಡಬೇಡ.'

'ನೀವೇನು ಮಾಡ್ತೀರಿ' ಅಷ್ಟಾಗುವಾಗ ಸ್ವಲ್ಪ ಬುದ್ಧಿ ಸ್ತಿಮಿತಕ್ಕೆ ಬಂದು ಅವಳು ಅಮ್ಮನನ್ನು ಕೇಳಿದಳು.

'ನಾನು ಏನಾದರೂ ಮಾಡ್ತೇನೆ. ನೀನೀಗ ಇಲ್ಲಿಂದ ಹೋಗು. ಇಷ್ಟು ಮಾಡಿದ್ದೀಯಲ್ಲ ಕಂದಾ. ಇನ್ನೂ ಇಲ್ಲಿದ್ದರೆ ಗುತ್ತಿನ ಮರ್ಯಾದೆ ಪೂರಾ ಕಳೆಯುತ್ತೀಯಾ. ನಮಗೆ ಊರೇ ಇಲ್ಲದ ಹಾಗೆ ಆಗ್ತದೆ ಭವಾನಿ. ನಿನಗೆ ಕೈಮುಗಿಯುತ್ತೇನೆ. ಒಮ್ಮೆ ಇಲ್ಲಿಂದ ಹೋಗು. ಕೇಳಿಸ್ತಿದೆಯಾ?'

ಅಮ್ಮನ ಮುಖದಲ್ಲಿ ಇರುವ ದುಃಖ ಮತ್ತು ಕೋಪವಲ್ಲದೆ ಹೇಳಲಾಗದ ಗಾಬರಿಯೂ ಸೇರಿ ಹುಚ್ಚಿಯಂತೆ ಆಗಿರುವುದನ್ನು ನೋಡಿ ಭವಾನಿಗೆ ಬಾಯಿ ತೆರೆಯದಂತಾಯ್ತು. ಅವಳು ಕುರುಬಾಗಿಲು ತೆರೆದು ಬೇಲಿ ದಾಟಿ ಹಿತ್ತಿಲಿಗೆ ಹೋದ ಕೂಡಲೇ ಅಂತಕ್ಕ ಬಾಗಿಲು ಮುಚ್ಚಿ ಚಿಲಕ ಹಾಕಿದರು. ಕಾಲು ತೊಳೆದು ಒಳಕೋಣೆಯ ಪಕ್ಕದ ಅಂಗಳಕ್ಕೆ ಹೋಗುವ ಬಾಗಿಲಿನಿಂದ ಅಂಗಳಕ್ಕಿಳಿದು ಹೊರಗೆ ಭತ್ತ ಕುಟ್ಟಿ ಅಕ್ಕಿ ಹಸನು ಮಾಡುವ ಜಾಗಕ್ಕೆ ಹೋದರು.

ಭತ್ತ ಕುಟ್ಟುವ ಹೆಂಗಸರು ಆ ದಿನ ನಾಲ್ಕೇ ಜನ. ನಾಲ್ಕು ಮುಡಿಯ ಬೆಳ್ತಿಗೆಯನ್ನೂ ಕುಚ್ಚಿಲಕ್ಕಿಯ ಕೆಲಸವನ್ನೂ ಮಾಡಬೇಕಾಗಿತ್ತು. ಕೆಲಸ ನಾಜೂಕಾಗಿ ಆಗಬೇಕು. ಇಲ್ಲವಾದರೆ ಬೆಳ್ತಿಗೆಗೆ ಭತ್ತ ಕುಟ್ಟುವುದಕ್ಕೆ ಸರಿಯಾಗಿ ಗೊತ್ತಿಲ್ಲದವರು ಕುಟ್ಟಿದರೆ ಪುಡಿಯಕ್ಕಿ ಹೆಚ್ಚಾಗುತ್ತದೆಂದು ಒನಕೆ, ಮೊರ ಸಿದ್ಧ ಮಾಡುವಾಗಲೇ ಅಂತಕ್ಕ ಅವರಿಗೆ ಹೇಳಿದ್ದರು.

ಗಣಪ ಖಾರ್ವಿ ಜಗಲಿಯಿಂದ ಹಾರಿ ಅಂಗಳ ದಾಟಿ ಚಾವಡಿಯ ಜಗಲಿಗೆ ಓಡುವಾಗ ಅವರಲ್ಲಿ ಕೆಲವರು ಅವನನ್ನು ನೋಡಿದ್ದರು. ಧನಿಗಳು ಕರೆದಿರಬೇಕು. ಅದಕ್ಕೆ ಹೋದನೋ ಏನೋ. ಅವರ ಮೈಗಾವಲಿನ ಬಂಟ, ಹೃದಯದ ನೆಂಟ. ಅದರಲ್ಲೂ ಈ ಖಾರ್ವಿ ಸ್ತ್ರೀ ಲಂಪಟ. ಆಕಡೆ ಈಕಡೆ ಓಡಾಡುವ ಹೆಂಗಸರನ್ನು ಅಳೆಯುವಂತೆ ನೋಡದಿದ್ದರೆ ಅವನಿಗೆ ತಿಂದ ಅನ್ನ ಕರಗದು.

ಕಲ್ಲಿನ ಸೇತುವೆಯಲ್ಲಿ ನಡೆದ ಘಟನೆಯನ್ನು ತನಿಯರು ಮೈರೆಗೆ ಹೇಳಿದ್ದಳು. ಬೇರೆ ಯಾರಿಗೂ ಹೇಳಬೇಡವೆಂದು ಒತ್ತಿ ಒತ್ತಿ ಹೇಳಿದ್ದಳು.

'ಭವಾನಿ ಅಮ್ಮನ ಮರ್ಯಾದೆ ಹೋದೀತು. ಗೊತ್ತಾದರೆ ದೊಡ್ಡ ಅಮ್ಮಾವ್ರ ಬಾಯಿಗೆ ಬೀಳಬೇಕಾದೀತು. ಆದ್ದರಿಂದ ಯಾರಿಗೂ ಹೇಳಬೇಡ'ವೆಂದು ಅವಳು ಬೈದ್ಯತಿಗೆ ಹೇಳಿದ್ದಳು.

ಮೈರೆಯೂ ಅವರಿವರಿಗೆ ಹೇಳಲಿಲ್ಲ. ತನ್ನ ಮೊಮ್ಮಗಳಿಗೆ ಮಾತ್ರ ಹೇಳಿದ್ದಳು. ಏಕೆಂದರೆ ಅವಳ ಮೊಮ್ಮಗಳು ಯುವತಿ. ಹದಿನಾರು ಹದಿನೇಳು ವರ್ಷದ ಹುಡುಗಿ. ಬೆಳಿಗ್ಗೆ ನಾಲ್ಕು ಕಟ್ಟು ಸೊಪ್ಪು ಕಡಿದು ಗುಡ್ಡದಿಂದ ಗುತ್ತಿಗೆ ತರುತ್ತಾಳೆ. ಖಾರ್ವಿಯಂಥವರು ಅವಳನ್ನು ಹಿಂಬಾಲಿಸಿದರೆ! ಹೇಗೆ ಹೇಳುವುದು? ಬಿಟ್ಟಿ ಅನ್ನ, ಅವಲಕ್ಕಿ, ತೆಂಗಿನಕಾಯಿ ತಿಂದು ಎದೆ ಗಟ್ಟಿಯಾದ ಯುವಕರಿಂದ ಉಳಿಗಾಲವಿಲ್ಲ. ಅಂಕೆ ಇಲ್ಲದ ಹೆಣ್ಣೊ ತಿಂದು ಸೊಕ್ಕಿದ ಗಂಡೂ ಊರಿಗೇ ಮಾರಿ. ಆ ಎಚ್ಚರಿಕೆಗಾಗಿ ಮೈರೆ ಮೊಮ್ಮಗಳು ಸಂಪಾವತಿಗೆ ಭವಾನಿ ಅಕ್ಕನಿಗಾದ ಅನುಭವವನ್ನು ತಿಳಿಸಿದ್ದಳು.

ಅವಳದ್ದೂ ತಪ್ಪಿಲ್ಲ. ಅವರವರ ಮಕ್ಕಳ ರಕ್ಷಣೆಯನ್ನು ಅವರವರೇ ಮಾಡ್ಬೇಕಲ್ಲ! ಹೀಗೆ ವಿಷಯ ಕಿವಿಯಿಂದ ಕಿವಿಗೆ ಹೋಯ್ತು.

ಗಣಪ ಖಾರ್ವಿಗೆ ಬ್ಲಾಕ್‌ಲಿಸ್ಟ್ ಆಯ್ತು. ಭವಾನಿಗೆ ಆದ ಸಂಗತಿ ಕೇಳಿ ಒಳಗೊಳಗೇ ಎಲ್ಲರೂ ನಗುವಂತಾಯ್ತು. ಹಾಗೆಯೇ ಶಂಭು ಚೌಟರನ್ನೂ ಜನರು ಹಂಗಿಸಲು ಆರಂಭಿಸಿದರು. ಕೋಣನಂತಿರುವ ಯುವಕರನ್ನು ಮನೆಯಲ್ಲಿಟ್ಟು ಸಾಕಿ ಮನೆಯ ಹಾಗೂ ಊರಿನ ಪ್ರಾಯದ ಹೆಣ್ಣುಮಕ್ಕಳಿಗೆ ಉಸಿರು ಕಟ್ಟುವಂತೆ ಆಗಿದೆ! ಇದೆಂಥ ಚೆಲ್ಲು ಕೆಲಸ ಚೌಟರದ್ದು!

ಅಂತಕ್ಕ ಹೊರಗೆ ಬಂದವರು ಗಡಿಬಿಡಿಯಿಂದ ಹೇಳಿದರು, 'ಗಣಪನೂ ಶಂಭುವೂ ನಾಲ್ಕು ನಾಲ್ಕು ಮಾತಾಗಿ ಶಂಭು ಗಣಪನನ್ನು ಕೊಂಬಿನ ಗಿಂಡಿಯಲ್ಲಿ ಹೊಡೆಯಲು ಹೋದ. ಗಣಪನ ಕೈಯಲ್ಲಿ ನಿನ್ನೆ ನೀರು ಹಾಕಿ ಮಸೆದ ಚೂರಿ ಇತ್ತು. ಆತ ಅದರಿಂದ ಶಂಭುವನ್ನು ಇರಿಯಲು ಹೋದ. ಶಂಭು ಆತನ ಕೈಯನ್ನು ಎಳೆದು ಅವನಿಗೇ ಚುಚ್ಚಲು ನೋಡಿದ. ಹೊಯ್ಕೈ ಆಗಿ ಶಂಭು ಗಣಪನ ಪಕ್ಕೆಗೆ ಚುಚ್ಚಿದ. ಅದನ್ನು ಅದುಮಿ ಹಿಡಿದು ಅವನ ಎದೆಗೆ ಗಣಪ ಚುಚ್ಚಿದ. ಇಬ್ಬರೂ ಇಡಿಹುಡಿಯಾಗಿ ಮಗುಚಿದರು. ಒಮ್ಮೆ ಯಾರಾದರೂ ಬನ್ನಿ. ನನಗೊಬ್ಬಳಿಗೇ ಅವರ ರಕ್ತದ ಓಕುಳಿಗೆ ಹೋಗಲು ಭಯವಾಗ್ತದೆ. ಎಲ್ಲರೂ ಬನ್ನಿ. ಆಮೇಲೆ ಯಾರಾದರೂ ಪದವಿಗೆ ಹೋಗಿ ಮೈಂದಣ್ಣನಿಗೂ ಸೇನೆರ ಮೂಲೆಯ ಸಾಮನಿಗೂ ತಿಳಿಸಿಬಿಡಿ. ಇಬ್ಬರು ಹೆಂಗಸರು ಇಲ್ಲೇ ಇದ್ದುಬಿಡಿ. ಬಾಣಂತಿ ಮಗುವೂ ನನ್ನ ಅಮ್ಮನೂ ಕೊಟ್ಟಿಗೆಯಲ್ಲಿದ್ದಾರೆ. ಅವರು ಹೆದರುತ್ತಾರೆ.'

'ಅಯ್ಯೋ ದೇವರೇ' ಎನ್ನುತ್ತ ಹೆಂಗಸರು ಬೊಬ್ಬಿಟ್ಟರು.

'ಮನೆಯಲ್ಲಿ ಯಾರೂ ಇಲ್ಲ. ದೇವಣ್ಣ ಕೂದಲು ತೆಗೆಸಬೇಕೆಂದು ಪದವುಗೆ ಹೋಗಿದ್ದಾನೆ. ತುಂಗ ಅತ್ತಿಗೆ ಮೊನ್ನೆ ಅವರ ಊರು ಚಕ್ರಕೋಡಿಗೆ ಹೋಗಿದ್ದಾರೆ. ಅಲ್ಲಿ ಅವರ ಅಜ್ಜ ಕಳೆದ ವರ್ಷ ತೀರಿಹೋಗಿದ್ದರು. ಹಾಗಾಗಿ ಈ ವರ್ಷ ಅವರ

ವರ್ಷಾಂತಿಕಕ್ಕೆ ಭೂತಸೇವೆ ಮಾಡಿಸುತ್ತಾರೆ. ಎಂಟು ದಿನ ಕಳೆದು ಬರ್ತೇನೆಂದು ಹೋಗಿದ್ದಾರೆ. ಇವತ್ತಿಗೆ ನಾಲ್ಕು ದಿವಸ ಆಯ್ತು. ಈ ಮಾರಿ ಬೆನ್ನು ಹತ್ತಲು ನಾನೇ ಸಿಗಬೇಕೇ?'

ತನಿಯರು ಸೇನೆರ ಮೂಲೆಗೆ ಹೋದಳು. ಮೈರೆ ಮೈಂದಣ್ಣನನ್ನು ಕರೆದುಕೊಂಡು ಬರಲು ಪದವುಗೆ ಹೋದಳು.

ಇಬ್ಬರು ಒಕ್ಕಲು ಹೆಂಗಸರಲ್ಲಿ ಒಬ್ಬಳು ಬಾಣಂತಿ ಕೊಟ್ಟಿಗೆಯಲ್ಲಿ ಸರಸು ಮತ್ತು ರುಕ್ಕಕ್ಕನ ಬಳಿಯಲ್ಲಿ ಕುಳಿತಳು. ರುಕ್ಕಕ್ಕನಿಗೆ ಯಾವ ವಿಚಾರವೂ ಗೊತ್ತಿಲ್ಲ. ಸರಸುಗೆ ಅವಳಮ್ಮ ಗುಟ್ಟಾಗಿ ಹೇಳಿದರು– 'ಚಾವಡಿಯಲ್ಲಿ ಎರಡು ಹೆಣ ಬಿದ್ದಿದೆ. ಭವಾನಿಯನ್ನು ನೀನಾಗಲೀ ಅಮ್ಮನಾಗಲೀ ಕರೆಯಬೇಡಿ. ಅವಳು ಔಷಧಿ ತರಲು ಆಗಲೇ ಪದವುಗೆ ಹೋಗಿದ್ದಾಳೆಂದು ಹೇಳು.' ಸರಸುಗೆ ಭವಾನಿಯ ಬೆಂಕಿ ಕೆಂಡದಂಥ ಸ್ವಭಾವ ಗೊತ್ತು. ಮನೆಯಲ್ಲಿ ಮಾವಂದಿರು ತಮ್ಮ ಬಗ್ಗೆ ತೋರುವ ಔದಾಸೀನ್ಯ, ಅಗತ್ಯವಾಗಿ ಬೇಕಾದ ಹಣವನ್ನೂ ಕೊಡಲು ಸತಾಯಿಸುವುದು ಇದನ್ನೆಲ್ಲ ನೋಡಿ ನೋಡಿ ಅವಳಿಗೆ ಸಾಕಾಗಿತ್ತು. ಚೂರಿ ಹಾಕುವ ಧೈರ್ಯ ಅವಳಿಗಲ್ಲದೆ ಅಮ್ಮನಿಗೆ ಬರಲು ಸಾಧ್ಯವಿಲ್ಲ. ಅವರು ಬಾಯಿಯಲ್ಲಿ ಜಗಳ ಮಾಡಲು ಮಾತ್ರ ಲಾಯಕ್ಕು. ಸರಸು ಅರ್ಥ ಮಾಡಬಲ್ಲ ವಿವೇಕಿ ಹೆಣ್ಣು. ಮನಸ್ಸಿನಲ್ಲಿ ಮರುಗಿದಳು. ತಂಗಿಯ ದುಡುಕು ಸ್ವಭಾವವನ್ನು ಯೋಚಿಸಿ ಭಯಪಟ್ಟಳು.

ಸರಸು ರುಕ್ಕಕ್ಕನಿಗೆ ಹೇಳಿದಳು, 'ಭವಾನಿ ಮಗುವಿಗೆ ಶೀತ, ಕಫವೆಂದು ಚಿನ್ನೆಯ ಮಾತ್ರೆ ತರಲು ಅದ್ಯಪ್ಪಾಡಿಗೆ ಹೋಗಿದ್ದಾಳೆ. ನೀವು ಅವಳನ್ನು ಬಾರಿ ಬಾರಿಗೂ ಕರೆಯಬೇಡಿ. ಏನು ಬೇಕಿದ್ದರೂ ನನ್ನನ್ನು ಕೇಳಿ. ಅವಳು ಸಾಯಂಕಾಲ ವಾಪಸ್ಸು ಬರ್ತಾಳೆ.'

'ನೀವು ಯಾಕ್ರೀ ಆ ಪ್ರಾಯದ ಹುಡುಗಿಯನ್ನು ಊರು ತಿರುಗಲು ಕಳುಹಿಸುತ್ತೀರಿ? ಯಾರಾದರೂ ಒಕ್ಕಲಿನವರು ಸಿಗುವುದಿಲ್ಲವೇ ಕಳುಹಿಸಲು? ಅವರಿಗೆ ಸ್ವಲ್ಪ ದುಡ್ಡು ಕೊಟ್ಟು ಕಳುಹಿಸಿ.'

'ದುಡ್ಡು ಕೊಡ್ತೇವೆಂದರೂ ಈಗ ಜನ ಸಿಗುವುದಿಲ್ಲ. ಆಯ್ತು. ನೀವು ಪಿರಿಪಿರಿ ಹೇಳಬೇಡಿ. ಇನ್ನು ಮುಂದೆ ಕಳುಹಿಸುವುದಿಲ್ಲ' ಅಂದಳು ಸರಸು.

'ಇಪ್ಪತ್ತು ವರ್ಷದ ಹುಡುಗಿ ಅವಳು. ಮದುವೆ ಮಾಡಿಸದೆ ಊರು ಸುತ್ತಾಡಿಸಿ.'

'ಈಗ ಏನಾಯ್ತೆಂದು ಹೀಗೆ ಮಾತನಾಡ್ತೀರಿ ಅಜ್ಜಿ? ಇನ್ನು ಅವಳನ್ನು ಎಲ್ಲಿಗೂ ಕಳುಹಿಸುವುದಿಲ್ಲ. ಆಯ್ತಾ?'

'ನೀವು ಏನಾದರೂ ಮಾಡಿ. ನಾನು ಮೂಲೆಗೆ ಬಿದ್ದವಳಲ್ಲವೇ?'

ಮಾತಾಡಿದಷ್ಟೂ ಅಜ್ಜಿಯ ಬಾಯಿ ಸುಮ್ಮನಿರುವುದಿಲ್ಲವೆಂದು ಗೊತ್ತಾಗಿ ಸರಸು ಮೌನವಾದಳು. ತೊಟ್ಟಿಲ ಮಗು ಕಾಲು ಎಸೆಯುವುದು ಕೇಳಿಸಿತು. 'ಮಗು ಎದ್ದಿತು. ನೀವಿನ್ನು ಸುಮ್ಮನಿರಿ' ಎಂದಳು.

ಸೇನೆರ ಮೂಲೆಗೆ ತನಿಯರು ಹೋದಾಗ ಅಲ್ಲಿ ಯುವಕರು ಗುಂಪು ಸೇರಿದ್ದರು. ಸಂಕಣ್ಣ ಕಿಲ್ಲೆರೂ ಶಂಕರನೂ ಬಂದಿದ್ದರು. ದೆಯ್ಯಕ್ಕ ಚಹಾ ಮತ್ತು ಫಲಾಹಾರದ ಸಿದ್ಧತೆ ಮಾಡುತ್ತಿದ್ದರು. ತನಿಯರು ಕುರುಬಾಗಿಲ ಬಳಿಯಲ್ಲಿ ನಿಂತು ಕರೆದಾಗ, 'ಇರು ತನಿಯರು, ಈ ಚಹಾ ಸೋಸಿ ಬರ್ತೇನೆ ಅಂದರು.'

'ಅಮ್ಮಾವ್ರೇ, ಸೂತಕದ ಸುದ್ದಿ ತಂದಿದ್ದೇನೆ. ಬೇಗ ಬಂದರೆ ಒಳ್ಳೆಯದು.'

ಚಹಾ ಸೋಸಿ ಮುಚ್ಚಳ ಇಟ್ಟು ಒದ್ದೆ ಕೈಯನ್ನು ಸೆರಗಿಗೆ ಉಜ್ಜುತ್ತ ದೆಯ್ಯಕ್ಕ ಕುರುಬಾಗಿಲಿನ ಹೊರಗೆ ಬಂದರು. 'ಏನೇ ಅದು ಸೂತಕದ ಸುದ್ದಿ? ರುಕ್ಕಕ್ಕನೇನಾದರೂ ಸತ್ತು ಹೋದರೇ?'

'ಈಗ ಪ್ರಾಯದವರು ಸಾಯುವುದು ನಿಧಾನ. ಗುತ್ತುಮನೆಯಲ್ಲಿ ಚಿಕ್ಕ ಯಜಮಾನರೂ ಅವರ ಬಂಟ ಗಣಪ ಖಾರ್ವಿ ಅಂತ ಇದ್ದಾರೆ. ಅವರಿಬ್ಬರೂ ಸತ್ತು ಚಾವಡಿಯಲ್ಲಿ ಹೆಣ ಬಿದ್ದಿವೆ. ಒಬ್ಬರು ಒಬ್ಬರನ್ನು ಚುಚ್ಚಿ ಸಾಯಿಸಿದರು ಅಂತ ಹೇಳ್ತಾರೆ. ನಾನಿನ್ನು ಹೋಗ್ತೇನೆ.'

'ಇರೇ, ಯಾರು ಯಾರನ್ನು ಸಾಯಿಸಿದರು? ಯಾವಾಗ? ಇಲ್ಲಿಗೆ ಸುದ್ದಿ ಮುಟ್ಟಿಸಲು ನಿನಗೆ ಯಾರು ಹೇಳಿದರು?'

'ಸರಸು ಅಮ್ಮನ ತಾಯಿ ದೊಡ್ಡ ಅಮ್ಮಾವ್ರು ಹೇಳಿದರು. ನೀವು ಚಾವಡಿಯಲ್ಲಿರುವವರಿಗೆ ಈಗಲೇ ಸುದ್ದಿ ಮುಟ್ಟಿಸಿಬಿಡಿ. ನಾನು ಹೋಗ್ತೇನೆ.'

'ಇರೇ, ನಾನು ಅವರಿಗೆ ಸುದ್ದಿ ಹೇಳ್ತೇನೆ.'

ದೆಯ್ಯಕ್ಕ ಅಡ್ಡ ದಿಡ್ಡ ಲೆಕ್ಕಿಸದೆ ಚಾವಡಿಗೆ ಓಡಿಬಂದು ಸಾಮನಿಯವರನ್ನು ಕೈಸನ್ನೆಯಿಂದ ಒಳಗೆ ಕರೆದರು. ಜನರ ಮಧ್ಯೆ ಕುಳಿತಿದ್ದ ಅವರು ಎದ್ದು ಬಂದು ಕೇಳಿದರು: 'ಬಾಯಾರಿಕೆಗೆ ಎಲ್ಲ ತಯಾರು ಮಾಡಿದೆಯಾ? ಎಷ್ಟು ಚಾ ಮಾಡಿದೆ? ಒಂದು ಐದಾರು ಲೋಟ ಹೆಚ್ಚಿಗೆ ಬೇಕಾದೀತು.'

ಅವರನ್ನು ತಡೆದು ದೆಯ್ಯಕ್ಕ ಹೇಳಿದರು, 'ನಿಮ್ಮದೊಂದು. ಈಗ ಮಾಡಿರುವ ಚಾವನ್ನೇ ತಿಪ್ಪೆಗೆ ಸುರಿಯಬೇಕು. ಮೊದಲು ನಿಮಗೊಂದು ತುರ್ತು ಸುದ್ದಿ ಹೇಳ್ತೇನೆ. ಗುತ್ತಿನಲ್ಲಿ ಮಾರಾಮಾರಿ ನಡೆದು ಜಗಳ ವಿಕೋಪಕ್ಕೇರಿ ಒಬ್ಬರು ಮತ್ತೊಬ್ಬರಿಗೆ ಕತ್ತಿ ಹಾಕಿದ್ದಾರಂತೆ. ಕೊತ್ತಲಿಗೆಯ ಕೋಲಿಗೆ ಕೋಳಿಕಟ್ಟದ ಚೂರಿಯನ್ನು ಸಿಕ್ಕಿಸಿಚುಚ್ಚಿ ಸಾಯಿಸಿದರಂತೆ.'

'ಏನಂದೆ? ಗುತ್ತಿನ ಯಜಮಾನ ಸತ್ತುಹೋದರಾ? ಯಾರು ಯಾರನ್ನು ಕೊಂದರು?' ಸಾಮನಿಯಾಲರು ದಿಗ್ಭ್ರಮೆಯಿಂದ ಕೇಳಿದರು. ಅವರಿಗೆ ಯಾವುದೂ ಹಿಂದು ಮುಂದು ತಿಳಿಯಲಿಲ್ಲ.

'ಶಂಭು ಚೌಟರನ್ನು ಅವರ ಕುಂದಾಪುರದ ಆಳು ಕೊಂದನಂತೆ. ಈಗ ತನಿಯರು ಸಾವಿನ ಸುದ್ದಿ ತಂದಳು. ಅವಳನ್ನು ಅಂತಕ್ಕ ಕಳುಹಿಸಿದರಂತೆ.'

'ನಿನ್ನ ಚಾ ತಿಂಡಿ ಬೇಡ. ನಾವೆಲ್ಲರೂ ಹೋಗ್ತೇವೆ. ಈ ಕೆಲಸದವಳಿಗೆ ಪಡಿ

ಕೊಟ್ಟು ಹತ್ತು ರೂಪಾಯಿಯನ್ನೂ ಕೊಡು. ಎಲೆ, ಅಡಿಕೆಯನ್ನೂ ಕೊಟ್ಟು ಕಳುಹಿಸು. ಆಯ್ತಾ? ನಾಳೆ ಅಂತಕ್ಕನೇ ಅವರಿಗೆ ರೀತಿ ರಿವಾಜು ಗೊತ್ತಿದ್ದರೆ ತಾನೆ ಅಂತ ಮುಖ ಮುರಿಯುತ್ತಾರೆ.'

ತ್ಯಾಂಪ ಸಾಮನಿಯಾಲರು ಬಂದಿದ್ದವರಿಗೆ ಗುತ್ತಿನ ವಿಚಾರ ಅರುಹಿದರು. ಕೂಡಲೇ ಜನ ಎದ್ದು ಬಿದ್ದು ಮಾತನಾಡಲು ಆರಂಭಿಸಿದರು.

'ಮುಂದೆ ಹಿಂದೆ ಅಂಗರಕ್ಷಕರನ್ನಿಟ್ಟುಕೊಂಡು ಚೌಟರು ಹೋಗುವುದನ್ನು ನೋಡುವಾಗಲೇ ನಾನು ಅಂದುಕೊಂಡಿದ್ದೆ. ಇವರ ದರ್ಬಾರು ಹೆಚ್ಚಾಯ್ತು ಅಂತ. ಹಾಗಾಗಿ ಅವರ ಆಳೇ ಅವರನ್ನು ಮುಗಿಸಿದ' ಒಬ್ಬ ಯುವಕ ಹೇಳಿದ.

'ಅಲ್ಲಾ, ಅವರವರೇ ಯಾಕೆ ಚುಚ್ಚಿ ಸಾಯಿಸಬೇಕು? ಒಂದು ಮಾತಿದೆ. ಯಥಾರಾಜ ತಥಾ ಪ್ರಜಾ ಅಂತ. ಗಣಪನಿಗೂ ಧನಿಗೂ ಒಂದೇ ಖಯಾಲಿ. ಚೌಟರ ಇಟ್ಟುಕೊಂಡವಳೊಬ್ಬಳಿದ್ದಾಳೆ ನೀಲಯ್ಯ ಆಚಾರಿಯ ಮಗಳು. ರೇಷನ್ ಸ್ಟೋರಿನಲ್ಲೇ ಇರ್ತಾಳೆ. ಅಲ್ಲಿ ಅಳಿಯ ಮಾವನ ಜೋಡುಮೇಳ ನಡೆಯುತ್ತದೆ.'

'ಅಲ್ಲಿ ಅದು ನಡೆದರೆ ಇಲ್ಲಿ ಚೌಟರೇಕೆ ಗಣಪ ಖಾರ್ವಿಯನ್ನು ಸಾಯಿಸಬೇಕು?'

'ಓ, ಅದು ಇನ್ನೊಂದು ಸಂಗತಿ. ಆ ಖಾರ್ವಿ ಸೂಳೆಮಗ ತುಂಬ ಲಂಪಟ. ಮನೆಗೆ ಕೆಲಸಕ್ಕೆ ಬರುವ ಹೆಂಗಸರನ್ನು ತುಂಬ ಪೀಡಿಸುತ್ತಾನಂತೆ. ಹಾಗೇ ಚೌಟರ ಚಿಕ್ಕ ಸೊಸೆಯನ್ನೂ ಒಮ್ಮೆ ಕೆಣಕಲು ಹೋದನಂತೆ.'

'ಅದು ಸರಿ. ಆಮೇಲೆ ಏನಾಯ್ತಂತೆ?'

'ಆಮೇಲೆ ಆ ಸುದ್ದಿಯನ್ನು ಅವರ ಅಕ್ಕ ಚೌಟರಿಗೆ ಹೇಳಿದರೋ ಏನೋ. ಚೌಟರಿಗೆ ಕೋಪ ಬಂದು ಅವನನ್ನು ಬೈಯ್ದರೋ ಏನೋ. ಆತ ಯುವಕ. ನೀವು ಮಾಡಬಹುದು, ನಾನು ಮಾತ್ರ ಮಾಡಬಾರದಾ ಅಂತ ಕೇಳಿದನೋ ಅಥವಾ ಇನ್ನೇನಾಯ್ತೋ ಹಾಗಿರುವಾಗ ಅದನ್ನು ಕೇಳಿ ಸುಮ್ಮನಿರಲು ಸಾಧ್ಯವೇ? ಚೌಟರು ಅವನಿಗೆ ಹೊಡೆದಿರಬೇಕು. ಅವನಿಗೆ ಎಷ್ಟು ತಾಗೀತು, ಅವನ ಜೀವ ಎಂಥದ್ದು. ಮಂಗಳೂರಿನ ದೊಡ್ಡ ಫೈಲ್ವಾನ ಸಂಕಪ್ಪ ಶೆಟ್ರ ಹಾಗೆ ಇದ್ದಾನೆ. ಆತ ತಿರುಗಿ ಅವರಿಗೇ ಹೊಡೆದನೋ ಏನೋ.'

'ಎಂಥ ಕರ್ಮ ಇದು! ಒಮ್ಮೆ ಹೊರಡಿ. ಎಲ್ಲರೂ ಬೇಗ ಹೋಗೋಣ' ಸಾಮನಿಯವರು ಹೇಳಿದರು. ಅವರ ತಲೆಯೇ ಹಾಳಾಗಿತ್ತು.

'ಹೋಗುವಾಗ ಪಟೇಲರ ಮನೆಯಲ್ಲಿ ತಿಳಿಸೋಣ. ಆಮೇಲೆ ಅವರಿಗೆ ಸುದ್ದಿ ಮುಟ್ಟಿಸಲು ಯಾರನ್ನು ಹುಡುಕುವುದು? ಅವರು ಬರುವಾಗ ಬಿ.ಸಿ.ರೋಡಿನ ಪೋಲೀಸ್ ಸ್ಟೇಷನ್‌ನಲ್ಲಿ ತಿಳಿಸಲಿ. ಆಗ ಇನ್ಸ್‌ಪೆಕ್ಟರೂ ಪೋಲೀಸರೂ ಬರ್ತಾರೆ. ಅಲ್ಲಿ ನಾವು ಹೋಗಿ ಯಾರನ್ನು ಕಾಯುವುದು. ಮೈಂದಣ್ಣನಿಗೆ ಇಷ್ಟು ಹೊತ್ತಿಗೆ ಸುದ್ದಿ ತಲಪಿರಬಹುದು. ಆತ ಬರುತ್ತಾನೆ' ಸಾಮನಿಯಾಲರು ತಮ್ಮಷ್ಟಕ್ಕೇ ತಾವೇ ಮಾತನಾಡುತ್ತಿದ್ದರು. ಸಂಕಣ್ಣ ಕಿಲ್ಲೆರರೂ ಶಂಕರನೂ ಮೌನವಾಗಿ ಕುಳಿತಿದ್ದರು. ಕಿಲ್ಲೆಯವರಿಗೆ ಯಾವ ವಿಚಾರವೂ

ಗೊತ್ತಿಲ್ಲ. ಅವರೇನೆಂದು ಮಾತನಾಡುತ್ತಾರೆ!

ಶಂಕರನಿಗೆ ತಲೆಗೆ ತಣ್ಣೀರು ಸುರಿದಂತೆ ಆಯ್ತು. ಭವಾನಿ!?

'ಭವಾನಿಯ ಸಂಗತಿ ಯಾಕಿಲ್ಲ? ಅವಳೆಲ್ಲಿದ್ದಾಳೆ?'

ಶಂಕರ ಎದ್ದು ನಿಂತ. ಅವನಿಗೆ ಈಗ ಕೃತಕ ಕಾಲನ್ನು ಜೋಡಿಸಲಾಗಿತ್ತು. ಆದರೂ ಊರುಗೋಲು ಹಿಡಿದೇ ನಡೆಯುತ್ತಾನೆ.

'ಹೋಗೋಣ ಸಂಕಣ್ಣ. ಏನಾಯ್ತೆಂದು ನೋಡಿ ಬರೋಣ. ನಾವು ಮಧ್ಯದಲ್ಲಿ ಹೋಗುವುದು ಬೇಡ. ಯಾಕೆಂದರೆ ಪೋಲೀಸು, ಇನ್ಸ್‌ಪೆಕ್ಟರೆಲ್ಲ ಬರುತ್ತಾರೆ. ನಮ್ಮ ಮೇಲೆ ಮೊದಲೇ ಅವರಿಗೆ ಕಣ್ಣಿದೆ. ಸಾಕ್ಷಿ ಹೇಳಬೇಕೆಂದೇನಾದರೂ ಸೇರಿಸಿಕೊಂಡರೆ ಕಷ್ಟ.'

'ನಾವು ದೂರದಲ್ಲೇ ಇರೋಣ. ಹೆಂಗಸರು ಮತ್ರ ಇದ್ದಾರೋ ಏನೋ. ಹಾಗಿದ್ದರೆ ದೂರದಿಂದಾದರೂ ನಾವು ಅವರಿಗೆ ನಮ್ಮಿಂದಾದ ಸಹಾಯ ಮಾಡೋಣ' ಶಂಕರ ಹೇಳಿದ.

ಸಭೆ ಸೇರಿದ ಜನರಲ್ಲಿ ಹೆಚ್ಚಿನವರು ಯುವಕರು. ಎಲ್ಲರೂ ಹೊರಟು ಗುತ್ತಿಗೆ ಹೋದರು. ಜನ ತುಂಬಿದ್ದರಿಂದ ಒಳಗೆ ಹೋಗುವುದು ಸ್ವಲ್ಪ ಕಷ್ಟವೇ ಆಯ್ತು. ಚಾವಡಿಯಲ್ಲಿ ಎರಡು ಹೆಣಗಳು ಬಿದ್ದ ಹಾಗೇ ಇವೆ. ಚೌಟರು ಕವುಚಿ ಬಿದ್ದಿದ್ದರು. ಖಾರ್ವಿ ಹೊರಳಾಡಿ ಅಡ್ಡಾದಿಡ್ಡಿಯಾಗಿ ಕೈಕಾಲು ಚೆಲ್ಲಿದಂತೆ ಕಣ್ಣು ಬಿಟ್ಟ ಹಾಗೆ ಭಯಂಕರವಾಗಿ ಕಾಣಿಸುತ್ತಿದ್ದ. ರಕ್ತ ಮತ್ತು ನೀರು ಬೆರೆತು ನೆಲದಲ್ಲಿ ಮಡುಗಟ್ಟಿತ್ತು. ಈಗ ಗಂಟೆ ಎರಡೋ ಮೂರೋ ಆಗಿತ್ತು. ನೆಲ ಒಣಗಲು ಶುರುವಾಗಿತ್ತು. ಅಂತಕ್ಕ ಹಜಾರದ ಕಂಬಕ್ಕೆ ಒರಗಿ ಕುಳಿತು ಕಣ್ಣು ಮುಚ್ಚಿದ್ದರು.

ಸಾಮನಿಯವರು ಸ್ವಲ್ಪ ಹೊತ್ತು ಬಿಟ್ಟು ಅವರ ಬಳಿಗೆ ಹೋದರು. 'ದೇವಣ್ಣ ಎಲ್ಲಿದ್ದಾನೆ? ಅವನಿಗೆ ಹೇಳಿ. ನಚ್ಚಕ್ಕೆ ಕೆಲಸದವಳು ಹೋಗಲಿ. ಮಂಗಳೂರಿಗೆ ಯಾರನ್ನಾದರೂ ಕಳುಹಿಸಿ ಸೋಮಕ್ಕನಿಗೆ ಸುದ್ದಿ ಮುಟ್ಟಿಸಲಿ. ಚಕ್ರೋಡಿಗೂ ಹೇಳಿ ಕಳುಹಿಸಿ. ತುಂಗ ಅತ್ತಿಗೆ ಬರಲಿ. ನೀವು ಇಲ್ಲೇ ಇರಿ' ಅಂತಕ್ಕ ಅವರ ಮುಖ ನೋಡುತ್ತ ಹೇಳಿದರು.

'ತ್ಯಾಂಪಣ್ಣ, ಮೈಂದಣ್ಣ ಹಿಂದು ಮುಂದು ಏನೂ ಗೊತ್ತಿಲ್ಲದ ಹುಡುಗ. ಈಗ ಪೋಲೀಸರು ಬರಬಹುದು. ಅವನನ್ನು ವಿಚಾರಣೆ ಮಾಡುವಾಗ ನೀವು ಅವನ ಹತ್ತಿರ ಇದ್ದುಬಿಡಿ.'

'ತವರಿಲ್ಲದ ನೆಲೆಯಾಯ್ತಲ್ಲ ತ್ಯಾಂಪಣ್ಣ ನಮ್ಮ ಅವಸ್ಥೆ. ದೇವರು ನನ್ನನ್ನು ಅದ್ಯಾವ ನೆಲೆಯಿಲ್ಲದ ನೀರಿಗೆ, ದಡವಿಲ್ಲದ ಪ್ರವಾಹಕ್ಕೆ ಇಳಿಸಿದ್ದಾನೆ ನೋಡಿ' ಅಂತಕ್ಕ ನೊಂದುಕೊಂಡು ಹೇಳಿದರು.

'ಅಕ್ಕ, ನೀವು ಧೈರ್ಯ ತಂದುಕೊಳ್ಳಿ. ಇವತ್ತು ನೀವು ಮನಸ್ಸು ಗಟ್ಟಿ ಮಾಡದಿದ್ದರೆ ಎಲ್ಲರಿಗೂ ದಿಕ್ಕು ತಪ್ಪಿದಂತಾಗುತ್ತದೆ. ಸಮಾಧಾನ ಮಾಡಿಕೊಳ್ಳಿ. ದೊಡ್ಡ ಚೌಟರನ್ನು ಹೊಸ್ತಿಲ ಬಳಿಯಲ್ಲೇ ಕುಳ್ಳಿರಿಸಿದ್ದೇವೆ. ಕೂದಲು ತೆಗೆಸಿಯೇ ಬಂದಿದ್ದಾರೆ. ಒಳಗೆ

ಬಂದು ಈ ರಣರಂಗವನ್ನು ನೋಡಿದರೆ ಅವರ ತಲೆ ಕೆಟ್ಟುಹೋದೀತು.'

'ಅದು ನಿಜ. ಪಾಪ ಅವನು ಇಲ್ಲಿಗೆ ಬರುವುದು ಬೇಡ. ಅವನ ತಲೆ ಕೈ ನಡುಕದ ಕಾಯಿಲೆ ಹೆಚ್ಚಾದರೆ ಅವನಿಗೆ ನೆಟ್ಟಗೆ ಕುಳಿತುಕೊಳ್ಳಲೂ ಸಾಧ್ಯವಿಲ್ಲ. ಅವನು ಕುಳಿತಲ್ಲೇ ಕುಸಿಯದಂತೆ ಸ್ವಲ್ಪ ನೋಡಿಕೊಳ್ಳಿ.' ತನ್ನ ದುಃಖವನ್ನು ಬದಿಗೊತ್ತಿ ಅಂತಕ್ಕ ಹೇಳಿದರು.

ಪಟೇಲ ಕಾಂತಪ್ಪ ನಾಯಕರು ಸ್ಟೇಷನ್‌ಗೆ ಪತ್ರ ಬರೆದು ಉಗ್ರಾಣಿಯ ಕೈಯಲ್ಲಿ ಕೊಟ್ಟು ಕಳುಹಿಸಿದರು. ಸಂಜೆ ನಾಲ್ಕೂವರೆ ಗಂಟೆಗೆ ಇಬ್ಬರು ಪೋಲೀಸರೂ ಸಬ್ ಇನ್ಸ್‌ಪೆಕ್ಟರ್ ಮೋಂತೆರರೂ ಬಂದರು. ಬಂದ ತಕ್ಷಣ ಚಾವಡಿ ಹತ್ತಲು ಕಾಲಿಟ್ಟರು. ಜಾರಂದಾಯ ದೈವದ ಮುಕ್ಕಾಲ್ತಿಯೇ ಅವರನ್ನು ತಡೆದಂತೆ ಮನೆಯ ಮುದುಕಿ ಹೇಳಿದರು 'ಸ್ವಾಮಿ, ಇನ್ಸ್‌ಪೆಕ್ಟರೇ, ಕಾಲಿನ ಬೂಡ್ಸು ಕಳಚಿ ಮೇಲೆ ಹತ್ತಿ. ರಾಜನ್ ದೈವ ಜಾರಂದಾಯನ ಉಯ್ಯಾಲೆ, ಕುಪ್ಪೆ ಪಂಜುರ್ಲಿಯ ಕತ್ತಿ, ಬಂಟನ ಮಣೆ ಅಲ್ಲಿವೆ. ಮೇಲೆ ಹೆಣವಿದ್ದುದರಿಂದ ನೀವು ಕ್ರಿಶ್ಚಿಯನ್ ಆದರೂ ಮೇಲೆ ಹೋಗಬಹುದು. ಆದರೆ ಬೂಟ್ಸ್ ಹಾಕಿಕೊಂಡು ಹತ್ತಬೇಡಿ. ಸ್ಥಾನದಲ್ಲಿ ಬ್ರಹ್ಮಕಲಶ ಮಾಡಿಸಬೇಕಾದೀತು. ಸ್ವಾಮಿ, ನಿಮಗೆ ಕೈಮುಗಿದು ಕೇಳಿಕೊಳ್ಳುತ್ತೇನೆ. ನಮ್ಮ ಗ್ರಹಚಾರಕ್ಕೆ ಇಂಥ ಪಾಪಕಾರ್ಯ ನಡೆಯಿತು. ನೀವು ದಯವಿಟ್ಟು ಬುದ್ಧಿಗೆಟ್ಟು ಸತ್ಯದ ಚಾವಡಿಯನ್ನು ತುಳಿಯಬೇಡಿ' ಮುದುಕಿಯ ಕಣ್ಣೀರು ಕೆನ್ನೆಯನ್ನು ಒದ್ದೆ ಮಾಡುತ್ತಿತ್ತು.

ಮೊಂತೆರೋ ಇನ್ಸ್‌ಪೆಕ್ಟರ್ ಉಡುಪಿಯ ಸಾಲಿಗ್ರಾಮದವರು. ಗುರುಹಿರಿಯರ ಬಗ್ಗೆ ಭಯಭಕ್ತಿ ಉಳ್ಳವರು. ಅವರು ಕೂಡಲೇ ಎತ್ತಿದ ಕಾಲನ್ನು ಕೆಳಗಿಟ್ಟು ಜಗಲಿ ದಾಟಿ ಅಂಗಳದಲ್ಲಿ ಬೂಟ್ಸು ಕಳಚಿ ಮೇಲೆ ಬಂದರು.

ಚಾವಡಿಯ ರಣರಂಪ ನೋಡಿ ಅವರಿಗೆ ತಲೆ ತಿರುಗಿದಂತಾಯ್ತು. ಹೆಣದ ಹತ್ತಿರ ಹೋದರು. ಶಂಭು ಚೌಟರ ಪಕ್ಕೆಯಿಂದ ಯಾರೋ ಕೊತ್ತಲಿಗೆಯನ್ನು ಜಾರಿಸಿ ಅವರ ಕೈಗೆ ಕೊಟ್ಟರು. ಖಾರ್ವಿಯ ಹೆಣದಲ್ಲಿ ಕೊತ್ತಲಿಗೆ ಬಾಳಿನೊಂದಿಗೆ ಬೆನ್ನಿಗೆ ಚುಚ್ಚಿತ್ತು. ಆತ ಬಿದ್ದು ಹೊರಳಾಡಿ ಮುಖ ಬಿರುಕು ಬಿಟ್ಟಿತ್ತು. ಮೊಂತೆರೋ ಜೇಬಿನಿಂದ ಟವೆಲ್ ತೆಗೆದು ಮುಖ ಮೂಗುಗಳನ್ನು ಮುಚ್ಚಿಕೊಂಡರು. ಎಚ್ಚರಿಕೆಯಿಂದ ಸುತ್ತಲೂ ನಡೆದು ನೋಡಿದರು. ರಕ್ತ ಅಲ್ಲಿಗೇ ಹೆಪ್ಪುಗಟ್ಟಿತ್ತು.

ಅವರು ಹಿಂತಿರುಗಿ ಮೆಟ್ಟಲು ಇಳಿಯುವಾಗ ಅರೆಪ್ರಜ್ಞಾವಸ್ಥೆಯಲ್ಲಿದ್ದ ಕಣ್ಣೀರಲ್ಲಿ ಕೈತೊಳೆಯುವ ಸೋಮಕ್ಕನನ್ನು ಅವರ ತಾಯಿಯೂ ತಮ್ಮ ರಮೇಶನೂ ಆಸರೆ ಕೊಟ್ಟು ಚಾವಡಿಯ ಮೇಲಕ್ಕೆ ಕರೆದುಕೊಂಡು ಬಂದರು. ಸುತ್ತು ಮುತ್ತು ಸೇರಿದ್ದ ಹೆಂಗಸರೆಲ್ಲ ಪುನಃ ಬಿಕ್ಕಿ ಬಿಕ್ಕಿ ಅಳಲು ಆರಂಭಿಸಿದರು.

ಇನ್ಸ್‌ಪೆಕ್ಟರ್ ಮೊಂತೆರೋ ಪಟೇಲರನ್ನು ಬದಿಗೆ ಕರೆದು 'ಈಗ ಕೇಸಿನ ದಾಖಲೆ ಬರೆಯಬೇಕು. ಸಂಗತಿ ನೋಡಿದ ಇಬ್ಬರು, ಮೂವರ ಸ್ಟೇಟ್‌ಮೆಂಟ್ ತೆಗೆದುಕೊಳ್ಳಬೇಕು' ಎಂದರು.

ಅವರಿಗೆ ತುಳು ಬರುವುದಿಲ್ಲ. ಪಟೇಲರು ಅವರನ್ನು ಮೊಗಸಾಲೆಯ ಚಾವಡಿಗೆ

ಕರೆದುಕೊಂಡು ಬಂದರು. ಅಲ್ಲಿದ್ದ ಹಳೆಯ ಕುರ್ಚಿಯಲ್ಲಿ ಕಳ್ಳಿರಿಸಿದರು. ಯಾವ ಕಾಲದ್ದೋ ಒಂದು ಉದ್ದದ ಅಗಲದ ಉರುಟಾದ ಕಾಲಿನ ಬೀಟಿ ಮರದ ಮೇಜು ಎದುರಿಗೇ ಇತ್ತು. ಅದನ್ನು ಆಚೀಚೆ ಅಲ್ಲಾಡಿಸುವುದಕ್ಕೇ ಆರು ಜನ ಬೇಕು. ಕುರ್ಚಿಯನ್ನು ಅದರತ್ತ ಎಳೆದು ಇನ್ಸ್‌ಪೆಕ್ಟರ್ ಕುಳಿತರು. ಯಾರನ್ನು ಕರೆಯಬೇಕೆಂದು ಪಟೇಲರು ಕೇಳಿದರು.

'ಯಾರಾದರೂ ಸರಿ. ಮೊದಲು ನೋಡಿದವರು ಯಾರು?' ಮೋಂತೆರೋ ಕನ್ನಡದಲ್ಲಿ ಕೇಳಿದರು.

'ಮನೆಯ ಹೆಂಗಸರು. ಇಲ್ಲದಿದ್ದರೆ ಕೆಲಸದವರು ಆಗಿರಬಹುದು. ಅವರನ್ನು ಕರೆಯಿರಿ' ಎಂದರು. ಪಟೇಲರು ಮೈಂದಣ್ಣನನ್ನು ಬಳಿಗೆ ಕರೆದು ಇನ್ಸ್‌ಪೆಕ್ಟರ್ ಹೇಳಿದ್ದನ್ನು ಹೇಳಿದರು.

ಪಾಪ, ಮೈಂದಣ್ಣ ಈ ಗೊಂದಲಗಳನ್ನೆಲ್ಲ ನೋಡಿ ಕಂಗೆಟ್ಟಿದ್ದ. ಈಗ ಪಟೇಲರ ಮಾತು ಕೇಳಿ ಕೈಕಾಲೆಲ್ಲ ಬಿದ್ದು ಹೋದಂತಾಯ್ತು. ಅವನು ಪಟೇಲರಿಗೆ, 'ಕಾಂತಪ್ಪ ಅಜ್ಜ, ಮೊದಲು ಅವರ ಜಗಳವನ್ನು ನೋಡಿದವರು ನನ್ನ ಅಮ್ಮ. ಹಾಗಂತ ಹೇಳಿದರೆ ಇನ್ಸ್‌ಪೆಕ್ಟರ್ ಮೊದಲು ಅವರನ್ನೇ ಕರೆಸುತ್ತಾರೆ. ಅವರು ಹೆಂಗಸು, ಆಮೇಲೆ ಹೆಂಗಸರೂ ಕೋರ್ಟಿಗೆ ಹೋಗಬೇಕಾದೀತು. ಏನು ಮಾಡುವುದು? ನೀವು ಒಂದು ಮಾತು ಹೇಳಿ. ನಾನು ಮಹಡಿ ಮೇಲೆ ಇದ್ದವನು ಗಲಾಟೆ ಕೇಳಿ ಕೆಳಗೆ ಬಂದೆ. ಅಷ್ಟರಲ್ಲೇ ಆಗುವ ರಣರಂಗ ಆಗಿತ್ತು. ನಾನು ಆಮೇಲೆ ಅಮ್ಮನನ್ನೂ ಹೊರಗಿದ್ದವರನ್ನೂ ಕರೆದೆ ಅಂತ ಹೇಳಿ. ಇಲ್ಲದಿದ್ದರೆ ಕೆಲಸವೇ ಕೆಟ್ಟುಹೋದೀತು. ಹಾಗೇ ಹೇಳಿ ನಮ್ಮ ಮರ್ಯಾದೆ ಉಳಿಸಿ ಅಜ್ಜ' ಎಂದ.

ಪಟೇಲರಿಗೆ ಸತ್ಯ ಏನೆಂದು ಗೊತ್ತಿಲ್ಲ. ಅವತ್ತು ನಡೆದ ಕುರುಕ್ಷೇತ್ರ ಅಜಾನಕವಾಗಿ ಸಂಭವಿಸಿತ್ತು. ಅವರು ಏನು ಹೇಳುತ್ತಾರೆ! 'ಆಯ್ತಪ್ಪ, ನೀನು ಗಡಿಬಿಡಿ ಮಾಡ್ಬೇಡ. ಆದದ್ದು ಆಗಿಹೋಯ್ತು.'

ಮೈಂದಣ್ಣನನ್ನು ತಲೆಯಿಂದ ಕಾಲಿನವರೆಗೂ ಇನ್ಸ್‌ಪೆಕ್ಟರ್ ಕಣ್ಣು ಹಾಯಿಸಿದರು.

'ನಿಮ್ಮ ಹೆಸರು?'

'ಮೈಂದಣ್ಣ ಕಂಬೊಲಿ.'

'ನಿಮ್ಮ ವಯಸ್ಸು?'

'24 ವರ್ಷ.'

'ಸತ್ತ ಶಂಭು ಚೌಟರಿಗೆ ನೀವೇನಾಗ್ಬೇಕು?'

'ನನ್ನ ತಾಯಿಯ ತಮ್ಮ. ನಾನು ಶಂಭು ಚೌಟರ ಸೋದರಳಿಯ. ಅವರು ನನ್ನ ಮಾವ.'

ಇನ್ಸ್‌ಪೆಕ್ಟರರಿಗೆ ಸರಿಯಾಗಿ ಅರ್ಥ ಆಗಲಿಲ್ಲವೆಂದು ಮೈಂದಣ್ಣ ಕನ್ನಡದಲ್ಲಿ ಮಾತು ಮುಂದುವರಿಸಿದ.

'ನಾನು ಉಪ್ಪರಿಗೆಯಲ್ಲಿ ಇದ್ದೆ. ಪದವಿನ ರೇಷನ್ ಅಂಗಡಿಗೆ ಹೋಗಲು

ಸಿದ್ಧನಾಗುತ್ತಿದ್ದೆ. ಅಷ್ಟರಲ್ಲಿ ಮಾವ ಬಯ್ಯುವುದು ಖಾರ್ವಿ ಅದಕ್ಕೆ ಉತ್ತರ ಕೊಡುವುದು ಸ್ವಲ್ಪ ಸ್ವಲ್ಪ ಕೇಳಿಸುತ್ತಿತ್ತು. ಸ್ವಲ್ಪ ದೊಡ್ಡ ಸ್ವರದಲ್ಲಿ ಮಾವ ಬೊಬ್ಬೆ ಹಾಕಿದ್ದು ಕೇಳಿ ನಾನು ಗಾಬರಿಗೊಂಡು ಅವಸರದಲ್ಲಿ ಚಾವಡಿಗೆ ಬಂದೆ. ಅಷ್ಟು ಹೊತ್ತಿಗೆ ಮಾವ ಓರೆಯಾಗಿ ಬಿದ್ದಿದ್ದರು. ನಾನು ಹತ್ತಿರ ಹೋದಾಗ ಕಣ್ಣುಬಿಟ್ಟು ನೋಡಿದರು. ಗರಗರ ಶಬ್ದ ಕೇಳಿತು ಗಂಟಲಿನಲ್ಲಿ. ಹಾಗೆಯೇ ಕಣ್ಣು ಮುಚ್ಚಿದರು. ಖಾರ್ವಿ ಆಚೀಚೆ ಒದ್ದಾಡುತ್ತ ಇದ್ದವನು ಆಗ ಒದ್ದಾಟ ನಿಲ್ಲಿಸಿ ಸುಮ್ಮನಾದ. ನಾನು ಏನು ಮಾಡುವುದೆಂದು ತಿಳಿಯದೆ ಚಾವಡಿಯ ಬದಿಯ ಜಗಲಿಗೆ ಹೋಗಿ ತಾಯಿಯನ್ನು ಕರೆದೆ. ಅವರು ಬಾಣಂತಿ ಕೋಣೆಯಲ್ಲಿದ್ದರು. ಓಡಿ ಬಂದರು. ನಾನು ತಮ್ಮ ಮರಕಲ ಎಲ್ಲಿದ್ದಾನೆಂದು ನೋಡಲು ಹೋದೆ. ನನ್ನ ತಾಯಿ ಚಾವಡಿಗೆ ಹೋದರು.'

ಇನ್ಸ್‌ಪೆಕ್ಟರ್ ಮೊಂತೆರೋ ಎಲ್ಲವನ್ನೂ ಬರೆದುಕೊಂಡರು. ಪಟೇಲರಿಗೆ ಹೇಳಿದರು. 'ಒಮ್ಮೆ ಆ ಯಜಮಾನಿಯನ್ನು ಕರೆಯಬಹುದೇ? ಪಟೇಲ ಕಾಂತಣ್ಣ ನಾಯ್ಕರಿಗೂ ಅನುಮಾನವಿತ್ತು.

ಅಂತಕ್ಕ ಈ ಸಮಯದಲ್ಲಿ ಕರೆದರೆ ಬರುತ್ತಾರಾ? ಆದರೆ ಸರಕಾರದವರೇ ಕರೆಯುವಾಗ ಅವರ ಆದೇಶದಂತೆ ನಡೆಯಲೇ ಬೇಕಲ್ಲ! ಅವರು ಅಂತಕ್ಕ ಕುಳಿತಲ್ಲಿಗೆ ಹೋಗಿ ಮೆಲ್ಲನೆ ಹೇಳಿದರು. 'ಇನ್ಸ್‌ಪೆಕ್ಟರರಿಗೆ ನಿಮ್ಮ ಹತ್ತಿರ ಒಮ್ಮೆ ಮಾತನಾಡಬೇಕಂತೆ' ಮೈಂದಣ್ಣ ಬಂದು ಹೇಳಿದ. 'ನಾನು ನಿಮ್ಮನ್ನು ಕರೆದ ಮೇಲೆಯೇ ನೀವು ಚಾವಡಿಗೆ ಬಂದದ್ದೆಂದು ಹೇಳಿ. ಯಾರು ಮೊದಲು ನೋಡಿದ್ದೆಂದು ಕೇಳುತ್ತಾರೆ' ಅಂತಕ್ಕ ಆಗಬಹುದೆಂಬಂತೆ ತಲೆಯಾಡಿಸಿದರು. ಹೋದ ಕೂಡಲೇ ಇನ್ಸ್‌ಪೆಕ್ಟರು ಅಂತಕ್ಕನನ್ನು ದಿಟ್ಟಿಸಿ ನೋಡಿದರು. ಏನು ಯೋಚಿಸಿದರೋ?

'ನಿಮ್ಮ ಹೆಸರು?'

'ಅಂತಕ್ಕ.'

'ನೀವು ಗಲಾಟೆ ನಡೆಯುವಾಗ ಎಲ್ಲಿದ್ದಿರಿ?'

'ಗಲಾಟೆಯಾಗುವಾಗ ನಾನು ಅಡುಗೆ ಕೋಣೆಯಲ್ಲಿದ್ದೆ. ಮಾತನಾಡುವುದು ಕೇಳಿಸುತ್ತಿತ್ತು. ಅದು ಅವರು ಮಾಡುವ ಜಗಳವೆಂದು ಗೊತ್ತಾಗಿರಲಿಲ್ಲ. ನನ್ನ ಮಗ ಕರೆದ ಮೇಲೆ ನಾನು ಚಾವಡಿಗೆ ಹೋದೆ. ಅಲ್ಲಿ ನನ್ನ ತಮ್ಮನೂ ಅವನ ಆಳೂ ಬಿದ್ದಿರುವುದು ನೋಡಿದೆ.'

'ಆಗ ಅವರಿಗೆ ಜೀವವಿತ್ತೇ?'

'ಜೀವ ಇದ್ದಂತೆ ಕಾಣಿಸಲಿಲ್ಲ.'

'ನೀವು ಅವರ ಹತ್ತಿರ ಹೋಗಿ ನೋಡಿದಿರಾ?'

'ಹೌದು. ಮುಖದ ಹತ್ತಿರ ಬಗ್ಗಿ ನೋಡಿದೆ. ಅವನು ಕಣ್ಣು ಮುಚ್ಚಿದ್ದ. ಉಸಿರಾಡುತ್ತಿರಲಿಲ್ಲ. ಮಾತೂ ಇಲ್ಲ.'

'ಆಯ್ತು, ಈಗ ನೀವು ಹೋಗಿ' ಮೊಂತೆರೋ ಹೇಳಿದರು.

'ಇನ್ನು ಯಾರೂ ಬೇಡ ಪಟೇಲರೇ. ಇಷ್ಟು ಸಾಕು. ಬೇಕಿದ್ದರೆ ಮತ್ತೆ ಸ್ಟೇಷನ್‌ಗೆ ಕರೆಸುತ್ತೇನೆ. ಆಂ, ಇಲ್ಲಿ ಇನ್ನೊಬ್ಬ ಕೆಲಸದವ ಇದ್ದ ಎಂದು ಉಗ್ರಾಣಿ ಹೇಳಿದ್ದ. ಅವನೆಲ್ಲಿ?'

ಉಗ್ರಾಣಿಯನ್ನು ಕಳುಹಿಸಿ ಒಂದು ಮೂಲೆಯಲ್ಲಿ ತಲೆಗೆ ಕೈಹೊತ್ತು ಬಗ್ಗಿ ಕುಳಿತಿದ್ದ ತಮ್ಮು ಮರಕಲನನ್ನು ಕರೆಸಿದರು. ಹೆಸರು, ದಿಕ್ಕು ಕೇಳಿದ ಬಳಿಕ 'ನೀನು ಎಷ್ಟು ಸಮಯದಿಂದ ಇಲ್ಲಿದ್ದೀಯಾ?' ಎಂದು ಮೊಂತೆರೋ ಕೇಳಿದರು.

'ನಾನು ಬಂದು ಹತ್ತು ತಿಂಗಳಾಯ್ತು' ಗಡಗಡನೆಂದು ನಡುಗುತ್ತ ಆತ ಉತ್ತರಿಸಿದ.

'ನೀನು ಬಂದಾಗ ಚಾವಡಿಯಲ್ಲಿ ಯಾರ್‍ಯಾರಿದ್ದರು?'

'ಚಾವಡಿ ತುಂಬ ಹೆಂಗಸರೇ ಇದ್ದರು. ಯಜಮಾನಿಯವರೂ ಇದ್ದರು.'

'ಇಷ್ಟು ಗಲಾಟೆಯಾಗುವಾಗ ನೀನೆಲ್ಲಿದ್ದೆ?'

'ನಾನು ಗುಡ್ಡಕ್ಕೆ ಹೋಗಿದ್ದೆ. ಅಲ್ಲಿ ತೋಡಿಗಿಳಿದು ಕೈಕಾಲು ತೊಳೆದು ಹಿತ್ತಿಲು ದಾರಿಯಾಗಿ ಬಂದೆ. ಅಂಗಳಕ್ಕೆ ಬಂದ ಮೇಲೆಯೇ ನನಗೆ ವಿಷಯ ಗೊತ್ತಾದದ್ದು.'

'ನೀನು ಬಂದಾಗ ಹೊರಗಿನವರೇನಾದರೂ ಬಂದುದನ್ನು ನೋಡಿದೆಯಾ?'

'ಇಲ್ಲ.'

ಅಲ್ಲಿ ಮರಕಲ ಒಂದು ಸಂಶಯವನ್ನು ಉಳಿಸಿದ. ಆತ ಹಿತ್ತಿಲು ದಾಟುವಾಗ ಓಣಿಯಲ್ಲಿ ಓರ್ವ ಹೆಂಗಸು ತಲೆಗೆ ಸೆರಗು ಮುಚ್ಚಿಕೊಂಡು ಬಿರಬಿರನೆ ಗುಡ್ಡದ ಕಡೆಗೆ ಹೋಗುವುದನ್ನು ನೋಡಿದ್ದ. ಮುಖ ಕಾಣಿಸಿರಲಿಲ್ಲ. ಹೆಂಗಸನ್ನು ನೋಡಿದೆನೆಂದು ಅನವಶ್ಯಕವಾಗಿ ಯಾಕೆ ಹೇಳಬೇಕು? ಅಲ್ಲದೆ ಈ ರಗಳೆಯಿಂದ ಒಮ್ಮೆ ಬಿಡಿಸಿಕೊಂಡರೆ ಸಾಕೆಂದು ಆತನಿಗೆ ಅನ್ನಿಸಿತ್ತು. ಖಾರ್ವಿಯಂತೆ ಆತ ಬೇಡದ ಕೆಲಸಕ್ಕೆ ಕೈಹಾಕುವವನಲ್ಲ.

ಪಟೇಲರು ಇನ್ಸ್‌ಪೆಕ್ಟರೊಂದಿಗೆ ಹೆಣಗಳನ್ನು ಸುಡುವ ವ್ಯವಸ್ಥೆ ಮಾಡಬಹುದೇ ಎಂದು ಕೇಳಿದರು. ಬೇಸಿಗೆ ಕಾಲ. ಹೆಣದ ಸುತ್ತಲೂ ಹರಿದ ರಕ್ತ ನೀರೆಲ್ಲ ಒಣಗಿ ಆಗಲೇ ಹೆಣದಿಂದ ವಾಸನೆ ಬರಲು ಶುರುವಾಗಿತ್ತು. ಎಲ್ಲವನ್ನೂ ಪರಿಶೀಲಿಸಿದ ಅವರು ಇದರಲ್ಲಿ ಮೂರನೆಯ ವ್ಯಕ್ತಿಯ ಕೈವಾಡವೇನೂ ಕಾಣಿಸುವುದಿಲ್ಲ. ಆದ್ದರಿಂದ ಹೆಣಗಳ ಸಂಸ್ಕಾರದ ವ್ಯವಸ್ಥೆ ಮಾಡಬಹುದೆಂದು ಒಪ್ಪಿಗೆ ನೀಡಿದರು.

ಮಾವಿನ ಮರದ ಹತ್ತಿರ ಚಿತೆಗೆ ಬೇಕಾದ ಏರ್ಪಾಡುಗಳನ್ನು ಬೇಗ ಬೇಗ ಮಾಡಿದರು. ಸಾಮನಿಯವರು ಮೈಂದಣ್ಣನಿಗೆ ಹೇಳಿ ಆಚಾರಿಯನ್ನೂ ಕುಂಬಾರನನ್ನೂ ಮಡಿವಾಳನನ್ನೂ ಕರೆಸಿದರು. ಪದವಿನಿಂದ ಹೊಸ ಬಟ್ಟೆ ತರಿಸಿದರು. ರಾತ್ರಿ ಹತ್ತೂವರೆ ಹನ್ನೊಂದು ಗಂಟೆ ಸುಮಾರಿಗೆ ಶಂಭು ಚೌಟರನ್ನು ಚಿತೆಗೇರಿಸಿ ಮೈಂದಣ್ಣ ಬೆಂಕಿ ಕೊಟ್ಟ. ಶಂಭು ಚೌಟರ ಹನ್ನೆರಡು ವರ್ಷ ಮಗನ ಕೈಯಲ್ಲಿ ನೀರು ಹೊರಿಸಿದರು. ಅನಂತರ ತಮ್ಮು ಮರಕಿಲ ಮತ್ತು ಊರಿನ ನಾಲ್ಕು ಜನ ಯುವಕರು ಸೇರಿ ಗಣಪ ಖಾರ್ವಿಯನ್ನು ಮಣ್ಣು ಮಾಡಿದರು. ಗುಡ್ಡದ ಬದಿಯಲ್ಲಿ ಗುಣಿ ತೋಡಿ ಅವನನ್ನು ಅಲ್ಲಿ ಹೂತರು. ಮೇಲೆ ಮೂರು ಕಗ್ಗಲ್ಲಿನ ತುಂಡುಗಳನ್ನು ಇಟ್ಟರು. ಅವನ ಊರಿಗೆ

ಹೋಗಿ ವಾರಸುದಾರರನ್ನು ಹುಡುಕುವಾಗ ಹೆಣ ಕೊಳೆತು ಏನಾದೀತು! ಆತನಿಗೆ ಒಬ್ಬ ವಯಸ್ಸಾದ ತಾಯಿ ಮಾತ್ರ ಇದ್ದಾರೆಂದು ಆತನೇ ಹೇಳಿದ್ದ.

ರಾತ್ರಿ ಸುಮಾರು ಒಂದು ಒಂದೂವರೆ ಗಂಟೆ ಹೊತ್ತಿಗೆ ಜನರ ಗುಂಪು ಕರಗಿತು. ಹೆಣ ಉರಿಯುವವರೆಗೆ ಚಿತೆಯ ಹತ್ತಿರ ಮೈಂದಣ್ಣ, ರಮೇಶ, ಸಾಮನಿಯವರು, ನಚ್ಚದ ಪಟೇಲರೆಲ್ಲ ಇದ್ದರು. ಶಂಕರ ಚಿತೆಯ ಬಳಿಗೆ ಹೋಗದೆ ದೂರವೇ ನಿಂತಿದ್ದ. ಚಿತೆ ಧಗದಗನೆಂದು ಉರಿದು ತಲೆಬುರುಡೆ ಸಿಡಿಯುವಾಗ ಆತ ನಿಧಾನವಾಗಿ ಅಲ್ಲಿಂದ ಹೊರಟು ಗುಡ್ಡ ಹತ್ತಿದ. ಗೇರುಬೀಜದ ಮರಗಳ ತೋಪನ್ನು ದಾಟಿದಾಗ ಮರಮುಟ್ಟುಗಳ ದಟ್ಟಣೆ ಕಡಿಮೆ ಆಯ್ತು. ದೂರದ ಮರಗಳ ಗುಂಪಿನಲ್ಲಿ ಪಿಲಿಚಾಮುಂಡಿಯ ಗುಡಿಯುಂಟು. ಅದರ ಎದುರು ಸ್ವಲ್ಪ ದೂರದಲ್ಲಿ ನಾಗಬನ. ಸುತ್ತುಮುತ್ತಲೆಲ್ಲ ದಟ್ಟವಾಗಿ ಮರಗಳು ಬೆಳೆದಿದ್ದುವು. ಆಲ, ಬಸಿರಿ, ಗೋಳಿ, ಅಶ್ವತ್ಥ, ನೇರಳೆ, ಕಿರಾಲ್ ಬೋಗಿ, ಅರಳಿ ಮುಂತಾದ ಬಗೆ ಬಗೆಯ ಮರಗಳು ಸೊಂಪಾಗಿ ಬಳೆದು ಕೆಲವು ವರ್ಷಗಳೇ ಆಗಿದ್ದುವು. ಪಿಲಿ ಚಾಮುಂಡಿಯ ಗುಡಿಯೂ ಅದರ ಬದಿಯಲ್ಲಿರುವ ಚಿಕ್ಕ ಕೊಳವೂ ತುಂಬ ಪ್ರಾಚೀನ ಕಾಲದ್ದು. ಮೊನ್ನೆ ಸಂಕ್ರಾಂತಿಗೆ ಗುಡಿಯ ಬಾಗಿಲನ್ನು ತೆರೆದಿದ್ದರು. ಅಂತಕ್ಕ ತನಿಯರುವಿಗೆ ಹೇಳಿ ಅದರ ಸುತ್ತಲೂ ಅಂಗಳಕ್ಕೆ ಸೆಗಣಿ ಸಾರಿಸಿದ್ದರು. ಆಮೇಲೆ ಮಠದ ಭಟ್ಟರು ಬಂದು ಹೂವು ಹಾಕಿ ದೀಪ ಹಚ್ಚಿ ಬಂದವರಿಗೆ ಗಂಧಪುಷ್ಪ ತೀರ್ಥ ಕೊಟ್ಟಿದ್ದರು. ಅವರು ಹಚ್ಚಿದ ಊದುಬತ್ತಿ, ಲೋಬಾನದ ಪರಿಮಳ ಒಳಗೆ ತುಂಬಿತ್ತು. ಮಲ್ಲಿಗೆ ಹೂವು ಬಾಡಿತ್ತು. ತೀರ್ಥದ ತಂಬಿಗೆಯಲ್ಲಿ ತುಂಬ ನೀರಿತ್ತು.

ಶಂಕರನಿಗೆ ಚಾವಡಿಯಲ್ಲಿ ನಡೆದ ಹತ್ಯಾಕಾಂಡ ನೋಡಿದಾಗ ಅನುಮಾನ ಬಂದಿತ್ತು. ಆಮೇಲೆ ಮೆಲ್ಲನೆ ಕಣ್ಣು ಹಾಯಿಸಿದಾಗ ಸರಸು ಮತ್ತು ರುಕ್ಕಕ್ಕ ಬಾಣಂತಿ ಕೋಣೆಯಲ್ಲಿದ್ದರು. ಭವಾನಿ ಎಲ್ಲಿದ್ದಾಳೆ? ಚಾವಡಿಯಲ್ಲೂ ಇರಲಿಲ್ಲ. ಮನೆಯ ಮೂಲೆಯಲ್ಲಿ ಒಬ್ಬಳೇ ಬಚ್ಚಿಟ್ಟುಕೊಳ್ಳಲು ಸಾಧ್ಯವೇ ಇಲ್ಲ. ಹಾಗಿದ್ದರೆ ಎಲ್ಲಿದ್ದಾಳೆ? ಇದೇನಿದು? ಅಂತಕ್ಕನಿಗೆ ಸಂಗತಿ ಗೊತ್ತಿದೆ. ಅವರು ಅವಳನ್ನು ಎಲ್ಲಿ ಅಡಗಿಸಿಟ್ಟಿರ ಬಹುದು? ಮನೆಯೊಳಗಾದರೆ ಅಟ್ಟದಲ್ಲಿ ಕುಳಿತುಕೊಳ್ಳಬೇಕು. ಇವತ್ತು ಗೆರಟೆ, ಸೋಗೆ ಮತ್ತು ಚಂದನದ ಕೊರಡನ್ನು ತರಲು ಕೆಲಸದವರು ಅಟ್ಟ ಹತ್ತಿದ್ದಾರೆ. ಹಾಗಿರುವಾಗ ಅಲ್ಲಿರಲು ಸಾಧ್ಯವಿಲ್ಲ. ಹಾಗಿದ್ದರೆ ಗುಡ್ಡದಲ್ಲೇ ಕುಳಿತುಕೊಳ್ಳಬೇಕು. ಆದರೆ ಅಲ್ಲೂ ಎಲ್ಲೂ ಮರೆ ಇಲ್ಲ. ಜಾರಂದಾಯನ ಗುಡಿಯಿರುವುದು ಬಯಲಿನ ಮೂಲೆಯಲ್ಲಿ. ಪಂಜುರ್ಲಿಯದ್ದು ಅದರ ಹತ್ತಿರ. ಆಮೇಲೆ ಉಳಿದಿರುವುದು ನಾಗಬನ ಮತ್ತು ಪಿಲಿಚಾಮುಂಡಿ. ಕತ್ತಲೆಗೆ ನಾಗಬನದ ಹಾವುಗಳ ಮಧ್ಯೆ ಕುಳಿತಿರಲು ಹುಡುಗಿಗೆ ಸಾಧ್ಯವಿಲ್ಲ. ಉಳಿದಿರುವುದು ಚಾಮುಂಡಿ ಗುಡಿ ಮಾತ್ರ. ಮೊನ್ನೆ ಸಂಕ್ರಾಂತಿಗೆ ಭಟ್ಟರು ಬಂದು ತೆರೆದಾಗಲೇ ಅಲ್ಲಿ ಬಾಗಿಲಿರುವ ಸಂಗತಿ ಗೊತ್ತಾದದ್ದು. ಆದರೆ ಅದರ ಒಳಗೆ ಕುಳಿತುಕೊಳ್ಳಲು ಸಾಧಾರಣದವರಿಗೆ ಸಾಧ್ಯವಾಗದು. ಆದರೆ ಭವಾನಿ? ಅವಳ ಒನಕೆ

ಓಬವ್ವನಂಥ ಧೈರ್ಯ, ಬೆಳಕು ಮಿಂಚುವ ಕಣ್ಣುಗಳು ಅವನಿಗೆ ನೆನಪಾದುವು. ತನ್ನ ತಾಯಿಯ, ತನ್ನ ಸಂಸಾರದ ರಕ್ಷಣೆಗೆ ಎದೆಗೊಟ್ಟು ನಿಲ್ಲುವ ಗಂಡುಧೈರ್ಯದ ಹೆಣ್ಣು ಆಕೆ. ಝಾಂಸಿ ರಾಣಿ, ಚೆನ್ನಮ್ಮ, ಒನಕೆ ಓಬವ್ವೆಯರಿಗಿಂತ ಹೆಚ್ಚಿನವಳು ಹೇಳಿದರೆ! ಸತ್ಯನಾಪುರದ ಸಿರಿಯೂ ನೆನಪಾಯ್ತು ಅವನಿಗೆ. ಮಧ್ಯರಾತ್ರಿ ಆಗಿದೆ, ಈ ಹೆಣ್ಣು ಹೇಗೆ ಒಳಗೆ ಕೂತಿದ್ದಾಳಪ್ಪ! ಶಂಕರ ನಿಟ್ಟುಸಿರು ಬಿಟ್ಟ.

ಮೆಲ್ಲನೆ ನಡೆದು, ಚಾಮುಂಡಿಯ ಅಂಗಣಕ್ಕೆ ಬಂದ. ರಾತ್ರಿ ಹೊತ್ತು ಆಚೀಚೆ ಹಾರುವ ಕುರುಡು ಹಕ್ಕಿ, ಬಾವಲಿಗಳು ಪಟಪಟ ರೆಪ್ಪೆ ಬಡಿಯುತ್ತ ಅವನ ಮುಖಕ್ಕೆ ಹೆಗಲಿಗೆ ತಾಗಿಕೊಂಡು ಹಾರಿಹೋದುವು. ಶಂಕರ ಮುಖಕ್ಕೆ ಕೈ ಅಡ್ಡಹಿಡಿದು ಚಾಮುಂಡಿಯ ಗುಡಿಯ ಹತ್ತಿರ ಬಂದು ಮೆಟ್ಟಲಲ್ಲಿ ಕುಳಿತ. ಕತ್ತಲೆಯಲ್ಲಿ ನೆಲ ಸರಿಯಾಗಿ ಕಾಣಿಸದೆ ಗುಂಡಿಯಲ್ಲಿ ಕಾಲು ಜಾರಿ ಬಿದ್ದು ಅವನ ನೋವಿನ ಕಾಲು ಜುಂ ಜುಂ ಅನ್ನಲು ಶುರುವಾಯ್ತು. ಆತ ಮೌನವಾಗಿ ಮೆಟ್ಟಲಲ್ಲಿ ಕುಳಿತ.

ಆಕಾಶದ ಬೆಳಕಿಗೆ ಈಗ ಅರ್ಧಂಬರ್ಧ ಕಾಣಿಸಲು ಆರಂಭಿಸಿತು. ಗುಡಿಯ ಬಾಗಿಲು ತುಸು ಓರೆಯಾಗಿತ್ತು. ಒಳಗೆ ಏನಿದೆಯೆಂದು ಗೊತ್ತಾಗುವುದಿಲ್ಲ. ಕಗ್ಗತ್ತಲೆ.

ಒಮ್ಮೆ ಕರೆದು ನೋಡೋಣವೆನಿಸಿ ಧ್ವನಿ ತಗ್ಗಿಸಿ 'ಭವಾನಿ, ಭವಾನಿ' ಎಂದ. ಗಿರ್ ಗಿರ್ ಎಂದು ಆ ಧ್ವನಿ ಕತ್ತಲೆಯ ಮೌನವನ್ನು ಸೀಳಿತು. ಯಾರೋ ಅಳುಕಿನ ಸ್ವರದಲ್ಲಿ ಮೆಲ್ಲನೆ ಓಗೊಟ್ಟಂತಾಯ್ತು.

ಇನ್ನೊಮ್ಮೆ ಕರೆದು ಪರೀಕ್ಷೆ ಮಾಡುತ್ತೇನೆಂದು 'ಭವಾನಿ ನಾನು, ಶಂಕರ. ಹೆದರಬೇಡ' ಅಂದ. ಶಬ್ದವೇ ಇಲ್ಲ. ಮತ್ತೊಮ್ಮೆ ಕರೆದ. 'ಭವಾನಿ, ನಾನು ಶಂಕರ' ಎಂದ. ಉತ್ತರವಿಲ್ಲ. ಈಗ ಬಿಕ್ಕಿ ಬಿಕ್ಕಿ ಅಳುವ ಹೆಣ್ಣಿನ ಸ್ವರ ಕೇಳಿತು. ಶಂಕರ ಧೈರ್ಯಮಾಡಿ ನಿಧಾನಕ್ಕೆ ಕುಂಬಾದ ಆ ಮರದ ಬಾಗಿಲನ್ನು ಒಳಗೆ ತಳ್ಳಿದ. ಮೂಲೆಯಲ್ಲಿ ಒಬ್ಬಳು ಹುಡುಗಿ ಕಾಲು ಮಡಚಿ ಗೋಡೆಗೆ ಒರಗಿ ಕುಳಿತಿದ್ದಳು. ಶಂಕರ ಒಳಗೆ ಕೈನೀಡಿ ಹೇಳಿದ, 'ಎದ್ದು ನಿಲ್ಲಬೇಡ. ಹಾಗೇ ಕುಳಿತುಕೊಂಡೇ ಮುಂದೆ ಬಾ. ನನ್ನ ಕೈಹಿಡಿದುಕೋ. ಹೆದರುವಂತದ್ದು ಏನೂ ಇಲ್ಲ. ಸುತ್ತ ಯಾರೂ ಇಲ್ಲ. ನಾನು ಬಂದದ್ದೂ ಯಾರಿಗೂ ಗೊತ್ತಿಲ್ಲ. ಶಬ್ದಮಾಡದೆ ಬಾ.'

ಭವಾನಿ ಕುಳಿತುಕೊಂಡೇ ತೆವಳುತ್ತ ಮುಂದೆ ಬಂದಳು. ಶಂಕರನ ನೀಡಿದ ಕೈಯನ್ನು ಹಿಡಿದುಕೊಂಡು ಹೊಸ್ತಿಲು ದಾಟಿ ಹೊರಗೆ ಬಂದಳು. ಶಂಕರ ಅವಳನ್ನು ಮೆಲ್ಲನೆ ಮೆಟ್ಟಲು ಇಳಿಸಿದ.

'ಈಗ ಯಾರೂ ಇಲ್ಲ. ಸುತ್ತ ಯಾರಾದರೂ ಇದ್ದರೆ ನಿನ್ನ ಗುರುತು ಸಿಗುವುದು ಬೇಡ. ತಲೆಗೆ ಸೆರಗು ಹೊದ್ದುಕೋ... ಬಾಯಾರಿಕೆಯಾಗುತ್ತಿದೆಯಾ? ಗಂಟೆ ಮೂರು ಕಳೆಯಿತು. ಆದಷ್ಟು ಬೇಗ ಮನೆ ಸೇರಬೇಕು. ಹಿತ್ತಿಲ ದಾರಿಯಾಗಿ ಹೋಗಿ ಕುರುಬಾಗಿಲ ಹತ್ತಿರ ಅಂಗಳ ದಾಟಿ ಬಾಣಂತಿಕೋಣೆಗೆ ಹೋಗಬಹುದು' ಮೌನ. ಅವಳ ಪ್ರತಿಕ್ರಿಯೆಯೇ ಇಲ್ಲ. 'ಇಷ್ಟು ಹೊತ್ತು ತೋರಿಸಿದ ಧೈರ್ಯ ಈಗ ಎಲ್ಲಿ ಹೋಯ್ತು? ಬಾಯಾರಿಕೆ

ಬೇಕಾ..?' ಶಂಕರ ಪುನಃ ಕೇಳಿದ.

ಅವಳು ಕ್ಷೀಣವಾದ ದನಿಯಲ್ಲಿ ಬೇಡವೆಂದು ಉತ್ತರಿಸಿದಳು.

'ನಿನ್ನೆ ಬೆಳಗ್ಗಿನಿಂದ ಇಷ್ಟು ಹೊತ್ತಿನವರೆಗೂ ನೀರು ಕೂಡ ಇಲ್ಲದೆ ಕುಳಿತಿದ್ದೀಯಾ. ಬಾಯಾರಿಕೆ ಆಗುವುದಿಲ್ಲವೇ?'

'ದೇವಿಯ ತೀರ್ಥದ ಗಿಂಡಿಯಲ್ಲಿ ನೀರಿತ್ತು. ಮೆಟ್ಟಲಿನಲ್ಲಿ ಮಡಿಕೆಯಲ್ಲಿ ಯಾರೋ ಸಂಜೆ ಹೆಂಡ ತಂದು ಇಟ್ಟಿದ್ದರು.'

ಶಂಕರನಿಗೆ ಆ ಸಂಕಟದಲ್ಲೂ ಅವಳ ಮಾತು ಕೇಳಿ ನಗುಬಂತು. 'ಹಾಗಿದ್ದರೆ ನಿನಗೆ ದೇವಿಯ ದಯವಿದೆ. ಪರವಾಗಿಲ್ಲ. ಹಿತ್ತಲಿನ ಹೊರಗಿನವರೆಗೆ ನಿನ್ನನ್ನು ತಲಪಿಸಿದರೆ ಬಾಣಂತಿ ಕೊಟ್ಟಿಗೆಯವರೆಗೆ ನೀನೇ ಹೋಗ್ತೀಯಲ್ಲ..?

'ಯಾರಾದರೂ ನೋಡಿಯಾರಾ?'

'ಈಗ ಎಲ್ಲರೂ ಮಲಗಿರಬಹುದು. ಅಲ್ಲದೆ ನಿನ್ನ ಅಮ್ಮ ನಿನ್ನ ಹೆಸರನ್ನು ಪೋಲೀಸಿನವರಿಗೆ ಹೇಳಲಿಲ್ಲ. ನೀನು ಎಲ್ಲಿದ್ದೀಯಾ ಅಂತ ದೈಯ್ಯಕ್ಕ ಕೇಳಿದ್ದಕ್ಕೆ ಮಗುವಿಗೆ ಕಫದ ಮತ್ತು ಬಾಲಾರಿಷ್ಟದ ಮಾತ್ರೆ ಮತ್ತು ಔಷಧಿಯನ್ನು ತರಲು ಬೆಳಿಗ್ಗೆಯೇ ಅದ್ಯಪಾಡಿಗೆ ಹೋಗಿದ್ದುದಾಗಿ ಎಲ್ಲರಿಗೂ ಹೇಳಿದ್ದಾರೆ. ಕೇಳಿದರೆ ನೀನೂ ಹಾಗೆಯೇ ಹೇಳು. ರಾತ್ರಿಯೇ ಬಂದೆ ಅನ್ನು. ಆಕಾಶವೇ ಕಳಚಿ ತಲೆಗೆ ಬಿದ್ದಂತೆ ವರ್ತಿಸಬೇಡ. ಭವಾನಿ, ನಿನ್ನ ಬಾಯಿಯಿಂದ ಹೂಂ, ಊಹೂಂ ಯಾವುದೂ ಬರುವುದಿಲ್ಲವೇಕೆ?'

'ಆ ದಿನ ಶ್ಯಾನುಭೋಗರ ಮೂಲೆಯಲ್ಲಿ 'ಸ್ವರಕ್ಷಣೆ ಮಾಡುವುದು ಸರಿಯೇ? ಎಂದು ಕೇಳಿದ ಅಭಿಮಾನದ ಹೆಣ್ಣು ನೀನೇಯಾ? ಬಿಲ್ಲಿನಿಂದ ಬಿಟ್ಟ ಬಾಣದಂತೆ ಹಿಂತಿರುಗಿ ನೋಡದೆ ಹೋದ ದೊಡ್ಡ ಮನೆಯ ಮರ್ಯಾದೆ ಕಳೆಯದ ಹೆಣ್ಣು ನೀನೇಯಾ? ಕಣ್ಣಿನ ನೋಟದಲ್ಲಿ ಕಾಮನೆ ತುಂಬಿಸಿದ ಅಧಮರ ಎದೆಯನ್ನು ತುಳಿದು ಹಾಕುವೆನೆಂದ ಕಾರ್ಯಸಾಧನೆಯ ಹೆಣ್ಣು ನೀನೇಯಾ? ಬಾಯಿ ಬಿಡು.. ಕಷ್ಟಗಳಿಗೆ ಬೆನ್ನು ಹಾಕದ ಬಂಟರ ಹೆಣ್ಣು ನೀನೇ ಅಲ್ಲವೇ? ನಾನು ತಿಳಿದಿರುವುದು ತಪ್ಪಾ ಹೇಳು ಭವಾನಿ..?'

ಭವಾನಿ ಮೆಲ್ಲನೆ ಬಾಯಿ ತೆರೆದಳು. 'ಇವತ್ತು ಏನಾಯ್ತೆಂದು ನಿಮಗೆ ಗೊತ್ತು ತಾನೆ? ಗೊತ್ತಿದ್ದೂ ನೀವು ನನ್ನ ಬಾಯಿ ಬಿಡಿಸುತ್ತಿದ್ದೀರಿ. ಒಳಗೇ ಮೂಟೆ ಕಟ್ಟಿದ ಬೇಸರ, ಗತಿಗೆಟ್ಟ ಅವಸ್ಥೆ. ಇದ್ದಷ್ಟು ಕಾಲ ಇನ್ನೊಬ್ಬರ ಮುಂದೆ ಅಂಗಲಾಚಿ ಬದುಕುವ ಅವಸ್ಥೆ. ಹುಣ್ಣಿಗೆ ಬರೆಯೆಳೆದಂತೆ ಅಂಗಳಕ್ಕೆ ಇಳಿಯುವಾಗ ಒಳಗೆ ಹೊರಗೆ ಹೋಗುವಾಗ ಅಂಗಾಂಗಗಳನ್ನು ಅಳೆಯುವಂಥ ಕ್ರೂರದೃಷ್ಟಿ... ಅನ್ನಕ್ಕೆ ಬಿದ್ದ ಆಳುಮನುಷ್ಯನ ಅಸಹ್ಯ ನೋಟವನ್ನು ಎದುರಿಸಬೇಕು. ನನ್ನ ಮನಸ್ಸಿನೊಳಗೆ ನೆಮ್ಮದಿ ಹೇಗಿರುತ್ತದೆ, ಜೀವ ತುಂಬ ಕಾಮದ ಕಣ್ಣಿನ ಅಸಹ್ಯ, ಕೆಸರು ಮೆತ್ತಿದಂತೆ. ನನಗೆ ಬದುಕೇ ಬೇಡವಾಗಿತ್ತು. ಈ ಜನ್ಮದಲ್ಲಿ ಯಾವಾಗ ಬಿಡುಗಡೆ?'

'ಅನ್ಯಾಯವನ್ನು ಎದುರಿಸಬೇಕು. ಹೋರಾಟ ಮಾಡಿಯೇ ಗೆಲ್ಲಬೇಕು, ಸ್ವಾತಂತ್ರ್ಯ

ಪಡೆಯಬೇಕು ಎಂದು ಸುಭಾಷ್‌ಚಂದ್ರ ಬೋಸರೇ ಹೇಳಿದ್ದಾರಲ್ಲವೇ?'

'ಆ ದಿನ ನಿಮ್ಮನ್ನು ಕೇಳಿದ ಮಾತಿಗೆ ನೀವು ಕೂಡ ಧೈರ್ಯದಿಂದ ಹೋರಾಡಿ ನಮ್ಮ ಹಕ್ಕನ್ನು ಪಡೆಯಬೇಕೆಂದು ಹೇಳಿದಿರಿ. ಆ ಭಾವನೆ ನನ್ನೊಳಗೆ ಬಲವಾಗಿ ನೆಟ್ಟಿತ್ತು. ಹಾಗಾಗಿ ನಿನ್ನೆ ಮಾಮನೂ ಅಮ್ಮನೂ ತಾರಾಮಾರ ಉರುಳಾಡುವಾಗ ಅವರನ್ನು ಅವರಷ್ಟಕ್ಕೆ ಬಿಡಲು ನನ್ನಿಂದಾಗಲಿಲ್ಲ. ನನಗೆ ಸಾಧ್ಯವಾದಂತೆ ನಾನು ಹೋರಾಡಿದೆ.'

'ಮಾಮ ಬಿದ್ದ ಬಳಿಕ ಖಾರ್ವಿ ಓಡಿಕೊಂಡು ಬಂದ. ನಮ್ಮನ್ನು ಕೆಟ್ಟ ಕೆಟ್ಟದಾಗಿ ಬಯ್ಯಲು ಆರಂಭಿಸಿದ. ಅವನ ಮೇಲಿದ್ದ ನನ್ನ ದ್ವೇಷ ಉಕ್ಕಿತು. ಕಣ್ಣಲ್ಲೇ ಆತ ದಿನವೂ ಮಾಡುವ ಅವಮಾನ ನನ್ನ ಎದೆಯಲ್ಲಿ ಹೆಪ್ಪುಗಟ್ಟಿತ್ತು. ಯಾವಾಗ ಆತನ ಕಣ್ಣು ಕೀಳಲಿ, ಯಾವಾಗ ಆತನ ಎದೆ ಬಗಿಯಲಿ ಎಂಬ ಹಗೆ ನನ್ನ ಮನಸ್ಸಿನೊಳಗೆ ಕುದಿಯುತ್ತಿತ್ತು. ಹಿಂದೆ ಮುಂದೆ ನೋಡದೆ ಕತ್ತಿ ಹಿರಿದು ಅವನಿಗೆ ಚುಚ್ಚಿದೆ. ಎರಡು ಕೊಲೆ ಮಾಡಿದೆ ಶಂಕರಣ್ಣ. ಅವರು ಸತ್ತರು. ನಾನು ಕೊಲೆ ಮಾಡಿದೆನೆಂಬ ಪಶ್ಚಾತ್ತಾಪ ನನ್ನಲ್ಲಿ ಎಳ್ಳಷ್ಟೂ ಇಲ್ಲ. ಆದರೂ ಕೊಲೆ ಮಾಡಿದುದಕ್ಕೆ ಮನಸ್ಸಿಗೆ ಬೇಸರವಾಗ್ತದೆ, ನಮ್ಮೊಳಗಿನ ಯಾವುದೋ ಒಳ್ಳೆಯತನಕ್ಕೆ ಧಕ್ಕೆಯಾದ ಸಂಕಟ. ಒಂದು ರೀತಿಯ ಮೌಢ್ಯ ಮನಸ್ಸನ್ನು ಕವಿಯುತ್ತದೆ. ದಿಕ್ಕು ತಪ್ಪಿಸುತ್ತದೆ. ಮನಸ್ಸು ಖಾಲಿ ಖಾಲಿ ಆಗುತ್ತದೆ.'

'ಆಯ್ತು, ನಾನಿನ್ನು ಬರುತ್ತೇನೆ. ನೀವು ನನ್ನನ್ನು ಹಿತ್ತಿಲಿನ ಬೇಲಿಯವರೆಗೆ ಬಿಡುವುದು ಬೇಡ. ಕೊಟ್ಟಿಗೆಯ ಹತ್ತಿರದ ಬಚ್ಚಲು ಮನೆಯ ಗೋಡೆ ದಾಟಿಸಿ ಬಿಡಿ. ನಾನು ಅಲ್ಲಿಂದ ಬಾಣಂತಿ ಕೊಟ್ಟಿಗೆಗೆ ಹೋಗುತ್ತೇನೆ. ಯಾರಾದರೂ ದಾರಿಯಲ್ಲಿ ಸಿಕ್ಕಿದರೆ ಬಚ್ಚಲಿಗೆ ಹೋಗಿ ಬಂದೆ ಅನ್ನಬಹುದು.'

'ಆಯ್ತು. ಹೋಗೋಣ. ಬಾ.. ತಲೆಗೆ ಸೆರಗು ಮುಚ್ಚಿಕೋ.'

'ಶಂಕರಣ್ಣ, ನಾನು ನಿನ್ನೆ ಬರುತ್ತ ಹಿತ್ತಿಲು ದಾಟುವಾಗ ತಮ್ಮು ಮರಕಲ ಗುಡ್ಡಕ್ಕೆ ಹೋದವನು ಹಿತ್ತಿಲು ದಾಟಿ ಬರುತ್ತಿದ್ದ. ಅವನು ನನ್ನನ್ನು ನೋಡಿದ್ದಾನೋ ಗೊತ್ತಾಗಲಿಲ್ಲ. ಸುಮಾರು ಮಧ್ಯಾಹ್ನದ ಹೊತ್ತು.'

'ಆತ ಇನ್ಸ್‌ಪೆಕ್ಟರ ಜೊತೆ ಮಾತನಾಡುವಾಗ, ಸಾಕ್ಷಿ ಹೇಳುವಾಗ ನಾನು ಅಲ್ಲೇ ಇದ್ದೆ. ಆತ ನಿನ್ನ ಹೆಸರು ಹೇಳಲಿಲ್ಲ. ಅಲ್ಲದೆ ಯಾರನ್ನೋ ನೋಡಿದ್ದೇನೆಂದೂ ಹೇಳಲಿಲ್ಲ. ಸಿಕ್ಕಿದರೆ ನಾನು ಮಾತಾಡ್ತೇನೆ. ನೀನು ಬೇಗ ಬಾ. ಆದಷ್ಟು ಬೇಗ ಮನೆಯೊಳಗೆ ಹೋಗಿ ಕುಳಿತುಕೋ. ಕೋರ್ಟು ಹಿಯರಿಂಗ್ ಆಗುವಾಗ ಏನಾಗ್ತದೆಂದು ಆಮೇಲೆ ಯೋಚನೆ ಮಾಡಿದರೆ ಆಯ್ತು. ಈಗ ಹೋಗೋಣ.'

ಅವರಿಬ್ಬರೂ ಗುಡ್ಡ ಇಳಿದು, ಹಿತ್ತಿಲು ದಾಟಿ ಗೋಡೆಯ ಬದಿಯಲ್ಲೇ ನಡೆದು ಬಚ್ಚಲುಮನೆಯ ಹಿಂಭಾಗಕ್ಕೆ ಬಂದರು. ಶಂಕರ ಅನಾಮತ್ತಾಗಿ ಭವಾನಿಯನ್ನು ಎತ್ತಿ ಗೋಡೆಯ ಮೇಲೆ ಕುಳ್ಳಿರಿಸಿ ಮೆಲ್ಲಗಿನ ಸ್ವರದಲ್ಲಿ ಉಸುರಿದ. 'ಕಾಲನ್ನು ಆಚೆಗಿಟ್ಟುಕೋ. ಈ ಕಡೆ ಬೆನ್ನುಹಾಕಿ ಆ ಕಡೆಗೆ ನೆಗೆದುಬಿಡು' ಭವಾನಿ ಹಾಗೆಯೇ ಮಾಡಿದಳು.

ಅವಳು ನೆಗೆದಾಗ ಬುಡಕ್ಕನೆ ಶಬ್ದವಾಯ್ತು. ಸ್ವಲ್ಪ ಹೊತ್ತು ನಿಂತು ಶಂಕರ ಕಿವಿಗೊಟ್ಟ. ಒಳಗಿನಿಂದ ಯಾವ ಮಾತೂ ಕೇಳಿಸಲಿಲ್ಲ.

ಆಮೇಲೆ ನಿಧಾನಕ್ಕೆ ನಡೆದುಕೊಂಡು ಹೋದ. ಎಲ್ಲಿಗೆ ಹೋಗುವುದು? ಸೇನೆರ ಮೂಲೆಗೆ ಹೋದರೆ ರಾತ್ರಿ ಎಲ್ಲಿಗೆ ಹೋದದ್ದೆಂದು ದೆಯ್ಯಕ್ಕನೂ ಸಾಮನಿಯವರೂ ಕೇಳುತ್ತಾರೆ. ಆಮೇಲೆ ಹತ್ತಿರವಿರುವುದು ನೀಲಯ ಆಚಾರಿಯ ಮನೆ. ಏನಾದರೂ ಒಂದು ಕಾರಣ ಹೇಳ್ತೇನೆ. ಅಲ್ಲಿಗೇ ಹೋಗುವುದು ಉತ್ತಮ ಎನ್ನುತ್ತ ಮರಳು ತೋಟದ ಕಡೆಗೆ ಹೋದ.

ಒಂದು ಚಿಕ್ಕ ಸೀಮೆಎಣ್ಣೆಯ ಲ್ಯಾಂಪ್ ಜಗಲಿಯಲ್ಲಿ ಉರಿಯುತ್ತಿತ್ತು. ಒಕ್ಕಣ್ಣಿನ ಕಾಳುನಾಯಿ ಮೆಟ್ಟಲಲ್ಲಿ ಮಲಗಿದ್ದುದು ಎದ್ದು ತಟಪಟ ಬಾಲ ಅಲ್ಲಾಡಿಸಿತು. ಅಂಗಳದ ತುದಿಯಲ್ಲಿ ಬೇಲಿಯ ಬಳಿ ನಿಂತು ಶಂಕರ ಒಳಗೆ ನೋಡಿದ. ಬಾಗಿಲಿನ ಚಿಲಕ ತೆರೆದು ಓರ್ವ ಹೆಂಗಸಿನ ಸ್ವರ ಕೇಳಿಸಿತು. 'ಇಷ್ಟು ರಾತ್ರಿಯವರೆಗೆ ಎಲ್ಲಿಗೆ ಹೋಗಿದ್ದೆ ಅಪ್ಪಾ?'

ಓ, ಹಾಗಿದ್ದರೆ ನೀಲಯ ಆಚಾರಿ ಇನ್ನೂ ಮನೆಗೆ ಬರಲಿಲ್ಲ. ಆದರೆ ದಾರಿಯಲ್ಲೂ ಆತ ಎಲ್ಲೂ ಸಿಗಲಿಲ್ಲವಲ್ಲ!

'ಇದು ನಿಮ್ಮ ಅಪ್ಪ ಅಲ್ಲ, ನಾನು ಶಂಕರ. ನಿಮ್ಮ ಅಪ್ಪ ಇನ್ನೂ ಮನೆಗ ಬರಲಿಲ್ಲವೇ?'

'ಇಲ್ಲ. ನೀವೇನು ಬಂದಿರಿ? ಗುತ್ತಿನ ಮನೆಯಲ್ಲಿ ಎಲ್ಲ ಕಾರ್ಯಗಳೂ ಮುಗಿಯಿತಾ?'

'ಹೌದು, ನನಗೆ ನಿನ್ನ ಅಪ್ಪನ ಹತ್ತಿರ ಸ್ವಲ್ಪ ಮಾತನಾಡುವುದಿದೆ. ನಾಳೆ ನಾನು ಮಂಗಳೂರಿಗೆ ಬೇಗ ಹೋಗಬೇಕು. ನಿನಗೆ ತೊಂದರೆಯಾಗದಿದ್ದರೆ ಹೊರಗೆ ಜಗಲಿಯಲ್ಲಿ ಮಲಗುತ್ತೇನೆ. ಬೆಳಿಗ್ಗೆ ಅವರ ಹತ್ತಿರ ಮಾತನಾಡಿ ಹೋಗುತ್ತೇನೆ.'

'ಆಯ್ತು ಮಲಗಿ. ತಲೆಯಡಿಗೆ ಇಟ್ಟುಕೊಳ್ಳಲು ಒಂದು ದಿಂಬು ಕೊಡುತ್ತೇನೆ.'

ಬೆಳಿಗ್ಗೆ ಚೆನ್ನಾಗಿ ಬೆಳಕು ಹರಿಯುವ ಮೊದಲೇ ನೀಲಯ ಆಚಾರಿ ಮನೆಗೆ ಬಂದ. ರಾತ್ರಿ ಚೆನ್ನಾಗಿ ಸಾರಾಯಿ ಕುಡಿದು ಮನೆತನಕ ನಡೆಯಲಾಗದೆ ದಾರಿಯಲ್ಲೇ ಬಯಲಿನ ಪಕ್ಕದ ಬಂಡೆಗೆ ತಲೆಯಿಟ್ಟು ಮಲಗಿದ್ದು ಮುಂಜಾವದಲ್ಲಿ ಬೆಳ್ಳಿ ಮೂಡುವ ಹೊತ್ತಿಗೆ ಪೂರ್ವದಿಕ್ಕಿನಿಂದ ಬೀಸುವ ತಂಪುಗಾಳಿಗೆ ಅಮಲು ಇಳಿದು ಎಚ್ಚರವಾಗಿ ಎದ್ದು ಬಂದಿದ್ದ. ಹುಳಿ ಹೆಂಡದ ಅಮಲು ಹೊತ್ತು ಮೂಡುವವರೆಗೆ.

ಜಗಲಿಯಲ್ಲಿ ಮಲಗಿದ್ದವನನ್ನು ನೋಡಿ 'ಯಾರದು, ಯಾರದು' ಎಂದು ಕೇಳಿದ. ಆತನ ಧ್ವನಿಗೆ ಅರ್ಕಾವತಿಗೆ ಎಚ್ಚರವಾಯ್ತು. ಬಾಗಿಲು ತೆರೆದು ಬಂದಳು. 'ಅದು ಶಂಕರಣ್ಣ ಅಪ್ಪಾ. ನಿಮ್ಮ ಹತ್ತಿರ ಮಾತಾಡಲಿಕ್ಕುಂಟೆಂದು ಬಂದರು. ಅವರಿಗೆ ಬೇಗ ಮಂಗಳೂರಿಗೆ ಹೋಗಲಿಕ್ಕಿದೆಯಂತೆ.'

'ಯಾವ ಕೆಲಸಕ್ಕೆ?'

ಅಷ್ಟು ಹೊತ್ತಿಗೆ ಶಂಕರ ಎದ್ದು ಕುಳಿತ. ಅವನು ಹೇಳಿದ, 'ಯುವಕರು ಸಭೆ ನಡೆಸಲು ಮಂಗಳೂರಿನಲ್ಲಿ ಒಂದು ಹಾಲು ಕಟ್ಟುವ ಅಂತ. ಅದಕ್ಕೆ ಕಿಟಕಿ ಬಾಗಿಲುಗಳ

ಕೆಲಸ ಆಗಬೇಕು. ಬೇಕಾದ ಮರ ತರಿಸಿ ಕೊಡ್ತೇವೆ. ಕೆಲಸ ಮಾಡಿ ಕೊಡಲು ಕಾಂಟ್ರೇಕ್ಟ್ ಕೊಡ್ತೇವೆ. ಮುಂದಿನ ವಾರ ನಾನು ಇಲ್ಲಿಗೆ ಮತ್ತೆ ಬರುತ್ತೇನೆ. ನೀವು ನನ್ನ ಜೊತೆಗೆ ಬಂದು ಅಳತೆ ತೆಗೆದು ಬಾಗಿಲು ಕಿಟಿಕಿಗಳನ್ನು ಮಾಡಿಕೊಡಿ. ನೀವು ಜಾಗ ನೋಡಿದ ಮೇಲೆ ಎಲ್ಲ ಮಾತನಾಡ್ಲೋಣ' ಶಂಕರನ ಮಾತು ಕೇಳಿ ನೀಲಯ ಆಚಾರಿಗೆ ಖುಷಿಯಾಯ್ತು.

'ನಾನೀಗ ಮಂಗಳೂರಿಗೆ ಹೋಗುತ್ತೇನೆ. ಬರುವ ವಾರ ಬಂದಾಗ ಎಲ್ಲ ವಿಷಯ ಮಾತನಾಡುವ' ಎನ್ನುತ್ತ ಶಂಕರ ಹೊರಟುಹೋದ.

ನೀಲಯ್ಯ ಆಚಾರಿಗೆ ಸಂಶಯ. ಮಗಳ ಮುಖ ನೋಡಿದ. ಮುನ್ನಾದಿನವಿಡೀ ಅತ್ತು ಅತ್ತು ಅವಳ ಮುಖ ಬಾಡಿದ ಬದನೆಯಂತಾಗಿತ್ತು. ಕಣ್ಣೀರು ಸುರಿಸಿ ಸುರಿಸಿ ಕಣ್ಣುಗಳು ಬಾತುಕೊಂಡಿದ್ದುವು.

ಶಂಕರನನ್ನು ಯೋಚಿಸಿ ಆಚಾರಿಗೆ ತುದಿಮೊದಲು ಹೊಲಬಾಗಲಿಲ್ಲ. ಈಗಿನ ಯುವಕರ ವಿಷಯ ಹೇಳುವಂತಿಲ್ಲ ಎನ್ನುತ್ತ ಆತ ಯೋಚನೆ ಮಾಡಿದ.

ಶಂಭು ಚೌಟರ ಆಕಸ್ಮಿಕ ಸಾವು, ಮಗಳ ಕರುಳು ಬೇಯುವಂಥ ದುಃಖ, ಅನ್ನ ನೀಡುವ ಯಜಮಾನ ತಟಕ್ಕನೆ ಎದ್ದು ಪಟಕ್ಕನೆ ಹೋದಾಗ ಸಂಕಟವಾಗುವುದು ಸಹಜ ತಾನೇ! ಕಾಲಡಿಯ ನೆಲವೇ ಕುಸಿದಂತೆ ಆಗಿತ್ತು ಆಚಾರಿಗೆ. ಅದರ ಮಧ್ಯೆ ಈ ಯುವಕನದ್ದು ಏನು ಫಿತೂರಿ! ಏನಾದರೂ ಆಗಲಿ, ಬರುವ ವಾರ ಬರ್ತೇನೆ ಅಂದಿದ್ದಾನಲ್ಲ, ಆಗ ನೋಡುವ!

* * * * *

ಬಿರುಗಾಳಿ ಬೀಸಿ ಎಲ್ಲವೂ ಒಮ್ಮೆ ಚೆಲ್ಲಾಪಿಲ್ಲಿಯಾದರೂ ಕ್ರಮೇಣ ವಾತಾವರಣ ಶಾಂತವಾಗುತ್ತದೆ. ಗುತ್ತಿನಲ್ಲಿ ಕೊಲೆ ನಡೆದ ವ್ಯಾಜ್ಯ ನಾಲ್ಕು ವರ್ಷ ನಡೆಯಿತು. ಸಾಕ್ಷಿ ಸರಿಯಿಲ್ಲವೆಂದು ಕೊನೆಗೆ ತಳ್ಳಿಹಾಕಿದರು. ಶಂಭು ಚೌಟರ ಮಡದಿಗೆ ಇನ್ನೂ ಸಂಶಯ ಹೋಗಲಿಲ್ಲ. ಅವರು ಹೇಳುವುದು, 'ನನ್ನ ಗಂಡನನ್ನು ಸಾಯಿಸಿದವರು ಅಂತಕ್ಕ ಮತ್ತು ಅವರ ಮಕ್ಕಳು. ಎಲ್ಲರೂ ಒಟ್ಟು ಸೇರಿ ಮಾಡಿದ ಮಸಲತ್ತು ಅದು.'

ಆಮೇಲೆ ಅವರ ಬಂಟ ಖಾರ್ವಿಯನ್ನು ಕೊಂದದ್ದು ಅವರ ಮಗಳು ಭವಾನಿಯೇ.

ದೇವಣ್ಣ ಚೌಟರು ಅವರ ಮಡದಿ ತುಂಗಕ್ಕನ ಕುಟುಂಬದ ಮನೆ ಚಕ್ರೋಡಿಗೆ ಹೋದರು. ಇದೇ ಸುದ್ದಿ ಊರೆಲ್ಲ ಹರಡಿ ಭವಾನಿಗೆ ಮಾತೇ ಬರುವುದಿಲ್ಲ. ಮೈಂದಣ್ಣ ಈ ಭಯಂಕರ ಕೊಲೆಯನ್ನು ನೋಡಿ ಮೌನಿಯಾಗಿದ್ದ. ಅವನ ತಲೆಕೂದಲು ನರೆಯಿತು. ಮಾತು ಕಡಿಮೆಯಾಯ್ತು.

ಭವಾನಿಗೆ ಮನಸ್ಸಿನೊಳಗೆ ಶಾಂತಿ ಸಿಕ್ಕಿತ್ತು. ಯಾವತ್ತಾದರೂ ಒಂದು ದಿನ ಜನಸೇವೆಗಾಗಿ ಹೊರಟಿರುವ ಜನಾರ್ಧನ ಅವಳ ಶಂಕರಣ್ಣ ಅವಳನ್ನು ಉದ್ಧಾರ ಮಾಡಲು ಬಂದೇ ಬರುತ್ತಾನೆಂದು ಅವಳು ಖಚಿತವಾಗಿ ನಂಬಿದ್ದಳು.

ಅವಳು ದಿನವೂ ಉಯ್ಯಾಲೆಗೆ ನೀರಿಡುವಾಗ ಪ್ರಾರ್ಥಿಸುತ್ತಾಳೆ, 'ಓ ಪಂಜುರ್ಲಿಯೆ, ನೀವು ಕಣ್ಣುಬಿಡಿ. ಈ ಜನ್ಮಕ್ಕೆ ಬಂದಿರುವ ಕೊಲೆಯ ಕೊಳೆ ಮಾಯುವಂತೆ ಮಾಡಿ. ಹಗೆಯಿಟ್ಟು ಕೊಲೆ ಮಾಡಿಲ್ಲ. ಮನಸ್ಸಿನ ಸಂಕಟ ದೂರವಾಗಿ ನೆಮ್ಮದಿ ಸಿಗಲು ಆ ಕೆಲಸ ಮಾಡಿದೆ. ಶಾಂತಿ ನೀಡಿ.'

ಆ ವರ್ಷದ ಜಾತ್ರೆಗೆ ಪದ್ಮಣ್ಣ(ಪದ್ಮನಾಭ ಸಾಮನಿಯವರು) ಬೊಂಬಾಯಿಯಿಂದ ಬಂದರು. ಸರಸು ಬಾಣಂತಿ ಪುಟ್ಟ ಮಗುವಿನೊಂದಿಗೆ ಸೇನೆರ ಮೂಲೆಗೆ ಹೋದಳು. ಮಗುವಿಗೆ ಸೊಂಟಕ್ಕೆ ಉಡಿದಾರ, ಕೊರಳಿಗೆ ಚೈನು, ಕೈಗೆ ಬಳೆಗಳೆಂದ ಅಂತಕ್ಕನ ಸುದ್ದಿಯೇ ಇಲ್ಲ. ಮನೆಯಲ್ಲಿ ನಡೆದ ಕುರುಕ್ಷೇತ್ರದಿಂದ ಅವರ ಬಾಯಿ, ಆರ್ಭಟ, ಹಗೆ ಸಾಧನೆ ಎಲ್ಲವೂ ಕಮ್ಮಿಯಾಗಿತ್ತು.

ಎಲ್ಲರಿಗಿಂತ ಹೆಚ್ಚು ಕುಸಿದವನು ಮೈಂದಣ್ಣ. ಅವನ ಯೌವನದ ಹುಮ್ಮಸ್ಸು ಬತ್ತಿಹೋಗಿತ್ತು. ಕ್ರಿಮಿನಲ್ ಕೇಸಿಗೆ ಅವರ ಕಡೆಯಿಂದ ಕಲ್ಲಮ ರಾಯ್, ಶಂಕರನಾರಾಯಣ ರಾಯರನ್ನು ವಕಾಲತ್ತಿಗೆ ನೇಮಿಸಿದ್ದರು. ಕುಳವೂರು, ಮಂಗಳೂರು ಅಂತ ಹೇಳುತ್ತ ಕೇಸಿನ ಹಿಂದೆ ಅಲೆದಾಡಿ ಅಲೆದಾಡಿ ಮೈಂದಣ್ಣ ಕಂಗೆಟ್ಟ. ಆತ ಬಾಯಿಬಿಟ್ಟು ಹೇಳುವುದಿಲ್ಲ. ಆತನಿಗೆ ಕೊಲೆ ಮಾಡಿದವರು ತನ್ನವರೆಂದೇ ಬಲವಾದ ಅನುಮಾನವಿತ್ತು. ಆ ದಿನ ಭವಾನಿ ಎಲ್ಲೂ ಕಾಣಿಸದಿದ್ದುದು ಅವನ ಅನುಮಾನವನ್ನು ಇನ್ನೂ ಬಲಪಡಿಸಿತ್ತು. ಬಾಯಿ ಬಿಟ್ಟು ಕೇಳಲು ಆಗುತ್ತಿರಲಿಲ್ಲ.

ಮದುವೆ ಹೆಣ್ಣು ನಾಳೆ ಅವಳ ಗತಿ ಏನಾದೀತೋ! ನೆನಪಿಸುವಾಗಲೇ ಆತನ ಕಣ್ಣಮುಂದೆ ಜೈಲಿನ ಕೋಣೆ, ಶಿಕ್ಷೆಯಾದರೆ ಹಾಕುವ ಉರುಳು ಎಲ್ಲ ಕಾಣುತ್ತಿತ್ತು. ಇದನ್ನೆಲ್ಲ ಯೋಚಿಸಿ ಯೋಚಿಸಿ ಅವನ ತಲೆಕೂದಲು ಬೆಳ್ಳಗಾಗತೊಡಗಿತ್ತು.

ಪದ್ಮ ವ್ಯಥೆಯಿಂದ ಬಾಡಿದ ಮೈಂದಣ್ಣನ ಮುಖವನ್ನು ನೋಡಿ 'ಮೈಂದಣ್ಣ, ವ್ಯಾಜ್ಯದ ಖರ್ಚಿನ ಬಗ್ಗೆ ನೀವು ತಲೆಬಿಸಿ ಮಾಡಬೇಡಿ. ಆ ಖರ್ಚನ್ನು ನಾನು ಕೊಡುತ್ತೇನೆ' ಎಂದಾಗಲೂ ಮೈಂದಣ್ಣ ಮೌನವಾಗಿಯೇ ತಲೆಯಾಡಿಸಿದ. ಅವನಿಗೆ ಚಿಕ್ಕ ಮಾವ ಶಂಭುಚೌಟರ ಬಗ್ಗೆ ಪ್ರೀತಿ ಇರುವಂತೆಯೇ ಭಕ್ತಿಯೂ ಇತ್ತು. ಆತನ ಗಂಡಸ್ತಿಕೆ, ನಿಲ್ಲುವ ಗತ್ತು, ಗುತ್ತಿನವರ ಗೌರವದ ನಡತೆ ಅವೆಲ್ಲ ಅವನಿಗೆ ತುಂಬ ಇಷ್ಟವಾದ ವಿಚಾರವಾಗಿತ್ತು. ಅವರಿಲ್ಲದೆ ಆತನಿಗೆ ಅಂಬಿಗನಿಗೆ ಕೋಲು ಕೈಬಿಟ್ಟಂತಾಗಿತ್ತು. ಅಲ್ಲದೆ ತನ್ನ ತಾಯಿಯೂ ತಂಗಿಯೂ ಈ ಕೊಲೆಗೆ ಕಾರಣಕರ್ತರು ಎಂಬ ಶಂಕೆ ಕೂಡ ಆತನ ಮನಸ್ಸನ್ನು ಕೊರೆಯುತ್ತಿತ್ತು.

ಆತನಿಗೆ ಅದು ಅನುಮಾನವಾದರೆ ಸರಸುಗೆ ಅದೇ ನಿಜವೆಂದು ಗೊತ್ತಿತ್ತು. ಆ ಜಗಳ ನಡೆದ ದಿನ ಹೆಣ ಮಲಗಿದ್ದ ಜಾಗ ಒರಸಿ ಸೆಗಣಿ ನೀರು ಚಿಮುಕಿಸಿ ಮನೆಯೆಲ್ಲ ಶುದ್ಧಮಾಡಿ ಆಮೇಲೆ ಗಂಜಿ ಮಾಡಿ ದುಃಖದ ಗಂಜಿ ಉಣ್ಣುವಾಗ ಮಧ್ಯರಾತ್ರಿ ಕಳೆದಿತ್ತು. ಕೆಲಸದ ಪಮ್ಮು ಬಂದು ಅಂತಕ್ಕನ ಹತ್ತಿರ ಕೇಳಿದಳು, 'ಭವಾನಿ ಅಕ್ಕ ಎಲ್ಲಿದ್ದಾರೆ?'

‘ಅವಳು ಬಾಲಾರಿಷ್ಟದ ಔಷಧಿ ತರಲು ಅದ್ಯಪಾಡಿಯ ಐತಾಳರಲ್ಲಿಗೆ ಹೋಗಿದ್ದಾಳೆ’ ಎನ್ನುತ್ತ ಅವರು ಬೇಗ ವಿಷಯ ಬದಲಾಯಿಸಿದ್ದರು. ‘ನೀನೀಗ ಇರ್ತೀಯಾ, ಹೋಗ್ತೀಯಾ?’

‘ಇಲ್ಲ ಅಕ್ಕ. ಮನೆಗೆ ಹೋಗಿ ಸ್ನಾನ ಮಾಡಬೇಕು. ಬೆಳಗ್ಗೆ ಹಾಲು ಕರೆಯಲಿಕ್ಕಿದೆ. ಮಗಳನ್ನು ಹಸು ಬಿಡುವುದಿಲ್ಲ. ಬತ್ತುವ ಸಮಯ ಆಗಿರಬೇಕು. ತುಳಿಯುತ್ತದೆ.’

‘ಸರಿ. ಹಾಗಿದ್ದರೆ ಬೇಗ ಹೋಗು.’

ಮುಂಜಾವ ಭವಾನಿ ಕೊಟ್ಟಿಗೆಗೆ ನುಗ್ಗುವಾಗ ಅಂತಕ್ಕ ಹೇಳಿದ್ದು ಸರಸುಗೆ ಚೆನ್ನಾಗಿ ಕೇಳಿಸಿತ್ತು.

‘ನೀನು ಬಂದೆಯಾ. ನನ್ನ ಜೀವ ಬಂತು. ಎಲ್ಲಿದ್ದೆ?’

‘ಗುಡ್ಡದಲ್ಲಿ. ನೀವು ಏನೂ ಕೇಳಬೇಡಿ. ನನಗೆ ಕುಡಿಯಲು ಸ್ವಲ್ಪ ನೀರು ಕೊಡಿ.’

ಈ ಮಾತುಗಳನ್ನು ಸರಸು ನಿದ್ರೆ ಬರದ ಕಾರಣ ಸರಿಯಾಗಿ ಕೇಳಿಸಿಕೊಂಡಿದ್ದಳು. ಬೆಳಿಗ್ಗೆ ಮನೆಯೊಳಗಿದ್ದ ಭವಾನಿ ಮಧ್ಯಾಹ್ನದ ಒಳಗೆ ಎಲ್ಲಿಗೆ ಹೋದಳು? ಏಕೆ ಹಾಗೆ ಮಾಯವಾದಳು? ಅಮ್ಮ ಅದೇಕೆ ಅವಳ ಸುದ್ದಿ ಮಾತನಾಡಲಿಲ್ಲ?

ಸರಸು ಮರ್ಯಾದಸ್ಥ ಹೆಣ್ಣುಮಗಳು. ಗುಟ್ಟು ರಟ್ಟು ಮಾಡುವವಳಲ್ಲ. ಅವಳು ಪದ್ಮನಿಗೂ ಆದಿನ ನಡೆದ ಸತ್ಯಸಂಗತಿ ಹೇಳಲಿಲ್ಲ.

ಎಲ್ಲಿ ಕೇಳಿದರೂ ಭವಾನಿಗೆ ನೆಂಟಸ್ತಿಕೆ ಕೂಡಿಬರಲಿಲ್ಲ. ಅಂತಕ್ಕನಿಗೆ ಇದೊಂದೇ ವ್ಯಥೆ ಎದೆಯಲ್ಲಿ ಕುಳಿತಿತ್ತು.

ಎರಡು ಮೂರು ವರ್ಷ ಕಳೆಯಿತು. ಒಮ್ಮೆ ಪದ್ಮ ಊರಿಗೆ ಬಂದವನು ಅಂತಕ್ಕನ ಸಂಕಟ ನೋಡಿ ಅಂದ. ‘ನಾನು ಬೊಂಬಾಯಿಯಲ್ಲಿ ಭವಾನಿಗೆ ಹುಡುಗನನ್ನು ನೋಡ್ತೇನೆ. ನೀವು ಬೇಸರಿಸಬೇಡಿ.’

ಬೇಟೆಯಾಡಿ ಎರಡು ಹೆಣ ಉರುಳಿಸಿದ್ದರೂ ಭವಾನಿಗೆ ಯಾವ ಪಶ್ಚಾತ್ತಾಪವೂ ಇಲ್ಲ. ಅವಳ ಮನಸ್ಸಿಗೆ ಒಂದು ವಿಚಿತ್ರ ನೆಮ್ಮದಿ ದೊರಕಿತ್ತು.

ಹೋರಾಡಿಯೇ ನನ್ನ ಗುರಿಯನ್ನು ಸಾಧಿಸಿದೆ. ಅತ್ತು ಕರೆದು ಏನು ಮಾಡಲು ಸಾಧ್ಯ? ಮಾಡುವ ಪ್ರಯತ್ನ ಮಾಡಿದರೇ ಆಗುವ ಕೆಲಸ ಆಗುವುದು.

ಅವಳು ನೆನಪು ಮಾಡಿದಳು. ‘ಶಂಕರಣ್ಣ ಹೇಳಿದಂತೆಯೇ ನಾನು ಮಾಡಿದೆ.’

ಅವಳು ಸರಸು ಹತ್ತಿರ ಹೇಳಿದಳು, ‘ಅಕ್ಕಾ, ಭಾವನಿಗೆ ಹೇಳು. ನನಗೆ ಬೊಂಬಾಯಿ ಯಲ್ಲಿ ನೆಂಟಸ್ತಿಕೆ ಹುಡುಕುವುದು ಬೇಡ. ಇಲ್ಲೇ ನೋಡಲಿ. ಕಾಲು ಒಂದೂವರೆ ಆದರೂ ಬುದ್ಧಿ ಸಂಪೂರ್ಣವಿರುವ ಶಂಕರಣ್ಣನನ್ನು ಕೇಳಲಿ. ಅವರು ಆಗುವುದಿಲ್ಲವೆಂದರೆ ಈ ಜನ್ಮದಲ್ಲಿ ನನಗೆ ಬೇರೆ ಮದುವೆ ಇಲ್ಲ. ನೀನು ಅಮ್ಮನ ಹತ್ತಿರ ಇದೇ ಮಾತು ಹೇಳು. ಅಣ್ಣನ ಹತ್ತಿರವೂ ಹೇಳು. ನಾಚಿಕೆ ಇಲ್ಲದವಳು, ತನ್ನ ಗಂಡನನ್ನು ತಾನೇ ಹುಡುಕುತ್ತಿದ್ದಾಳೆಂದು ಹೇಳಬೇಡಿ. ನಿಮ್ಮ ಕಷ್ಟ ನೋಡಿ ಹೀಗೆ ಹೇಳ್ತಿದ್ದೇನೆ.’

‘ನನ್ನ ಮಾನ, ಪ್ರಾಣ ಉಳಿಸಿದ ಪುಣ್ಯಾತ್ಮ ಶಂಕರಣ್ಣ. ಈ ಜನ್ಮವನ್ನು ಅವರಿಗೇ

ಅರ್ಪಿಸುತ್ತೇನೆ. ಅವರಿಗೆ ಬೇಡವಾದರೆ ನನಗೆ ಬೇರೆ ಯಾವ ನೆಲೆಯೂ ಇಲ್ಲ. ನನ್ನ ಜನ್ಮ ಹೀಗೇ ಮುಗಿಯಲಿ. ನನ್ನನ್ನು ಒತ್ತಾಯ ಮಾಡಬೇಡಿ. ನಾನು ಜನ್ಮ ಜನ್ಮಾಂತರಕ್ಕೂ ಅವರನ್ನೇ ನನ್ನ ಗಂಡನೆಂದು ನಿರ್ಧಾರ ಮಾಡಿದ್ದೇನೆ. ಅವರು ಒಪ್ಪಿ ಬಂದರೆ ನನಗೆ ಮದುವೆ ಮಾಡಿ. ಇಲ್ಲವಾದರೆ ನನ್ನ ಮದುವೆ ವಿಚಾರ ಮರೆತುಬಿಡಿ.'

ಗುತ್ತಿನ ಮನೆಗೆ ಗೂಬೆ ನುಗ್ಗಿದಂತಾಯ್ತು. ಸಾವು ಕಳೆದ ಮರುದಿನ ಸೋಮಕ್ಕನನ್ನೂ ಅವರ ಮಕ್ಕಳನ್ನೂ ನಚ್ಚದ ಪಟೇಲರೂ ಅವರ ಗಂಡುಮಕ್ಕಳೂ ಅವರ ಮನೆಗೆ ಕರೆದುಕೊಂಡು ಹೋದರು.

ಶಂಭು ಚೌಟರು ದರ್ಬಾರು ಮಾತ್ರ ಮಾಡಿದ್ದರು. ಸ್ವಂತ ಬದುಕು ಏನೂ ಮಾಡಿರಲಿಲ್ಲ. ಹಾಗಿರುವಾಗ ಸೋಮಕ್ಕನಿಗೆ ಗುತ್ತಿನ ಮನೆಯಿಂದ ತೆಗೆದುಕೊಂಡು ಹೋಗಲು ಮಕ್ಕಳಲ್ಲದೆ ಬೇರೇನಿದೆ? ಅಳಿಯ ಸಂತಾನದ ಕರಾಳ ಪದ್ಧತಿ ಇದು.

ಭೂತಾಳ ಪಾಂಡ್ಯ ಮಾಡಿದ ಕಟ್ಟಳೆ ಅಳಿಯ ಸಂತಾನಕ್ಕೆ ಮೂಲವೆನ್ನುತ್ತಾರೆ. ಅದು ಆ ಕಾಲಕ್ಕೆ ಸರಿಯೆಂದು ಕಂಡರೂ ಕಾಲ ಕಳೆದ ಮೇಲೆಯೂ ಅದರ ಹಲ್ಲು, ಉಗುರುಗಳು ಇಂಥ ದುಷ್ಟ ಸಮಸ್ಯೆಗಳನ್ನು ತೋರಿಸುತ್ತವೆ. ತಾಯಿ ಮನೆಯಲ್ಲಿ ಆಸ್ತಿ ಇಲ್ಲದ ಹೆಣ್ಣುಮಕ್ಕಳು ಗಂಡ ತೀರಿಹೋದ ಬಳಿಕ ಬರಿಗೈಯಲ್ಲೇ ಗಂಡನ ಮನೆಯಿಂದ ತವರಿಗೆ ಬಂದು ಮಕ್ಕಳೊಂದಿಗೆ ಬೇಡಿ, ಬೆಂದು ಬದುಕುತ್ತಾರೆ, ಅವಳ ಅಣ್ಣ ತಮ್ಮಂದಿರ ಹಂಗಿಗೆ ಬೀಳುತ್ತಾರೆ, ಕುಟುಂಬಕ್ಕೆ ಭಾರವಾಗ್ತಾರೆ. ಭಾರವೆಂಬ ಹಣೆಪಟ್ಟಿಯನ್ನು ಕಟ್ಟಿಕೊಂಡೇ ಹೆಣ್ಣು ತನ್ನ ತಾಯಿಯ ಹೊಟ್ಟೆಯಿಂದ ಭೂಮಿಗೆ ಬೀಳುತ್ತಾಳಾ!

ಅಂತಕ್ಕನೂ ಅವರ ಮಕ್ಕಳೂ ಈ ಮಾತಿಗೆ ಹೊರತಾದವರಲ್ಲ. ಯಾವಾಗ ಅವರು ಸಂಪಾಜೆಯ ಬಾವೆಯ ಮನೆಯಿಂದ ಬರಿಗೈ ಮೈಯಲ್ಲಿ ಬಂದರೋ ಆಗಲೇ ಅವರು ದೇವಣ್ಣ ಚೌಟರ ಮತ್ತು ಶಂಭು ಚೌಟರ ಹೆಂಡತಿಯರಿಗೆ ಸದರವಾದರು. ಆಗಲೇ ಅಂತಕ್ಕನ ಪ್ರತಾಪ ತಗ್ಗಿತ್ತು.

ದಿನ ದಿನವೂ ತನ್ನ ಮತ್ತು ಮಕ್ಕಳ ಖರ್ಚಿಗಾಗಿ ತಮ್ಮಂದಿರ ಮುಂದೆ ಕೈಚಾಚುವಾಗ ಅವರ ಸ್ವಭಾವದಲ್ಲಿ ಬೆಳೆದು ಬಂದಿದ್ದ ಅಹಂಕಾರಕ್ಕೆ ಕೊಡಲಿಯೇಟು ಬಿದ್ದಂತಾಗುತ್ತಿತ್ತು. ಮನಸ್ಸಿನಲ್ಲಿ ತುಂಬಿದ ಆ ಕಹಿ ಒಸರಿನ ಹೊನಲಿಗೆ ಸಿಕ್ಕಿದವಳು ಭವಾನಿ. ಅವರ ಆ ಒಳಗಿನ ಬುದ್ಧಿಗೆ ಏಗುವುದು ಭವಾನಿಗೂ ಕಷ್ಟವಾಗುತ್ತಿತ್ತು. ಮನೆಯೊಳಗಿನ ಈ ಅನುದಿನದ ರಂಪ ಅವಳ ಮನಸ್ಸಿಗೂ ಮಾಮನವರು ನಮ್ಮನ್ನು ಬದುಕಲು ಬಿಡಲಾರರು ಎಂಬ ಭಾವನೆಯನ್ನು ಉಮಿಯ ಬೆಂಕಿಯಂತೆ ಒಳಗೊಳಗೇ ಕನಲುವಂತೆ ಮಾಡುತ್ತಿತ್ತು.

ಶಂಭು ಚೌಟರು ಜೀವಿಸಿರುವಾಗ ಗುತ್ತಿನ ಮನೆಗೆ ಒಂದು ರೀತಿಯ ಗತ್ತು, ಗೌರವ ಇತ್ತು. ಈಗ ಅವರಿಲ್ಲದೆ ಮನೆಗೆ ಒಂದು ಬಗೆಯ ದುಃಖದ ಛಾಯೆ ಆವರಿಸಿದಂತೆ ಆಗಿತ್ತು. ಅವರಿದ್ದಾಗ ಪ್ರತಿದಿನ ಎಷ್ಟೋ ಜನರು ಗುತ್ತಿನ ಮನೆಗೆ ಬಂದು ಹೋಗುತ್ತಿದ್ದರು. ಈಗ ಅತ್ಯಂತ ಅಗತ್ಯದ ಕೆಲಸವಿದ್ದವರು ಮಾತ್ರ ಬರುತ್ತಾರೆ.

ಅಂತಕ್ಕನಿಗೆ ತಮ್ಮನ ಸಾವು ತಲೆಗೆ ಕಲ್ಲು ಹಾಕಿದಂತಾಗಿತ್ತು. ಆದರೆ ಭವಾನಿ

ಮಾತ್ರ ಕುಗ್ಗಲಿಲ್ಲ. ಮಾಮನನ್ನು ಕೊಂದದ್ದು ಪಾಪ, ನಿಜ. ಆದರೆ ಅವರು ತಮ್ಮನ್ನು ನೋಡುತ್ತಿದ್ದ ರೀತಿ ನಾವೊಂದು ಬೇಡವಾದ ಮನೆಗೆ ಭಾರವಾದ ಸಂತೆಯ ಸಾಮಗ್ರಿಗಳಂತೆ ಕಾಣುವ ವರ್ತನೆ, ಅದು ದೇವರು ಮೆಚ್ಚದ ನಡವಳಿಕೆ. ಎಷ್ಟು ದಿನ ಅದನ್ನು ಸಹಿಸಿರುವುದು!

'ನಡಿ, ನಿನ್ನ ಮಕ್ಕಳನ್ನು ಕರೆದುಕೊಂಡು ಹೊಲದ ಕೆಲಸಕ್ಕೆ ಹೋಗು. ಸೊಪ್ಪು ತರಲು ಗುಡ್ಡಕ್ಕೆ ಹೋಗು' ಎನ್ನುವ ಮಾತು ಮಾತ್ರ ಬಾಕಿಯಿತ್ತು. ಗುತ್ತಿನ ಹುಟ್ಟುವಳಿಗಳನ್ನು ತೆಗೆದುಕೊಂಡು ಹೋಗುವುದು, ಅವರ ಹೆಂಡತಿ ಮಕ್ಕಳನ್ನು ಮಂಗಳೂರಿನಲ್ಲಿ ಬೇರೆ ಮನೆ ಮಾಡಿ ಇರಿಸುವುದು, ಅವರಿಗೆ ಖರ್ಚು ಮಾಡುವುದು ಎಲ್ಲ ಮಾಡ್ತಾರೆ. ಊರಿನಲ್ಲೂ ಹೆಣ್ಣು ಇಟ್ಟುಕೊಂಡು ಅರ್ಕಾವತಿಯಂಥವರನ್ನು ಮೆರೆಸುತ್ತಾರೆ. ಇದನ್ನೆಲ್ಲ ಯೋಚಿಸಿದಾಗ ಅವಳ ನೆತ್ತರು ಕುದಿಯುತ್ತದೆ. ಮನೆಯಲ್ಲಿದ್ದ ಗಣಪ ಖಾರ್ವಿಯ ಜೊಲ್ಲು ಸುರಿಯುವ ನಾಲಗೆಯ ಮುಖವನ್ನು ನೆನಸುವಾಗಲೇ ಆತನನ್ನು ತಂದು ಮನೆಯೊಳಗಿರಿಸಿದ ಮಾಮನನ್ನು ಕೊಂದದ್ದು ದೊಡ್ಡದೇನಲ್ಲವೆಂದು ಅವಳಿಗೆ ಅನ್ನಿಸುತ್ತಿತ್ತು.

ಇಷ್ಟಾದರೂ ಭವಾನಿ ಮೌನವಾಗಿದ್ದರೂ ಅವಳಿಗೆ ಚೌಟರನ್ನು ಎಣಿಸುವಾಗ 'ಅಯ್ಯೋ, ಮಾಮನನ್ನು ಸಾಯಿಸಿದೆನೆ? ಸಾಯಿಸುವಷ್ಟು ನನ್ನನ್ನು ಕೆರಳಿಸಿದರೇ ಅವರು!' ಎನಿಸಿ ವ್ಯಥೆಯಾಗುತ್ತಿತ್ತು.

'ಓ ಪಂಜುರ್ಲಿಯೇ, ಓ ಪಿಲಿಚಾಮುಂಡಿಯೇ, ಇನ್ನು ಯಾವತ್ತೂ ನನಗೆ ಆವತ್ತು ಬಂದಂಥ ಉಗ್ರ ಕೋಪ ಬರದಂತೆ ಅನುಗ್ರಹಿಸಿ!' ಎಂದು ಮನಸ್ಸಿನಲ್ಲೇ ಬೇಡಿಕೊಳ್ಳುತ್ತಾಳೆ.

* * * * *

ನಾಲ್ಕು ವರ್ಷ ಕಳೆಯಿತು. ಮಂಗಳೂರಿನ ಕೋರ್ಟಿನಲ್ಲಿ ಕೊಲೆಯ ಕೇಸು ಮುಗಿಯಿತು. ಹಾಗೆಯೇ ಮೈಂದಣ್ಣನ ಭವಿಷ್ಯವೂ ಮುಗಿದಿತ್ತು. ಅವನಿಗೆ ನೆಲೆಯೇ ತಪ್ಪಿಹೋಗಿತ್ತು. ಆತ ಪದವಿನ ಸ್ಟೋರಿಗೆ ಬೆಳಿಗ್ಗೆಯೇ ಹೋಗುತ್ತಾನೆ. ಆಮೇಲೆ ಹಿಂತಿರುಗುವುದು ಕತ್ತಲೆ ಕವಿದ ಮೇಲೆಯೇ. ಆದಿತ್ಯವಾರ ಸ್ಟೋರಿಗೆ ರಜೆ. ಆ ದಿನ ಮೈಂದಣ್ಣ ಗುಡ್ಡ ಹತ್ತಿ ಪಿಲಿಭೂತದ ಗುಡಿಯ ಎದುರಿನ ಅಶ್ವತ್ಥದ ಕಟ್ಟೆಯಲ್ಲಿ ಕಣ್ಣುಮುಚ್ಚಿ ಕುಳಿತುಕೊಳ್ಳುತ್ತಾನೆ. ಸೂರ್ಯ ಪಶ್ಚಿಮದಲ್ಲಿ ಮುಳುಗಿ ಸಂಪೂರ್ಣ ಕತ್ತಲೆ ಆದ ಬಳಿಕವೇ ಗುತ್ತಿಗೆ ವಾಪಸ್ಸಾಗುತ್ತಾನೆ.

ಮಗನ ಅವಸ್ಥೆ ನೋಡಿ ಅಂತಕ್ಕನಿಗೆ ಏನು ಮಾಡುವುದೆಂದೇ ಗೊತ್ತಾಗುವುದಿಲ್ಲ. ಮದುವೆ ಮಾಡಿದರೆ ಸರಿಯಾಗಬಹುದೆಂದು ಯೋಚಿಸಿದರು. ಆಚೀಚೆ ನೆಂಟಸ್ತಿಕೆ ಮಾತನಾಡಲು ಆರಂಭಿಸಿದರು. ಆಗ ಯಾರೋ ಮೈಂದಣ್ಣನೊಂದಿಗೇ ನೆಂಟಸ್ತಿಕೆ ಮಾತನ್ನು ಹೇಳಿದರು. ಆ ದಿನ ಮನೆಗೆ ಬಂದವನು ಅಂತಕ್ಕನನ್ನು ಕರೆದು ಹೇಳಿದ,

'ನನಗೇನಾದರೂ ನೀವು ಮದುವೆ ಆಲೋಚನೆ ಮಾಡಿದರೆ ನಾನು ಊರು ಬಿಟ್ಟು ಹೋಗ್ತೇನೆ.'

ಆ ಮಾತಿನ ದೃಢತೆಯನ್ನು ನೋಡಿ ಅಂತಕ್ಕ ಹೆದರಿದರು.

ಸರಸು ಎರಡನೇ ಹೆರಿಗೆಗೆ ಊರಿಗೆ ಬಂದಳು. ಈ ಸಲ ಅವಳ ಲಕ್ಷಣವೇ ಬದಲಾಗಿತ್ತು. ಮೈಯಲ್ಲಿ ರಕ್ತ ಕಡಿಮೆಯಾಗಿದೆಯೆಂದು ಬೊಂಬಾಯಿಯ ಡಾಕ್ಟರ್ ಹೇಳಿದರಂತೆ. ಪದ್ಮ ಮಾಡಬೇಕಾದ ಕರ್ತವ್ಯವನ್ನೆಲ್ಲ ಮಾಡಿದ. ಹಣದಿಂದ ಏನನ್ನೆಲ್ಲ ಮಾಡಲು ಸಾಧ್ಯವೋ ಅದನ್ನೆಲ್ಲ ಮಾಡಿದ.

'ನಾನು ಹೆರಿಗೆಗೆ ಊರಿಗೇ ಹೋಗುತ್ತೇನೆ' ಎಂದು ಹಟ ಮಾಡಿದ್ದಕ್ಕೆ ಅವಳನ್ನು ಊರಿಗೆ ಕಳುಹಿಸಿದ್ದ.

ಊರಿನಲ್ಲಿ ಮೈಂದಣ್ಣನನ್ನು ನಂಬಿ ಯಾವ ಕೆಲಸವನ್ನೂ ಮಾಡುವಂತಿರಲಿಲ್ಲ. ಆತ ಇವತ್ತು ಮದ್ರಾಸಿನ ಹತ್ತಿರದ ತಿರುವಣ್ಣ ಮಲೆಗೆ ರಮಣ ಮಹರ್ಷಿಗಳ ಆಶ್ರಮಕ್ಕೆ ಹೋದರೆ ಇನ್ನು ಒಂದು ತಿಂಗಳು ಕಾಣುವುದೇ ಇಲ್ಲ. ಅಲ್ಲಿಗಲ್ಲದೆ ಗುಂಡ್ಯದ ಕೂಡುಮಲೆಯ ಗುಹೆಯಲ್ಲಿ ಓರ್ವ ಸನ್ಯಾಸಿ ಇದ್ದಾರೆ. ಆತ ಮಾತುಕತೆಯಿಲ್ಲದ ಮೌನ ಸನ್ಯಾಸಿ. ಆತನ ಬಳಿಗೆ ಹೋಗಿ ವಾರಗಟ್ಟಲೆ ಇರುತ್ತಾನೆ.

ಉಳುವವನೇ ಹೊಲದೊಡೆಯನೆಂದು ದೇವರಾಜ ಅರಸುರವರು ದಕ್ಷಿಣ ಕನ್ನಡದಲ್ಲಿ ಕಾನೂನು ಮಾಡಿದ ಮೇಲೆ ಆ ಗುತ್ತಿಗೆ ಉಳಿದ ಆಸ್ತಿಯೆಂದರೆ ದೂಪದ ಗದ್ದೆ ಮತ್ತು ಎರಡು ಒಣಗಿದ ಹೊಲಗಳು ಮಾತ್ರ. ಉಳಿದ ಬಯಲಿನಲ್ಲಿ ಕೊಳಕೆಯ ಗದ್ದೆಯನ್ನೂ ಗೇರು ಬೆಳೆಯುವ ಗುಡ್ಡದ ಸಮೇತ ಒಕ್ಕಲಿನವರು ಡಿಕ್ಲರೇಷನ್ ಕೊಟ್ಟು ಗುತ್ತು ಖಾಲಿಯಾಗಿತ್ತು. ತಿನ್ನಲು ಊಟಕ್ಕೂ ತತ್ವಾರ ಬಂದಿತ್ತು. ಕೋರ್ಟು ಕಛೇರಿಗೆಂದು ಅಲೆಯಲು ಅಂತಕ್ಕನೇ ಹೋಗಬೇಕು. ಗಂಡು ದಿಕ್ಕೇ ಇಲ್ಲವಾಗಿತ್ತು.

ಸರಸುಗೆ ಎರಡನೇ ಹೆರಿಗೆಯಲ್ಲಿ ಗಂಡು ಮಗು ಹುಟ್ಟಿತು. ಹೆರಿಗೆಯಲ್ಲಿ ತೊಂದರೆಯಾಗದಿದ್ದರೂ ಬಾಣಂತಿಗೆ ಹೆರಿಗೆಯ ನಿತ್ರಾಣ ಎರಡು ತಿಂಗಳಾದರೂ ಕಡಿಮೆಯಾಗದೆ ಮೈಯಲ್ಲಿ ಶಕ್ತಿ ಇಂಗುತ್ತ ಬಂತು. ಮಗುವಿಗೆ ಉಣಿಸಲು ಎದೆಹಾಲಿಲ್ಲ. ಐದು ತಿಂಗಳು ಕಳೆದಾಗ ಪದ್ಮ ಬೊಂಬಾಯಿಗೆ ಬರಬೇಕೆಂದು ಹೇಳಿದ.

ಅಂತಕ್ಕ ಕೂಡ ಈ ಸಲ ಬಾಣಂತಿ ಮಗುವಿನ ಜತೆ ಬೊಂಬಾಯಿಗೆ ಹೋದರು. ಸಾಮನಿಯವರೂ ಅವರಿಗೆ ನೆರವಾಗಿ ತಾವೂ ಹೋದರು.

ಅಂತಕ್ಕ ಬೊಂಬಾಯಿಯಲ್ಲಿ ಒಂದು ತಿಂಗಳು ಇದ್ದರು. ಈ ನಡುವೆ ಭವಾನಿಯ ಪತ್ರ ಮೇಲಿಂದ ಮೇಲೆ ಬರತೊಡಗಿತ್ತು. 'ಅಜ್ಜಿಗೆ ಹುಷಾರಿಲ್ಲ. ಅಣ್ಣನೂ ಊರಲ್ಲಿಲ್ಲ, ನೀವು ಬೇಗ ಬನ್ನಿ.'

ತಿಂಗಳಾದ ಕೂಡಲೇ ಅಂತಕ್ಕ ಊರಿಗೆ ಹೊರಟು ಬಂದರು. ಕೆಲವು ದಿನಗಳಲ್ಲಿ ರುಕ್ಕಕ್ಕ ತೀರಿಹೋದರು.

ಈಗ ಸಾವಿನ ಖರ್ಚಿಗೂ ಮನೆಯಲ್ಲಿ ಹಣವಿಲ್ಲ. ಪದ್ಮನಾಭ ಸಾಮನಿಯವರ

ದಯೆಯಿಂದ ರುಕ್ಕಕ್ಕನ ಅಂತಿಮ ಕಾರ್ಯ ನಡೆಯಿತು.

ಸ್ಟೋರಿನ ಕೆಲಸ ಹೇಗೆ ಹೇಗೋ ನಡೆಯುತ್ತಿತ್ತು. ಅದನ್ನು ಬಿಟ್ಟರೆ ಗುತ್ತಿನವರಿಗೆ ಉಣ್ಣಲು ಬೇರೆ ಗತಿಯಿಲ್ಲ. ಈಗ ಭವಾನಿಯೇ ಮಧ್ಯಾಹ್ನದ ಬಳಿಕ ಸ್ಟೋರಿಗೆ ಹೋಗಿ ರೇಷನ್‌ನ ವಿಲೇವಾರಿ ಮಾಡುತ್ತಾಳೆ.

ಮದುವೆ ಹೆಣ್ಣು ಅಂಗಡಿಗೆ ಹೋಗಿ ವ್ಯಾಪಾರ ಮಾಡುವುದನ್ನು ನೋಡುವಾಗ ಅಂತಕ್ಕನ ಎದೆಗೆ ಭರ್ಚಿಯಿಂದ ಚುಚ್ಚಿದಂತೆ ಆಗುತ್ತಿತ್ತು. ಆದರೆ ಮಾಡುವುದೇನು?

ಸ್ವಲ್ಪ ಸಮಯ ಕಳೆದಾಗ ಗಾಯದ ಹುಣ್ಣಿಗೆ ಬರೆಯೆಳೆದಂತೆ ಪದ್ಮನ ಕಾಗದ ಬಂತು. 'ಸರಸುಗೆ ಕಾಯಿಲೆ ಜೋರಾಗಿದೆ. ನೀವು ಕೂಡಲೇ ಬನ್ನಿ' ಎಂಬುದಾಗಿ ಅಂತಕ್ಕನಿಗೆ ಬರೆದಿದ್ದ. ಅವರು ಮೈಂದಣ್ಣನನ್ನು ಕರೆದುಕೊಂಡು ಬೊಂಬಾಯಿಗೆ ಹೋದರು. ಭವಾನಿಗೆ ಕೆಲಸದ ಪಮ್ಮುವನ್ನು ಜೊತೆಮಾಡಿ ಬೊಂಬಾಯಿ ಬಸ್ಸು ಹತ್ತಿದರು. ಮನೆಯಲ್ಲಿ ಪ್ರಾಯದ ಹೆಣ್ಣು ಒಬ್ಬಳೇ.

ಅವರು ಹೋಗಿ ತಿಂಗಳೊಳಗೆ ಸರಸು ತೀರಿಹೋದಳೆಂದು ಸೇನೆರ ಮೂಲೆಗೂ ಗುತ್ತಿಗೂ ಟೆಲಿಗ್ರಾಂ ಬಂತು.

ಮತ್ತೆ ಒಂದು ತಿಂಗಳು ಕಳೆದು ಅಂತಕ್ಕ ಸರಸುವಿನ ಎರಡು ಪುಟ್ಟ ಮಕ್ಕಳನ್ನು ಕರೆದುಕೊಂಡು ಬೊಳ್ಳೂರಿಗೆ ವಾಪಸ್ಸಾದರು.

ಅಂತಕ್ಕನಿಗೆ ಈಗ ಕೈತುಂಬ ಕೆಲಸ. ಮನೆಯ ಸಾಗುವಳಿ ನೋಡಬೇಕು. ಮಕ್ಕಳ ಆರೈಕೆ ಮಾಡಬೇಕು, ಭವಾನಿಗೂ ಬಿಡುವಿಲ್ಲ. ರೇಷನ್ ಅಂಗಡಿಯ ಪೂರ್ತಿ ಜವಾಬ್ದಾರಿ ಈಗ ಅವಳ ಮೇಲೆ ಬಿದ್ದಿತ್ತು.

ಬಡತನವೂ ದುಃಖವೂ ಈಗ ಒಟ್ಟಿಗೇ ಗುತ್ತು ಮನೆಯ ಮೇಲೆ ಕವಿದಿತ್ತು. ಆವಾಗಾವಾಗ ಹೋದಲ್ಲಿ ರಿಪೇರಿ ಮಾಡದೆ ಈಗ ಮನೆಯ ಕೆಲವು ಭಾಗಗಳು ಜರಿಯುತ್ತಿದ್ದುವು. ಅಡುಗೆ ಮನೆಯ ಹೊರಗಿನ ಮಣ್ಣಿನ ಪಾತ್ರೆಗಳನ್ನು ತೊಳೆದು ಕವುಚಿ ಇಡುವ ಜಗಲಿ ವರ್ಷ ವರ್ಷ ಕೈಮಣ್ಣು ಕೊಟ್ಟು ತಿಕ್ಕಿದ್ದು ಈಗ ಅಲ್ಲಿ ಇಲ್ಲಿ ಗುಂಡಿ ಬಿದ್ದಿತ್ತು. ಅದನ್ನು ಸರಿಮಾಡಲು ಈಗ ಒಕ್ಕಲಿಗರ ಹೆಂಗಸರು ಯಾರೂ ಸಿಗುವುದಿಲ್ಲ. ಅವರು ಈಗ ಸ್ವತಂತ್ರರಾಗಿದ್ದರು. ಡಿಕ್ಲರೇಷನ್ ಕೊಟ್ಟು ಅವರು ಗುತ್ತಿನ ಮನೆಯ ಕೆಲಸ ಕಾರ್ಯಗಳಿಂದ ಹೊರಗುಳಿದಿದ್ದರು.

ಜನಗಳು ಈಗ ತುಂಬ ಬುದ್ಧಿವಂತರಾಗಿದ್ದರು. ಬೆನ್ನು ಬಗ್ಗಿಸಿ ದುಡಿಯಲು ಈಗ ಅವರು ಬರುವುದಿಲ್ಲ. ಅವರ ಮಕ್ಕಳು ಪೇಟೆಗೆ ಹೋಗಿ ಹೋಟೆಲು ಕೆಲಸ ಮಾಡಲು ಸಿದ್ಧರಾಗಿದ್ದರು. ಆದ್ದರಿಂದ ಊರಿನ ಹೊಲಗದ್ದೆಗಳಿಗೆ ಮಣ್ಣು ಕಲಸಲು ಅವರು ಇಷ್ಟಪಡುವುದಿಲ್ಲ.

ಹೆಂಗಸರ ಮೇಲೆ ಎರಡೆರಡು ಕೆಲಸ ಬಿದ್ದಿತ್ತು. ಮನೆಯ ಅಡುಗೆ ಕೆಲಸ, ಕೊಟ್ಟಿಗೆಯ ಹಸುಕರುಗಳ ಕೆಲಸ, ಹೊಲದ ಕೆಲಸ, ನೇಜಿ ನೆಡಬೇಕು, ಕಳೆ ಕೀಳಬೇಕು, ಕೊಯ್ಲಿನ ಸಮಯದಲ್ಲಿ ಕೊಯ್ಲಿಗೆ ಹೋಗಬೇಕು. ಊರಿನಲ್ಲಿ ಗಂಡಸರೆಂದು ಇರುವವರು

ವಯಸ್ಸಾದವರು ಮಾತ್ರ. ಅವರೇನೂ ಸಂಜೆಯವರೆಗೆ ಹೊಲದಲ್ಲಿ ಕೆಲಸ ಮಾಡುವುದಿಲ್ಲ. ಒಮ್ಮೊಮ್ಮೆ ಒಂದು ಸುತ್ತು ಬರುವುದರೊಳಗೇ ಅವರಿಗೆ ಸುಸ್ತಾಗುತ್ತದೆ.

ಊರಿನ ಸ್ಥಿತಿಯೇ ಹೀಗಿರುವಾಗ ಗುತ್ತಿನ ಕೆಲಸಕ್ಕೆ ಯಾರು ಬರುತ್ತಾರೆ! ತಮ್ಮ ಒಲೆಯನ್ನು ಕೋಳಿ ಕೆದಕುವಾಗ ಊರವರ ಮನೆಯ ವ್ಯಥೆ ಯಾರಿಗೆ ಬೇಕು! ಅಂತಕ್ಕ ಒಟ್ಟಿನಲ್ಲಿ ಕಂಗಾಲಾದರು. ಸರಸುವಿನ ಇಬ್ಬರು ಮಕ್ಕಳು ಅನಂತಲಕ್ಷ್ಮಿ ಮತ್ತು ವಿಜಯಾನಂದ. ಹೆಣ್ಣುಮಗು 'ಚಾಕ್ಲೆಟ್ ಕೊಡು, ಬಿಸ್ಕತ್ ಕೊಡು' ಎಂದು ಪೀಡಿಸುವಳು. ಬೊಳ್ಳೂರಿನ ಮೂಲೆಯ ಹಳ್ಳಿಯಲ್ಲಿ ಚಾಕ್ಲೆಟ್ ಎಲ್ಲಿಂದ ಬರಬೇಕು? ಪೇಟೆಯಿಂದ ಎಷ್ಟೂಂತ ತಂದು ದಾಸ್ತಾನು ಮಾಡಿಡುವುದು? ವಿಜಯಾನಂದನೋ ಹಸುಗೂಸು. ಅದಕ್ಕೆ ತಿನ್ನಿಸುವ ಡಬ್ಬಿಯ ಹುಡಿ ಮುಗಿದಾಗ ಅದನ್ನು ಸಕಾಲದಲ್ಲಿ ತರಿಸಲೂ ಅಂತಕ್ಕನಿಗೆ ಜನ ಸಿಗುವುದಿಲ್ಲ. ಪದ್ಮ ಹಣ ಕಳುಹಿಸುತ್ತಾನೆ ಸರಿ. ಆದರೆ ಈ ವಿಚಾರಗಳನ್ನೆಲ್ಲ ಅವನಿಗೆ ಹೇಳುವುದು ಸರಿಯಾ? ಅಷ್ಟಾಗುವಾಗ ಅಂತಕ್ಕನ ತಲೆಗೆ ಒಂದು ಆಲೋಚನೆಯ ಹುಳ ಹೊಕ್ಕಿತು. ಪದ್ಮನಾಭ ಸಾಮನಿ ಯುವಕ. ನಲವತ್ತು ವರ್ಷವಾದರೆ ಏನು! ಅದೇನೂ ಹೆಚ್ಚಲ್ಲ. ಭವಾನಿಗೆ ಊರಲ್ಲಿ ಎಲ್ಲಿ ಹುಡುಕಿದರೂ ನೆಂಟಸ್ತಿಕೆ ಕೂಡುವುದಿಲ್ಲ. ಪದ್ಮನಿಗೇ ಎರಡನೇ ಮದುವೆ ಮಾಡಿ ಭವಾನಿಯನ್ನು ಕೊಟ್ಟರೆ ಹೇಗೆ? ಈ ಎರಡು ಮಕ್ಕಳನ್ನು ಇನ್ಯಾರಾದರೂ ಚಿಕ್ಕಮ್ಮ ಬಂದರೆ ಚೆನ್ನಾಗಿ ನೋಡಿಕೊಳ್ಳುತ್ತಾಳಾ? ಭವಾನಿ ಆದರೆ ಸ್ವಂತ ಚಿಕ್ಕಮ್ಮ. ಪದ್ಮನಿಗೆ ಈ ಮಾತನ್ನು ಮೊದಲು ಸೂಚಿಸಿದರೆ ಒಳ್ಳೆಯದು. ತ್ಯಾಂಪಣ್ಣ ಸಾಮನಿ ಎಲ್ಲಾದರೂ ಅವನಿಗೆ ಎರಡನೆ ಮದುವೆಯ ಆಲೋಚನೆ ಮಾಡುವ ಮುನ್ನವೇ ಈ ಮಾತು ನಡೆಯಬೇಕು. ಸಾಮನಿಯನ್ನು ಕೇಳುವ ಮೊದಲು ಭವಾನಿಯನ್ನು ಕೇಳಬೇಕಲ್ಲ! ಯಾವುದೂ ಇತ್ಯರ್ಥವಾಗುವ ಮೊದಲು ಭವಾನಿಯ ಮನಸ್ಸು ಏನೆಂದು ತಿಳಿಯಬೇಕು. ಅಂತಕ್ಕನ ಜಬರ್‌ದಸ್ತು ಮಗಳ ಮುಂದೆ ನಡೆಯುವುದಿಲ್ಲ.

ಅವರು ಹಿಂದೆ ಮುಂದೆ ಯೋಚಿಸಿ ತ್ಯಾಂಪಣ್ಣ ಸಾಮನಿಯವರಿಗೇ ಈ ವಿಚಾರವನ್ನು ಭವಾನಿಯೊಂದಿಗೆ ಮಾತನಾಡಲು ಹೇಳಿದರು. ಭವಾನಿ ಸಂಜೆ ಏಳು ಗಂಟೆಗೆ ಅಂಗಡಿ ಮುಚ್ಚಿ ಮನೆಗೆ ಬರುವಾಗ ತ್ಯಾಂಪಣ್ಣ ಸಾಮನಿ ಪದವಿಗೆ ಹೋದವರು ನಿಧಾನಿಸಿ ನಿಧಾನಿಸಿ ಅವಳ ಜೊತೆಗೆ ಮನೆಗೆ ಬಂದರು. ಅಂಗಡಿಯ ಕೆಲಸದ ತಿಮ್ಮಯ್ಯ ಕಾಲು ದಾರಿ ದಾಟಿ ತಿರುಗಿ ಕಲ್ಕರೋಟಿಗೆ ತನ್ನ ಮನೆಯತ್ತ ನಡೆದಾಗ ಅವರು ತಮ್ಮ ಕೃಷ್ಣ ಸಂಧಾನಕ್ಕೆ ಪೀಠಿಕೆ ಹಾಕಿದರು. ಅಂತಕ್ಕನ ಕಷ್ಟಗಳನ್ನು ಒಂದೂ ಬಿಡದೆ ಹೇಳಿದರು. ಸರಸುವಿನಂಥ ಬಂಗಾರದ ಕೊಂಬಿನಂಥ ಮಡದಿ ಸತ್ತುಹೋದುದು ಪದ್ಮನಿಗೆಂಥ ದುಃಖ! ಅವನಿಗೆ ಮಾತ್ರವಲ್ಲ ಎಲ್ಲರಿಗೂ ಅದು ತುಂಬ ದುಃಖದ ವಿಚಾರ. ಅವಳ ಎರಡು ಪುಟ್ಟ ಮಕ್ಕಳು ತಾಯಿಯಿಲ್ಲದ ತಬ್ಬಲಿಗಳಾದುವು. ಪದ್ಮ ಯುವಕ. ಎಷ್ಟು ಕಾಲ ಮದುವೆಯಾಗದೆ ಇರುತ್ತಾನೆ? ಆತ ಎರಡನೆ ಮದುವೆಯಾಗಿ ಯಾವುದೋ ಹೆಣ್ಣನ್ನು ಮನೆಗೆ ಕರೆತಂದರೆ ಆ ಹಸುಮಕ್ಕಳಿಗೆ ಎಂಥ ಕಷ್ಟ ಬಂದೀತು..

ಅಂತಕ್ಕನ ಗುಟುಕು ಇರುವ ತನಕ ಹೀಗೇ ನಡೆಯಬಹುದು. ಆ ಮಕ್ಕಳಿಗೂ ತಾಯಿಯಿಲ್ಲದ ದುಃಖ ಅಷ್ಟು ಕಾಡದೆ ಇರಬಹುದು... ಅಲ್ಲ. ಪದ್ಮ ಒಳ್ಳೆಯ ತಂದೆಯೇ! ಆದರೂ ಆತನ ಹೋಟೆಲು, ಉದ್ಯೋಗ ಎಲ್ಲವನ್ನೂ ನೋಡಲು ಹೊರಗಿನ ಕೆಲಸಕ್ಕೆ ಅವನು ಹೋದಾಗ, ಮನೆಯಲ್ಲಿರುವ ಮಕ್ಕಳನ್ನು ಚೆನ್ನಾಗಿ ನೋಡಿಕೊಳ್ಳುವ ಹೆಂಗಸು ಬೇಕು. ಹಾಗಿರುವಾಗ ಆ ವಿಷಯವನ್ನು ನಾವು ಕೂಡ ಯೋಚನೆ ಮಾಡಬೇಕು, ಅಲ್ವಾ ಭವಾನಿ?

ಭವಾವಿಗೆ ಮೊದಮೊದಲು ತ್ಯಾಂಪಣ್ಣ ಭಾವ ಈ ಮಾತನ್ನೆಲ್ಲ ಈಗ ಯಾಕೆ ತನಗೆ ಹೇಳುತ್ತಿದ್ದಾರೆಂದು ಗೊತ್ತಾಗಿರಲಿಲ್ಲ. ಕೊನೆಗೆ ಅವರು ಅವಳ ಮನಸ್ಸನ್ನು ಹಿಂಜಲು ನೋಡಿದಾಗ ಅವಳಿಗೆ ಅವರ ಮಾತಿನ ಸೂಕ್ಷ್ಮ ಗೊತ್ತಾಯ್ತು.

ಭವಾನಿಯ ಸ್ವಭಾವದಲ್ಲಿ ಒಳಗೊಂದು ಹೊರಗೊಂದು ಎಂಬ ಕಣ್ಣುಕಟ್ಟು ಇಲ್ಲ. ಅವಳು ಮುಗುಳ್ನಗುತ್ತ ಹೇಳಿದಳು, 'ಅಣ್ಣಾ, ಈ ಕತೆಯನ್ನೆಲ್ಲಾ ಈಗ ಯಾಕೆ ಹೇಳ್ತಿದ್ದೀರಿ? ಅವು ನನಗೂ ನಿಮಗೂ ಎಲ್ಲ ಗೊತ್ತಿರುವುದೇ. ಪದ್ಮಣ್ಣ ಭಾವನಿಗೆ ಮದುವೆ ಆಗಬೇಕು ಅಲ್ವೇ? ಅವರಿಗೆ ಮದುವೆ ಆಗಬೇಕೆಂದಿದ್ದರೆ ನಮ್ಮಿಂದ ಯಾವ ಅಡ್ಡಿಯೂ ಇಲ್ಲ. ಆಗಲಿ.. ಮತ್ತೆ ಮಕ್ಕಳನ್ನು ನೋಡುವ ವಿಷಯದಲ್ಲಿ ನೀವು ಯಾವತ್ತೂ ಯಾವ ಯೋಚನೆಯನ್ನೂ ಮಾಡುವುದು ಬೇಡ. ಈಗ ನನ್ನ ತಾಯಿ ಇದ್ದಾರೆ. ಅವರ ಬಳಿಕ ಅಣ್ಣನೂ ನಾನೂ ಬದುಕಿದ್ದರೆ ಆ ಮಕ್ಕಳನ್ನು ಬೀದಿಗೆ ಬಿಡಲಾರೆವು. ನೀವು ಚಿಂತೆ ಮಾಡಬೇಡಿ.'

'ಹಾಗಲ್ಲ ಭವಾನಿ, ಹೊರಗಿನ ಹೆಣ್ಣನ್ನು ತಂದರೆ ಒಳಗಿನ ಸಂಗತಿ ಸರಿಯಾಗುವುದಿಲ್ಲ. ಇದು ಪದ್ಮನ ಅಭಿಪ್ರಾಯ ಕೂಡ.'

'ಅಣ್ಣಾ, ಪದ್ಮಣ್ಣ ಭಾವ ಇಂಥ ಆಲೋಚನೆ ಯಾವತ್ತೂ ಮಾಡಲಾರರು. ಯಾಕೆಂದರೆ ನಾನು ನನ್ನ ಅಕ್ಕ ಸರಸು ಬದುಕಿರುವಾಗಲೇ ಈ ಮಾತಿಗೆ ಉತ್ತರ ಹೇಳಿದ್ದೆ. ಅದನ್ನು ಪದ್ಮಣ್ಣ ಭಾವನಿಗೆ ಸರಸು ಹೇಳಿರುತ್ತಾಳೆ. ಇಂಥ ಮಾತುಗಳಿಗೆಲ್ಲ ನನ್ನನ್ನು ಎಳೆಯಬೇಡಿ. ಅದು ನಿಮ್ಮ ಜವಾಬ್ದಾರಿ. ನನ್ನನ್ನು ಬಿಟ್ಟುಬಿಡಿ. ಇನ್ನೊಮ್ಮೆ ಈ ಮಾತನ್ನು ನನ್ನ ಮುಂದೆ ತೆಗೆಯಬೇಡಿ.'

ತ್ಯಾಂಪಣ್ಣ ಸಾಮನಿಯವರಿಗೆ ಕುಚ್ಚು ಪೊರಕೆಯಲ್ಲಿ ಬಾರಿಸಿದಂತಾಯ್ತು. ಅವರ ಮುಖಕ್ಕೆ ಭವಾನಿ ಹಿಂದು ಮುಂದು ನೋಡದೆ ಒದ್ದೆ ಬಟ್ಟೆಯನ್ನೇ ಹಾಕಿದ್ದಳು!

ದಿನಗಳು ಉರುಳುತ್ತಲೇ ಇದ್ದುವು. ತ್ಯಾಂಪಣ್ಣನ ಸಂಧಾನ ಫಲಿಸಲಿಲ್ಲ. ಅಂತಕ್ಕನ ಸ್ಥಿತಿಯಂತೂ ತೀರಾ ಹೀನಾಯವಾಯ್ತು. ಮೈಂದಣ್ಣ ಗಂಡುಮಗನಾಗಿಯೂ ಯಾವ ಪ್ರಯೋಜನಕ್ಕೂ ಇರದಂತಿದ್ದ. ಭವಾನಿಯೇ ಎಲ್ಲ ಸಂಗತಿಗಳಿಗೂ ಎಷ್ಟು ತಲೆ ಹಚ್ಚುವುದು?

* * * * *

ಶಂಕರ ಮೂಡಿ ಬಂದನಾ?

ಪದ್ಮನಾಭ ಸಾಮನಿಯ ಮಂಜುನಾಥ ರೆಸ್ಟುರಾ & ಲಾಡ್ಜಿಂಗ್, ಬೈಕುಲಾ ರೈಲ್ವೇಸ್ಟೇಷನ್‌ನ ಎದುರುಗಡೆ ಇರುವ ಸಾಧಾರಣ ದೊಡ್ಡದಾದ ಕಟ್ಟಡ. ಪ್ರತೀದಿನ ಸಂಜೆ ಹೋಟೆಲಲ್ಲಿ ಜನರ ನೂಕುನುಗ್ಗಲು. ಅಲ್ಲಿ ಸಿಗುವ ತುಪ್ಪದೋಸೆ, ಮಸಾಲೆದೋಸೆ, ಉಸಲ್ ಪಾವು, ಅಲ್ಲದೆ ಸ್ಪೆಷಲ್ ಪಾವುಬಾಜಿಗಾಗಿ ಆಫೀಸು ಕೆಲಸ ಮುಗಿಸಿ ಸುಸ್ತಾಗಿ ಬರುವ ಗಂಡಸರು ಹೆಂಗಸರು ಅಲ್ಲಿಗೇ ನುಗ್ಗುತ್ತಿದ್ದರು. ಪದ್ಮ ಸಪ್ಲೈ ಮಾಡುವ ಯುವಕರ ಮೇಲೆ ನಿಗಾ ಇಟ್ಟು ಆ ಕಡೆ ಈ ಕಡೆ ತಿರುಗುತ್ತಿದ್ದ. ಗಲ್ಲಾದಲ್ಲಿ ಕುಳಿತುಕೊಳ್ಳಲು ಊರಿನ ಕಿನ್ನಿಗೋಳಿಯಿಂದ ಕರೆಸಿದ ಶಾಂತಣ್ಣ ಎಂಬವನಿದ್ದ.

ಶಾಂತಣ್ಣನಿಗೆ ಹುಣಸೆ ಮರದಿಂದ ಬಿದ್ದು ಒಂದು ಕಾಲಿನ ಮಂಡಿಯ ಚಿಪ್ಪು ಪುಡಿಯಾಗಿದ್ದು ಯಾವ ಶ್ರಮದ ಕೆಲಸವನ್ನೂ ಮಾಡಲು ಸಾಧ್ಯವಾಗುತ್ತಿರಲಿಲ್ಲ. ಗಲ್ಲಾಪೆಟ್ಟಿಗೆಯಲ್ಲಿ ಕುಳಿತುಕೊಂಡು ಹಣ ತೆಗೆದುಕೊಳ್ಳುವ ಕೆಲಸ ಅವನಿಗೆ ಸುಲಭ. ಪದ್ಮನಿಗೂ ಇದರಿಂದ ಅನುಕೂಲವೇ ಆಗಿತ್ತು.

ಆ ದಿನ ಸಂಜೆಯ ಹೊತ್ತು. ಹೋಟೆಲಲ್ಲಿ ತುಂಬ ರಷ್. ಅಷ್ಟು ಹೊತ್ತಿಗೆ ಗಲ್ಲದ ಬಳಿಗೆ ಒಬ್ಬ ವ್ಯಕ್ತಿ ಬಂದು ಹಿಂದಿಯಲ್ಲಿ 'ಮಿಸ್ಟರ್ ಸಾಮನಿ ಇದ್ದಾರಾ?' ಎಂದು ವಿಚಾರಿಸುವುದು ಕೇಳಿಸಿತು. ಬಂದಾತ ಗಡ್ಡಮೀಸೆ ಬಿಟ್ಟ ಒಬ್ಬ ಯುವಕ. ಪದ್ಮ ಗಲ್ಲದ ಬಳಿಗೆ ಬಂದ. ಆ ಮನುಷ್ಯನನ್ನು ಹತ್ತಿರದಿಂದ ನೋಡಿದಾಗ ಗುರುತು ಪರಿಚಯವಿರುವ ತಮ್ಮ ಊರಿನ ಯಾರೋ ಆಗಿರಬೇಕೆಂದು ಮನಸ್ಸಿಗೆ ತೋರಿತು. ಅವನೂ ಹಿಂದಿಯಲ್ಲೇ ಕೇಳಿದ. 'ನಿಮಗೆ ಯಾರು ಬೇಕು?'

ಆ ಮನುಷ್ಯ ತಿರುಗಿ ತುಳುವಿನಲ್ಲಿ ಉತ್ತರಿಸಿದ, 'ನಾನು ಪದ್ಮಣ್ಣ, ಶಂಕರ!'

'ಓ ಶಂಕರನಾ. ಗಡ್ಡ ಮೀಸೆ ಬೆಳೆಸಿದ್ದೀಯಾ. ಥೇಟ್ ಸನ್ಯಾಸಿಯೇ. ಗುರುತು ಸಿಗುವುದು ಹೇಗೆ? ಏನು ಮತ್ತೆ ಸಂಗತಿ? ಬೊಂಬಾಯಿಗೆ ಯಾವಾಗ ಬಂದೆ?'

'ಬೊಂಬಾಯಿಗೆ ಇವತ್ತು ಬಂದೆ. ಪೂನಾದ ಸಾವಿತ್ರಿಬಾಯಿ ಫುಲೇಯವರ ಆಶ್ರಮದಲ್ಲಿ ಇಪ್ಪತ್ತು ದಿನ ಇದ್ದೆ. ಅಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ನಡೆಯುವ ಕೆಲಸಗಳನ್ನೆಲ್ಲ ನೋಡಿದೆ. ಈಗ ಊರಿಗೆ ಹೋಗಬೇಕು. ಅಂಥ ಕೆಲಸಗಳನ್ನು ನಮ್ಮ ಊರಲ್ಲೂ ಮಾಡಬೇಕೆಂದು ಯೋಚಿಸಿ ಇಲ್ಲಿಗೆ ಬಂದೆ.'

'ಸರಿ. ನಿನ್ನ ಕೆಲಸ ಯಾವ ಬಗೆಯದ್ದು?'

'ಅದು ಮುಖ್ಯವಾಗಿ ಗ್ರಾಮದ ಜನರಿಗೆ ಸಹಾಯವಾಗುವ ಕೆಲಸ. ಹಾಗೆ ಮಾಡಿದರೆ ಅವರ ಬದುಕನ್ನೂ ವಿಚಾರಗಳನ್ನೂ ಸುಧಾರಿಸಲು ಸಾಧ್ಯ. ಮುಖ್ಯವಾಗಿ ಅದನ್ನೆಲ್ಲ ಮಾಡಲು ಸರಿಯಾದ ನೆಲೆಯಿರಬೇಕು. ನಾಲ್ಕು ಜನ ಕುಳಿತು ಕೆಲಸ ಮಾಡಲು ಅನುಕೂಲವಾಗುವಂತಿರಬೇಕು. ಅದಕ್ಕಾಗಿ ನಿಮ್ಮನ್ನು ಹುಡುಕಿಕೊಂಡು ಬಂದೆ.'

'ನನ್ನಿಂದ ಏನಾದೀತೆಂದು ನಿನ್ನ ಯೋಚನೆ? ನನಗೆ ಊರಿಗೆ ಬಂದಿರಲು ಸಾಧ್ಯವಿಲ್ಲ. ಬೇರೆ ರೀತಿಯ ಯಾವುದಾದರೂ ಸಹಾಯವಾಗುವುದಿದ್ದರೆ ನನ್ನಿಂದ ಸಾಧ್ಯವಾದುದನ್ನು ಮಾಡುವ. ಈಗ ಏನು ಆಲೋಚನೆ ಮಾಡಿ ಇಲ್ಲಿಗೆ ಬಂದೆ?'

'ಅಣ್ಣ, ನಿಮ್ಮ ಮಾತು ಕೇಳಿ ನನಗೆ ಸಂತೋಷವಾಯ್ತು. ಅರ್ಧ ಕೆಲಸ ಆದಂತೆಯೇ.'

'ಶಂಕರ, ನಾವು ನನ್ನ ಕೋಣೆಗೆ ಹೋಗಿ ಕುಳಿತು ಮಾತನಾಡೋಣ. ನೀನು ಒಂದು ಕಪ್ ಚಾ ಕುಡಿ.'

ಪದ್ಮ ಶಂಕರನನ್ನು ತನ್ನ ಆಫೀಸುಕೋಣೆಗೆ ಕರೆದುಕೊಂಡು ಹೋದ. ಒಬ್ಬ ಆಳಿನೊಂದಿಗೆ ಎರಡು ಕಪ್ ಸ್ಪೆಷಲ್ ಚಾ ತರಲು ಹೇಳಿದ. ಕುಳಿತ ಮೇಲೆ ಮಾತು ಮುಂದುವರಿಸಿದರು.

'ಊರಿಗೆ ಬರುವುದಕ್ಕೆ ಮೊದಲು ಇಷ್ಟು ಸಮಯ ಎಲ್ಲಿದ್ದೆ ಮಾರಾಯಾ?'

'ಸ್ವಲ್ಪ ಸಮಯ ವಾರ್ಧಾದಲ್ಲಿದ್ದೆ. ಆಮೇಲೆ ಉತ್ತರಪ್ರದೇಶದ ಬಸ್ತಾರಿನ ಒಂದು ಬುಡಕಟ್ಟು ಜನಾಂಗದ ಹಳ್ಳಿಯಲ್ಲಿದ್ದೆ. ಅವರ ಜೀವನಕ್ರಮ ನೋಡಿದೆ. ನಮ್ಮ ಸುಧಾರಿತ ಜನರ ಮಧ್ಯದಲ್ಲಿರದೆ ಆ ಕಾಡಿನ ನಡುವೆ ಆ ಬಡಜನರು ಬದುಕುವ ರೀತಿ ನೀತಿಗಳನ್ನು ನೋಡಿದೆ. ಅಲ್ಪತೃಪ್ತರಾಗಿ ಅವರು ಬದುಕುವುದನ್ನು ನೋಡಿದೆ. ಅದನ್ನೂ ತಿಳಿದುಕೊಂಡೆ.'

'ಸ್ವಾತಂತ್ರ್ಯ ಸಿಕ್ಕಿದ ಮೇಲೆ ನಮ್ಮ ಹಳ್ಳಿಗಳ ಪರಿಸ್ಥಿತಿ ಹೇಗಿದೆಯೆಂದು ನಮಗೆ ಗೊತ್ತಿದೆ. ಹೆಂಗಸರು, ಮಕ್ಕಳು, ಮುದುಕರ ಊರಾಗಿದೆ ನಮ್ಮ ಹಳ್ಳಿಗಳು.'

'ಎಲ್ಲೆಲ್ಲೋ ಕೆಲಸ ಮಾಡುವುದಕ್ಕಿಂತ ನಮ್ಮ ಆಲೋಚನೆಗಳನ್ನು ನಮ್ಮ ಊರಿನಲ್ಲೇ ಶುರು ಮಾಡಿದರೆ ಏನು? ಹಾಗಾಗಿ ಮೊದಲ ಹೆಜ್ಜೆಯನ್ನು ನಿಮ್ಮನ್ನು ಕೇಳಿ ಇಡುವುದೆಂದು ಯೋಚನೆ ಮಾಡಿ ಬಂದೆ.'

'ಶಂಕರಾ, ಅಂದಿನಿಂದ ಇಂದಿನವರೆಗೂ ನೀನೊಬ್ಬ ಪ್ರತ್ಯೇಕ ವ್ಯಕ್ತಿ. ಎಲ್ಲರೂ ನಡೆಯುವ ಹಾದಿಯಲ್ಲಿ ನಡೆಯುವವನಲ್ಲ. ಸರಿ, ಈಗ ನನ್ನಿಂದೇನಾಗಬೇಕು ಹೇಳು.'

'ಅಣ್ಣ, ನಿಮ್ಮ ಮದುವೆ ಸಮಯದಲ್ಲಿ ಪದವಿನ ಹದಿನೈದು ಸೆಂಟ್ಸ್ ಸ್ಥಳವನ್ನು ಶಂಭು ಚೌಟರು ವರದಕ್ಷಿಣೆ ಲೆಕ್ಕದಲ್ಲಿ ನಿಮಗೆ ಕೊಡುತ್ತೇನೆಂದು ಹೇಳಿದ್ದನ್ನು ಕೇಳಿದ್ದೇನೆ.

ಆ ಜಾಗ ನಿಮ್ಮ ಸುಪರ್ದಿಯಲ್ಲಿ ಈಗಲೂ ಇದೆಯಾ?'

'ಅಯ್ಯೋ ಮಾರಾಯ, ಆ 'ಗೆ' ಸುದ್ದಿಯನ್ನು ಈಗ ಕೇಳ್ತಿದ್ದೀಯಾ?'

'ಅಲ್ಲಣ್ಣ, ಅದೀಗ ನಿಮ್ಮ ವಶದಲ್ಲಿದ್ದರೆ ನನಗೆ ಉಪಕಾರವಾದೀತು ಅಂತ.'

'ಶಂಕರ, ಹಾಗಿದ್ದರೆ ಆ ಜಾಗ ನನ್ನ ಹತ್ತಿರ ಇಲ್ಲ. ಚೌಟರು ಅದನ್ನು ನನಗೆ ಬರೆದುಕೊಡಲಿಲ್ಲ. ಅದು ಕುಟುಂಬದ ಭೂಮಿ. ಅತ್ತೆಯನ್ನು ಕೇಳಿ ನೋಡು. ನಾನು ಏನು ಮಾಡುವುದಕ್ಕೂ ಅವರು ಅಡ್ಡಿ ಮಾಡುವುದಿಲ್ಲ. ಭವಾನಿಯೂ ಹಾಗೆ ತಿರುಗಿ ಮಾತನಾಡಲಾರಳು.'

'ಸರಸಕ್ಕ ತೀರಿಹೋದ ವಿಚಾರ ನನಗೆ ಎಷ್ಟೋ ಸಮಯದ ಬಳಿಕ ಗೊತ್ತಾಯ್ತು. ಎಂಥ ಒಳ್ಳೆಯ ಹೆಂಗಸು ಆಕೆ. ಅವರನ್ನು ಉಳಿಸಿಕೊಳ್ಳುವ ಭಾಗ್ಯವನ್ನು ದೇವರು ನಮಗೆ ಕೊಡಲಿಲ್ಲ. ನಾನು ಆಗ ಉತ್ತರಪ್ರದೇಶದಲ್ಲಿದ್ದೆ.'

'ಏನು ಮಾಡುವುದು ಶಂಕರಾ. ನನಗೆ ಸಾಧ್ಯವಾದಷ್ಟು ಅಂದರೆ ದುಡ್ಡಿನಲ್ಲಿ ಆಗುವ ಎಲ್ಲ ಪ್ರಯತ್ನಗಳನ್ನೂ ಮಾಡಿದೆ. ಅವಳ ಆಯುಷ್ಯವೇ ಅಷ್ಟು.'

'ದೇವರ ಚಿತ್ತ. ಮನುಷ್ಯನ ಹಿಡಿತಕ್ಕೆ ಸಿಗದ ಬ್ಲಡ್ ಕ್ಯಾನ್ಸರನ್ನು ದೇವರು ಆಕೆಗೆ ಕೊಟ್ಟರು. ಇನ್ನೇನು ಮಾಡುವುದು? ಅಂಥ ದೇವತೆಯಂಥ ಹೆಂಡತಿಯನ್ನು ಇಟ್ಟು ಸುಖ ಪಡೆಯುವ ಅದೃಷ್ಟ ನನಗಿಲ್ಲ. ಎರಡು ಮಕ್ಕಳನ್ನು ನನ್ನ ಮಡಿಲಿಗೆ ಹಾಕಿದ್ದಾಳೆ. ಅವು ಚೆನ್ನಾಗಿ ಬದುಕುವುದನ್ನು ನೋಡುವ ಆಸೆ ಮಾತ್ರ ಇಟ್ಟುಕೊಂಡಿದ್ದೇನೆ.'

'ಈಗ ಅವರನ್ನು ಊರಲ್ಲಿ ಬಿಟ್ಟಿದ್ದೇನೆ. ಅತ್ತೆಯೂ ಭವಾನಿಯೂ ನೋಡಿಕೊಳ್ಳುತ್ತಾರೆ. ನಾಳೆ ಏನಾಗುತ್ತದೆಂದು ಆ ಪಂಜುರ್ಲಿಗೂ ಆ ರಾಜನ್ ದೈವಕ್ಕೂ ಗೊತ್ತು. ಅವರಿಗೆ ಅರ್ಪಿಸಿದ್ದೇನೆ.'

'ಭವಾನಿ ಮನೆಯಲ್ಲೇ ಇದ್ದಾಳಾ? ಅವಳಿಗೆ ಮದುವೆಯಾಗಲಿಲ್ಲವೇ?'

'ಅವಳು ತಾನು ಮದುವೆಯಾಗುವುದಿಲ್ಲವೆಂದು ಸರಸು ಬದುಕಿರುವಾಗಲೇ ಡಿಕ್ಲರೇಷನ್ ಮಾಡಿದ್ದಾಳೆ. ನನ್ನ ಅಣ್ಣ ತ್ಯಾಂಪಣ್ಣ ಕೇಳಿದಾಗಲೂ ಅದೇ ಉತ್ತರ ಹೇಳಿ ಅವರ ಬಾಯಿ ಮುಚ್ಚಿಸಿದ್ದಾಳೆ. ಆಮೇಲೆ ಅತ್ತೆ ಅವಳನ್ನು ಕೇಳುವುದಕ್ಕೇ ಹೆದರುತ್ತಾರೆ.'

'ಮೈಂದಣ್ಣ ಹೆಣ್ಣಾಗಬೇಕಿತ್ತು. ಅವಳು ಗಂಡಾಗಬೇಕಿತ್ತು. ಎಲ್ಲ ದೈವೇಚ್ಛೆ.'

ಸ್ವಲ್ಪ ಹೊತ್ತು ಇಬ್ಬರೂ ಮೌನವಾಗಿ ಕುಳಿತರು. ಶಂಕರ ಹೇಳಿದ, 'ಹಾಗಿದ್ದರೆ ನಾನು ನಿಮ್ಮ ಅತ್ತೆಯನ್ನು ವಿಚಾರಿಸಲೇ?'

ಪದ್ಮ ಅಚ್ಚರಿಯಿಂದ ಕೇಳಿದ, 'ಏನು ಕೇಳ್ತೀಯಾ? ಭವಾನಿಯ ವಿಷಯವೇ?'

'ಅಲ್ಲಪ್ಪಾ ಅಲ್ಲ, ಪದವಿನ ಹದಿನೈದು ಸೆಂಟ್ಸ್ ಜಾಗದಲ್ಲಿ ಒಂದು ಕೆಲಸ ಆಗಬೇಕು. ಅಲ್ಲಿ ಸಮುದಾಯದ ಕೆಲಸ ಮಾಡಲು ಒಂದು ಕಟ್ಟಡ ಆಗಬೇಕು. ಅದರಲ್ಲಿ ಒಂದು ವಾಚನಾಲಯ, ಸಂಜೆ ಅಲ್ಲಿಗೆ ಬರುವ ಜನರಿಗೆ ಪೇಪರಿನಲ್ಲಿ ಬರುವ ಸುದ್ದಿಗಳನ್ನು ಓದಿ ಅಥವಾ ಹೇಳಿ ತಿಳಿಸುವುದು, ಒಬ್ಬ ಆಳನ್ನು ನೇಮಿಸಿ ಕೆಲಸಕ್ಕೆ ಹೋಗುವ ಮಹಿಳೆಯರ ಮಕ್ಕಳನ್ನು ನೋಡಿಕೊಳ್ಳುವುದಕ್ಕಾಗಿ ಕ್ರೆಷ್ ವ್ಯವಸ್ಥೆ, ವಾರಕ್ಕೊಂದು ದಿನ

ಡಾಕ್ಟರನ್ನು ಕರೆಸಿ ಆರೋಗ್ಯ ತಪಾಸಣೆ ಮಾಡುವುದು, ಕೃಷಿಗೆ ಸಹಾಯವಾಗುವ ಸಂಗತಿಗಳನ್ನು ಜನರಿಗೆ ತಿಳಿಸುವ ಏರ್ಪಾಡು ಮಾಡುವುದು, ನಿಮ್ಮ ಸ್ಟೋರಿನ ಮೂಲಕ ಕೃಷಿಗೆ ಬೇಕಾಗುವ ಗೊಬ್ಬರ, ಸಾಮಗ್ರಿ, ಬೀಜಗಳನ್ನು ತರಿಸಿ ಕೊಡುವುದು, ಬಸಿರಿ ಹೆಣ್ಣುಮಕ್ಕಳಿಗೆ ಅಗತ್ಯವಾದ ಮಾಹಿತಿಗಳನ್ನು ತಿಳಿಸುವುದು, ಹೆಂಗಸರಿಗಾಗಿ ಡಾಕ್ಟರನ್ನು ಮತ್ತು ನರ್ಸುಗಳನ್ನು ತಿಂಗಳಿಗೊಮ್ಮೆ ಅಥವ ಎರಡು ಬಾರಿ ಕರೆಸುವುದು ಹೀಗೆ ಏನೇನೋ ಮಾಡಬೇಕೆಂಬ ಯೋಚನೆ.'

'ಇದು ಒಳ್ಳೆಯ ವಿಷಯ ಅನ್ನುವುದರಲ್ಲಿ ಸಂಶಯವೇ ಇಲ್ಲ. ನೀನು ಅತ್ತೆಯನ್ನು ಕೇಳು. ಮೊದಲು ನೀನು ಕೇಳುವುದು ಒಳ್ಳೆಯದು. ಆಮೇಲೆ ನಾನೂ ಮಾತನಾಡ್ತೇನೆ. ಭವಾನಿಯೂ ನೀನು ಮಾಡುವ ಕೆಲಸವನ್ನು ವಿರೋಧಿಸಲಾರಳು. ಖಂಡಿತವಾಗಿಯೂ ಅವಳಿಗಾಗುವ ಸಹಾಯವನ್ನು ಅವಳು ಮಾಡ್ತಾಳೆ.'

'ಪದ್ಮಣ್ಣ, ನಾನು ನಿಮ್ಮ ಹತ್ತಿರ ಇನ್ನೊಂದು ವಿಷಯ ಕೇಳಿದರೆ ನೀವು ಅನ್ಯಥಾ ಭಾವಿಸಲಾರಿರಿ ತಾನೆ?'

'ಓ ಅದಾ? ನನಗೆ ಅರ್ಥವಾಯ್ತು. ಭವಾನಿಯ ವಿಚಾರದಲ್ಲಿ ನನ್ನ ಅಭಿಪ್ರಾಯ ಏನೆಂದು ಅಲ್ವಾ?'

ಶಂಕರ ತುಸು ಗಲಿಬಿಲಿಗೊಂಡ. ಪದ್ಮ ಮುಂದುವರಿಸಿದ, 'ಭವಾನಿಯ ವಿಷಯದಲ್ಲಿ ಏನಾದರೂ ಹೇಳುವುದಕ್ಕೆ ಸಾಧ್ಯವೆಂದರೆ ಅದು ನಿನಗೆ ಮಾತ್ರ. ಅವಳು ಬೇರೆ ಯಾರ ಮಾತಿಗೂ ಬಗ್ಗುವವಳಲ್ಲ. 'ಬೆಸ್ಟ್ ಆಫ್ ಲಕ್' ಅಂತ ಹೇಳಬೇಕಾ ನಿನಗೆ?'

ಶಂಕರ ಸಂಪೂರ್ಣ ಗಲಿಬಿಲಿಗೊಂಡ. ಅವನ ಗಡ್ಡ ಮೀಸೆಯ ಪೊದೆಯ ಎಡೆಯಲ್ಲಿ ಸ್ವಲ್ಪ ಸ್ವಲ್ಪ ಕಾಣುವ ಕೆನ್ನೆ ಹಣೆಗಳು ಅರೆಕ್ಷಣ ಕೆಂಪಾದುವು. ಜೇಬಿನಿಂದ ಟವೆಲ್ ತೆಗೆದು ಬೆವರು ಒರಸಿಕೊಂಡ.

ಪದ್ಮನೇ ಮಾತು ಬದಲಾಯಿಸಿದ. 'ಊರಿಗೆ ಹೋದರೆ ಅತ್ತೆ ಜೊತೆ ಮಾತನಾಡು. ಎಲ್ಲ ವಿಷಯವನ್ನೂ ಬಿಡದೆ ಹೇಳು. ನನ್ನ ಅಣ್ಣ ತ್ಯಾಂಪಣ್ಣನಿಗೂ ಎಲ್ಲ ವಿವರ ತಿಳಿಸು. ಭವಾನಿಗೂ ನೀವು ಹತ್ತಿರ ಇದ್ದರೆ ಒಂದು ಸಹಾಯ ಆಗುತ್ತದೆ. ಕತ್ತಲೆಯಾಗುವ ವರೆಗೂ ಇದ್ದು ಆಮೇಲೆ ಸ್ಟೋರು ಮುಚ್ಚಿ ಆ ಹುಡುಗಿ ಆ ಚಿಕ್ಕ ಹುಡುಗ ತಿಮ್ಮಯ್ಯ ನೊಂದಿಗೆ ಎರಡು ಮೂರು ಮೈಲು ನಡೆದು ಮನೆಗೆ ಹೋಗ್ತಾಳೆ.'

'ಅದೇನು ಮೈಂದಣ್ಣ ಇಲ್ಲವೇ?'

'ಅವನು ಇದ್ದರೆ ಇದ್ದ, ಇಲ್ಲದಿದ್ದರೆ ಇಲ್ಲ. ಯಾವುದೋ ತಮಿಳುನಾಡಿನ ತಿರುಮಣ್ಣಾಮಲೆಗೆ ಹೋಗಿ ಹದಿನೈದು ದಿನಗಳಾದುವು. ಅವನ ವ್ಯವಹಾರ ಯಾವುದೂ ಸರಿಯಿಲ್ಲ. ಮನೆಯ ಯೋಚನೆಯೇ ಇಲ್ಲ. ಶಂಭು ಚೌಟರು ಸತ್ತದ್ದೇ ಆತ ದಿಕ್ಕಾಪಾಲಾಗಿ ಹೋದ.'

ಪದ್ಮನ ಮಾತುಗಳನ್ನು ಕೇಳುತ್ತಿದ್ದಂತೆ ಶಂಕರನ ಆಲೋಚನೆಯೆಲ್ಲ ಗಾಳಿಗೆ ಸಿಕ್ಕಿದ ಮೋಡಗಳು ಆಕಾಶದಲ್ಲಿ ಚೆಲ್ಲಾಪಿಲ್ಲಿಯಾಗುವಂತೆ ಎಲ್ಲೆಲ್ಲೋ ಹರಡಲು

ಶುರುವಾಯ್ತು. ಮನಸ್ಸನ್ನು ಆದಷ್ಟು ಗಟ್ಟಿಮಾಡಿ ಉಕ್ಕಿ ಬರುವ ಭವಾನಿಯ ಮುಖವನ್ನು ಹಿಂದೆ ತಳ್ಳಲು ಪ್ರಯತ್ನ ಮಾಡಿದ.

'ಪದ್ಮಣ್ಣ, ಊರಿಗೆ ಹೋದರೆ ಗುತ್ತಿನ ಸಮಾಚಾರವೇ ಸಿಗುವುದು. ಆ ದಿನ ಅದೇನೋ ಮನುಷ್ಯರು ಯೋಚನೆ ಮಾಡದಂಥ ಘಟನೆ ನಡೆಯಿತು. ಆದರೆ ಅದರ ಪರಿಣಾಮ ಇವತ್ತಿನ ವರೆಗೂ ಉಳಿದುಕೊಂಡು ಬಂದಿದೆ.'

'ಪ್ರಪಂಚದ ಎಲ್ಲ ಸಂಗತಿಗಳೂ ಹೀಗೆಯೇ. ಯೂರೋಪಿನಲ್ಲಿ ಹಿಟ್ಲರ್ ನಡೆಸುವ ಮಾರಣಹೋಮದಿಂದ ಯಹೂದಿಯರ ಕುಲವೇ ಸಂಪೂರ್ಣ ಬಲಿಯಾಯ್ತು. ಯುದ್ಧದಲ್ಲಿ ಇಡೀ ಪ್ರಪಂಚದ ಯಾರ್‍ಯಾರದೋ ತಾಯಿ ಮಕ್ಕಳ ಸಮಾಧಿಯಾಯ್ತು. ಇಂಥ ಕಾರ್ಯಗಳನ್ನು ಮಾಡಿ ಮನುಷ್ಯ ಏನು ಸಾಧಿಸುತ್ತಾನೆ? ಅಂಥವರಿಗೆ ಅದರಿಂದ ಏನು ಲಾಭವಿದೆ? ಕೊನೆಗೆ ಉಳಿಯುವುದು ನೋವು, ಹಗೆ ಮತ್ತು ಸರ್ವನಾಶ ಮಾತ್ರ.'

'ಒಬ್ಬ ಮನುಷ್ಯನ ತಪ್ಪಿನಿಂದ ದುಡುಕಿ ಮಾಡಿದ ಒಂದು ಕ್ಷಣದ ಕೆಲಸದಿಂದ ಎಷ್ಟೋ ಕಾಲದವರೆಗೂ ತೊಳೆದು ಕಳೆಯಲಾಗದ ಪರಿಣಾಮ ಸಂಭವಿಸುತ್ತದೆ. ಹಿಟ್ಲರ್ ಕೊನೆಗೆ ಪ್ರಾಣ ಕಳೆದುಕೊಂಡ. ಪಾಶ್ಚಾತ್ಯರ ಧರ್ಮದಲ್ಲಿ ಕೊನೆಯ ಶಿಕ್ಷೆ ಮರಣ ಮಾತ್ರ. ನಮ್ಮ ಧರ್ಮ ಕ್ಷಮೆ ಕೊಡಿ ಅನ್ನುತ್ತದೆ. ದಯೆಯೇ ಧರ್ಮದ ಮೂಲವೆಂದು ನಮ್ಮ ಧರ್ಮ ಸನಾತನ ಕಾಲದಿಂದಲೂ ಸಾರುತ್ತಲೇ ಇದೆ.'

ಪದ್ಮನ ಮನಸ್ಸಿಗೆ ಇದುವರೆಗೂ ಗೊತ್ತಾಗದ ಏನೇನೋ ರಹಸ್ಯಗಳು ಇದರೊಳಗೆ ಇವೆ ಎನ್ನುವುದು ಹೊಳೆಯಿತು. ಆತ ಶಂಕರನ ಮುಖವನ್ನೇ ನೋಡಿದ. ಶಂಕರ ಅವನ ಕಣ್ಣು ತಪ್ಪಿಸಿ ಕೆಳಗೆ ಮುಖ ಹಾಕಿದ. ಆತ ಹೇಳಿದ.

'ಪದ್ಮಣ್ಣ, ಹಾಗಿದ್ದರೆ ನಾನು ಇವತ್ತು ಸಂಜೆಯ ಬಸ್ಸಿಗೇ ಊರಿಗೆ ಹೋಗುತ್ತೇನೆ. ನಿಮ್ಮ ಅತ್ತೆಯ ಹತ್ತಿರ ಮಾತನಾಡುತ್ತೇನೆ. ಅನಂತರ ಏನು ನಡೆಯಿತೆಂಬುದನ್ನು ನಿಮಗೆ ತಿಳಿಸುತ್ತೇನೆ. ಬರ್ಲಾ?'

ಪದ್ಮ ನಗುತ್ತ ಹೇಳಿದ, 'ನೀನು ಮಾಡುವ ಎಲ್ಲ ಕೆಲಸಕ್ಕೂ ಜಯವಾಗಲಿ. ಗೆಲುವು ಸಿಗಲಿ. ನನ್ನ ಸಂಪೂರ್ಣ ಸಹಕಾರ ನಿನಗೆ ಯಾವಾಗಲೂ ಇರುತ್ತದೆ.'

ಅಂತರ್ವಾಣಿ ಎದುರಾದಾಗ

ಆ ದಿನ ಆದಿತ್ಯವಾರ. ಸ್ಟೋರಿನಲ್ಲಿ ಭಾರೀ ಜನಸಂದಣಿ. ತಿಂಗಳ ಕೊನೆ. ಭವಾನಿ ಬೆಳಿಗ್ಗೆ ಏಳು ಗಂಟೆಗೇ ಕಡಿದಾದ ಕಾಲುದಾರಿಯ ಗುಡ್ಡ ಹತ್ತಿ ಸ್ಟೋರಿಗೆ ಬಂದಿದ್ದಳು. ಅಕ್ಕಿ, ಸಕ್ಕರೆ, ಜೋಳ, ಗೋಧಿ ಎನ್ನುತ್ತ ಬಂದವರಿಗೆ ಕೊಟ್ಟು ಕೊಟ್ಟು ತಿಮ್ಮಯ್ಯನಿಗೆ ಬೆವರು ಸುರಿಯುತ್ತಿತ್ತು. ಬಗ್ಗಿ ಎದ್ದು ಬೆನ್ನು ನೋವೂ ಶುರುವಾಯ್ತು. ಆತ ಹೇಳಿದ, 'ಗಂಟೆ ಎರಡಾಯ್ತು ಅಕ್ಕ, ಇನ್ನು ಕೊಡುವುದನ್ನು ನಿಲ್ಲಿಸುವ. ಬಾಗಿಲು ಓರೆಮಾಡಿ. ಸಂಜೆ ನಾಲ್ಕು ಗಂಟೆಗೆ ಮತ್ತೆ ಕೊಡುವ. ಆಗದೇ?'

ಭವಾನಿಗೂ ಅಯ್ಯೋ ಅನಿಸಿತು. 'ಆಯ್ತು ಮಾರಾಯಾ. ಬಾಗಿಲು ಓರೆ ಮಾಡು' ಅಂತಂದು ತಾನು ಅವಸರದಲ್ಲಿ ಬರೆದ ಲೆಕ್ಕವನ್ನು ಮತ್ತೆ ಪರಿಶೀಲಿಸಲು ಆರಂಭಿಸಿದಳು. ತಲೆತಗ್ಗಿಸಿ ಲೆಕ್ಕ ನೋಡುತ್ತಿದ್ದುದ ರಿಂದ ಓರೆಮಾಡಿದ ಬಾಗಿಲನ್ನು ನೂಕಿಕೊಂಡು ಒಬ್ಬ ಮನುಷ್ಯ ಒಳಗೆ ಬಂದುದು ಅವಳಿಗೆ ಗೊತ್ತಾಗಲಿಲ್ಲ.

'ಭವಾನಿ!' ಆ ಸ್ವರ!

ಭವಾನಿ ಕುಳಿತಲ್ಲೆ ಮರಗಟ್ಟಿದಳು. ಆ ಸ್ವರ! ಮತ್ತೆ ಕೇಳಿತು, 'ಭವಾನಿ'. ದಿನವಿಡೀ ಸ್ಟೋರಿನಲ್ಲಿ ಕುಳಿತು ಬರೆದು ಬರೆದು ಸುಸ್ತಾಗಿ ರಾತ್ರೆ ಮನೆ ಸೇರಿದರೆ ಚಾಪೆಯಲ್ಲಿ ಮಲಗಿದ ನಿಮಿಷಕ್ಕೇ ಅವಳಿಗೆ ನಿದ್ರೆ ಬರುತ್ತದೆ. ಒಂದು ನಿದ್ರೆ ಆಗುವಾಗಲೇ ಆ ಸ್ವರ ಕೇಳುತ್ತದೆ 'ಭವಾನಿ'.

ತಟಕ್ಕನೆ ಭವಾನಿ ಕಣ್ಣು ಬಿಡುತ್ತಾಳೆ. ಮತ್ತೆ ಕೇಳಿಸುತ್ತದೆ 'ಭವಾನಿ'. ಅವಳು ಎದ್ದು ಕುಳಿತು ಆಚೀಚೆ ನೋಡುತ್ತಾಳೆ. ಮಧ್ಯರಾತ್ರಿ. ಅಂಗಳದಲ್ಲಿ ನಾಯಿ ಬೊಗಳುತ್ತಿರುತ್ತದೆ. ಅವಳ ಪಕ್ಕದಲ್ಲಿ ಅಕ್ಕನ ಮಕ್ಕಳಾದ ವಿಜಯಾನಂದನೂ, ಅನಂತಲಕ್ಷ್ಮಿಯೂ ನಿದ್ರಿಸಿರುತ್ತಾರೆ. ಅವರ ಮತ್ತೊಂದು ಬದಿಯಲ್ಲಿ ಅವಳ ಅಮ್ಮ ಗಾಢನಿದ್ರೆಯಲ್ಲಿರುತ್ತಾರೆ. ರಾತ್ರಿಯ ಬೆಡ್‌ಲ್ಯಾಂಪಿನ ಮಿಣಿ ಮಿಣಿ ಬೆಳಕಿನಲ್ಲಿ ಬೇರೆ ಯಾವ ಮನುಷ್ಯರೂ ಇರುವುದಿಲ್ಲ. ಹಾಗಿರುವಾಗ ಶಂಕರನ ಸ್ವರ ಎಲ್ಲಿಂದ ಕೇಳುತ್ತದೆ?

ಹೀಗೆ ಆಗುತ್ತಿರುವುದು ಯಾವಾಗಲೋ ಒಮ್ಮೊಮ್ಮೆ ಅಲ್ಲ. ಆಗಾಗ್ಗೆ ಅವಳಿಗೆ ಕೇಳುತ್ತಲೇ ಇರುತ್ತದೆ. ಸ್ವರ ಎಲ್ಲಿಂದ ಬರುವುದು? ಹೊರಗಿನಿಂದಲಾ? ನನ್ನ ಅಂತರಂಗದಿಂದಲಾ? ಅಲ್ಲ ತಲೆಯಿಂದಲಾ?

ರಾತ್ರಿ ನಿದ್ರೆ ಮಾಡುವ ಹೊತ್ತಿನಲ್ಲಿ ಅವಳೇನೂ ಶಂಕರನ ನೆನಪು ಮಾಡುತ್ತಿರಲಿಲ್ಲ. ಅಲ್ಲದೆ ಆದಷ್ಟು ಆತನ ನೆನಪನ್ನು ಮನಸ್ಸಿನ ಮೂಲೆಗೆ ತಳ್ಳುವುದಕ್ಕೆ ಮನಪೂರ್ವಕವಾದ ಪ್ರಯತ್ನವನ್ನು ಮಾಡುತ್ತಿದ್ದಳು.

ಮತ್ತೆ ಹೇಗೆ ಕೇಳಿಸುತ್ತದೆ? ಇವತ್ತು ಅದು ಹಾಡುಹಗಲಿನಲ್ಲೇ ಕೇಳಿಸಿತು. ತಗ್ಗಿಸಿದ ತಲೆಯನ್ನು ಇನ್ನಷ್ಟು ತಗ್ಗಿಸಿ ಅವಳು ನೆಲವನ್ನು ನೋಡಿದಳು. ನೋಡಿದಲ್ಲಿಗೇ ಅವಳು ಮರಗಟ್ಟಿದಳು.

'ಭವಾನಿ, ನಾನು ಶಂಕರ ಬಂದಿದ್ದೇನೆ. ತಲೆಯೆತ್ತಿ ನೋಡು.'

'ಶಂಕರ' ಎಂಬ ಶಬ್ದ ಕೇಳಿದ್ದೇ ಭವಾನಿ ತಲೆ ಎತ್ತಿದಳು. ಓಕುಳಿಯ ನೀರನ್ನು ತಲೆಗೆ ಎರಚಿದಂತೆ ಅವಳ ಮುಖ ಕೆಂಪಾಗಿ ಬೆವರು ತಲೆ ಮೈಯನ್ನು ಒದ್ದೆಮಾಡಿ ಮುಖದಲ್ಲಿ ಹರಿಯತೊಡಗಿತು. ಇದ್ದಕ್ಕಿದ್ದಂತೆ ಇಷ್ಟದೈವದ ದರ್ಶನವಾದಾಗ ಮನುಷ್ಯ ಹೇಗೆ ಮೈಮರೆತು ನೋಡುತ್ತಾನೋ ಹಾಗೆ ಕಣ್ಣು ಬಿಟ್ಟು ಅವನನ್ನೇ ನೋಡಿದಳು.

ದೇಹ ನಡುಗಿತು. ಕಣ್ಣಿನಲ್ಲಿ ಅಚ್ಚರಿ, ಆನಂದ ಎರಡೂ ಬೆರೆತು ಅವನ ರೂಪವನ್ನು ಕಣ್ಣಿನ ಒಳಗೆ ಎಳೆದುಕೊಳ್ಳುವಂತೆ ರೆಪ್ಪೆ ಮಿಟುಕಿಸದೆ ನೋಡುತ್ತಲೇ ಇದ್ದಳು. ಆತ ನಿಜರೂಪದಿಂದ ತನ್ನ ಕಣ್ಣಮುಂದೆ ನಿಂತಿರುವುದನ್ನು ನಂಬುವುದಕ್ಕೂ ಆಗದ ಸ್ಥಿತಿ ಅವಳದು.

ಅವಳು ಇನ್ನೂ ಮೌನವಾಗಿರುವುದನ್ನು ನೋಡಿ ಶಂಕರ ಹತ್ತಿರ ಬಂದ. ಮೇಜಿನ ಮೇಲಿದ್ದ ಪುಸ್ತಕದ ಮೇಲಿದ್ದ ಅವಳ ಕೈಯಲ್ಲಿ ಕೈಯಿಟ್ಟು ಹೇಳಿದ, 'ನಾನೇ ಬಂದದ್ದು. ನಾನು ಕನಸಲ್ಲ ನೋಡು ಭವಾನಿ'.

ಅವನ ಕೈಯ ಬಿಸುಪು ಮತ್ತು ಭಾರ ತಾಗಿದ ಕೂಡಲೇ ಭವಾನಿ ಭೂಮಿಗೆ ಇಳಿದಳು. 'ಹಾಂ' ಎನ್ನುತ್ತ ಅದುವರೆಗೂ ಬಿಗಿ ಹಿಡಿದಿದ್ದ ಉಸಿರನ್ನು ನಿಟ್ಟುಸಿರಾಗಿ ಹೊರತಂದಳು. ಮೇಲೆ ಹಾರಿಹೋಗಿದ್ದ ಅವಳ ಜೀವ ಕೆಳಗಿಳಿಯಿತೇ!

ಹಾಗೆಂದು ಶಂಕರನೇನೂ ಭವಾನಿಯನ್ನು ನೆನಪು ಮಾಡದವನಲ್ಲ. ನೀಲಯ್ಯ ಆಚಾರಿಯ ಮನೆಯಿಂದ ಮುಂಜಾವ ಹೊರಟು ಮಂಗಳೂರಿಗೆ ಹೋದ ಆತ ನಾಲ್ಕೈದು ದಿನ ಅಲ್ಲಿದ್ದ. ನೀಲಯ್ಯ ಆಚಾರಿ ಆಗ ಮಂಗಳೂರಿಗೆ ಬಂದ. ಆತನಿಗೆ ಸಮುದಾಯ ಭವನದ ಜಾಗವನ್ನು ತೋರಿಸಿ ಆ ಕಟ್ಟಡದ ಕಿಟಿಕಿ ಬಾಗಿಲುಗಳ ಮಾಹಿತಿಯನ್ನೆಲ್ಲ ಕೊಡಿಸಿದ. ಅನಂತರವೇ ಆತ ನಾಗಪುರಕ್ಕೆ ಹೋದುದು. ಅಲ್ಲಿಯ ವರೆಗೆ ಆತನಿಗೆ ಭವಾನಿಯ ನೆನಪು ಆವಾಗಾವಾಗ ಆಗುತ್ತಿತ್ತು. ಆ ರುದ್ರದಿನದ ನೆನಪನ್ನು ಮರೆಯಬೇಕೆಂದು ಅವನ ವಿವೇಕ ಒಳಗಿನಿಂದ ಹೇಳುತ್ತಿತ್ತು. ನನ್ನ ದಾರಿ ಇದಕ್ಕಿಂತ ಬೇರೆಯೇ ಎಂದು ಮನಸ್ಸನ್ನು ಗಟ್ಟಿ ಮಾಡಿ ಆತ ದೂರ ಹೋಗಿದ್ದ.

ಇವತ್ತು ಆ ಮರೆತುಹೋದ ಅಧ್ಯಾಯದ ಕೊನೆಗೆ ಬಂದು ನಿಂತಿದ್ದಾನೆ. ಇವತ್ತು.. ಆ ಹರೆಯದ ಹೆಣ್ಣಿನ ಕೋಪದ ಹತಾಶೆಯ ಬಿಸಿಲಿಗೆ ಬಾಡಿದ ಕೆಂಪು ದಾಸವಾಳದ ಮೊಗ್ಗಿನಂಥ ಸುಂದರ ಮೂರ್ತಿ ತನ್ನ ಹೃದಯದಲ್ಲಿ ಆಳವಾಗಿ ಹೂತಿದೆ ಎಂದು ಆತನಿಗೆ ಸ್ಪಷ್ಟವಾಯ್ತು.

'ಭವಾನಿ, ನಾನು ನಿನ್ನ ಸಹಾಯ ಯಾಚಿಸಿ ಬಂದಿದ್ದೇನೆ.'

'ನನ್ನ ಸಹಾಯ ನಿಮಗೆ? ಅದೆಂಥ ಸಹಾಯ? ನನಗೆ ನಂಬುವುದಕ್ಕೆ ಆಗುವುದಿಲ್ಲ' ಮೆತ್ತಗಿನ ಸ್ವರದಲ್ಲಿ ಅವಳು ಉತ್ತರಿಸಿದಳು.

'ನಾನು ಪದವಿನಲ್ಲಿದ್ದು ಊರಿಗೆ ಬೇಕಾದ ಸ್ವಲ್ಪ ಕೆಲಸ ಮಾಡುತ್ತೇನೆ. ಅದಕ್ಕೆ ನಿನ್ನಂಥ ಯುವಜನರ ಸಹಾಯ ಬೇಕು.'

'ಊರಿಗೆ ಅಗತ್ಯವಾದ ಕೆಲಸವನ್ನು ನೀನು ಕೂಡ ಈಗ ಮಾಡುತ್ತಲೇ ಇದ್ದೀಯಾ. ಬಡವರ ಬಡತನವನ್ನು ದೂರ ಮಾಡುವ ಕೆಲಸ. ನಾನು ಮಾಡುವುದು ಬುದ್ಧಿಯ ಬಡತನವನ್ನು ನಿವಾರಿಸುವುದಕ್ಕೆ ಬೇಕಾದ ಆಹಾರವನ್ನು ಕೊಡುವ ಕೆಲಸ. ಒಂದು ಕಟ್ಟಡ ಕಟ್ಟಿ ವಯಸ್ಸಾದವರಿಗೆ ಬೇಕಾದ ಸಹಾಯ ಮಾಡ್ತೇನೆ. ಸಂಜೆಯಾಗುವಾಗ ದಿನಪತ್ರಿಕೆ ಓದಿ ಲೋಕದಲ್ಲಿ ನಡೆಯುವ ವಿಷಯಗಳನ್ನು ತಿಳಿಸುವುದು. ಕೆಲಸಕ್ಕೆ ಹೋಗುವ ಬೀಡಿ ಕಟ್ಟುವ, ಬೇಸಾಯಕ್ಕೆ ಹೋಗುವ ಹೆಂಗಸರ ಚಿಕ್ಕ ಮಕ್ಕಳನ್ನು ನೋಡಿಕೊಳ್ಳಲು ಒಂದು ಕ್ರಷ್ ಮಾಡುವುದು, ವಾರದಲ್ಲಿ ಎರಡು ದಿನ ಡಾಕ್ಟರನ್ನು ಕರೆಸಿ ಮದ್ದು ಕೊಡಿಸುವುದು, ಕೃಷಿಗೆ ಬೇಕಾದ ಸಾಮಗ್ರಿ, ಗೊಬ್ಬರ ಮತ್ತು ಇತರ ಮಾಹಿತಿಗಳನ್ನು ತಿಳಿಸುವುದು. ಇಂಥ ಸಮಾಜಮುಖೀ ಕೆಲಸಗಳನ್ನೆಲ್ಲ ಮಾಡುವುದು. ದೂರದ ಊರಿಗೆ ಹೋಗಿ ಅಲ್ಲಿ ಈ ತರದ ಸಮಾಜಸೇವೆ ಮಾಡುವುದಕ್ಕಿಂತ ಅದನ್ನು ನಮ್ಮ ಊರಲ್ಲೇ ಮಾಡಿದರೇನೆಂದು ಯೋಚಿಸಿ ನಾನು ವಾಪಾಸು ಬಂದೆ. ನೀನೇನು ಹೇಳ್ತೀಯಾ?'

'ಯಾಕೆ ಮಾಡ್ಬಾರದು? ಹೀಗೆ ಮಾಡಿದರೆ ಊರಿಗೆ ಉಪಕಾರವಾಗುವುದು ಖಚಿತ.'

ಶಂಕರ ಮಾತನಾಡಲು ಶುರು ಮಾಡಿದಾಗ ಅವಳಿಗೆ ಮೊದಮೊದಲು ಅರ್ದಂಬರ್ಧ ಮನಸ್ಸಿಗೆ ಹೋಗುತ್ತಿತ್ತು. ಅವಳ ಬುದ್ಧಿ ಇನ್ನೂ ಅರೆಪ್ರಜ್ಞಾವಸ್ಥೆಯಲ್ಲೇ ಇತ್ತು. ಆತನ ಮಾತು ಸ್ವಲ್ಪ ಸ್ವಲ್ಪವಾಗಿ ಮನಸ್ಸಿಗೆ ಇಳಿಯುತ್ತಿದ್ದಂತೆ ಬುದ್ಧಿ ತಿಳಿಯಿತು. ಮಾತಿನ ಅರ್ಥ ಹೊಲಬಾಗತೊಡಗಿತು. 'ಇಂಥ ಕೆಲಸ ಮಾಡಲು ಒಂದು ನೆಲೆ ಬೇಕಲ್ಲ. ಅದೆಲ್ಲಿದೆ?'

'ನೀವು ನಮ್ಮ ತಾಯಿಗೆ ಈ ವಿಷಯ ತಿಳಿಸಿದ್ದೀರಾ?'

'ಹೌದು. ನಾನು ಗುತ್ತಿಗೆ ಹೋಗಿ ಅವರ ಜೊತೆ ಮಾತನಾಡಿಯೇ ಬಂದೆ. ನೀನು ಇಲ್ಲಿದ್ದೀಯಾಂತ ಹೇಳಿದ್ದು ಅವರೇ.'

'ಲೋಕಕ್ಕೆ ಉಪಕಾರವಾಗುವುದಾದರೆ ಬೇಕು ಅಥವಾ ಬೇಡ ಅನ್ನಲು ನಾನು

ಯಾರು? ನೀವು ಮಾಡುವ ಕೆಲಸ ಮಾಡಿ.'

'ನಿನ್ನ ಸಹಕಾರ ಇದೆಯಲ್ವಾ?'

'ನಾನು ಇದ್ದೇನೆಂದು ಹೇಳಿದೆನಾ? ನೀವು ಮಾಡುವುದು ಒಳ್ಳೆಯ ಕೆಲಸ ಅಂದೆ ಅಷ್ಟೆ. ನೀವು ಈಗ ಎಲ್ಲಿಂದ ಬರ್‍ತೀದ್ದೀರಿ? ಮೈಸೂರಿನಿಂದಲಾ?'

'ಮೈಸೂರಾ? ಮೈಸೂರಿನಿಂದ ಯಾಕೆ?'

'ನೀವು ಅರ್ಕಾವತಿಯ ಮನೆಯಲ್ಲಿದ್ದು ಬೆಳಿಗ್ಗೆ ಎದ್ದು ಹೋದಿರಿ ಎಂದು ನೀಲಯ ಆಚಾರಿ ಎಲ್ಲರಿಗೂ ಹೇಳಿದ.'

'ಆ ದಿನ ನಿನ್ನನ್ನು ದರೆ ದಾಟಿಸಿ ನಾನು (ಭವಾನಿಯ ಮುಖ ಆ ದಿನದ ಘಟನೆಯನ್ನು ನೆನಸಿ ಕೆಂಪಾಯ್ತು) ಅರ್ಕಾವತಿಯ ಮನೆಗೆ ಹೋದೆ ನಿಜ. ಆದರೆ ಅರ್ಕಾವತಿಯನ್ನು ನೋಡಲು ಅಲ್ಲ. ಆ ದಿನ ಆ ಮಧ್ಯರಾತ್ರಿಯಲ್ಲಿ ತ್ಯಾಂಪಣ್ಣ ಸಾಮನಿಯವರ ಮನೆಗೆ ಹೋದರೆ ಅವರು ಕೇಳುವ ಪ್ರಶ್ನೆಗಳಿಗೆಲ್ಲ ಉತ್ತರ ಹೇಳಬೇಕು. ಹಾಗಾಗುವುದು ಬೇಡವೆಂದು ನಾನು ಹತ್ತಿರದ ನೀಲಯ್ಯ ಆಚಾರಿಯ ಮನೆಗೆ ಹೋದೆ. ಅವನಿಂದ ಮಾಡಿಸಬೇಕಾದ ಸ್ವಲ್ಪ ಕೆಲಸವೂ ಇತ್ತು. ಅವನನ್ನು ಮಂಗಳೂರಿಗೆ ಬರಲು ಹೇಳಿ ಅವನಿಗೆ ಆ ಕೆಲಸ ಒಪ್ಪಿಸಿ ಎಂಟು ದಿನವಿದ್ದು ಮಂಗಳೂರಿನಿಂದ ಹೋದೆ. ಅದನ್ನೆಲ್ಲ ಅವನು ಹೇಳಿಲ್ವಾ? ಈಗ ಅರ್ಕಾವತಿ ಮೈಸೂರಿನಲ್ಲಿದ್ದಾಳೆಂಬ ವಿಚಾರ ನೀನು ಹೇಳಿದಾಗಲೇ ಗೊತ್ತಾದದ್ದು. ಅರ್ಕಾವತಿ ಮೈಸೂರಿನಲ್ಲಿದ್ದರೆ ನಾನೇಕೆ ಅಲ್ಲಿರಬೇಕು? ನೀನ್ಯಾಕೆ ಅದನ್ನು ನನ್ನ ಹತ್ತಿರ ಕೇಳುವುದು?' (ಈಗ ಪುನಃ ಭವಾನಿಯ ಮುಖ ಕೆಂಪಾಯ್ತು).

ಶಂಕರನಿಗೆ ಒಳಗಿಂದೊಳಗೇ ನಗುಬಂತು. ಶೇಕ್ಸ್‌ಪಿಯರ್ ಮಹಾಶಯ ಸುಮ್ಮನೆ ಹೇಳಿಲ್ಲ, 'ಜೆಲಸೀ ದೈ ನೇಮ್ ಈಸ್ ವೂಮನ್' ಅಂತ. ಆದರೆ ಅದನ್ನು ಬಾಯಲ್ಲಿ ಹೇಳಲಿಲ್ಲ. ಮನಸ್ಸಿನಲ್ಲಿ ಯೋಚಿಸಿದ.

ಭವಾನಿ ಬಾಯಿಬಿಟ್ಟು ಹೇಳಲಿಲ್ಲ. ಆದರೆ ಶಂಕರ ಅರ್ಕಾವತಿಯ ಬಳಿಗೆ ಹೋದರೆ ಅವಳ ಮನಸ್ಸಿಗೆ ಎಷ್ಟು ನೋವಾದೀತೆಂದು ವ್ಯಕ್ತಪಡಿಸಿದಳು. ಆತ ಮುಗುಳ್ನಗುತ್ತ ಅವಳ ಮುಖವನ್ನು ನೋಡಿದಾಗ ತನ್ನ ಮನಸ್ಸಿನ ಇಂಗಿತವನ್ನು ಅವನಿಗೆ ತೋರಿಸಿದೆನೇ ಎಂದು ಅವಳಿಗೆ ನಾಚಿಕೆಯಾಯ್ತು. ಅದರ ಬೆನ್ನಿಗೆ ಅವಮಾನವೂ ಆಯ್ತು. ಅವಳ ಅವಸ್ಥೆಯನ್ನು ನೋಡಿ ಅವನಿಗೆ ಖುಷಿ. ಪಾಪ, ನನ್ನ ಹುಡುಗಿ ಸಿಕ್ಕಿಬಿದ್ದಳೆಂದು; ಒಡಲಿನಲ್ಲಿ ಸಾಮಿಪ್ಯದ ಭಾವ ಕೂಡ ಕಾಣಿಸಿತು... ಅವಳನ್ನು ಸತಾಯಿಸುವುದು ಬೇಡವೆನಿಸಿತು.

'ಭವಾನಿ, ಅದಿರಲಿ. ನೀನು ನನ್ನ ಮೇಲೆ ಅಷ್ಟು ದಯೆ ಇಟ್ಟಿದ್ದೀಯಲ್ಲ. ಅದೇ ಸಾಕು. ಅರ್ಕಾವತಿಗೂ ನನಗೂ ಯಾವ ಸಂಬಂಧವೂ ಇಲ್ಲ. ನಿನಗೆ ಅಷ್ಟು ಸಮಾಧಾನ ಹೇಳಿದರೆ ಸಾಕಾ?'

ಭವಾನಿ ಮೌನ. ಅವಳ ಕೈ ಮೇಜಿನ ಬದಿಯನ್ನು ಒತ್ತಿ ಹಿಡಿದಿತ್ತು. ಶಂಕರ ಆ

ಕೈಯನ್ನು ಬಿಡಿಸಿ ತನ್ನ ಎರಡೂ ಕೈಗಳ ಮಧ್ಯೆ ಹಿಡಿದು ಹೇಳಿದ 'ನಾಳೆ ಬರ್ತೇನೆ. ಕೆಲಸ ಆರಂಭಿಸುವ. ಈಗ ತ್ಯಾಂಪಣ್ಣ ಸಾಮನಿಗೆ ವಿಷಯ ತಿಳಿಸಿ ಬರಬೇಕು. ಹಾಗಂತ ಪದ್ಮಣ್ಣ ಹೇಳಿದ್ದಾರೆ.'

'ನೀವು ಪದ್ಮನಾಭ ಭಾವನ ಹತ್ತಿರ ಹೋದಿರಾ?' ಭವಾನಿಯ ಮಾತು ತಡವರಿಸುತ್ತಿತ್ತು.

'ಪದ್ಮಣ್ಣನ ಒಪ್ಪಿಗೆ ಮತ್ತು ಆಶೀರ್ವಾದ ಪಡೆದುಕೊಂಡು ಬಂದೆ. ಈಗ ಸಮಾಧಾನ ಆಯ್ತಾ?'

ಇಷ್ಟು ಹೊತ್ತು ಅವನ ಮುಖ ಕಣ್ಣುಗಳನ್ನು ನೋಡಲು ಹಿಂಜರಿಯುತ್ತಿದ್ದವಳು ಈಗ ತಲೆಯೆತ್ತಿ ಅವನ ಮುಖದತ್ತ ನೋಡಿ ಮುಗುಳ್ನಕ್ಕಳು. ಹೂವಿನ ಚೆಂಡನ್ನು ಹಿಡಿದಂತಿದ್ದ ಅವನ ಕೈಯಿಂದ ತನ್ನ ಕೈಗಳನ್ನು ಬಿಡಿಸಿಕೊಂಡಳು. ಯಾರಾದರೂ ಪಕ್ಕನೆ ಒಳಗೆ ಬಂದು ನೋಡಿದರೆ!

ಶಂಕರನ ಕೆಲಸ ಬೇಗನೆ ಆರಂಭವಾಯ್ತು. ಅಂತಕ್ಕನ ಸಂಪೂರ್ಣ ಬೆಂಬಲ ಅವನಿಗೆ ದೊರಕಿದ್ದು ಕೆಲಸವನ್ನು ಮುಂದುವರಿಸಲು ಸುಲಭವಾಯ್ತು. ಕೆಲವು ದಿನಗಳಲ್ಲಿ ತಿರುಮಣ್ಣಾಮಲೆಗೆ ಹೋಗಿದ್ದ ಮೈಂದಣ್ಣ ಅಲ್ಲಿಂದ ತಿರುಚಿಗೆ ಬಂದು ಕಾಲಡಿಯಲ್ಲಿ ಶಂಕರಾಚಾರ್ಯರ ತಂದೆ ತಾಯಿಯ ಊರು, ಮನೆ, ಸಮಾಧಿಗಳನ್ನು ನೋಡಿ ಹಿಂತಿರುಗಿದ. ಶಂಕರಾಚಾರ್ಯರು ತಮ್ಮ ತಾಯಿಯ ಸಾವಿನ ಸುದ್ದಿಯನ್ನು ಕೇಳಿ ಹಿಮಾಲಯದಲ್ಲಿದ್ದವರು ತಾಯಿಯ ಅಂತ್ಯಸಂಸ್ಕಾರವನ್ನು ಮಾಡುವುದು ತಮ್ಮ ಕರ್ತವ್ಯವೆಂದು ತಿಳಿದು ಹೇಗೆ ಅಲ್ಲಿಂದ ಆತುರಾತುರವಾಗಿ ಊರಿಗೆ ಬಂದರೆಂಬುದನ್ನು ಕೇಳಿದ ಮೈಂದಣ್ಣನ ಮನಸ್ಸಿಗೆ ತಾನು ಏನೋ ತಪ್ಪಾಗಿ ನಡೆಯುತ್ತಿದ್ದೇನೆಂಬ ಭಾವನೆ ಎಲ್ಲೋ ಆಳದಲ್ಲಿ ಕೊರೆಯತೊಡಗಿತು. ಹಾಗಾಗಿ ಕಾಲಡಿಯಿಂದ ತಿರುಪ್ಪೂರಿಗೆ ಬಂದವನು ಸೀದಾ ಮಂಗಳೂರಿಗೆ ಮುಖ ಹಾಕಿದ. ಮಂಗಳೂರಲ್ಲಿ ನಿಲ್ಲದೆ ಬೊಳ್ಳೂರಿಗೇ ಬಂದ. ಬಂದವನಿಗೆ ಶಂಕರನನ್ನು ನೋಡಿ ಆಶ್ಚರ್ಯವಾಯ್ತು. ಈ ಮಾರಾಯ ಮತ್ತೇಕೆ ಬಂದ?

ಮೈಂದಣ್ಣ ಬಂದ ಮೇಲೆ ಭವಾನಿಗೂ ಉಸಿರುಬಿಡಲು ಸಾಧ್ಯವಾಯ್ತು. ಅಂತಕ್ಕನ ಮನಸ್ಸಿಗೂ ತುಂಬ ಧೈರ್ಯ ಬಂತು.

ಶಂಕರ ಊರಿಗೆ ಬಂದವನು ಸೀದಾ ಕಾಂತಪ್ಪ ಪಟೇಲರಲ್ಲಿಗೆ ಹೋದ. ತನ್ನ ಸಮಾಜಹಿತ ಕಾರ್ಯಕ್ರಮಗಳ ಪಟ್ಟಿಯನ್ನು ಹೇಳಿ ಪದವಿನ ಹದಿನೈದು ಸೆಂಟ್ಸ್ ಜಾಗದಲ್ಲಿ ಮಾಡಲಿರುವ ಸಂಗತಿಯನ್ನು ತಿಳಿಸಿದ. ಅಂತಕ್ಕನ ಮತ್ತು ಪದ್ಮನಾಭ ಸಾಮನಿಯ ಒಪ್ಪಿಗೆಯನ್ನೂ ಮನದಟ್ಟು ಮಾಡಿಸಿದ.

ಕಾಂತಣ್ಣ ಅಲ್ಲಿಗೇ ನಕ್ಕು ಹೇಳಿದರು, 'ಶಂಕರಾ, ನಿನ್ನ ಆಲೋಚನೆಗಳು ಚೆನ್ನಾಗಿವೆ. ಆದರೆ ಈಗ ಸರಕಾರದ ಒಂದು ಕಾನೂನು ಅದಕ್ಕೆ ತಡೆಯಾಗಿ ನಿಂತಿದೆ. ಎಲ್ಲೆಲ್ಲಿ ಕುಷ್ಕಿ ಭೂಮಿ ಇದೆಯೋ ಅದನ್ನೆಲ್ಲ ಗೋಮಾಳವೆಂದು ಹೇಳಿ ಭೂಮಾಲೀಕರು ಅವುಗಳನ್ನು

ತಮ್ಮ ಸುಪರ್ದಿಯೊಳಗೇ ಇಟ್ಟುಕೊಂಡಿದ್ದಾರೆ. ಅದನ್ನೆಲ್ಲ ಪಟೇಲರು ಭೂಮಾಪನ ಇಲಾಖೆಗೆ ತಿಳಿಸಬೇಕು. ಒಂದು ವೇಳೆ ಜಮೀನ್ದಾರರು ತೀರ್ವೆ ಕಟ್ಟುತ್ತೇವೆ ಎಂದು ಚರ್ಚೆ ಮಾಡಿದರೆ ಆ ಜಾಗದ ಸರ್ವೆ ನಂಬರು, ತೀರ್ವೆ ಕಟ್ಟಿದ ರಸೀದಿಯನ್ನು ಹಾಜರು ಪಡಿಸಬೇಕೆಂದು ಸರಕಾರದಿಂದ ಆದೇಶಪತ್ರ ಬಂದಿದೆ.'

'ಹಾಗಿದ್ದರೆ ಅದಕ್ಕೇನಾದರೂ ಪರಿಹಾರದ ದಾರಿ ಇಲ್ಲವೇ ಪಟೇಲರೇ?'

'ಸರಕಾರದ ಎಲ್ಲ ಕಾನೂನುಗಳನ್ನೂ ಮೀರುವ ಏನಾದರೂ ಉಪಾಯ ಜನರ ಹತ್ತಿರ ಇರುತ್ತದೆ. ಅಲ್ವೇ ಪಟೇಲರೇ?'

'ಅದು ನಿಜ. ಇಲ್ಲವೆಂದರೆ ನಿನ್ನಂಥ ಬುದ್ಧಿವಂತನ ಮುಂದೆ ನಡೆದೀತಾ? ನಿನ್ನ ಮಾತಿನ ವರಸೆ ನೋಡಿದರೆ ಅದೆಲ್ಲ ನಿನಗೆ ಗೊತ್ತಿದೆ ಅನ್ನಿಸುತ್ತದೆ. ಆಗಲಿ ಶಂಕರಾ, ಅದನ್ನೆಲ್ಲ ಆಲೋಚನೆ ಮಾಡಿ ತಯಾರಿ ಮಾಡಿ ಆದಷ್ಟು ಬೇಗ ಬಾ. ದಿನ ತಳ್ಳಿದರೆ ಕಾರ್ಯ ಕೆಡುತ್ತದೆ. ಏನು?'

ಪಟೇಲರದು ಭಾರಿ ನರಿಬುದ್ಧಿಯೆಂದು ಶಂಕರ ಯೋಚಿಸಿದ. ಪಟೇಲರ ಮನೆಯಿಂದ ನೆಟ್ಟಗೆ ಸಾಮನಿಯವರ ಮನೆಗೆ ಬಂದ. ನೀಲಯ್ಯ ಆಚಾರಿಯ ಮನೆಯ ಪಕ್ಕದ ಗದ್ದೆ ಬದುವಿನಲ್ಲಿ ಬರುತ್ತಿದ್ದಾಗ ಆಚಾರಿ ಮನೆಯ ಮುಂದಿನ ಜಗಲಿಯಲ್ಲಿ ಕುಳಿತಿರುವುದು ಕಾಣಿಸಿತು.

ಶಂಕರ ಬದುವಿನಿಂದ ಅಂಗಳಕ್ಕೆ ಇಳಿದ. 'ಹೋಯ್ ಆಚಾರಿ' ಅಂದ. ನೀಲಯ್ಯ ಆಚಾರಿ ತಲೆಯೆತ್ತಿ ನೋಡಿದ. ಸಂತೋಷದಿಂದ ಅವನ ಮುಖ ಅರಳಿತು. 'ಹೋ, ಶಂಕರಣ್ಣನವರು, ಬನ್ನಿ, ಬನ್ನಿ. ಬಡವನ ಮನೆಗೆ ಭಾಗೀರತಿ ಬಂದ ಹಾಗಾಯ್ತು' (ತಾಳಮದ್ದಲೆಯ ಗತ್ತು ಆಚಾರಿಗೆ ಮೊದಲೇ ಇತ್ತು).

ಶಂಕರ ಆಚಾರಿಯನ್ನು ಗಮನವಿಟ್ಟು ನೋಡಿದ. ಎಲುಬು ಮತ್ತು ಮೂಳೆಯ ಹಂದರವಾಗಿದ್ದ ಆತ. ಪಕ್ಕದಲ್ಲೇ ಒಂದು ದಪ್ಪದ ಕೋಲು ಜಗಲಿಗೆ ಒರಗಿಸಿಟ್ಟಿದ್ದ. ಆತನ ಸ್ಥಿತಿಗತಿ ಏನೂ ಚೆನ್ನಾಗಿಲ್ಲವೆಂದು ಅದರಿಂದಲೇ ಗೊತ್ತಾಗುತ್ತಿತ್ತು. 'ಏನಾಯ್ತು ಆಚಾರಿ? ತುಂಬ ಸೊತುಹೋದಂತೆ ಕಾಣಿಸ್ತಿದ್ದೀ?'

'ಏನು ಹೇಳಲಿ ಅಣ್ಣ, ಒಂದೂವರೆ ವರ್ಷದಿಂದ ಈ ಗತಿ ಬಂದಿದೆ.'

'ಏನಾಯ್ತು?'

'ಜಾರಿ ಬಿದ್ದು ಸೊಂಟ ಉಳುಕಿತು. ದುಡಿದು ತಿನ್ನುವುದಕ್ಕೂ ಕಷ್ಟವಾಗ್ತಿದೆ. ಮಗಳೂ ಇಲ್ಲ. ನಾನೊಂದು ಪ್ರೇತ ಆಗಿದ್ದೇನೆ. ಈಗ ಉಣ್ಣುವುದಕ್ಕೂ ತತ್ವಾರವಾಗಿದೆ.'

'ಏನಾಯ್ತು ನಿನಗೆ?'

'ಎರಡು ಮೂರು ವರ್ಷದಿಂದ ತೋಡು ತುಂಬಿ ಪ್ರವಾಹದ ನೀರು ಗದ್ದೆ ಬದುವಿನಿಂದ ಮಗುಚಿ ಮನೆಯೊಳಗೇ ಬರುತ್ತಿತ್ತು. ತೋಡಿನಲ್ಲಿ ಮರಳು ತುಂಬಿದ್ದರಿಂದ ಹಾಗಾಯ್ತೆಂದು ನಾಲ್ಕು ಜನ ಆಳುಗಳನ್ನು ಸೇರಿಸಿ ಮರಳು ತೆಗೆಸಿದೆ. ಇಬ್ಬರು ಗಂಡಾಳುಗಳು ತೋಡಿನಿಂದ ಮರಳು ಅಗೆದು ಕೊಡುವುದು ಇಬ್ಬರು ಹೆಣ್ಣಾಳುಗಳು

ತುಂಬಿ ಅದನ್ನು ಬದುವಿಗೆ ಹಾಕುವುದು. ರಾಶಿಯನ್ನು ಒಂದೇ ಮಟ್ಟಕ್ಕೆ ಹಾಕಿದ್ದಾರಾ ಎಂದು ನೋಡಲು ನಾನು ಆ ಮರಳ ರಾಶಿಯ ಮೇಲೆ ಹತ್ತಿದೆ. ರಾಶಿ ಕುಸಿದು ದಡಾರನೆ ಜಾರಿ ತೋಡಿಗೆ ಬಿದ್ದೆ. ಸೊಂಟ ಉಳುಕಿತು. ಎರಡು ಮೂರು ತಿಂಗಳು ಮಂಗಳೂರಿನ ಧರ್ಮಾಸ್ಪತ್ರೆಯಲ್ಲಿ ಇದ್ದೆ. ಬೇಕಾದಷ್ಟು ಸಹಾಯವನ್ನು ಮೈಂದಣ್ಣನೂ ಪಟೇಲರೂ ಮಾಡಿದರು. ಕಾಲು ಮಾತ್ರ ಮೊದಲಿನಂತೆ ಆಗಲಿಲ್ಲ. ಕೆಲಸ ಮಾಡಿ ತಿನ್ನಲು ಆಗುವುದಿಲ್ಲ.'

'ಅಯ್ಯೋ ಮಾರಾಯ ನಿನ್ನ ಶನಿಯೇ! ಮಗಳಿಗೆ ತಿಳಿಸಲಿಲ್ಲವೇ?'

'ಅಣ್ಣ, ಗುತ್ತಿನಲ್ಲಿ ನಡೆದ ಆ ರಣರಂಗದ ಬಳಿಕ ಅವಳು ಸರಿಯಾಗಲೇ ಇಲ್ಲ. ಅಲ್ಲಿಂದ ಒಂದು ಇಪ್ಪತ್ತು ಮೂವತ್ತು ದಿನ ಕಳೆದಾಗ ನಾನು ಮೈಸೂರಿಗೆ ಹೋಗುತ್ತೇನೆ, ಈ ಊರು ನನಗೆ ಹಿಡಿಸುವುದಿಲ್ಲ ಅಂತ ಹೇಳಿ ಮೈಸೂರಿಗೆ ಹೋದಳು. ಆಮೇಲೆ ಒಂದು ಪತ್ರವಾಗಲೀ ಸುದ್ದಿಯಾಗಲೀ ಅವಳಿಂದ ಬರಲಿಲ್ಲ. ನನ್ನ ಈ ದುರ್ದಶೆಯನ್ನು ತಿಳಿಸಬೇಕೆಂದರೂ ಅವಳ ಸುದ್ದಿ ಸುಳಿವು ಯಾವುದೂ ಇಲ್ಲ.

'ಛೆ.. ಛೆ.. ಏನು ಮಾಡುವುದು. ಈ ಕಾಲದಲ್ಲಿ ಮನುಷ್ಯರು ಹೀಗೆಯೇ ಮಾಡುತ್ತಾರೆಂದು ಹೇಳಲು ಬರುವುದಿಲ್ಲ.... ಏನಾದರೂ ಆದದ್ದು ಆಯ್ತು. ಇರುವುದಕ್ಕೆ ನಿನ್ನದೆಂದು ಒಂದು ಮನೆಯಾದರೂ ಇದೆ. ದಿನ ಕಳೆಯಲು ಒಂದಷ್ಟು ಜಮೀನಿದೆ.'

'ಅಯ್ಯೋ ಅಣ್ಣ, ಈ ಜಾಗದ ಧೈರ್ಯ ನನಗಿಲ್ಲ. ನನ್ನದೂಂತ ಬಾಯಲ್ಲಿ ಹೇಳಬಹುದು. ಆದರೆ ಒಂದು ರೆಕಾರ್ಡ್ ಆಗಲಿ, ತೀರ್ವೆ ಕಟ್ಟಿದ ಒಂದು ಚೂರು ರಶೀದಿಯಾಗಲೀ ನನ್ನ ಹತ್ತಿರ ಇಲ್ಲ. ಊರಿನಲ್ಲಿರುವ ಎಲ್ಲ ಕುಷ್ಕಿ ಮತ್ತು ಗೋಮಾಳದ ಜಾಗಕ್ಕೆ ಅರ್ಜಿ ಹಾಕಲು ಸರಕಾರ ಹೇಳುತ್ತಿದೆಯಂತೆ. ಈ ಜಾಗ ಬಂಜರು ಭೂಮಿಯೇನಲ್ಲ. ಕೃಷಿಭೂಮಿ. ನನ್ನ ಅಜ್ಜ ಪಿಜ್ಜನ ಕಾಲದಲ್ಲಿ ಕಾಂತಣ್ಣ ಬಂಗೇರ ಎನ್ನುವ ಈಗಿನ ಚೌಟರ ಪಿಜ್ಜ ಇದ್ದರಂತೆ. ಅವರ ಹತ್ತಿರ ನನ್ನ ಪಿಜ್ಜ ಬೇಡಿಕೆ ಸಲ್ಲಿಸಿ ಈ ಜಾಗದಲ್ಲಿ ಗುಡಿಸಲು ಕಟ್ಟಿದರಂತೆ. ಸುತ್ತು ಮುತ್ತ ಇದ್ದ ಏರು ತಗ್ಗುಗಳನ್ನು ಸರಿಮಾಡಿ ಎರಡು ಭಾಗ ಕೊಲೆಂಜಿ ಗದ್ದೆ ಮಾಡಿ ಕಷ್ಟಪಟ್ಟು ದುಡಿದರು. ಹತ್ತಿರದ ಎತ್ತರದ ಜಾಗದಲ್ಲಿ ಪಿಜ್ಜ ಹತ್ತು ಮೂವತ್ತು ಕಂಗಿನ ಗಿಡ ನೆಟ್ಟರು. ಮನೆಯ ಸುತ್ತಲೂ ಹತ್ತು ತೆಂಗಿನ ಗಿಡ ನೆಟ್ಟರು. ಅದಾದ ಬಳಿಕ ನನ್ನ ತಾತ ಮತ್ತೆ ಸ್ವಲ್ಪ ಕಂಗು, ತೆಂಗು ಮತ್ತು ಬಾಳೆಗಳನ್ನು ಸೇರಿಸಿದರು. ಕೃಷಿ ಮಾಡಿದರು. ರಾತ್ರಿ ಹಗಲು ಜೀವ ತೇದರು. ಕಾಂತಣ್ಣ ಬಂಗೇರರು ಗೇಣಿ ಕೇಳಲಿಲ್ಲ. ಆದರೆ ಆತನ ಅಳಿಯ ತುಕ್ರ ಮಾಡರು 'ಗೇಣಿ ಕೊಡಬೇಕು ಆಚಾರಿ, ತೀರ್ವೆಯ ಬಾಬ್ತಾದರೂ ಧನಿಗಳಿಗೆ ಬರಬೇಕು' ಎಂದರಂತೆ. ಹಾಗಾಗಿ ನನ್ನ ಅಜ್ಜ ಚಂದ್ರಯ್ಯ ಆಚಾರಿ ವರ್ಷಕ್ಕೆ ಎರಡು ಹಣದಂತೆ ತೀರ್ವೆಯ ಬಾಬ್ತು, ಹತ್ತು ತೆಂಗಿನಕಾಯಿ ಮತ್ತು ಹಲಸಿನ ಕಾಯಿಗಳನ್ನು ಲಾಗಾಯ್ತಿನಿಂದ ಸಲ್ಲಿಸುತ್ತಲೇ ಬಂದಿದ್ದಾರೆ. ಅಲ್ಲದೆ ಎರಡು ಹಲಸಿನ ಕಾಯಿ ಮತ್ತು ಸ್ವಲ್ಪ ತರಕಾರಿ ಒಂದು ಕಳಸೆ ಬೆಳ್ತಿಗೆ ಅಕ್ಕಿಯನ್ನು ವಿಷುಕಣಿಯಂದು ತಂದುಕೊಡುತ್ತಿದ್ದರಂತೆ.'

'ನನ್ನ ಕಾಲದಲ್ಲಿ ಅಣ್ಣ, ನಾನು ಇಪ್ಪತ್ತೈದು ರೂಪಾಯಿ, ಹತ್ತು ತೆಂಗಿನಕಾಯಿ ಕೊಡುತ್ತೇನೆ. ತರಕಾರಿ ಮಾಡುವುದಿಲ್ಲ. ಕೊಲೆಂಜಿ ಸಾಗುವಳಿ ಇಲ್ಲ ಸ್ವಲ್ಪ ಹೆಚ್ಚು ಕಂಗು ನೆಟ್ಟಿದ್ದೇನೆ. ಅದು ಏನೂ ಫಲ ಬಿಡಲಿಲ್ಲ. ನನಗೇ ಉಣ್ಣಲು ಅನ್ನ ಇಲ್ಲ. ನಾನು ಗೇಣಿ ಕೊಡುವುದು ಹೇಗೆ?'

ಯಾರೋ ನನಗೆ ಹೇಳಿದರು, 'ನೀನು ಡಿಕ್ಲರೇಷನ್ ಕೊಡು. ನೀನು ಸಾಗುವಳಿ ಮಾಡುವ ಈ ಭೂಮಿಯನ್ನು ಕಾಂಗ್ರೆಸ್ ಸರಕಾರ ನಿನಗೇ ಮಾಡಿಸಿ ಕೊಡುತ್ತದೆ ಅಂತ.'

ಅದು ಎಲ್ಲಿಗೆ ಹೋಗಿ ಕೊಡಬೇಕು ಅಣ್ಣ? ನನ್ನ ಮಗಳು ಮೈಸೂರಲ್ಲಿದ್ದಾಳಂತೆ. ಅವಳನ್ನೊಮ್ಮೆ ಇಲ್ಲಿಗೆ ಬರಹೇಳಲು ಸಾಧ್ಯವೇ? ನೀವು ಅಷ್ಟು ಮಾಡಿ ಪುಣ್ಯ ಕಟ್ಟಿಕೊಳ್ಳಿ. ನೀವು ಮಂಗಳೂರಿನಲ್ಲಿ ನನಗೊಂದು ಕೆಲಸ ಕೊಡಿಸಿ ಉಣ್ಣುವ ದಾರಿ ತೋರಿಸಿದಿರಿ. ಇನ್ನು ನನ್ನ ಮಗಳಿಗೊಂದು ಸುದ್ದಿ ತಲಪಿಸಿ ಇದೊಂದು ಉಪಕಾರವನ್ನೂ ಮಾಡಿಬಿಡಿ.'

ಶಂಕರ ಮನಸ್ಸಿನಲ್ಲೇ ಯೋಚಿಸಿದ, ಆ ದಿನ ನನ್ನ ಮಾರ್ಯಾದೆಯನ್ನೂ ರಹಸ್ಯವನ್ನೂ ಕಾಪಾಡುವ ಸಲುವಾಗಿ ಮಾತ್ರವಲ್ಲದೆ ಓರ್ವ ಪ್ರಾಯದ ಹೆಣ್ಣುಮಗಳ ಜೀವ ಮತ್ತು ಅವಳ ಜೀವನದ ಮುಂದಿನ ಹಾದಿಯನ್ನು ಸುಗಮಗೊಳಿಸಲು ನಿನ್ನ ಮನೆಯ ಜಗಲಿಯ ಆಶ್ರಯ ಪಡೆದೆ. ಅದಕ್ಕೆ ಏನಾದರೂ ಉಪಕಾರ ಮಾಡಬೇಕೆಂಬ ಕಾರಣಕ್ಕೆ ನಿನಗೆ ಮಂಗಳೂರಿನ ಸಮುದಾಯ ಭವನದ ಬಾಗಿಲು ಕಿಟಿಕಿಗಳನ್ನು ಮಾಡಲು ಕಾಂಟ್ರೇಕ್ಟ್ ಕೊಡಿಸಿದೆ. ನೀನು ಅದನ್ನೇ ದೊಡ್ಡ ಉಪಕಾರ ಅಂತ ಹೇಳುತ್ತಿದ್ದೀಯಾ.

ಆತ ಆಚಾರಿಗೆ ಹೇಳಿದ.

'ಆಚಾರಿ, ಮೈಸೂರಿಗೆ ಹೋಗುವವರು ಯಾರಾದರೂ ಸಿಕ್ಕಿದರೆ ನಿನ್ನ ಮಗಳಿಗೆ ಸುದ್ದಿ ಮುಟ್ಟಿಸಲು ಹೇಳುತ್ತೇನೆ. ನೀನು ತುಂಬ ಇಕ್ಕಟ್ಟಿನಲ್ಲಿದ್ದಿಯಾ ಎಂಬುದನ್ನೂ ಅವಳಿಗೆ ತಿಳಿಸುವ ವ್ಯವಸ್ಥೆ ಮಾಡುತ್ತೇನೆ. ಆಮೇಲೆ ನೀನಿರುವ ಜಾಗಕ್ಕೆ ಡಿಕ್ಲರೇಷನ್ ಕೊಡುವ ವಿಷಯ... ನೀನು ವಂಶಪಾರಂಪರ್ಯವಾಗಿ ಈ ನೆಲೆಯಲ್ಲಿದ್ದೀಯಾ. ಅಲ್ಲದೆ ನಿನ್ನ ಅಜ್ಜ ಪಿಜ್ಜ ಮಾಡಿದ ಕೃಷಿ ಕಣ್ಣಿಗೆ ಕಾಣುತ್ತದೆ. ನೀನು ಡಿಕ್ಲರೇಷನ್ ಕೊಡುವುದರಲ್ಲಿ ಯಾವ ತಪ್ಪೂ ಇಲ್ಲ. ಅದಕ್ಕೆ ನಿನ್ನ ಧನಿಗಳೂ ಆಕ್ಷೇಪಿಸಲಾರರು.'

'ಅಣ್ಣನವರೇ, ಧನಿಗಳು ಮಾಡಲಾರರು. ಅವರ ಚಿಕ್ಕ ಮಗಳಿಗೆ ಈ ವಿಷಯ ಗೊತ್ತಾದರೆ ಯಾವ ತಕರಾರೂ ಮಾಡಲಾರರು. ತಾಯಿಯನ್ನು ತಡೆಯುತ್ತಾರೆ. ತುಂಬ ಒಳ್ಳೆಯ ಹೆಣ್ಣುಮಗಳು ಆಕೆ.'

ಶಂಕರ ನಕ್ಕು ಹೇಳಿದ, 'ಒಳ್ಳೆಯ ಹೆಣ್ಣುಮಗಳೇ ಆಚಾರಿ. ಆದರೆ ಕೋಪ ಮಾತ್ರ ಮೂಗಿನ ತುದಿಯಲ್ಲಿ. ಅಲ್ವೇ?'

'ಛೆ..ಛೆ.. ಅದೆಲ್ಲ ಹಿಂದೆ. ಕಳೆದುಹೋದ ಸಂಗತಿ. ಈಗ ಭಾರೀ ಸಮಾಧಾನ, ಎಲ್ಲವನ್ನೂ ತಿಳಿದುಕೊಂಡಿರುವ ಹುಡುಗಿ. ಮೊನ್ನೆ ಮೊನ್ನೆ ನಾನು ರೇಷನ್ ತರಲು

ಹೋಗಿದ್ದೆ. ನಾಲ್ಕು ಕಿಲೋ ಅಕ್ಕಿ, ಗೋದಿ, ರಾಗಿ, ತೊಗರಿಬೇಳೆ ಎಲ್ಲ ಹೆಚ್ಚಾಗಿಯೇ ಕೊಟ್ಟರು. ಹೊಟ್ಟೆಗಿಲ್ಲದೆ ಒಬ್ಬನೇ ಬಿದ್ದು ಸಾಯಬೇಡ. ಯಾರ ಹತ್ತಿರವಾದರೂ ಹೇಳಿ ಕಳುಹಿಸಿದರೆ ಅಕ್ಕಿ ಗೋದಿ ಕೊಡುತ್ತೇನೆ ಅಂದರು.'

ಶಂಕರ ಎದ್ದು ನಿಂತು ಹೇಳಿದ, 'ಆಯ್ತು, ಆಚಾರಿ, ಇನ್ನೊಮ್ಮೆ ಮಾತನಾಡುವ..'

ಆದರೆ ಆಚಾರಿಯ ಪ್ರವರ ಇನ್ನೂ ಮುಗಿಯಲಿಲ್ಲ.

'ಹೌದಾ ಅಣ್ಣ, ಯಾವುದೋ ವಿಷ ಗಳಿಗೆಯಲ್ಲಿ ಆಗಬೇಕಾದ ರಣರಂಗ ಆಯ್ತು... ಈ ಭೂಮಿಯ ಋಣ ತೀರಿದವರು ಎದ್ದು ಹೊರಟುಹೋದರು... ಏನು ಮಾಡುವುದು... ಆದರೂ ಆ ಬಂಗಾರದ ಹೆಣ್ಣಿನ ಮುಖದ ಕಪ್ಪು ಇನ್ನೂ ಮಾಯಲಿಲ್ಲ. ಕಂಕಣ ಭಾಗ್ಯ ಕೂಡಿ ಬರಲಿಲ್ಲ. ಕತ್ತಿಗೆ ಮಾಂಗಲ್ಯ ಸೂತ್ರ ಕಟ್ಟಿಸಿಕೊಳ್ಳಲಿಲ್ಲ. ನನಗೆ ಯೋಚಿಸುವಾಗಲೇ ತುಂಬ ಬೇಸರವಾಗ್ತದೆ.'

'ಮದುವೆ ಮುಹೂರ್ತ ಕೂಡಿ ಬಂದರೆ ಯಾವುದೂ ಅದನ್ನು ತಡೆಯದು. ಮದುವೆ ಆಗಿಯೇ ಆಗುತ್ತದೆ. ನಿನ್ನಂಥ ವಯಸ್ಸಾದವರು ಒಳ್ಳೆಯ ಮನಸ್ಸಿನಿಂದ ಆಶೀರ್ವಾದ ಮಾಡಿದರೆ ಯಾಕೆ ಬೇಗನೆ ಆಗಬಾರದು?.. ಯಾವುದಕ್ಕೂ ಸಮಯ ಕೂಡಿಬಂದಿಲ್ಲ. ಮದುವೆ ಆಗುತ್ತದೆ ಆಚಾರಿ. ನೀನೇನು ಅದಕ್ಕೆ ಬೇಸರ ಮಾಡುವುದು ಬೇಡ.'

'ಬೇಗ ಆಗಲಿ ಅಣ್ಣಾವ್ರೇ, ನಾನೂ ಈ ಕಣ್ಣಿನಿಂದ ನೋಡುವಂತಾಗಲಿ.'

'ಕಣ್ಣಿನಿಂದ ನೋಡುವುದು ಮಾತ್ರವಲ್ಲ. ಗಟ್ಟಿಯಾಗಿ ಎರಡು ಕೈಗಳಿಂದಲೂ ಸಿಹಿ ತಿನ್ನುವಂತಾಗಲಿ.'

ಶಂಕರ ಅಷ್ಟು ಹೇಳಿ ಜೋರಾಗಿ ನಗುತ್ತ ಬದು ಹತ್ತಿದ.

ನೀಲಯ್ಯ ಆಚಾರಿ ಪುಟಪುಟ ನಡೆದುಕೊಂಡು ಹೋಗುವ ಯುವಕನನ್ನೇ ನೋಡಿದ. ಆತ ಹೇಳಿದ ಮಾತುಗಳು ನೆನಪಾದುವು. 'ಹೀಗಾದರೆ ಒಳ್ಳೆಯದು. ಜೋಡಿ ಚೆನ್ನಾಗಿದೆ. ಸ್ವಾಮೀ, ಪಂಜುರ್ಲಿಯೇ, ಅಮ್ಮ ಚಾಮುಂಡಿಯೇ, ನೀವು ಕಣ್ಣು ತೆರೆಯಿರಿ' ಎಂದು ಕೈಮುಗಿದ.

ಶಂಕರ ನೀಲಯ್ಯ ಆಚಾರಿಯ ಮನೆಯಿಂದ ಸಾಮನಿಯವರ ಮನೆಗೆ ಹೋಗಲು ಹೊರಟವನು ಮನಸ್ಸು ಬದಲಾಯಿಸಿ ಗುತ್ತಿನ ಕೊಳಕೆಯ ಗದ್ದೆಯ ಹಾದಿ ಹಿಡಿದ. ಆಚಾರಿಯ ಕೊನೆಯ ಮಾತು ಅವನಿಗೆ ಭವಾನಿಯ ನೆನಪನ್ನು ಹುಟ್ಟಿಸಿತ್ತು. ಊರಿಗೆ ಬರುವಾಗ ಮೊದಲು ಸ್ಟೋರಿಗೆ ಹೋಗಿ ಅವಳನ್ನು ನೋಡಿದ್ದು. ಆಮೇಲೆ ಅವನು ಅವಳನ್ನು ನೋಡಲೇ ಇಲ್ಲ. ಈಗ ಅದೇಕೋ ಅವಳನ್ನು ನೋಡಬೇಕೆನಿಸಿತು.

ಇಷ್ಟು ಹೊತ್ತಿನಲ್ಲಿ ಅವಳು ಸ್ಟೋರಿನಲ್ಲಿರ್ತಾಳೆ. ಊಹುಂ. ಮೈಂದಣ್ಣ ಬಂದಿರುವುದರಿಂದ ಮನೆಯಲ್ಲಿರಲಿಕ್ಕೂ ಸಾಧ್ಯವಿದೆ. ಅವನಿಗೆ ಅಂತಕ್ಕನ ಹತ್ತಿರ ಮಾತನಾಡುವ ವಿಷಯವೂ ಇತ್ತು. ಆ ಕಾರಣದಿಂದಲೇ ಅಲ್ಲಿಗೆ ಹೋದರೆ ಎರಡು ಕೆಲಸವೂ ಆದೀತು (ಅವಳು ಇಲ್ಲದಿದ್ದರೆ!)

ಇಲ್ಲದಿದ್ದರೇನಾಯ್ತು? ಹೋದ ಮೇಲೆ ಅವಳನ್ನು ನೋಡಬೇಕು.. ಮನೆಯಲ್ಲಿಲ್ಲದಿದ್ದರೆ ನಾಳೆ ಸ್ಟೋರಿನವರೆಗೆ ಹೋಗಿ ಗೊಬ್ಬರ ಬಂದಿದೆಯಾ? ಅಂತ ಕೇಳುವುದು..

ಅಲ್ಲ, ಈ ರೀತಿಯ ಅಡ್ಡ ಆಲೋಚನೆ ನನಗೇಕೆ ಬರುತ್ತಿದೆ? ಈಗ ಮಾಡಬೇಕಾದ ಕೆಲಸ ರಾಶಿ ರಾಶಿ ಉಂಟು. ಮೊತ್ತಮೊದಲು ಪದವಿನ ದರ್ಕಾಸು ಸ್ಥಳಕ್ಕೆ ಅರ್ಜಿ ಹಾಕುವ ಕೆಲಸ ಆಗಬೇಕು. ಇಂಥ ಆಲೋಚನೆಗಳಿಗೆ ಮನಸ್ಸು ಸಡಿಲವಾದರೆ ನಾನು ಯೋಚಿಸಿದ ಯಾವ ಕೆಲಸವೂ ಕೊನೆ ಮುಟ್ಟುವುದಿಲ್ಲ. ಅಷ್ಟು ಆಲೋಚನೆಯ ಕೊನೆಗೆ ಬಂದಾಗ ಅವನ ಕಾಲು ಕೊಳಕೆಯ ಗದ್ದೆ ದಾಟಿ ಎಡಕ್ಕೆ ತಿರುಗಿ ಕಲ್ಲ ಸೇತುವೆ ಹತ್ತಿರ ತಲಪಿತ್ತು. ಇನ್ನು ಬಾಕಿಮಾರಿನ ಎದುರಿನ ಬದು ದಾಟಿದರೆ ಆಮೇಲೆ ಬಾಕಿಮಾರಿನ ದೊಡ್ಡ ಬದು. ಅದು ಅಗಲವಾಗಿ ಐದಾರು ಜನರು ಹೆಗಲಿಗೆ ಹೆಗಲು ತಾಗಿಸಿಕೊಂಡು ನಡೆಯುವಷ್ಟು ದೊಡ್ಡ ದಾರಿ. ಸೀದ ಹೋದರೆ ಅದರ ಕೊನೆಗೆ ಗುತ್ತು ಮನೆಯ ಮೊಗಸಾಲೆಯ ನಾಲ್ಕು ಮೆಟ್ಟಲು. ಅದನ್ನು ಹತ್ತಿದರೆ ಸಾಕಷ್ಟು ದೊಡ್ಡದಾದ ಮೊಗಸಾಲೆ ಚಾವಡಿ.

ತಾನೆಲ್ಲಿಗೆ ಬಂದಿದ್ದೇನೆ! ನೆನಪಿಲ್ಲದೆ ಬುದ್ಧಿಯನ್ನು ಬದಿಗಿಟ್ಟು ಮನಸ್ಸು ತನಗೆ ತೋಚಿದಂತೆ ಹೆಜ್ಜೆಯಿಟ್ಟು ಕರೆತಂದಿತ್ತು. ಸರಿ. ಹೇಗೋ ಇಲ್ಲಿಯವರೆಗೆ ಬಂದೆ. ಬಲಕ್ಕೆ ತಿರುಗಿ ಗುಡ್ಡ ಹತ್ತಿ ಹೋದರಾಯ್ತು.

ಅಲ್ಲದಿದ್ದರೆ.. ಸಾಯಲಿ, ಈ ಆಲೋಚನೆಗೆ ಬ್ರೇಕ್ ಹಾಕಬೇಕು. ಈಗ ಹೋಗಿ ದರ್ಕಾಸಿನ ಜಾಗದ ಆಲೋಚನೆ ಏನೆಂದು ಮಾತನಾಡುವ. ಇವತ್ತು ಪೀಠಿಕೆ ಹಾಕುವುದು. ಆಮೇಲೆ ಉಳಿದದ್ದು ಸಾಮನಿಯವರ ಹತ್ತಿರ ಕೇಳಬಹುದು. ಸ್ವಲ್ಪ ಮೈಂದಣ್ಣನ ಆಲೋಚನೆ ಏನೆಂದು ತಿಳಿಯುವುದು ಒಳ್ಳೆಯದು.

ಬಾಕಿಮಾರಿನ ಬದು ದಾಟಿ ಗುತ್ತುಮನೆಯ ಆನೆ ಬಾಗಿಲು ದಾಟಿ ಮೊಗಸಾಲೆಯ ಒಳಗೆ ಕಾಲಿಡುವಾಗ ಮಧ್ಯದ ಅಂಗಳಕ್ಕೆ ಅಂತಕ್ಕ ಬರುತ್ತಿದ್ದರು. ಚಾವಡಿಯಿಂದ ಇಳಿದು ಶಂಕರ ಅಂಗಳಕ್ಕೆ ಬಂದ. ಅಂತಕ್ಕ ಅವನನ್ನು ನೋಡಿ, 'ಓ ಶಂಕರನಾ, ಸರಿಯಾದ ಸಮಯಕ್ಕೆ ಬಂದೆ ನೋಡು. ನಾನು ಗುರಿಕಾರನಲ್ಲಿ ಹೋಗಲು ಹೊರಟಿದ್ದೆ.' ಅವರು ವಾಪಸ್ಸು ಬಂದು ಮನೆಯ ಚಾವಡಿಯ ಎದುರಿನ ಅಗಲದ ಜಗಲಿಯಲ್ಲಿ ಬಲಬದಿಯಲ್ಲಿ ಕುಳಿತರು.

'ಬಾ, ಕುಳಿತುಕೋ' ಅಂತಂದು ತನ್ನ ಎದುರಿದ್ದ ಎಡಭಾಗದ ಜಗಲಿಯನ್ನು ತೋರಿಸಿದರು. ಶಂಕರ ಕುಳಿತ. 'ನೀವು ಅಗತ್ಯದ ಕೆಲಸಕ್ಕೆ ಹೊರಟವರೆಂದು ಕಾಣುತ್ತದೆ. ನಾನು ಕೂಡ ಒಂದು ತುರ್ತು ಕೆಲಸಕ್ಕೆ ಬರಬೇಕಾಯ್ತು.'

'ಅದೇನೂ ಅಂಥ ದೊಡ್ಡ ತುರ್ತಿನ ಕೆಲಸವೇನಲ್ಲ. ಜಾನುವಾರುಗಳ ಕೊಟ್ಟಿಗೆಯ ಮಾಡು ಕುಂಬಾಗಿ ಈ ಮಳೆಗಾಲವನ್ನು ಕಳೆಯುವುದು ಕಷ್ಟವೆಂದು ಕಾಣುತ್ತದೆ. ಮಾಡು ಬೀಳಿಸಿ ಬೇರೆ ಕಟ್ಟುವಾಗ ಪಕ್ಕಾಸು ಹೊಸದು ಹಾಕಬೇಕು, ಚಾವಣಿಯ ಬೀಮಿನ ವಾಲ್‌ಪ್ಲೇಟಿಗೂ ಮರಬೇಕು. ರೀಪುಗಳನ್ನು ಹೊರಗಿನಿಂದ ತರಿಸುವುದರ ಬದಲು ಕವತಾರಿನ ಸೋಂಪ ಮೂಲ್ಯನ ಹಿತ್ತಿಲಲ್ಲಿರುವ ಸಪೂರವಾದ ಬಿದಿರುಗಳನ್ನು

ತರಿಸಿ ಅದನ್ನು ಹಾಕಿ ಅದರ ಮೇಲೆ ಮುಳಿಹುಲ್ಲು ಹೊದೆಸಬಹುದು. ಮುಳಿ ನಮ್ಮ ದರ್ಕಾಸಿನಲ್ಲೇ ಉಂಟು. ಅದನ್ನು ಕೊಯ್ಸಿ ಹರಡುವುದೆಂದು ಆಲೋಚನೆ ಮಾಡಿದೆ. ಹಾಗೆ ಅದರ ವಿಲೇವಾರಿಯನ್ನು ಗುರಿಕಾರನಿಗೆ ಹೇಳಿ ಬಾಕಿಮಾರಿನ ಮೂಲೆಯ ಎರಡು ಹಳೆಯ ತಾಳೆಮರಗಳನ್ನೂ ಕಡಿಸುವ ಏರ್ಪಾಡು ಮಾಡಬೇಕು. ಅದನ್ನೂ ಹೇಳಿಬರೋಣಾಂತ ಹೊರಟಿದ್ದೆ.'

'ಇವತ್ತು ಭವಾನಿ ಸ್ಟೋರಿಗೆ ಹೋಗಲಿಲ್ಲ. ಮನೆಯಲ್ಲಿ ಯಾರೂ ಇಲ್ಲದಿರುವಾಗ ಹಾಗೇ ಪೂರ್ತಿ ಬಿಟ್ಟುಬಿಟ್ಟು ಹೋಗುವುದಕ್ಕೆ ಆಗುವುದಿಲ್ಲ. ಇವತ್ತು ಅವಳು ಇರುವಾಗಲೇ ಹೋಗಿ ಬರುವುದು ಒಳ್ಳೆಯದು.'

'ನಿನ್ನನ್ನು ಕುಳ್ಳಿರಿಸಿ ಮಾತನಾಡುತ್ತಲೇ ಇದ್ದೇನೆ. ಬಾಯಾರಿಕೆಗೆ ಏನು ಕೊಡಲಿ? ನೀವು ನಾಲ್ಕಾರು ಊರು ತಿರುಗಿದವರು. ಲಿಂಬೆಹುಳಿಯ ಶರಬತ್ತು ಆದೀತಾ? ಚಾ ಮಾಡಬೇಕಾ? ಭವಾನಿ, ಭವಾನಿ, ಒಮ್ಮೆ ಇಲ್ಲಿಗೆ ಬರ್ತೀಯಾ?' ಅನ್ನುತ್ತ ಉಯ್ಯಾಲೆಯ ಒಳಕೋಣೆಯತ್ತ ನೋಡುತ್ತ ಕರೆದರು.

ಶಂಕರನಿಗೆ ಮೊದಲೇ ಗೊತ್ತಾಗಿತ್ತು. ಚಾವಡಿಯ ಒಳಗೆ ಹಜಾರಕ್ಕೆ ಹೋಗುವ ಮೂರು ಹಂತದ ಕೆತ್ತನೆಯ ಬೀಟಿಯ ದಪ್ಪ ದಾರಂದದ ಬಾಗಿಲ ಹಿಂದೆ ಅರ್ಧಚಂದ್ರನ, ಹಾಲುಬಿಳುಪಿನ ಹಣೆಯ ಸುತ್ತಲೂ ಕಪ್ಪಾದ ಸುರುಳಿಕೂದಲು ಹಾರಾಡುತ್ತಿತ್ತು. ಆದರೆ ಮುಖ ಕಾಣಿಸುತ್ತಿರಲಿಲ್ಲ. ಇನ್ನೂ ಸ್ವಲ್ಪ ಹೊತ್ತು ಹಾಗೇ ಕದ್ದು ಕೇಳುತ್ತಿರಲಿ ಎನ್ನುತ್ತ ಹೇಳಿದ, 'ಬಾಯಾರಿಕೆಗೆ ಏನೂ ಬೇಡ. ಪಟೇಲರ ಮನೆಯಲ್ಲಿ ಚಾ ಆಯ್ತು. ಅಲ್ಲಿಂದ ವಾಪಸ್ಸು ಬರುವಾಗ ಮರಳು ತೋಟದ ಪಕ್ಕದ ಬದುವಿನಲ್ಲಿ ಬಂದೆ. ನೀಲಯ್ಯ ಆಚಾರಿಯ ಮನೆಯ ಹತ್ತಿರ ಬಂದಾಗ ಆತ ಸಿಕ್ಕಿದ.. ತುಂಬ ಸೋತಿದ್ದಾನೆ.. ಬನ್ನಿ ಅಣ್ಣ, ಎಳನೀರು ಕುಡಿಯಿರಿ ಅಂದ.'

'ಅವನಿಗೆ ಎಳನೀರು ಕುಯ್ದು ಕೊಡುವವರು ಯಾರು? ಬದುವಿನಿಂದ ಜಾರಿಬಿದ್ದು ನರಳುತ್ತಿದ್ದಾನೆ' ಅಂತಕ್ಕ ಹೇಳಿದರು.

'ಅವನಿಗೆ ತಿನ್ನುವುದಕ್ಕೂ ಇಲ್ವಾ?. ಮೂಳೆ ಚರ್ಮ ಆಗಿದ್ದಾನೆ. ಹೊಟ್ಟೆಗೆ ಸರಿಯಾಗಿ ಊಟ ಸಿಗುವುದಿಲ್ಲಾಂತ ಅನ್ನಿಸುತ್ತದೆ.'

ಈಗ ಮೂಗಿನ ತುದಿ ಕಾಣಿಸಿತು.

'ವಯಸ್ಸಾಯ್ತು. ಹೊಟ್ಟೆಗೂ ಇಲ್ಲಾಂತಾದರೆ ತುಂಬ ಕಷ್ಟ' ಅಂತಕ್ಕ ಸಹಾನುಭೂತಿ ವ್ಯಕ್ತಪಡಿಸಿದರು.

'ಹೊಟ್ಟೆಗೆ ಇಲ್ಲದೆ ಏನು? ಮೊನ್ನೆ ಸ್ಟೋರಿಗೆ ಬಂದವನಿಗೆ ಅಕ್ಕಿ, ಗೋಧಿ, ಧಾನ್ಯ ಎಲ್ಲ ನಾನೇ ಕೊಟ್ಟೆ' ಭವಾನಿ ಒಳಗಿನಿಂದ ಹೊರಗೆ ಬರುತ್ತ ಹೇಳಿದಳು.

'ಹಾಗಿದ್ದರೆ ಅವನಿಗೆ ಬೇಯಿಸಿ ಹಾಕಿ ಉಪಚರಿಸಲು ಯಾರಾದರೂ ಒಬ್ಬರು ಇದ್ದರೆ ಸರಿಯಾಗುತ್ತಿತ್ತು' ಅಂದರು ಅಂತಕ್ಕ. ಅವನ ಮಗಳು ಎಲ್ಲೋ ಮೈಸೂರಲ್ಲಿ ಇದ್ದಾಳಂತೆ.

'ಹಾಂ. ಆಚಾರಿಯೂ ಅದನ್ನೇ ಹೇಳಿದ. ಮೈಸೂರಲ್ಲಿ ನನ್ನ ಮಗಳಿದ್ದಾಳೆ. ಯಾರಾದರೂ ಹೋಗಿ ಅವಳನ್ನು ಊರಿಗೆ ಬರಲು ಹೇಳ್ತಿದ್ದರೆ ಅವರಿಗೆ ಪುಣ್ಯ ಸಿಗುತ್ತದೆ' ಅಂದ. ಹಾಗೆ ಹೇಳುತ್ತ ಆತ ಓರೆಕಣ್ಣಿನಲ್ಲಿ ಭವಾನಿಯ ಮುಖ ನೋಡಿದ.

ಅವಳ ಮುಖ ತುಸು ಬಿಳಿಚಿತು. ಆಮೇಲೆ ಅವಳು ಸ್ವಲ್ಪ ಮುಂದೆ ಬಂದು ಹಜಾರದ ಕಂಬದ ಮರೆಯಲ್ಲಿ ನಿಂತಳು.

'ಮೈಸೂರಿಗೆ ಹೋಗುವವರು ಯಾರಾದರೂ ಸಿಕ್ಕಿದರೆ ಅವರ ಹತ್ತಿರ ಅವಳನ್ನು ನೋಡಿ ಸುದ್ದಿ ಮುಟ್ಟಿಸಲು ಹೇಳುತ್ತೇನೆಂದು ಅವನಿಗೆ ಹೇಳಿದೆ. ನನಗೀಗ ಎಲ್ಲಿದೆ ಪುರುಸೊತ್ತು?'

'ಅದು ಸರಿ. ನೀನೇನು ಬಾಯಾರಿಕೆ ಬೇಕು ಅಂತ ಹೇಳಲಿಲ್ಲ. ಭವಾನಿ ಲಿಂಬೆ ಹಣ್ಣಿನ ಶರಬತ್ತು ಮಾಡುತ್ತಾಳೆ. ಆಗಬಹುದಾ?'

'ಶರಬತ್ತೇನೂ ಬೇಡ... ಒಂದು ಲೋಟ ತಣ್ಣೀರು ಕೊಡಲು ಹೇಳಿ' ಅಂದ ಶಂಕರ.

'ಹೋಗು ಭವಾನಿ, ಬಿಸಿಲಿಗೆ ಬಂದಿದ್ದಾನೆ. ಒಂದು ಲೋಟ ನೀರಾದರೂ ಕುಡಿಯಲಿ.'

ಭವಾನಿ ಒಳಗೆ ಹೋಗಿ ಕುದಿಸಿ ಹೂಜೆಯಲ್ಲಿ ಹಾಕಿಟ್ಟ ನೀರನ್ನು ಕಂಚಿನ ಲೋಟದಲ್ಲಿ ತಂದಳು. 'ಹತ್ತಿರ ತಂದುಕೊಡು ಮಗಳೇ' ಎಂದರು ಅಂತಕ್ಕ.

ಭವಾನಿ ಚಾವಡಿಯ ಮೆಟ್ಟಲು ಇಳಿದು ಜಗಲಿಯ ಬಳಿಗೆ ಬಂದಳು. ಮುಖ ಕೆಂಪಾಗಿತ್ತು. ಈಗ ಅವಳು ಅಂತಕ್ಕನಿಗೆ ಬೆನ್ನು ಹಾಕಿದ್ದಳು. ಶಂಕರ ಅವಳ ಕೈ ಮುಂದೆ ಬರುವವರೆಗೂ ತಡೆದು ಅನಂತರ ನಡುಗುತ್ತಿರುವ ಅವಳ ಬೆರಳುಗಳನ್ನು ಅದುಮುತ್ತ ಲೋಟ ತೆಗೆದುಕೊಂಡ. ಭವಾನಿ ಒಮ್ಮೆಗೇ ಕೈ ಎಳೆದಾಗ ಲೋಟ ಅಲ್ಲಾಡಿ ನೀರು ತುಳುಕಿ ಶಂಕರನ ಎದೆಗೂ ತೊಡೆಗಳಿಗೂ ಬಿತ್ತು.

ಭವಾನಿಯ ಮುಖ ಪೂರಾ ಕೆಂಪಾಯ್ತು. ಕೈಬಿಟ್ಟವಳೇ ಸೀದಾ ಹಿಂತಿರುಗಿ ಚಾವಡಿಯ ಕಂಬದ ಹಿಂದೆ ಹೋದಳು. ಅಂತಕ್ಕನ ಕಣ್ಣಿಗೆ ಈ ಪುಟ್ಟ ನಾಟಕ ಗೊತ್ತಾಗಲಿಲ್ಲ.

ಶಂಕರ ನಿಧಾನವಾಗಿ ನೀರು ಕುಡಿದ. ಆಮೇಲೆ ಮಾತು ಮುಂದುವರಿಸಿದ. 'ಅರ್ಕಾವತಿ ಎಲ್ಲಿದ್ದಾಳೆಂದು ನೀಲಯ್ಯ ಆಚಾರಿಗೆ ಗೊತ್ತಿಲ್ಲ. ವಿಳಾಸ ತಿಳಿಯದೆ ಹುಡುಕುವುದು ಹೇಗೆ? ಅದಿರಲಿ. ಈಗ ದರ್ಕಾಸ್ ಮಾಡುವ ವಿಚಾರ ಹೇಗೆ? ಪಟೇಲರಿಗೆ ಹೇಳಿ ಮೊದಲು ಹದಿನೈದು ಸೆಂಟ್ಸ್ ಜಾಗವನ್ನು ಹುಡುಕುವ, ಅದಾದ ಮೇಲೆ ನಮ್ಮ ಮೂಲದ ಇಬ್ಬರು ಆಳುಮಕ್ಕಳ ಹೆಸರಿಗೆ ದರ್ಕಾಸಿಗೆ ಅರ್ಜಿ ಕೊಡುವ. ಒಬ್ಬೊಬ್ಬರಿಗೂ ತಲಾ ನಾಲ್ಕು ಸೆಂಟ್ಸಿನ ಹಾಗೆ. ಉಳಿದುದನ್ನು ನಾನು ಸ್ವಾತಂತ್ರ್ಯ ಹೋರಾಟ ಮಾಡಿದವನು ಎಂಬ ಕಾರಣ ಹೇಳಿ ಅರ್ಜಿ ಹಾಕುತ್ತೇನೆ. ಪಟೇಲರೂ ಸಾಮನಿಯವರೂ ಇದಕ್ಕೆ ಒಪ್ಪಿಗೆ ಕೊಟ್ಟಿದ್ದಾರೆ. ನಾನಿವತ್ತು ಬಂದದ್ದು ಇದೇ ವಿಷಯ ನಿಮ್ಮ ಹತ್ತಿರ ಕೇಳುವುದಕ್ಕೆಂದೇ.'

'ಹಾಗಿದ್ದರೆ ನನ್ನ ಒಪ್ಪಿಗೆಯೂ ಇದೆ. ಯಾರ್‍ಯಾರಿಗೋ ದರ್ಕಾಸಿಗೆ ಕೇಳುವುದಕ್ಕಿಂತ ನಮ್ಮ ಆಳುಗಳಿಗೇ ಕೊಡುವುದು ಒಳ್ಳೆಯದು.'

'ಇಬ್ಬರು ನಮ್ಮ ಪರವಾಗಿರುವವರು ಬೇಕು. ಯಾರಿದ್ದಾರೆ?'

'ಅದು ನನಗೆ ಗೊತ್ತಿಲ್ಲ' ಅನ್ನುತ್ತ ಶಂಕರ ಭವಾನಿಯ ಕಡೆಗೆ ನೋಡಿ ಹೇಳಿದ, 'ಅವಳನ್ನು ಕೇಳಿ. ಅವಳಿಗಾದರೆ ಗೊತ್ತಿರಬಹುದು.'

'ಯಾರನ್ನು ಹೇಳಬಹುದು ಮಗೂ' ಅಂತಕ್ಕ ಕೇಳಿದರು.

'ಬೊಗಟನಿಗೂ ತನಿಯರುಗೂ ಕೊಡಬಹುದು' ಅಂದಳು ಭವಾನಿ.

'ತನಿಯರುಗೆ ಏನು ಗೊತ್ತು. ಹೆಬ್ಬೆಟ್ಟು ಒತ್ತುವವಳು.'

'ಅವಳ ಮಗಳು ಪೀಂಚುಲು ಆಗುವುದಿಲ್ಲವಾ?' ಅಂತಕ್ಕ ಕೇಳಿದರು.

'ಪೀಂಚುಲು. ಡಬ್ಬಲ್ ರೋಡಿಗೆ ಕೆಲಸಕ್ಕೆ ಹೋಗುವ ಬಾಬುವಿನ ಹೆಂಡತಿಯಾ? ಅವಳು ಬೇಡ. ಅದು ಆಮೇಲೆ ನಮಗೆ ಸಮಸ್ಯೆಯಾದೀತು. ಬೇಡ, ತನಿಯರು ಬೇಡ. ಬೇರೆ ಯಾರನ್ನಾದರೂ ಹೇಳಿ' ಅಂದ ಶಂಕರ.

'ಹಾಗಿದ್ದರೆ ಮಾಯ್ಲನ ಹೆಸರು ಬರೆಯಿರಿ. ಎಷ್ಟೋ ವರ್ಷಗಳಿಂದ ನಮ್ಮ ಭೂತಸ್ಥಾನದಲ್ಲೂ ತೋಟದಲ್ಲೂ ಕೆಲಸ ಮಾಡ್ತಾನೆ. ಮುದುಕಿ ಹೆಂಡತಿ ಒಬ್ಬಳಿದ್ದಾಳೆ. ಅವನಿಗೆ ಮಕ್ಕಳೂ ಇಲ' ಅಂದಳು ಭವಾನಿ.

'ಸರಿ. ನೀವು ಹೇಳಿದ ಹಾಗೇ ಆಗಲಿ' ಅಂದ ಶಂಕರ ಅವಳ ಮುಖ ನೋಡಿ ನಗುತ್ತ.

ಕೂಡಲೇ ಭವಾನಿಯ ಉತ್ಸಾಹ ಇಳಿಯಿತು. ಆತ ತನ್ನನ್ನು ತಮಾಷೆ ಮಾಡುತ್ತಿದ್ದಾನೆಂದು ಅವಳಿಗನ್ನಿಸಿತು. ಅಂತಕ್ಕನಿಗೆ ಈ ಸಣ್ಣ ಫಿತೂರಿ, ನಾಟಕಗಳು ಯಾವುದೂ ಗೊತ್ತಿಲ್ಲ. ಅವರು ಶಂಕರನಿಗೆ ಹೇಳಿದರು, 'ಭವಾನಿ ಹೇಳಿದಂತೆಯೇ ಬರೆದುಕೋ ಮಗ. ಆಮೇಲೆ ಏನಾಗಬೇಕೆಂದು ಮೈಂದಣ್ಣನ ಹತ್ತಿರ ಹೇಳಿ ಕಳುಹಿಸು. ಪದವುನಲ್ಲಿ ಆಗುವ ಕಾರ್ಯಗಳನ್ನು ನೀನು ಬಂದು ತಿಳಿಸ್ತೀಯಲ್ಲವೇ?'

'ಬಿಡುವಾದರೆ ಬರುತ್ತೇನೆ. ನಾನೇ ಬಂದು ಹೇಳಬೇಕಾ?' ಶಂಕರ ಏನೂ ತಿಳಿಯದ ಮಗುವಿನಂತೆ ಕೇಳಿದ. ಅವನ ಕಣ್ಣುಗಳು ಭವಾನಿಯ ಮುಖದ ಭಾವನೆಯತ್ತಲೇ ನೋಡಿದುವು.

ಭವಾನಿ ಏನೋ ಹೇಳಲು ಬಾಯಿ ತೆರೆದಳು. ಅವನ ಕಣ್ಣು ತನ್ನ ಮುಖದತ್ತಲೇ ಇರುವುದನ್ನು ನೋಡಿ ಅವನ ತಮಾಷೆ ಅರ್ಥವಾಗಿ ಅವಳು ಸೀದಾ ತಿರುಗಿ ಎದುರಿದ್ದ ಬಾಗಿಲ ಹತ್ತಿರ ಹೋದಳು.

ಶಂಕರ ಅಂತಕ್ಕನ ಮಾತಿಗೆ ಏನು ಉತ್ತರಿಸಿದನೋ, ಚಾವಡಿಯಿಂದ ಕೇಳಿಬರುವ ಮಾತುಗಳು ನಿಂತಮೇಲೆ ಅವಳು ಹೊರಗೆ ಬಂದಳು.

ಅಂತಕ್ಕ ಕಾಣಿಸುತ್ತಿರಲಿಲ್ಲ. ಶಂಕರ ಅಂಗಳದಲ್ಲಿ ನಿಂತಿದ್ದ. ಆತ ಹೇಳಿದ. 'ಮಹಾರಾಣಿಯವರು ಹೊರಗೆ ಬಂದಾಗ ಒಂದು ಮಾತು ತಿಳಿಸಲು ಹೇಳಿದರು.

ನಾಳೆ ಬೆಳಗ್ಗೆ ನಾನು ಪಟೇಲರ ಮನೆಗೆ ಹೋಗುತ್ತೇನೆ. ಈಗ ಪದವುಗೆ ಹೋಗುವುದಿಲ್ಲ. ಪದವಿನ ರೆಕಾರ್ಡುಗಳನ್ನೆಲ್ಲ ತೆಗೆದುಕೊಂಡು ನಾಳೆ ಮೈಂದಣ್ಣ ಸಾಮನಿಯವರ ಮನೆಗೆ ಬರಲಿ. ನಾನು ಅಲ್ಲಿರ್ತೇನೆ. ಅವರ ಹತ್ತಿರವೂ ಮಾತನಾಡುವ ಕೆಲವು ವಿಷಯಗಳಿವೆ. ಅಲ್ಲಿಂದ ನಾವು ಪಟೇಲರ ಮನೆಗೆ ಹೋಗುತ್ತೇವೆ. ಇಷ್ಟು ವಿಚಾರಗಳನ್ನು ಮೈಂದಣ್ಣನಿಗೆ ಹೇಳ್ತೀಯಾ? ನನಗೀಗ ಹೋಗಲು ಅಪ್ಪಣೆ ಕೊಡಬಹುದೇ?' ಆತ ಕೈಮುಗಿದು ಹೇಳುವಾಗ ಅವನ ನಾಟಕದ ಅಭಿನಯವನ್ನು ನೋಡಿ ಅವಳಿಗೆ ನಗು ಬಂತು.

'ಭವಾನಿ, ಇನ್ನೊಮ್ಮೆ ಈಗ ನಕ್ಕಂತೆಯೇ ನಗು ನೋಡೋಣ. ಇವತ್ತು ಸೂರ್ಯ ಯಾವ ದಿಕ್ಕಿನಿಂದ ಮೂಡಿರಬಹುದು?'

ಭವಾನಿಗೆ ಈಗ ನಿಜವಾಗಿಯೂ ನಗುಬಂತು. ಅವನ ಅವತಾರವನ್ನು ನೋಡಿ ಅವಳು ತಲೆಯೆತ್ತಿ ನಕ್ಕಳು.

'ಥ್ಯಾಂಕ್ಸ್' ಮನಸ್ಸು ತುಂಬಿ ಶಂಕರ ಹೇಳಿದ. ಅಷ್ಟು ಹೇಳಿ ಹಿಂತಿರುಗಿ ಬಿರಬಿರನೆ ನಡೆದ. ಅವನ ತಲೆಯ ತುದಿ ಮರೆಯಾಗುವವವರೆಗೂ ಅವನು ಹೋಗುವುದನ್ನೇ ಅವಳು ನೋಡುತ್ತ ನಿಂತಳು. ಅವಳು ನೋಡುತ್ತಾಳೆಂದು ಅವನಿಗೆ ಖಚಿತವಾಗಿ ಗೊತ್ತಿತ್ತು. ಆದರೆ ಅವನು ತಿರುಗಿ ನೋಡಲಿಲ್ಲ.

ರಾತ್ರಿ ಮೈಂದಣ್ಣ ಸ್ಟೋರಿನಿಂದ ಬರುವಾಗ ಹತ್ತು ಗಂಟೆ ಕಳೆದಿತ್ತು. ಬಂದು ಮಿಂದು ಊಟ ಮುಗಿಸಿದ ಮೇಲೆ ಅಂತಕ್ಕನೂ ಭವಾನಿಯೂ ಶಂಕರ ಬಂದು ಹೇಳಿದ ದರ್ಕಾಸಿನ ವಿಷಯವನ್ನು ಅವನಿಗೆ ತಿಳಿಸಿದರು. ಮೈಂದಣ್ಣ ಯಾವುದನ್ನೂ ವಿರೋಧಿಸುವ ಜಾಯಮಾನದವನಲ್ಲ. ದರ್ಕಾಸಿನ ಜಾಗದಲ್ಲಿ ಒಂದು ಭಜನಾ ಮಂಡಳಿಯ ಗುಡಿ ಕಟ್ಟುವ ಮನಸ್ಸು ಅವನಿಗಿತ್ತು. ಈಗ ಶಂಕರನ ಮಾತು ಕೇಳಿದಾಗ ಆ ವಿಷಯವೂ ಯಾಕಾಗಬಾರದು ಎಂದು ಅವನಿಗೆ ತೋಚಿತು. ಅಮ್ಮನ ಮುಂದೆ ಯಾವ ಅಡ್ಡಿಯನ್ನೂ ಹೇಳಲಿಲ್ಲ. ನಾಳೆ ಶಂಕರನ ಅಭಿಪ್ರಾಯವೇನೆಂದು ಕೇಳಿದರಾಯ್ತೆಂದು ಯೋಚಿಸಿದ.

ಮರುದಿನ ಸೇನೆರ ಮೂಲೆಯಲ್ಲಿ ಸಾಮನಿಯವರ ಮನೆಯಲ್ಲಿ ಮಂತ್ರಾಲೋಚನೆ ನಡೆಯಿತು. ಮೈಂದಣ್ಣ, ಶಂಕರ, ತ್ಯಾಂಪಣ್ಣ ಮೂವರೂ ಒಟ್ಟು ಸೇರಿ ಪದವಿನ ಹದಿನೈದು ಸೆಂಟ್ಸ್ ಜಾಗಕ್ಕೆ ಅರ್ಜಿ ಹಾಕುವುದೆಂದೂ ಬೊಗಟ ಮತ್ತು ಮಾಯ್ಲನ ಹೆಸರಿನಲ್ಲಿ ನಾಲ್ಕು ನಾಲ್ಕು ಸೆಂಟ್ಸ್‌ಗೂ ಉಳಿದ ಜಾಗಕ್ಕೆ ಶಂಕರ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೋರಾಡಿ ಕಷ್ಟಬಂದವನೆಂದು ಅರ್ಜಿ ಹಾಕುವುದೆಂದೂ ಆಲೋಚನೆ ಮಾಡಿದರು. ಇಬ್ಬರನ್ನೂ ಕರೆಸಿ ಅವರ ಸಮಕ್ಷಮದಲ್ಲೇ ಅರ್ಜಿಯ ಕರಡುಪ್ರತಿಗಳನ್ನು ಬರೆದರು. ಅವುಗಳನ್ನು ಪಟೇಲರಿಗೆ ತೋರಿಸಿ ಆಮೇಲೆ ಸರಕಾರದ ಆಫೀಸಿಗೆ (ಪಂಚಾಯತು ಕಛೇರಿಗೆ) ಕಳುಹಿಸುವುದೆಂದು ಅವರಿಗೆ ಹೇಳಿದರು. ಬೊಗಟನಿಗೂ ಮಾಯ್ಲನಿಗೂ ಸಂತೋಷದಲ್ಲಿ ಕಾಲಿನ ಅಡಿಯ ನೆಲವೇ ಕಾಣಿಸಲಿಲ್ಲ.

ಈ ವಿಷಯವನ್ನು ಯಾರಿಗೂ ಹೇಳಬಾರದೆಂದು ಶಂಕರ ಅವರಿಗೆ ತಾಕೀತು

ಮಾಡಿದ. ಶಂಕರನಿಗೆ ಊರಿನ ಜನರ ಬುದ್ಧಿಯ ಸಂಪೂರ್ಣ ಅನುಭವವಿರಲಿಲ್ಲ. ಒಂದು ವಿಷಯ ಕೇಳಿದರೆ ಹೊಟ್ಟೆ ತುಂಬಿದಂತಾಗಿ ಅದನ್ನು ಯಾರಿಗಾದರೂ ಹೇಳಿಯೇ ಅದಕ್ಕೆ ಪರಿಹಾರ. ಆ ಸುದ್ದಿ ಕೇಳಿ ಹೆದರುವವರೂ ಅವುಗಳನ್ನು ನೇರವಾಗಿ ಹೇಳದೆ ಪರೋಕ್ಷವಾಗಿ ಇಲ್ಲ ಅರೆಬರೆಯಾಗಿಯೋ ಹೇಳಿಯೇ ತೀರಬೇಕು.

ಹಾಗೆ ಬೊಗಟೆ ಗುಡಿಸಲಿಗೆ ವಾಪಸ್ಸು ಬಂದವನು ದೊಡ್ಡದಾಗಿ ಬಾಯಿಬಿಟ್ಟ. ಅವನ ಹೆಂಡತಿ ಮಾಣಿಗ ಮುದುಕಿ, ಕಣ್ಣಿಗೆ ಅರ್ಧಭಾಗ ಪೊರೆ ಬಂದು ಅವಳಿಗೆ ಕಾಣುವ ಶಕ್ತಿ ಕಡಿಮೆಯಾಗಿತ್ತು. ಅವಳು ಅಡ್ಕದ ತಾಳೆ ಮರದಿಂದ ಬಿದ್ದ ಕಾಯಿಗಳನ್ನು ಹೆಕ್ಕಿತಂದು ಅವುಗಳನ್ನು ಸುಲಿದು ಅದರ ತಿರುಳನ್ನು ತೆಗೆಯುತ್ತಿದ್ದಳು. ಭವಾನಿ ಹಿಂದಿನ ದಿನ ಆಕೆ ಐ.ಆರ್. ಎಯ್ಟ್, ಭತ್ತವನ್ನು ಕೇರಿ ಕೊಟ್ಟದ್ದಕ್ಕೆ ಭತ್ತವನ್ನು ಕೊಟ್ಟಿದ್ದಳು. ಅದಲ್ಲದೆ ಭಕ್ಷೀಸು ಅಂತ ಒಂದು ಸೇರು ನುಚ್ಚಕ್ಕಿಯನ್ನೂ ಕೊಟ್ಟಿದ್ದಳು. ತಾಳೆಹಣ್ಣಿನ ತಿರುಳನ್ನು ಒಡೆದು ತೆಗೆದು ಅದಕ್ಕೆ ನುಚ್ಚಕ್ಕಿಯನ್ನು ಸೇರಿಸಿ ಕಲ್ಲಿನ ಕುಳಿಯಲ್ಲಿ ಹಾಕಿ ಕುಟ್ಟಿ ಪುಡಿ ಮಾಡಿ ಕೇರಿ ಹಿಂದಿನ ದಿನವೇ ನೆನಸಿಡಬೇಕು. ಮರುದಿನ ಬೆಳಿಗ್ಗೆ ನೀರು ತೆಗೆದು ಉಪ್ಪು ಹಾಕಿ ಕಲಸಿ ಆ ಹಿಟ್ಟನ್ನು ಬಳಪದ ಒಲೆಯಲ್ಲಿ ಕಾದ ಹೆಂಚಿಗೆ ಎಳ್ಳೆಣ್ಣೆ ಹಾಕಿ ಸವರಿ ರೊಟ್ಟಿ ತಟ್ಟಬೇಕು. ಅದನ್ನು ಒಣ ಸಿಗಡಿ ಚಟ್ನಿಯೊಟ್ಟಿಗೆ ತಿಂದು ಹೊಟ್ಟೆ ತುಂಬ ನೀರು ಕುಡಿದರೆ ಮಧ್ಯಾಹ್ನದವರೆಗೆ ಬಿಸಿಲಲ್ಲಿ ಸುತ್ತಾಡಿದರೂ ಹಸಿವೆಯಾಗುವುದಿಲ್ಲ. ಹೊಟ್ಟೆ ಗಟ್ಟಿಯಾಗಿರುತ್ತದೆ. ಬೊಗಟನ ಭಾಷೆಯಲ್ಲಿ ಹೇಳಿದರೆ 'ಹೊಟ್ಟೆಯಲ್ಲಿ ಕಲ್ಲು ಹಾಕಿ'ದಂತಿರುತ್ತದೆ.

'ನಾವು ಇನ್ನು ಮುಂದೆ ಪದವಿನಲ್ಲಿ ವಾಸ ಮಾಡುವುದು. ಮಳೆಗಾಲದಲ್ಲಿ ಗುಡ್ಡ ಹತ್ತಿ ಹೋಗುವ ಕೆಲಸ ಇಲ್ಲ. ತಾಳೆಬೀಜ ಬೇಕಾದರೆ ಗುಡ್ಡ ಇಳಿದು ಹೆಕ್ಕಲು ಬರಬೇಕು.'

'ಹೌದು, ಕರಿಯ ಬೈದ್ಯನ ಹೆಂಡ ಕುಡಿಯಲು ನಿನಗಲ್ಲಿ ಸುಲಭವಾದೀತು. ಹಣಕಾಸು ಹೆಚ್ಚು ಕೊಡುವಾಗ ಗೊತ್ತಾದೀತು. ಈಗ ತಾಳೆಮರದ ಅಡಿಯಲ್ಲಿ ಕುಳಿತು ಕುಡಿಯುತ್ತೀಯಲ್ಲ. ಈ ಗುಡಿಸಲನ್ನು ಉರುಳಿಸಿ ಈಗ ಪದವಿನಲ್ಲಿ ಗುಡಿಸಲು ಮಾಡ್ತಿಯಾ? ಒಂದು ತಿಂಗಳೊಳಗೆ ಇರುವ ಗುಡಿಸಲಿಗೆ ರೀಪು ಎಳೆದು ಸೋಗೆ ಹೆಣೆದು ಮುಚ್ಚಿ ಮುಳಿ ಹಾಕದಿದ್ದರೆ ಆಮೇಲೆ ನೋಡು ಕತೆ. ಈಗ ಮಾಡಿನೊಳಗೆ ಕಾಗೆ ನುಗ್ಗುತ್ತದೆ. ನಾಳೆ ಮಳೆನೀರೆಲ್ಲ ಒಳಗೆ ನುಗ್ಗುತ್ತದೆ. ನೆರೆ ಬರುವುದು ಮೊದಲು ನಿನ್ನ ಗುಡಿಸಲಿನ ಒಳಗೆ ಆಮೇಲೆ ತೋಡಿಗೆ. ನೀನು ಅಂಗಳದಲ್ಲಿ ಹಲಸಿನ ಮರದ ಬುಡದಲ್ಲಿ ಕುಳಿತು ಬೆಳಗು ಮಾಡ್ಬೇಕಾದೀತು. ಮೀಸೆ ಬರುವಾಗ ದೇಶ ಕಾಣುವುದಿಲ್ಲವಂತೆ. ನಿನಗೆ ಮುದುಕನಿಗೆ ಕಾಡು ಕರೆಯುವ ಸಮಯದಲ್ಲಿ. ಪದವಿನಲ್ಲಿ ಗುಡಿಸಲು ಕಟ್ತಿಯಾ ಇಲ್ಲ ನಿನಗೆ ಗುಂಡಿ ತೋಡ್ತೀಯಾ? ಏನು ಪಿತ್ತ ಏರಿದೆಯಾ?' ಅಂದಳು ಮಾಣಿಗ.

'ಮುದುಕಿಗೆ ಪಿತ್ತ ನೆತ್ತಿಗೇರಿದೆ. ಪದವಿನಲ್ಲಿ ಜಾಗವನ್ನೂ ಮನೆಯನ್ನೂ ಕೊಡುತ್ತೇನೆ ಅಂತ ಶಂಕರಪ್ಪನವರು ನಿಜವಾಗಿಯೂ ಹೇಳಿದ್ದಾರೆ.'

'ಪದವಿನಲ್ಲಿ ಮನೆ ಕೊಡ್ತೇವೆ ಅಂತ ಪದ್ಮಣ್ಣನವರು ಅಥವಾ ಯಜಮಾನಿಯಮ್ಮನವರು ಹೇಳಿದರೆ ನಂಬಬಹುದು. ಊರು ಕೇರಿ ಇಲ್ಲದ ಪರದೇಸಿ ಒಬ್ಬರು ಕೊಡ್ತೇನೆ

ಅನ್ನುವುದು ಯಾವ ಆಸ್ತಿಯನ್ನು? ನಿನಗೆ ಮುದಿ ಭ್ರಾಂತಿ ಹೋಗಿಲ್ಲ. ಬೆನ್ನು ಬಾಗದು. ಬೇಸಿಗೆ ಕಳೆಯುವುದರೊಳಗೆ ಗುಡಿಸಲಿನ ಮಾಡು ಹೊದಿಸಲಿಕ್ಕಾಗದೆ ಸಾವಿರ ಅಡ್ಡಿಗಳನ್ನು ತಯಾರು ಮಾಡ್ತೀ. ನಿನಗೆ ಸತ್ತ ಮೇಲೆಯೇ ಬುದ್ಧಿ ಬರುವುದು. ಏನು ಇವತ್ತು ಬೆಳಗ್ಗೆ ಬೆಳಗ್ಗೆಯೇ ಹುಳಿ ಹೆಂಡ ಕುಡಿದು ಬಂದಿದ್ದೀಯಾ? ಇಲ್ಲ, ತಲೆಗೇ ಸುರಿದು ಬಂದಿದ್ದೀಯಾ?' ಅಂದಳು ಮಾಣಿಗ.

'ನನ್ನ ಕೊರಳಾಣೆ. ಆ ಕೊರಗಜ್ಜ ನೋಡಲಿ. ನಾನು ಸುಳ್ಳು ಹೇಳುತ್ತಿಲ್ಲ. ಯಜಮಾನರು ನಮಗೆ ಪದವಿನಲ್ಲಿ ಜಾಗವನ್ನು ದರ್ಕಾಸು ಮಾಡಿ ಕೊಡ್ತಾರಂತೆ' ಮಾಣಿಗ ಕೈಯಲ್ಲಿದ್ದ ಕತ್ತಿಯನ್ನು ಪಕ್ಕದಲ್ಲಿಟ್ಟು ನೆಟ್ಟಗೆ ಕುಳಿತು ಬೊಗಟನ ಮುಖ ನೋಡಿದಳು.

ಹೌದು ಹೆಂಡವೇನೂ ಕುಡಿದಿಲ್ಲ. ಕಾಲು ನಿಂತಲ್ಲೇ ನಿಂತಿದೆ. ಮೈ ವಾಲುತ್ತಿಲ್ಲ. ಹಾಗಿದ್ದರೆ.. ಅವನು ಹೇಳುವುದು ಸುಳ್ಳಲ್ಲ, ನಿಜವೇ. ಈತನಿಗೆ ಈ ಸುದ್ದಿ ಹೇಗೆ ಗೊತ್ತಾಯ್ತು? ಅವಳು ಕೇಳಿದಳು.

'ನಿನಗೆ ಈ ಸುದ್ದಿ ಹೇಳಿದವರು ಯಾರು?'

ಬೊಗಟನ ಬುದ್ಧಿ ಈಗ ಹತೋಟಿಗೆ ಬಂತು. ನಾಲಗೆ ಸಡಿಲ ಬಿಟ್ಟು ಆಗಿದೆ. ಈಗ ಗತ್ತಿನಲ್ಲಿ ಹೇಳಿದ, 'ನನಗೆ ಯಾರಾದರೂ ಹೇಳಲಿ. ನೀನು ಮಾತ್ರ ತಪ್ಪಿಯೂ ಯಾರಿಗೂ ಹೇಳಬೇಡ. ಈ ಸುದ್ದಿಯನ್ನೇ ಎತ್ತಬೇಡ. ಆಯ್ತಾ? ಈ ಸುದ್ದಿಯನ್ನು ಯಾರಿಗೂ ಹೇಳಬಾರದೆಂದು ಧನಿಯವರು ನನಗೆ ಹೇಳಿದ್ದಾರೆ. ಗೊತ್ತಾಯ್ತಾ?'

ಎರಡು ಮೂರು ದಿನಗಳ ಬಳಿಕ ತನಿಯರು ಮತ್ತು ಪೀಂಚಲು ಕತ್ತಿ ಹಿಡಿದುಕೊಂಡು ಮುಳಿಹುಲ್ಲು ಹೆರೆಯಲು ಹೊರಟರು. ಮಾಣಿಗಳನ್ನೂ ಕರೆದರು. 'ಯಜಮಾನಿಯಮ್ಮ ಹೇಳಿದ್ದಾರೆ, ಪದವಿನ ಮುಳಿಯಲ್ಲಿ ಅರೆವಾಸಿ ಹೆರೆಯಿರಿ. ಈ ವರ್ಷ ಮಾತ್ರ ನಮಗೆ ಮುಳಿಹುಲ್ಲು ಬೇಕು. ಮುಂದಿನ ವರ್ಷದಿಂದ ಕೊಟ್ಟಿಗೆಗೂ ಭತ್ತ ಕುಟ್ಟುವ ಜಾಗಕ್ಕೂ ಜಾನುವಾರುಗಳ ಹಟ್ಟಿಗೂ ಹೆಂಚು ಹಾಕ್ತೇವೆ. ಈಗ ಒಮ್ಮೆ ನಮಗೆ ಹೆರೆಯಿರಿ. ಉಳಿದರೆ ನಿಮಗೂ ಆಯ್ತು ಎಂದಿದ್ದಾರೆ. ಮಾಣಿಗ ಅಕ್ಕಾ, ಈ ಸಲ ನಿಮಗೂ ಮಾಡು ಹೊದಿಸಲು ಇದೆಯಾ? ಈಗ ನಮ್ಮ ಜತೆ ಬರ್ತೀಯಾ?'

'ಮುಳಿ ಹೆರೆಯಲು ನಾನು ಬರ್ತೇನೆ. ಆದರೆ ನಮಗೆ ಈ ಸಲ ಮುಳಿ ಹೊದಿಸುವುದು ಬೇಡವೆಂದು ಯಜಮಾನರು ಹೇಳಿದರು.'

'ಮುಳಿ ಪೂರ್ತಿ ಕುಂಬಾಗಿದೆ. ಮಳೆ ನೀರು ಒಳಗೆ ಬೀಳದ ಹಾಗೆ ಮಾಡುವುದು ಹೇಗೆ?' ತನಿಯರು ಕೇಳಿದಳು.

'ಇಲ್ಲ ತನಿಯರಕ್ಕ, ನಾವು ಪದವಿನ ಮನೆಗೆ ಹೋಗ್ತೇವೆ'.

'ಪದವಿನಲ್ಲಿ ನಿಮ್ಮ ಹೊಸ ಬಿಡಾರವಾ? ಯಾರ ಮನೆಗೆ ಹೋಗ್ತೀರಿ? ಗುತ್ತಿನ ಕೆಲಸ ಬಿಡ್ತೀರಾ?'

ಪೀಂಚಲು ಕೇಳಿದಳು.

'ಹಾಗೇನೂ ಇಲ್ಲ. ಪದವಿನಲ್ಲಿ ದನಿಯವರು ಮನೆ ಮಾಡಿ ಕೊಡ್ತಾರಂತೆ.'

'ಹೌದಾ!' ತನಿಯರೂ ಪೀಂಚಲೂ ಒಮ್ಮೆಗೇ ಉದ್ಗರಿಸಿದರು.

ಸುದ್ದಿ ಬಾಯಿಯಿಂದ ಬಾಯಿಗೆ ಹೋಯ್ತು. ಊರಿಡೀ ಪುಕಾರು ಹಬ್ಬಿತು. ಅಂತಕ್ಕನವರು ಪದವಿನಲ್ಲಿ ಆಳುಗಳಿಗೆ ಗುಡಿಸಲು ಕಟ್ಟಿ ಕೊಡ್ತಾರಂತೆ.

ಸೇನೆರ ಮೂಲೆಗೂ ಸುದ್ದಿ ಹೋಗಿ ದೆಯ್ಯಕ್ಕನಿಗೂ ಯಾರೋ ಸುದ್ದಿ ಮುಟ್ಟಿಸಿದರು. ಅವರು ತಡಮಾಡದೆ ತ್ಯಾಂಪಣ್ಣ ಸಾಮನಿಯವರ ಕಿವಿಗೆ ತಲಪಿಸಿದರು.

'ಅಯ್ಯೋ, ಇದ್ಯಾರಪ್ಪ, ರೇಡಿಯೋದಲ್ಲಿ ವರ್ತಮಾನ ಹಬ್ಬಿದಂತೆ ಈ ಸುದ್ದಿಯನ್ನು ಗಾಳಿಗೆ ಹಬ್ಬಿಸಿದ್ದು, ಬೊಗಟನಾ ಮಾಯ್ಲನಾ?'

ಈ ಸುದ್ದಿ ಹರಡಿದ ಬೆನ್ನಲ್ಲೇ ಇನ್ನೊಂದು ಸಮಾಚಾರವೂ ಹಬ್ಬಿತು. ಪದವಿನಲ್ಲಿರುವ ಗುತ್ತಿನ ಭೂಮಿಯನ್ನು ಪೂರ್ತಿ ದರ್ಕಾಸು ಮಾಡಿ ಕೊಡ್ತಾರಂತೆ. ಪಂಚಾಯತ್ ಆಫೀಸಿಗೆ ಜನ ಮೇಲಿಂದ ಮೇಲೆ ಬಂದು ಕೇಳತೊಡಗಿದರು. ಮುಂಜಾಗ್ರತೆಯ ಕೆಲವರು ಅಂತಕ್ಕನನ್ನು ನೋಡಲು ಗುತ್ತು ಮನೆಗೇ ಹೋದರು. ದುಡ್ಡಿದ್ದವರು ಬರಿಕೈಯಲ್ಲಿ ಹೋಗಲಿಲ್ಲ. ಜನರ ಹಿಂದೆ ಜನರು ಬರುತ್ತಿದ್ದಾಗ ಅಂತಕ್ಕ ಗಾಬರಿಯಾದರು. ಶಂಕರನನ್ನು ಮೆಲ್ಲ ಕರೆದು ಕೇಳಿದರು. 'ಏನು ಮಾಡುವುದು ಶಂಕರಾ? ವಿಚಾರ ಎಲ್ಲೆಲ್ಲೋ ಹೋಗ್ತಾ ಇದೆ. ನಮ್ಮ ಕೈತಪ್ಪುವಂತೆ ಕಾಣುತ್ತದೆ.'

ಮಸೀದಿಯ ಶೇಕ್ ಸಾಹೇಬರು ಬಂದರು, ಶಾಲೆಯ ಭಟ್ರು ಬಂದರು. ಆರ್.ಎಸ್.ಎಸ್. ಸುಬ್ರಾಯ ಕಿಣಿಯವರು ಆ ಜಾಗ ಅವರಿಗೆ ಎಷ್ಟು ಅಗತ್ಯವಾಗಿದೆ ಎಂದು ತೋರಿಸಿದರು. ಗುತ್ತಿನ ಕೆಲವು ಒಕ್ಕಲು ಮನೆಗಳವರು ಕೊಡುವುದಿದ್ದರೆ ಅವರಿಗೇ ಮೊದಲ ಆದ್ಯತೆ ಕೊಡಬೇಕೆಂದರು. ಪ್ರತಿದಿನ ಈ ಜನರ ಒತ್ತಾಯ ನೋಡುವಾಗ ಪದವಿನ ಜಾಗದ ನಾಲ್ಕರಷ್ಟಿದ್ದರೂ ಜನರು ಕೇಳಲು ಸಿದ್ಧರಾಗಿದ್ದಾರೆಂದು ಅಂತಕ್ಕನಿಗೆ ತೋರಿತು. ಹಾಗಾಗಿ ಗಾಬರಿಬಿದ್ದು ಶಂಕರನನ್ನು ಕರೆದು ಕೇಳಿದರು. ಅದಕ್ಕೆ ಆತ 'ಗಾಬರಿಯಾಗುವುದಕ್ಕೇನೂ ಇಲ್ಲ. ಪಂಚಾಯತಿಯಲ್ಲೂ ಜಿಲ್ಲಾ ಆಫೀಸಿನಲ್ಲೂ ವಿಚಾರಿಸಿ ನಿಮಗೆ ತಿಳಿಸುತ್ತೇನೆ' ಅಂದ.

ಸರ್ಕಾರಕ್ಕೆ ಹೋದ ಕೆಲಸಕ್ಕೆ ಆಮೆ ನಡಿಗೆಯಷ್ಟೇ ವೇಗವಿರುತ್ತದೆಂದು ಶಂಕರನಿಗೆ ಗೊತ್ತಿದ್ದರೂ ವಾರಕ್ಕೊಮ್ಮೆ ಮಂಗಳೂರಿಗೆ ಹೋಗಿ ವಿಚಾರಿಸುತ್ತಿದ್ದ.

ಆ ಜಾಗದಲ್ಲಿ ಈಗ ಏನು ಮಾಡುವುದಿದ್ದರೂ ಎಚ್ಚರಿಕೆಯಿಂದಲೇ ಮಾಡಬೇಕು. ವಿಷಯ ಅಂತಕ್ಕನ ಕೈಮೀರಿ ಹೋಗಿತ್ತು. ತನ್ನೊಳಗಿನ ಸಂಕಟವನ್ನು ಶಂಕರ ಬಾಯಿಬಿಟ್ಟು ಹೇಳುವುದಿಲ್ಲ. ಅವನ ನಗುಮಾಸಿದ ಮುಖವನ್ನು ನೋಡುವಾಗ ಭವಾನಿಗೆ ಭಯ ವಾಗುತ್ತದೆ. ವಿಷಯ ಪೂರಾ ಕಂಬಳದ ಗದ್ದೆಯಂತೆ ರಾಡಿಯಾಗಿ ನಾಳೆ ಏನಾದೀತೋ. ಈ ಸರಕಾರ ಇನ್ನು ಯಾವ ಹೊಸ ಕಾನೂನನ್ನು ತರುತ್ತದೋ ಹೇಳುವುದಕ್ಕಾಗುವುದಿಲ್ಲ. ಕಣ್ಣುಕಟ್ಟಿ ಬಿಟ್ಟಂತಾಗಿತ್ತು. ಯಾವುದನ್ನೂ ಹೇಳುವುದಕ್ಕೆ ಸಾಧ್ಯವಿಲ್ಲದ ಸ್ಥಿತಿ.

ಅರ್ಕಾವತಿಯ ರಂಗಪ್ರವೇಶ

ಆ ದಿನ ಮಂಗಳವಾರ. ಸ್ಟೋರಿಗೆ ರಜೆ. ಅಲ್ಲದೆ ಸರ್ಕಾರದ ಆಹಾರ ಇಲಾಖೆಯಿಂದ ಆಹಾರ ಸಾಮಗ್ರಿಗಳೂ ಬಿಡುಗಡೆಯಾಗಿರಲಿಲ್ಲ. ಎಷ್ಟು ಬರಬಹುದು ಏನು ಬರಬಹುದು ಎಂಬ ವಿವರವನ್ನು ತಿಳಿಯಲು ಮೈಂದಣ್ಣ ಬೆಳಗ್ಗಿನ ಬಸ್ಸಿನಲ್ಲೇ ಮಂಗಳೂರಿಗೆ ಹೋಗಿದ್ದ. ಪಂಚಾಯತ್ ಆಫೀಸಿನಲ್ಲಿ ದರ್ಕಾಸಿನ ಅರ್ಜಿ ಎಲ್ಲಿಗೆ ತಲಪಿತೆಂದು ತಿಳಿದು ಅದಕ್ಕಾಗಿ ಪಟೇಲರು ಮಹಾಬಲಣ್ಣ ಹಾಗೂ ಅವರ ಮಗ ವಕೀಲರ ಜೊತೆಯಲ್ಲಿ ಮಾತನಾಡಿ ಕೆಲಸ ಬೇಗ ಮಾಡಿಸಬೇಕೆಂದು ಅವನೊಂದಿಗೆ ಶಂಕರನೂ ಮಂಗಳೂರಿಗೆ ಹೋಗಿದ್ದ.

ಭವಾನಿ ತನಿಯರುವನ್ನು ಕರೆದುಕೊಂಡು ಸ್ಟೋರು ಸ್ವಚ್ಛ ಮಾಡಲು ಹೋದಳು. ಗೋಣಿ ತೂತಾಗಿ ಸುರಿದ ಅಕ್ಕಿ, ಧಾನ್ಯಗಳನ್ನೆಲ್ಲ ಒಟ್ಟುಗೂಡಿಸಿ ಗೋಣಿಯಲ್ಲಿ ತುಂಬಿಸಿ ಗುತ್ತಿಗೆ ಸಾಗಿಸಿದರು. ಕೋಳಿಗಳಿಗೆ ಕೊಡಲು ಆಗುತ್ತದೆ. ಜಿರಳೆಗಳನ್ನೂ ಇಲಿಯ ಹಿಕ್ಕೆಗಳನ್ನೂ ಅದರಿಂದ ಹೆಕ್ಕಿ ತೆಗೆಯಲು ಇಬ್ಬರು ಆಳುಗಳಿಗೆ ಒಂದು ದಿನದ ಕೆಲಸ ಉಂಟು. ತನಿಯರುಗೆ ಗೋಣಿ ಇಳಿಸಲು ತಿಮ್ಮ ಸಹಾಯಕ್ಕೆ ಬರುವುದಿಲ್ಲ. 'ನೀನೇ ಮಾಡು ನಿನಗೆ ದುಡ್ಡು ಕೊಡ್ತಾರಲ್ಲ. ನನಗೆ ತಿಂಗಳ ಸಂಬಳವಷ್ಟೇ ಸಿಗುವುದು' ಅನ್ನುತ್ತಾನೆ. ದಿನವೂ ಮೈಂದಣ್ಣನ ಕಣ್ಣು ತಪ್ಪಿಸಿ ಸಕ್ಕರೆ ಕದ್ದು ಅದನ್ನು ಸೊಂಟದಲ್ಲಿ ಸಿಕ್ಕಿಸಿ ರಾತ್ರಿ ಹೋಗುವಾಗ ತೆಗೆದುಕೊಂಡು ಹೋಗುತ್ತಾನೆ. ಆ ಗುಟ್ಟು ಯಾರಿಗೂ ಗೊತ್ತಿಲ್ಲ. ತನಿಯರು ಏನಾದರೂ ಅನುಮಾನ ಬಂದು ಕೇಳಿದರೆ, ನೀರಿನಲ್ಲಿರುವ ಮೀನು ನೀರು ಬೇಕೆಂದೇ ಕುಡಿಯುತ್ತದಾ? ಎಂದು ಕೇಳುತ್ತಾನೆ. 'ಪೊಟ್ಟನ ಬಳಿಯೂ ಪುಡಿ ಮದ್ದಿದೆ' ಎಂಬಂಥವನು ತಿಮ್ಮ. ಪ್ರತಿ ತಿಂಗಳ ಕೊನೆಗೆ ಭವಾನಿ ಸ್ಟೋರಿಗೆ ಬಂದು ಬರೆದ ಲೆಕ್ಕವೂ ಉಳಿದ ಧಾನ್ಯಗಳ ಲೆಕ್ಕವೂ ತಾಳೆಯಾಗುತ್ತದಾ ಎಂದು ನೋಡಿ ವಿಚಾರಿಸುತ್ತಾಳೆ. ಉಳಿದಿರುವ ಧಾನ್ಯ ಕಡಿಮೆಯಾದರೆ ತಿಮ್ಮನಿಗೆ ಆ ತಿಂಗಳ ಪೂಜೆ ಸಲ್ಲುತ್ತದೆ. ಅದನ್ನು ಅವಳು ಕೊಂಡು ಹೋಗದ ಯಾರಾದರೂ ಒಬ್ಬರ ಲೆಕ್ಕಕ್ಕೆ ಹಾಕಿ ತಿಮ್ಮನನ್ನು ಗದರಿಸುವಳು.

ಅದು ಆ ತನಿಯರುವಿನಿಂದ ಆದ ಕೆಲಸವೆಂದು ತಿಮ್ಮ ಅವಳನ್ನು ಮೆಲ್ಲ ಮೆಲ್ಲ ಬೈಯುತ್ತಾನೆ. ಇದು ಪ್ರತಿದಿನದ ವಿಧಿ.

ತನಿಯರು ಗುಡಿಸುವ ಪೊರಕೆಯನ್ನು ಕೆಳಗಿಟ್ಟು 'ಗೋಣಿ ಇಳಿಸಲು ಬನ್ನಿ ಅಂದರೆ 'ನೀನೇ ಇಳಿಸು, ಚಾಡಿ ಹೇಳಲು ಆಗುತ್ತದೆ, ಗೋಣಿ ಇಳಿಸಲು ಆಗುವುದಿಲ್ಲವೇ?' ಎಂದು ಸವಾಲು ಹಾಕುತ್ತ ಆದಷ್ಟು ನಿಧಾನವಾಗಿ ಬರುತ್ತಾನೆ.

ಒಮ್ಮೊಮ್ಮೆ ತಿಮ್ಮ ತನಿಯರುವಿನ ಮುಂದೆಯೂ ತುಂಬ ಸಾಚಾ ಆಗುತ್ತಾನೆ. 'ತನಿಯರೋ, ನಾನು ಪೇಟೆಯ ಹತ್ತಿರ ಹೋಗಿಬರುತ್ತೇನೆ. ಅಕ್ಕ ಕೇಳಿದರೆ ಅವನು ಗುಡ್ಡಕ್ಕೆ ಹೋದ ಅಂತ ಹೇಳು' (ಮಲ ವಿಸರ್ಜನೆಗೆ).

ಆತ ನಿಜವಾಗಿಯೂ ಹೋಗುವುದು ಒಂದು ಬೀಡಿ ಎಳೆಯಲು. ಸ್ವಲ್ಪ ದೂರದಲ್ಲಿ ಕುಂಟಲ ಪೊದೆಗಳ ಹಿಂದೆ ಬೀಡಿ ಹಚ್ಚಿ ಆರಾಮವಾಗಿ ಆಕಾಶ ನೋಡಿಕೊಂಡು ಅದನ್ನು ಹತ್ತು ಹದಿನೈದು ನಿಮಿಷ ಎಳೆದು ಬರುತ್ತಾನೆ. ತನಿಯರುಗೆ ಅವನ ಗುಟ್ಟು ಗೊತ್ತಿದೆ. ವಾಪಸ್ಸು ಬರುವಾಗ ದಾಲಚೀನಿಯ ಎಲೆಯನ್ನು ಜಗಿಯುತ್ತ ಬರುತ್ತಾನೆ. ಅದರ ವಾಸನೆಗೆ ಬೀಡಿಯ ದುರ್ನಾತ ಗೊತ್ತಾಗುವುದಿಲ್ಲ.

'ಏನನ್ನು ಅಡಿಮೇಲು ಮಾಡಿ ಬಂದಿರಿ? ನೀವು ದಾಲಚೀನಿ ಸೊಪ್ಪು ಮೇಯಲು ಹೋಗಿದ್ದಾ?' ಎಂದು ಅವಳು ಕೇಳುತ್ತಾಳೆ.

'ನಿನಗೇಕೆ ಅದು? ಹಾಲಿಗೆ ಬಂದವರಿಗೆ ಎಮ್ಮೆಯ ಕ್ರಯ ಏಕೆ?'

'ಒಂದಲ್ಲ ಒಂದು ದಿನ ನಿಮ್ಮ ಕಳ್ಳತನ ಬಯಲಾಗುತ್ತದೆ ನೋಡಿ. ನನಗೇನು?' ಎನ್ನುತ್ತಾಳೆ ತನಿಯರು.

ಆ ದಿನ ಭವಾನಿ ಲೆಕ್ಕ ಪರಿಶೀಲಿಸುವಾಗ ತನಿಯರು ಸ್ಟೋರಿನ ಬಾಗಿಲ ಮುಂದಿನ ಅಂಗಳವನ್ನು ಗುಡಿಸಿ ಸೆಗಣಿ ಸಾರಿಸಲು ಸಿದ್ಧಳಾಗುತ್ತಿದ್ದಳು. ನೀರು ತರಲು ಹೋದ ತಿಮ್ಮನ ಪತ್ತೆಯಿಲ್ಲ. ತನಿಯರು ಪೊರಕೆ ಕೈಯಲ್ಲಿ ಹಿಡಿದುಕೊಂಡು ಸ್ಟೋರಿನ ಒಳಗೆ ಓಡುತ್ತ ಬಂದಳು. 'ಚಿಕ್ಕ ಯಜಮಾನ್ರಮ್ಮ, ಆಚಾರಿಯ ಮಗಳು ಈ ಕಡೆ ಬರುತ್ತ ಇದ್ದಾರೆ' ಎಂದಳು.

'ಪೊರಕೆಯನ್ನು ಅದೇಕೆ ಬೀಸಿಕೊಂಡು ಬರ್ತೀಯಾ. ಕೆಳಗೆ ಹಾಕಿ ಹೇಳು ಅದ್ಯಾರು ಬರುವುದು?'

'ಮರಳುತೋಟದ ಆಚಾರಿ ಮಗಳು ಮೈಸೂರಿಗೆ ಹೋಗಿದ್ದವರು ಬರುತ್ತಿದ್ದಾರೆ. ಗುಡ್ಡದ ಮೇಲಿನಿಂದ ಇಳಿದು ಈ ಕಡೆಗೇ ಬರುತ್ತಿದ್ದಾರೆ.'

ಅಷ್ಟು ಹೇಳುವಾಗ ಅರ್ಕಾವತಿ ಸ್ಟೋರಿನ ಬಾಗಿಲ ಹತ್ತಿರ ಬಂದಾಗಿತ್ತು. ಕೈಸನ್ನೆಯಲ್ಲಿ ನಿನ್ನ ಮಾತು ನಿಲ್ಲಿಸು ಎಂದು ತನಿಯರುಗೆ ಹೇಳಿ ಭವಾನಿ ಅರ್ಕಾವತಿಯನ್ನು ನೊಡಿ ನಗುತ್ತ ಕೇಳಿದಳು.

'ಯಾವಾಗ ಬಂದಿರಿ ಅರ್ಕಾವತಿ? ಮೈಸೂರಿನಿಂದ ಬರುತ್ತಿದ್ದೀರಾ?'

'ನಿನ್ನೆ ಸಂಜೆ ಬಂದೆ.. ಅಪ್ಪನಿಗೆ ಸೊಂಟಕ್ಕೆ ಪೆಟ್ಟಾಗಿ ಭಾರಿ ಕಷ್ಟಪಡ್ತಿದ್ದಾರೆಂದು

ಪದವಿನ ಹೆಡ್ಮಾಸ್ಟರ್ ಸಿಕ್ಕಿದವರು ಹೇಳಿದರು. ಅವರು ದೇವರಾಜ ಮಾರ್ಕೆಟ್ಟಲ್ಲಿ ಸಿಕ್ಕಿದರು.'

'ಕುಳಿತುಕೊಳ್ಳಿ. ಮಗುವನ್ನು ಕೆಳಗಿಳಿಸಿ. ಮಗು ನಡೆಯುತ್ತದಾ?'

'ಹಿಡಿದುಕೊಂಡು ನಡೆಯುತ್ತಿದ್ದಳು. ಈಗ ಕೈಬಿಟ್ಟು ಒಂದೊಂದು ಹೆಜ್ಜೆ ಇಡುತ್ತಾಳೆ.'

ಮಗುವನ್ನು ಕೆಳಗಿಳಿಸಿ ಅರ್ಕಾವತಿ ತಾನೂ ಬೆಂಚಿನಲ್ಲಿ ಕುಳಿತಳು. ಅರ್ಕಾವತಿ ಮೊದಲಿನ ಹಾಗೆ ಇರಲಿಲ್ಲ. ಶರೀರ ಸೊರಗಿತ್ತು. ಮುಖದಲ್ಲಿ ಆಯಾಸದ ಕಳೆ.

'ಮಗುವಿನ ಹೆಸರೇನು?' ಭವಾನಿ ಕೇಳಿದಳು.

ಹಾಲು ಬಣ್ಣದ ತಲೆತುಂಬ ಸುರುಳಿಗೂದಲಿನ ನಗುಮುಖದ ಮಗು. ನಗುವಾಗ ಬಲಕೆನ್ನೆಯಲ್ಲಿ ಗುಳಿ ಬೀಳುತ್ತದೆ. ಯಾರನ್ನೋ ನೋಡಿದಂತೆ ಭಾಸವಾಯ್ತು.

'ಅವಳ ಹೆಸರು ಶಾಂಭವಿ.'

ಓ, ಶಂಭುಮಾವನನ್ನು ಹೋತು ಬಂದಿದೆ ಈ ಮಗು. ಅದಕ್ಕೆ ಸಂಶಯವೇ ಇಲ್ಲ. ಭವಾನಿ ಮನಸ್ಸಿನಲ್ಲಿ ಯೋಚಿಸಿದರೂ ಬಾಯಲ್ಲಿ ಹೇಳಲಿಲ್ಲ.

'ಅರ್ಕಾವತಿ, ಮೈಸೂರಲ್ಲಿ ನೀವು ಕೆಲಸದಲ್ಲಿದ್ದೀರಾ?'

'ಕೆಲಸಾಂತ ಇರಲಿಲ್ಲ. ಸುಬ್ಬಣ್ಣ ಆಚಾರ್ ಎಂಬ ತಿರುಮಕೂಡಲಿನ ಒಬ್ಬರು ಬ್ರಾಹ್ಮಣರು ನನ್ನ ಮಾವನ ಮನೆಯ ಹತ್ತಿರ ಇದ್ದರು. ಅವರು ಹಾರ್ಮೋನಿಯಂ ಬಾರಿಸುತ್ತ ಭಜನೆ ಹೇಳ್ತಿದ್ದರು. ಕಲಿಸುತ್ತಲೂ ಇದ್ದರು. ಅವರಿಗೆ ತುಂಬ ಸಮಯದ ಬಳಿಕ ಒಬ್ಬ ಮಗ ಹುಟ್ಟಿದ. ಅವನು ಹುಟ್ಟುವಾಗಲೇ ಕುರುಡ. ಹೆಂಡತಿ ಬದುಕಿರುವ ವರೆಗೂ ಆ ಮಗನನ್ನು ಭಟ್ರು ಚೆನ್ನಾಗಿಯೇ ನೋಡಿಕೊಳ್ಳುತ್ತಿದ್ದರು. ಅವನೂ ತುಂಬ ಶುಶ್ರಾವ್ಯವಾಗಿ ಭಜನೆ ಹಾಡುತ್ತಿದ್ದ. ಹೆಂಡತಿ ತೀರಿಹೋದ ಮೇಲೆ ಸುಬ್ರಾಯ ಭಟ್ಟರ ರೀತಿಯೇ ಬದಲಾಯ್ತು. ಅವರು ಭಜನೆ ಹಾಡು ಕಲಿಸುವುದನ್ನು ಬಿಟ್ಟು ದೇವರಾಜ ಮಾರ್ಕೆಟ್ಟಿನಲ್ಲಿ ಒಂದು ಚಿಕ್ಕ ಅಂಗಡಿ ತೆರೆದು ಅದರಲ್ಲಿ ಮಸಾಲೆ ಪದಾರ್ಥಗಳನ್ನು ಮಾರಲು ಆರಂಭಿಸಿದರು. ರಸಂಪೌಡರ್, ಸಾಂಬಾರ್ ಪೌಡರ್, ಪುಳಿಯೋಗರೆ ಮಿಕ್ಸ್, ಹೀಗೆ ಬೇರೆ ಬೇರೆ ಭಕ್ಷ್ಯಗಳ ಮಸಾಲೆಗಳನ್ನು ಅವರ ಮನೆಯಲ್ಲೇ ತಯಾರು ಮಾಡಿ ಮಾರುತ್ತಿದ್ದರು.'

'ನಾನು ಮೈಸೂರಿಗೆ ಹೋದವಳು ಅವರ ಮನೆಯಲ್ಲಿದ್ದೆ. ಅವರಿಗೂ ಮಗನನ್ನು ನೋಡಲು ಒಂದು ಜನ ಬೇಕಿತ್ತು. ಅವರ ಹೆಂಡತಿ ನಾಗಮ್ಮ ಇರುವ ತನಕ ಪೂಜೆ, ಹಬ್ಬ, ಹರಿಕತೆ, ದೇವಸ್ಥಾನಗಳಿಗೆಲ್ಲ ಹೋಗುವಾಗ ನನ್ನನ್ನೂ ಕರೆದುಕೊಂಡು ಹೋಗುತ್ತಿದ್ದರು. ಮೈಸೂರಿಗೆ ಹೋದಾಗ ಭಟ್ರ ಮನೆಯಲ್ಲದೆ ನನಗೆ ಬೇರೆ ನೆಲೆ ಇರಲಿಲ್ಲ. ನಾನು ಗಂಡನ ಮನೆಗೆ ಮೈಸೂರಿಗೆ ಹೋದ ಮೇಲೆ ಅವರ ಮಗ ರಾಘವೇಂದ್ರ ಹುಟ್ಟಿದ್ದು. ಅವನಿಗೆ ಈಗ ಹನ್ನೆರಡು ವರ್ಷವಾದರೂ ನಮಗೆ ಆತ ಪುಟ್ಟ ಮಗನಂತೆ.'

'ಸುಬ್ರಾಯ ಭಟ್ಟರಿಗೆ ತಿಳಿಸದೆ ಒಂದು ದಿನ ಸರ್ಕಾರಿ ಆಸ್ಪತ್ರೆಗೆ ಹೋಗಿ ನಾನು ಪರೀಕ್ಷೆ ಮಾಡಿಸಿಕೊಂಡೆ.'

ಭವಾನಿಗೆ ಅಷ್ಟಾಗುವಾಗ ಜ್ಞಾನೋದಯವಾಯ್ತು. ಇವಳು ಬಸಿರಿಯಾಗಿದ್ದಳು! ಹಾಗಿದ್ದರೆ ನೀವು ಮೈಸೂರಿಗೆ ಅಷ್ಟು ಆತುರಾತುರವಾಗಿ ಹೋದದ್ದು ಅದಕ್ಕೇ.'

'ಪೂರ್ತಿ ಅದೇ ಕಾರಣ ಅಲ್ಲ. ನನಗೆ ಆಗ ತಿಂಗಳ ದಿನ ಮುಂದೆ ಹೋಗಿತ್ತು. ಅದರಿಂದಾಗಿ ಏನೇನೋ ಆಗುತ್ತಿತ್ತು ಬೇರೆ. ಕೆಲವು ದಿನ ಕಳೆದಾಗ ಜೀವದ ಸ್ಥಿತಿಯೇ ಬೇರೆಯಾಯ್ತು. ಬೆಳಗ್ಗೆ ಏಳುವಾಗಲೇ ತಲೆ ತಿರುಗುವುದು, ಬಾಯಿಯಲ್ಲಿ ಜೊಲ್ಲು ಬರುವುದು, ಅನ್ನ ಬೇಯುವಾಗ ವಾಕರಿಕೆ ಬರುವುದು, ತಿಂದದ್ದೆಲ್ಲ ವಾಂತಿಯಾಗುವುದು ಹೀಗೆ ಆದಾಗ ಸಂಶಯವಾಗಿ ಬಿ.ಸಿ.ರೋಡಿನ ಲೇಡಿ ಡಾಕ್ಟರ್ ಸತ್ಯಮ್ಮನವರ ಬಳಿಗೆ ಹೋಗಿ ಪರೀಕ್ಷೆ ಮಾಡಿಸಿದೆ.'

'ಸಂತೋಷದ ವಿಚಾರ. ಏನೂ ಭಯವಿಲ್ಲ. ಸರಿಯಾಗಿ ಆಹಾರ ತೆಗೆದುಕೊಳ್ಳಿ. ಹಾಲು ಕುಡಿಯಿರಿ. ಹಣ್ಣು ತಿನ್ನಿ. ನಾಲ್ಕು ಮಾತ್ರೆ ಕೊಡ್ತೇನೆ, ಅವುಗಳನ್ನು ದಿನವೂ ತೆಗೆದುಕೊಳ್ಳಿ. ನಿಶ್ಶಕ್ತಿ ಕಡಿಮೆಯಾಗ್ತದೆ. ತಿಂಗಳು ತಿಂಗಳು ಚೆಕಪ್‌ಗೆ ಬನ್ನಿ ಅಂದರು.'

'ನನ್ನ ನಿಶ್ಶಕ್ತಿ ಕಡಿಮೆಯಾಗುವ ಬದಲು ಹೆಚ್ಚಾಗ್ತಾ ಹೋಯ್ತು. ವಾಪಸ್ಸು ಬಂದವಳು ಹೀಗೆ ಆಲೋಚನೆ ಮಾಡಿದೆ. ಈಗ ಆಗಿರುವ ಅಚಾತುರ್ಯವನ್ನು ಕಳೆದುಕೊಳ್ಳುವುದೇ ವಾಸಿ.'

'ಹಾಗಂತ ನಿಮ್ಮ ಮಾವನಿಗೆ ಹೇಳಿದೆ. ಅವರು ಕೂಡಲೇ 'ಇದು ಬುದ್ಧಿವಂತರ ಲಕ್ಷಣ. ನಾನು ನಾಳೆ ಮಂಗಳೂರಿಗೆ ಹೋಗಿ ಯಾರಾದರೂ ಲೇಡಿ ಡಾಕ್ಟರರು ಸಿಗ್ತಾರಾ ನೊಡ್ತೇನೆ. ಒಬ್ಬರಲ್ಲದಿದ್ದರೆ ಮತ್ತೊಬ್ಬರು ಸಿಗ್ತಾರೆ. ಮುಂದಿನ ಮಂಗಳವಾರ ಸ್ಟೋರಿಗೆ ರಜೆ ಇರ್ತದಲ್ಲ. ಅದರ ಮುನ್ನಾದಿನ ಮಂಗಳೂರಿಗೆ ಹೋಗಿ ಡಾಕ್ಟರರ ಬಳಿ ಅದನ್ನು ಕ್ಲೀನ್ ಮಾಡಿಸಿ ಸಂಜೆ ವಾಪಸ್ಸು ಬರುವ. ಏನು? ನೀನು ಯಾವ ಭಯವನ್ನಾಗಲೀ ಬೇಸರವನ್ನಾಗಲೀ ಮನಸ್ಸಿಗೆ ತಂದುಕೊಳ್ಳಬೇಡ. ಗೊತ್ತಾಯ್ತಾ? ಅಂದರು.'

'ಅಷ್ಟು ಹೇಳಿದವರು ಮರುದಿನವೇ ಯಾವ ಬೇಸರವಾಗಲೀ ಗಾಬರಿಯಾಗಲೀ ಮಾಡದೆ ಹೊರಟೇಹೋದರು. ನನ್ನನ್ನು ನಡುನೀರಿನಲ್ಲಿ ನಿಲ್ಲಿಸಿದರು. ಅವರ ಮಡದಿ ಮಕ್ಕಳಿಗೆ ಅನುಕೂಲವಾಗಿರುವ ತಂದೆ, ಸೋದರರು ಅಲ್ಲದೆ ಧಾರಾಳ ಸಂಬಂಧಿಕರೆಲ್ಲ ಇದ್ದಾರೆ. ಗತಿಗೆಟ್ಟು ಅನಾಥೆಯಾಗಿ ಬೀದಿಪಾಲಾದವಳು ನಾನು ಮಾತ್ರ.'

'ಅವರ ಅಂತ್ಯ ಹೀಗೆ ದಿಢೀರನೆ ಆಗುತ್ತದೆ, ನನ್ನ ಗತಿ ಹೀಗಾಗ್ತದೆ, ದೇವರ ಇಚ್ಛೆ ಹೀಗಿರಬಹುದೆಂಬ ಯೋಚನೆಯೇ ನನಗಿರಲಿಲ್ಲ.'

'ಒಳ್ಳೆಯದು ಕೆಟ್ಟದ್ದು ನಿರ್ಧರಿಸುವವರು ಬೇರೆಯೇ ಇದ್ದಾರೆ. ಇದು ಕಲಿಗಾಲ. ಅವನವನ ಕರ್ಮಫಲ ಇವತ್ತಿನದ್ದು ನಾಳೆ ಅವನವನಿಗೇ ಸಿಗುತ್ತದೆಂಬ ಮಾತು ನಿಜವಾಯ್ತು.'

ಅರ್ಕಾವತಿಯ ಮಾತುಗಳನ್ನು ಕೇಳಿ ಭವಾನಿಯ ಎದೆ ನಡುಗಿತು. ತಾನು ಒಂದು ಕ್ಷಣದ ಕೋಪದ ಕೈಗೆ ಬುದ್ಧಿ ಕೊಟ್ಟು ಮಾಡಿದ ಅಚಾತುರ್ಯದ ಫಲ ಇಷ್ಟು

ಘೋರವಾದೀತೆಂದು ಅವಳು ಕನಸಲ್ಲೂ ಭಾವಿಸಿರಲಿಲ್ಲ. ಈ ಬಡ ಹೆಣ್ಣುಮಗಳ ಬಾಳುವೆ ಎಲ್ಲೆಲ್ಲೋ ಆಯ್ತು. ಚೌಟರ ಮಡದಿ ಮಕ್ಕಳು ಮೂರನೆಯವರ ಅನ್ನಕ್ಕೆ ಬೀಳುವಂತಾಯ್ತು. ಸರಿಯಾದ ಯಜಮಾನರ ಆಧಾರವಿಲ್ಲದ ಗುತ್ತು ಮನೆ ಕೋಲಿಲ್ಲದ ದೋಣಿ ಕಾಲದ ಪ್ರವಾಹದಲ್ಲಿ ಮುಳುಗುತ್ತ ಈಗಲೋ ಆಗಲೋ ದಡಸೇರದೆ ನಿರ್ನಾಮವಾಗುವಂತಾಯ್ತು.

ಇದೆಲ್ಲ ಯಾಕಾಯ್ತು? ನನ್ನ ಒಂದು ಕ್ಷಣದ ಉಗ್ರಕೋಪದಲ್ಲಿ ಎರಡು ಜೀವಗಳು ಆಕಾಶಕ್ಕೆ ಹಾರಿದುವು. ಗಣಪ ಖಾರ್ವಿಯ ಅನ್ಯಾಯ, ಅನೀತಿಗಳು ಅವನನ್ನು ಯಾವತ್ತಾದರೂ ಬಲಿ ತೆಗೆಯುತ್ತಿದ್ದುವು. ಆ ತರದ ಪಾಪದ ದಾರಿಗೆ ನಾನೇಕೆ ಮನಸ್ಸು ಮಾಡಿದೆ? ದೇವಿ ಚಾಮುಂಡಿ, ಈ ಪಾಪಕ್ಕೆ ನನ್ನನ್ನು ಕ್ಷಮಿಸು. ಪರಿಹಾರದ ದಾರಿ ತೋರಿಸು, ತಿಳಿಯದೆ ಮಾಡಿದ ತಪ್ಪಿಗೆ ಕ್ಷಮೆ ನೀಡು ಆದಿಶಕ್ತಿ!

ಭವಾನಿಯ ಕಣ್ಣಿನಿಂದ ನೀರು ಇಳಿಯಿತು. ಪಶ್ಚಾತ್ತಾಪದ ಹರಿವು ಅದು. ಒಡಲನ್ನು ಪವಿತ್ರಗೊಳಿಸುವ ತೀರ್ಥಜಲ ಅದು.

ಭವಾನಿ ಮಾತನಾಡದೆ ಆಲೋಚನೆಯಲ್ಲಿ ಮುಳುಗಿರುವುದನ್ನು ನೋಡಿ ಅರ್ಕಾವತಿಗೆ ಅಚ್ಚರಿಯಾಯ್ತು. ತಾನು ಹೇಳಿದ ಮಾತಿನಿಂದ ಅವರ ಮಾವನಿಂದಾದ ತಪ್ಪಿಗಾಗಿ ಬೇಸರವಾಯ್ತಾ. ತಾನು ಹಾಗೆ ಹೇಳಿದ್ದರಿಂದ ಅವರಿಗೆ ಅವಮಾನವಾಗಿರ ಬಹುದು. ತಾನೇಕೆ ಅದನ್ನು ಹೇಳಬೇಕಾಗಿತ್ತು ಎಂದು ಯೋಚಿಸಿದ ಅರ್ಕಾವತಿಗೆ ಮುಂದೇನು ಮಾತನಾಡಲೂ ತೋಚಲಿಲ್ಲ.

'ಭವಾನಿ ಅಕ್ಕ, ನಾನು ಹೇಳಿದ್ದು ನಿಮಗೆ ಬೇಸರವಾಯ್ತೇ?' ಅರ್ಕಾವತಿ ಕೇಳಿದಳು.

ಆಗ ಭವಾನಿ ನಿಜಸ್ಥಿತಿಗೆ ಬಂದಳು.

'ಇಲ್ಲ ಅರ್ಕಾವತಿ, ಅವರವರು ಮಾಡಿದ ಕರ್ಮದ ಫಲ ಅವರವರಿಗೆ ಸಲ್ಲಬೇಕು. ಮಾವ ಏನು ಮಾಡಿದರೋ ಅದು ಒಳ್ಳೆಯದೋ ಕೆಟ್ಟದ್ದೋ ಅವರೊಂದಿಗೇ ಹೋಯ್ತು. ಅದನ್ನು ಹೇಳಲು ಅದನ್ನು ನಿರ್ಣಯಿಸಲು ನನಗೇನು ಅಧಿಕಾರವಿದೆ? ಆ ವಿಚಾರದಲ್ಲಿ ದುರದೃಷ್ಟಕ್ಕೆ ಒಳಗಾದವರು ನೀವು. ಬೇಕಾದಷ್ಟು ಅನುಭವಿಸಿದಿರಿ. ಅದನ್ನು ಯೋಚಿಸುವಾಗಲೇ ನನ್ನ ಎದೆ ನಡುಗುತ್ತದೆ. ಆ ವಿಷಯ ಕೇಳಿದರೆ ಆ ಬಗ್ಗೆ ಮಾತನಾಡಿದರೆ ನಿಮಗೆ ಬೇಸರವಾಗ್ತದಾ?'

'ಇಲ್ಲಕ್ಕ, ನೀವು ಕೇಳದಿದ್ದರೆ ಮತ್ತೆ ಯಾರ ಜೊತೆ ನಾನು ಹೇಳಲಿ? ನನ್ನ ಎದೆಯಲ್ಲಿ ಕಲ್ಲುಬಂಡೆಯಂತೆ ಕುಳಿತಿರುವ ದುಃಖವನ್ನು ಕಡಿಮೆ ಮಾಡಬೇಕೆಂದು ನಾನು ಯೋಚಿಸಿದರೆ ಅದಕ್ಕೆ ನೀವೊಬ್ಬರೇ ಸರಿಯಾದವರು.'

'ಅರ್ಕಾವತಿ, ನೀವು ಹೇಳಿ. ಕೇಳಿ ನನ್ನ ನೋವೂ ಕಡಿಮೆಯಾಗಲಿ, ಮನಸ್ಸಿನ ಭಾರವೂ ಹಗುರವಾಗಲಿ.'

'ಅಕ್ಕ, ಆಸ್ಪತ್ರೆಯಲ್ಲಿ ಡಾಕ್ಟರರು ಹತ್ತು ದಿನದ ಒಳಗೆ ಕ್ಲೀನ್ ಮಾಡಬೇಕೆಂದರು. ಡಿ.ಎಂಡ್.ಸಿ. ತಡವಾಗಿ ಮಾಡಿದರೆ ಪ್ರಾಣಕ್ಕೇ ಅಪಾಯವಾದೀತು. ಯೋಚನೆ ಮಾಡಿ

ನಾಳೆ ಬಂದು ಹೇಳಿ ಅಂದರು.'

ಮನೆಗೆ ಬಂದೆ. ನಾನು ಕೆಲಸ ಮಾಡುವಾಗ ಮುಳುಮುಳು ಅಳುವಾಗ ಭಟ್ಟರು ನೋಡುತ್ತಿದ್ದರು. ಈಗ ಕೆಲವು ದಿನಗಳಿಂದ ನನ್ನ ಜೀವದ ಸಂಕಟವನ್ನು ನೋಡುವಾಗ ಒಳ್ಳೆಯದು ಕೆಟ್ಟದರ ಅನುಭವ ಇದ್ದವರಿಗೆ ಅದು ಅರ್ಥವಾದೀತು. ಕೂಡು ಕುಟುಂಬದಲ್ಲಿ ಮೂವತ್ತೈದು ವರ್ಷ ತಿರುಮಕೂಡಲುವಿನಲ್ಲಿದ್ದ ಬದುಕು ಅವರಿಗೆ ಒಳ್ಳೆಯದು ಕೆಟ್ಟದರ ಅನುಭವವನ್ನು ಚೆನ್ನಾಗಿ ನೀಡಿತ್ತು.

ಅವರು ಹೇಳಿದರು, 'ಮಗೂ ಅರ್ಕಾ, ನಿನ್ನ ದುಃಖ ನನಗೆ ಅರ್ಥವಾಗ್ತದೆ. ಒಂದು ಜೀವವನ್ನು ಕಾಪಾಡುವುದು ದೊಡ್ಡ ಪುಣ್ಯದ ಕೆಲಸ. ಜೀವಹತ್ಯೆ ಎನ್ನುವುದು ಪಂಚಮಹಾಪಾತಕಗಳಲ್ಲಿ ಒಂದು. ಮಾಡಿದ ಕೆಲಸದ ಪಾಪ ಪುಣ್ಯಗಳನ್ನು ನಾವೇ ಅನುಭವಿಸಬೇಕು. ದೇವರ ನ್ಯಾಯ ಬೇರೆಯೇ ಇದೆ. ಅವನ ಉದ್ದೇಶ ಸೃಷ್ಟಿ ಕ್ರಿಯೆಗೆ ಪ್ರತ್ಯೇಕವಾಗಿದೆ. ನೀನು ಹೆಣ್ಣು. ಪ್ರಕೃತಿ. ಸೃಷ್ಟಿಗೆ ಆಧಾರ. ಯಾವುದೋ ಒಂದು ರೀತಿಯಲ್ಲಿ ನಿನ್ನ ಒಡಲಲ್ಲಿ ಈ ಜೀವ ಜನ್ಮತಾಳಿದೆ. ನೀನು ತಾಯಿಯಾಗಿ ಅದನ್ನು ಕಾಪಾಡು.' ನೀರಲ್ಲಿ ಮುಳುಗುವವನಿಗೆ ಹಗ್ಗ ಸಿಕ್ಕಿದಂತಾಯ್ತು ಅವರ ಮಾತುಗಳು.

ಅಲ್ಲಿಂದ ನಾನು ಮನಸ್ಸು ಗಟ್ಟಿಮಾಡಿದೆ. ಹೊಟ್ಟೆಯೊಳಗಿನ ಮಗುವಿಗೆ ಬದುಕುವ ಹಕ್ಕಿರುವಾಗ ಅದರ ಹಂತಕನಿಗೆ ವಿಧಿ ಮರಣದಂಡನೆ ವಿಧಿಸಿತು. ನಿಮ್ಮ ಮಾವ ಬದುಕಿರುತ್ತಿದ್ದರೆ ಈ ಮಗು ಉಳಿಯುತ್ತಿರಲಿಲ್ಲ. ಅವರು ಸತ್ತು ಈ ಮಗುವನ್ನು ಬದುಕಿಸಿದರು.

ಭವಾನಿಗೆ ತಲೆಯೊಳಗೆ ಮಿಂಚು ಸುಳಿದಂತಾಯ್ತು. ಒಬ್ಬರನ್ನು ಅಳಿಸಿ ಇನ್ನೊಬ್ಬರನ್ನು ಉಳಿಸುವುದು ಸೃಷ್ಟಿಯ ರಹಸ್ಯ. ತಾನು ಅದಕ್ಕೊಂದು ನೆಪಮಾತ್ರ. ದೇವಾ, ಈ ಪಾಪಪ್ರಜ್ಞೆಯಿಂದ ನನ್ನನ್ನು ಮುಕ್ತಗೊಳಿಸಿದೆಯಾ? ಇದೇ ನಿನ್ನ ಸೃಷ್ಟಿ ನಿಯಮದ ಸೂತ್ರವಾ?

'ಅರ್ಕಾವತಿ, ನೀವು ತುಂಬ ಕಷ್ಟ ಅನುಭವಿಸಿದಿರಿ. ನೀವು ಮೈಸೂರಲ್ಲಿದ್ದು ಈ ಮಗುವನ್ನು ಉಳಿಸಿದಿರಿ. ಈಗಲೂ ಭಟ್ಟರ ಮನೆಯಲ್ಲೇ ಇದ್ದೀರಾ?'

'ಇಲ್ಲ. ಭಟ್ರು ಮೈಸೂರು ಬಿಟ್ಟು ಅವರ ಹಳ್ಳಿಗೇ ವಾಪಸ್ಸಾದರು. ಅವರ ಮಗ ರಾಘವೇಂದ್ರ ಮೈಸೂರು ಬಡಾವಣೆಗೆ ಬಂದ ಕೊಲೆರಾ ಕಾಯಿಲೆಗೆ ಬಲಿಯಾಗಿ ಸತ್ತುಹೋದ. ಭಟ್ರ ವ್ಯಾಪಾರವೂ ಇತ್ತೀಚೆಗೆ ಸರಿಯಾಗಿ ನಡೆಯುತ್ತಿರಲಿಲ್ಲ. ಹಾಗಾಗಿ ನಾನು ಊದುಬತ್ತಿಯ ಕೆಲಸಕ್ಕೆ ಹೋಗುತ್ತಿದ್ದೆ. ಅವರು ಊರಿಗೆ ಹೋಗುವಾಗ ಮನೆಯ ಧನಿಗಳಿಗೆ ಒಂದು ಮಾತು ಹೇಳಿದರು. 'ಈ ಹುಡುಗಿ ನನ್ನ ಸೋದರ ಸೊಸೆ. ಅವಳಿಗೆ ಬೇರೆಲ್ಲಾದರೂ ಮನೆ ಸಿಗುವವರೆಗೆ ಇಲ್ಲೇ ಇರಲಿ. ಅಷ್ಟು ಕರುಣೆ ತೋರಿ.' ಧನಿಗಳು ಅರೆಮನಸ್ಸಿನಿಂದ ಒಪ್ಪಿದರು. ಮೂರು ತಿಂಗಳು ವಾಯಿದೆ ಕೊಟ್ಟರು. ಅಷ್ಟರೊಳಗೆ ಇಲ್ಲಿಯ ಲಿಂಗ ಸಪಲ್ಯನ ಮಗ ಲಾರಿಯಲ್ಲಿ ಕ್ಲೀನರ್ ಆಗಿದ್ದವ ದೇವರಾಜ ಮಾರ್ಕೆಟ್ಟಲ್ಲಿ ಸಿಕ್ಕಿದ. ಅವನು 'ನಿಮ್ಮ ತಂದೆ ತುಂಬ ಸೋತು ಹೋಗಿದ್ದಾರೆ. ಹೊಯಿಗೆ

ರಾಶಿಯಿಂದ ಜಾರಿಬಿದ್ದು ಸೊಂಟಕ್ಕೆ ಏಟಾಗಿದೆ. ನೀವು ಊರಿಗೆ ಬರುತ್ತಿದ್ದರೆ ಒಳ್ಳೆಯದಿತ್ತು' ಅಂದ.

ಈ ಮಗುವನ್ನು ಕಟ್ಟಿಕೊಂಡು ಕೆಲಸ ಮಾಡುವುದು ಕಷ್ಟ. ಹಾಗಾಗಿ ಇಲ್ಲಿಗೆ ಬಂದು ನೋಡೋಣಾಂತ ಅವನ ಹತ್ತಿರ 'ಸ್ಟೋರು ಈಗಲೂ ನಡೆಯುತ್ತಿದೆಯಾ? ಯಾರು ನಡೆಸುತ್ತಾರೆ? ಅದರಲ್ಲಿ ಯಾರು ಕೆಲಸ ಮಾಡ್ತಾರೆ?' ಅಂತ ಕೇಳಿದೆ, ಆಮೇಲೆ ಇಲ್ಲಿಗೆ ಬರುವ ನಿರ್ಧಾರ ಖಚಿತ ಮಾಡಿದೆ.

'ನೀವು ಮಾಡಿದ ಆಲೋಚನೆ ಸರಿಯಾಗಿದೆ. ನಿಮ್ಮ ಅಗತ್ಯ ಈ ಸ್ಟೋರಿಗೆ ಉಂಟೇ ಉಂಟು. ಮೈಂದಣ್ಣ ಅರೆಮನಸ್ಸಿನಿಂದ ಕೆಲಸ ಮಾಡ್ತಾನೆ. ಅವನಿಗೆ ಕೆಲಸದಲ್ಲಿ ಶ್ರದ್ಧೆ ಇಡಬೇಕೆಂಬ ಯೋಚನೆಯೇ ಇಲ್ಲ.'

'ನನಗೆ ಮನೆಯನ್ನೂ ಸ್ಟೋರನ್ನೂ ನಡೆಸಿಕೊಂಡು ಹೋಗುವುದು ಕಷ್ಟವಾಗ್ತದೆ. ಗುತ್ತಿನಲ್ಲಿ ನನ್ನ ಅಕ್ಕ ಸರಸುವಿನ ಇಬ್ಬರು ಮಕ್ಕಳಿದ್ದಾರೆ. ಅವರನ್ನು ಸ್ವಲ್ಪ ಸಮಯ ಕಳೆಯುವಾಗ ಪದ್ಮಣ್ಣ ಭಾವ ಬೊಂಬಾಯಿಗೆ ಕರೆದುಕೊಂಡು ಹೋಗ್ತಾರೆ. ಅಷ್ಟರವರೆಗೆ ನೋಡಿಕೊಳ್ಳಬೇಕು. ಅಮ್ಮನಿಗೆ ಮೊದಲಿನಂತೆ ಕೆಲಸ ಮಾಡಲು ಆಗುವುದಿಲ್ಲ. ಮನೆಯ ಕೆಲಸವೇ ಬೇಕಾದಷ್ಟಿದೆ. ಸ್ಟೋರಿನ ಕೆಲಸ ನೋಡಲು ಒಬ್ಬರು ಬೇಕೇ ಬೇಕು. ನೀವು ಬಂದದ್ದು ಒಳ್ಳೆಯದೇ ಆಯ್ತು. ನಿಮ್ಮನ್ನು ದೇವರೇ ಕಳುಹಿಸಿದ. ನಿಮ್ಮ ಮನೆಯ ವ್ಯವಸ್ಥೆಯನ್ನು ಸರಿಮಾಡಿ ಆದಷ್ಟು ಬೇಗ ಕೆಲಸಕ್ಕೆ ಬನ್ನಿ. ಮೈಂದಣ್ಣನಿಗೂ ಅಮ್ಮನಿಗೂ ನಾನು ಹೇಳ್ತೇನೆ.'

'ಮೈಂದಣ್ಣನಿಗೂ ಅಮ್ಮನಿಗೂ ಏನು ಹೇಳಬೇಕು..?' ಅನ್ನುತ್ತ ಒಬ್ಬ ಮನುಷ್ಯ ಒಳಗೆ ಬಂದ. ಶಂಕರ! ಅವನ ಹಿಂದೆ ಮೈಂದಣ್ಣ, ಇಬ್ಬರೂ ಸ್ಟೋರಿನ ಒಳಗೆ ಬಂದರು. 'ಅರೆ, ಅರ್ಕಾವತಿ.. ನೀನ್ಯಾವಾಗ ಬಂದೆ?' ಅಂದ ಮೈಂದಣ್ಣ. ಇಷ್ಟು ದಿವಸ ಮಾಯವಾದ ಬಗೆಗಿನ ಉದ್ವೇಗ, ಉತ್ಸಾಹ ಅವನ ಮಾತಿನಲ್ಲಿ ತುಳುಕಿದುವು.

ಅವನು ಕೂಡಲೇ ದುಡುದುಡನೆಂದು ಅವಳ ಬಳಿಗೆ ಬಂದು ಕೈ ಹಿಡಿಯಲು ಮುಂದೆ ಮಾಡಿದವನು ಇದ್ದಕ್ಕಿದ್ದಂತೆ ಎಚ್ಚರ ಬಂದವನಂತೆ ಕೈಯನ್ನು ಹಿಂದಕ್ಕೆಳೆದು ಕೇಳಿದ, 'ಅರ್ಕಾವತಿ, ನೀನು ಯಾವಾಗ ಬಂದೆ. ಇದೇ ಊರಲ್ಲಿರಲು ಬಂದಿದ್ದೀಯ ಅಲ್ಲವೇ?'

'ನಾನು ಇರುವುದಕ್ಕೇ ಬಂದೆ ಮೈಂದಣ್ಣ. ನೀವು ಹೇಗಿದ್ದೀರಿ?' ಅರ್ಕಾವತಿ ಅವನ ಸಂತೋಷವನ್ನು ನೋಡಿ ನಗುತ್ತ ಕೇಳಿದಳು.

ಶಂಕರ ನಿಂತುಕೊಂಡಿದ್ದವನು ಒಮ್ಮೆ ಭವಾನಿಯ ಮುಖವನ್ನೂ ಇನ್ನೊಮ್ಮೆ ಅರ್ಕಾವತಿಯ ಮುಖವನ್ನೂ ನೋಡುತ್ತಿದ್ದ. ಮೈಂದಣ್ಣನ ಉತ್ಸಾಹವನ್ನೂ ಹಾಗೆಯೇ ಲೆಕ್ಕ ಹಾಕಿದ. ಎಲ್ಲರೂ ಸಂತೋಷವಾಗಿ ಪುನಃ ಸೇರಿದ್ದಾರೆ. ಒಳ್ಳೆಯದೇ ಆಯ್ತು. ಕೆಲಸದ ಭಾರ ಭವಾನಿಗೆ ಕಡಿಮೆಯಾಯ್ತು. ಅರ್ಕಾವತಿಯ ಪಕ್ಕದಲ್ಲಿ ಬೆಂಚಿನ ಮೇಲೆ ಕುಳಿತಿರುವ ಮಗು ಯಾರು?

ಕೆಂಪುಬಿಳಿ ಮುಖ. ಕಪ್ಪು ಗುಂಗುರು ಕೂದಲು. ಸುಂದರವಾದ ಮುದ್ದು ಸೂಸುವ ಹೆಣ್ಣುಮಗು. ಆ ಮುಖದ ಹೋಲಿಕೆ ಯಾರದು?

ಓ ಮತ್ತೆ ಯಾರು? ಅರ್ಕಾವತಿಗೆ ಚಿಕ್ಕ ಚೌಟರ ಬಹುಮಾನ!

'ಅರ್ಕಾವತಿ, ಮಗುವಿಗೆ ಏನೆಂದು ಹೆಸರಿಟ್ಟಿದ್ದೀರಿ?'

ಅರ್ಕಾವತಿ ನಾಚಿಕೆಯಿಂದ ಒಮ್ಮೆ ಕೆಂಪಾದಳು.

'ಶಾಂಭವಿ' ಭವಾನಿ ಅವನ ಮುಖ ನೋಡಿ ನಿನ್ನ ವ್ಯರ್ಥಪ್ರಶ್ನೆ ಯಾಕೆ ಎಂದು ಕೇಳುವಂತೆ ಉತ್ತರಿಸಿದಳು.

ಶಂಕರನಿಗೆ ನಗು ಬಂತು. 'ಇಷ್ಟು ಮುದ್ದಾದ ಮಗುವಿಗೆ ಮುದ್ದಾದ ಹೆಸರನ್ನೇ ಇಟ್ಟಿದ್ದಾಳೆ ಅರ್ಕಾವತಿ ಪರವಾಗಿಲ್ಲ' ಆತ ಹೇಳಿದ.

ಈಗ ಮೈಂದಣ್ಣನಿಗೆ ಮಗುವೊಂದು ಇರುವುದು ಗಮನಕ್ಕೆ ಬಂತು. ಆತ ಬಗ್ಗಿ ಮಗುವನ್ನು ಎತ್ತಿಕೊಂಡ. ಹೊಸ ಜನ ಎತ್ತಿಕೊಂಡದ್ದನ್ನು ನೋಡಿ ಅದು ಮುಖ ಕಿರಿದು ಮಾಡಿ ಶರೀರವನ್ನು ಕೊರಚಾಡಿ ಅಳುವುದಕ್ಕೆ ಶುರುಮಾಡಿತು.

'ನಿನಗೆ ಇನ್ನು ಅಭ್ಯಾಸ ಆಗಬೇಕು ಮೈಂದಣ್ಣ. ಅಳಿಸಬೇಡ. ಅದರ ಅಮ್ಮನಿಗೇ ಕೊಡು' ಅಂದ ಶಂಕರ.

'ಎಲ್ಲರೂ ಮೊದಲೇ ಮಗುವನ್ನು ಎತ್ತುವುದನ್ನು ಕಲಿತಿರುವುದಿಲ್ಲ' ಭವಾನಿ ಕೂಡಲೇ ಉತ್ತರಿಸಿದಳು.

'ಅದೇ. ನಾನು ಕೂಡ ಇನ್ನು ಹಾಗೆಯೇ ಅಭ್ಯಾಸ ಮಾಡಿದರೆ ಆಗಬಹುದಾ ಅಂತ ಯೋಚಿಸಿದೆ' ಅಂದ ಶಂಕರ.

ಭವಾನಿ ಟಪ್ಪೆಂದು ಬಾಯಿ ಮುಚ್ಚಿದಳು. ಅವಳ ಮುಖ ಕೆಂಪಾಯ್ತು. ಮೈಂದಣ್ಣನಿಗೆ ಅದ್ಯಾವುದೂ ಗಮನಕ್ಕೆ ಬರಲಿಲ್ಲ. ಆದರೆ ಅರ್ಕಾವತಿಗೆ ಆ ಮಾತಿನ ಹೊಲಬು ಅರ್ಥವಾಗಿ ನಗುಬಂತು.

'ಓ ಹೀಗಿದೆಯಾ ಒಳಗಿನ ಸಂಗತಿ? ಒಳ್ಳೆಯದೇ ಆಯ್ತು. ದೇವರು ಅನುಗ್ರಹಿಸಲಿ. ಒಳ್ಳೆಯ ಜೋಡಿ' ಅರ್ಕಾವತಿ ಯೋಚಿಸಿದಳು. ಅರ್ಕಾವತಿ ಅಳುವ ಮಗುವನ್ನು ಮೈಂದಣ್ಣನ ಕೈಯಿಂದ ತೆಗೆದುಕೊಂಡು ಸಮಾಧಾನ ಮಾಡಲು ಅಂಗಡಿಯ ಎದುರಿಗಿದ್ದ ಅಂಗಳದ ತುದಿಗೆ ಹೋದಳು.

ಮೈಂದಣ್ಣ ಭವಾನಿಯನ್ನು ಕೇಳಿದ, 'ಮಂಗಳೂರಿನಿಂದ ಯಾರಾದರೂ ಬಂದರಾ?'

'ಚೆಕ್ಕಿಂಗ್‌ಗೆ ಸ್ಕ್ವಾಡ್ ಬರುತ್ತಾರೆ. ಲೆಕ್ಕಪತ್ರ ಎಲ್ಲ ಸರಿ ಇರಲಿ' ಅಂದರು ನಚ್ಚದ ಪಟೇಲಜ್ಜ.

'ಶಂಕರಣ್ಣ, ನಿಮ್ಮ ದರ್ಕಾಸಿನ ಕೆಲಸ ಎಲ್ಲಿಗೆ ಮುಟ್ಟಿತು?'

ಎಲಾ ಇವನ! ಇಷ್ಟು ದಿನ ನೀವು ಎಲ್ಲಿಗೆ ಹೋದಿರಿ. ಏನು ಮಾಡಿದಿರಿ. ಕಷ್ಟ ಏನು, ಎತ್ತ, ಹೇಗೆ ಎಂದು ಕೇಳದವನು ಈಗ ಒಮ್ಮೆಗೇ ಭಾರಿ ತುರ್ತಿನಲ್ಲಿ ಸಂಗತಿ ಎಲ್ಲಿಗೆ ಮುಟ್ಟಿತು ಅಂತ ವಿಚಾರಿಸುತ್ತಿದ್ದಾನಲ್ಲ! ಇವತ್ತು ಸೂರ್ಯ ಯಾವ ದಿಕ್ಕಿನಲ್ಲಿ

ಉದಯಿಸಿದ! ಅರ್ಕಾವತಿ ಪ್ರತ್ಯಕ್ಷಳಾಗಿ ಅಂಕದ ಪರದೆಯನ್ನೇ ಎತ್ತಿದಳಾ? ಮೈಂದಣ್ಣನ ಕತ್ತಲೆ ಕಳೆಯಿತಾ? ಶಂಕರ ಯೋಚಿಸಿದ.

'ದರ್ಕಾಸಿಗೆ ಅರ್ಜಿ ಹಾಕಿದ ಇಬ್ಬರಿಗೆ ಮಂಜೂರಾಯ್ತು' ಶಂಕರ ಮೈಂದಣ್ಣನಿಗೆ ಹೇಳಿದ. ಬೊಗಟನಿಗೂ ಆ ಮಾಯ್ಲನಿಗೂ. ಆದರೆ ತಾನು ಹಾಕಿದ ಅರ್ಜಿ ತಿರಸ್ಕೃತ ವಾಯ್ತು. ಅದಕ್ಕೆ ಒಂದು ಕಾರಣ ಉಳವೂರಿನ ಇಬ್ಬರು ಹರಿಜನರು ಅದೇ ಜಾಗಕ್ಕೆ ಅರ್ಜಿ ಹಾಕಿದ್ದಾರೆಂಬುದು. ಆದರೆ ಅವರು ಪಕ್ಕದ ಊರಿನವರು. ಅವರಿಗೆ ಕೊಡುವುದು ನ್ಯಾಯವಲ್ಲ. ಅಲ್ಲದೆ ಅದೇ ಊರಿನ ಇಬ್ಬರು ಮೂವರ ಅರ್ಜಿಗಳು ವಾಪಸ್ಸು ಬಂದ ಕಾರಣಕ್ಕೆ ಆ ಜಾಗವನ್ನು ಅವರಿಗೆ ಕೊಡುವುದಕ್ಕೆ ಉಳಿದ ಅರ್ಜಿದಾರರಿಂದಲೇ ಬಲವಾದ ವಿರೋಧವಿದೆ.

ಇನ್ನೊಂದು ಕಾರಣ ಏನೆಂದರೆ ಹರಿಜನರನ್ನು ಹಿಡಿದು ಅವರ ಹೆಸರಿನಲ್ಲಿ ಅಲ್ಲಿಯ ಬಹುದೊಡ್ಡ ಜಮೀನ್ದಾರನೊಬ್ಬ ಅವರಿಗೆ ಗೊತ್ತಾಗದೆಯೇ ಅರ್ಜಿ ಹಾಕಿದ್ದಾರೆ. ಏಕೆಂದರೆ ಆಮೇಲೆ ಬಡವರಿಂದ ಬಲಾತ್ಕಾರವಾಗಿ ಅವುಗಳನ್ನು ತಮಗೇ ಅಡವು ಹಾಕುವಂತೆ ಮಾಡಿ ಎಲ್ಲವನ್ನೂ ಒಳಗೆ ಹಾಕುವ ಉಪಾಯ ಆತನದ್ದು. ತಹಶೀಲ್ದಾರರು ಇದನ್ನೆಲ್ಲ ಎಲ್ಲ ಇಲಾಖೆಗಳ ತಹಶೀಲ್ದಾರರಿಗೂ ತಿಳಿಸಬೇಕೆಂದು ಪಟೇಲರಿಗೆ ಆದೇಶಿಸಿದ್ದಾರೆ. ಆ ತಹಶೀಲ್ದಾರರು ನಮ್ಮ ಊರಿನವರಲ್ಲ. ಜಮೀನ್ದಾರರು ಈ ರೀತಿಯಲ್ಲಿ ಮೋಸ ಮಾಡುತ್ತಾರೆಂದು ತಿಳಿದು ಆತನಿಗೆ ಕೋಪಬಂತು. ಇಂಥವರಿಂದಲೇ ಸರಕಾರಕ್ಕೆ ಯಾವ ಕಾನೂನನ್ನೂ ಸರಿಯಾಗಿ ಜಾರಿಗೆ ಬರುವಂತೆ ಮಾಡಲು ಆಗದೆ ಸರಕಾರ ಮಾಡುವ ಎಲ್ಲ ಕೆಲಸವೂ ನೀರಿನಲ್ಲಿ ಹೋಮ ಮಾಡಿದಂತೆ ಆಗ್ತದೆ ಎಂದು ಎಗರಾಡಿದರಂತೆ. ಯುವಕ. ಯೌವನದ ಹುಮ್ಮಸ್ಸು. ಇತ್ತೀಚೆಗೆ ಕೆ.ಎ.ಎಸ್. ಪಾಸ್ ಆಗಿ ಕೆಲಸದಲ್ಲಿ ಬಡ್ತಿ ಪಡೆದು ಬಂದವನು. ಲಿಂಗಾಯತ ಬೇರೆ. ಜಮೀನ್ದಾರರು ಗೌಡರು. ಎಲ್ಲರೂ ಹೀಗೆ ಜಟಾಪಟಿ, ಏಟು, ಗೂಂಡಾಗಿರಿಯಲ್ಲಿ ಅಧಿಕಾರ ನಡೆಸುವವರು ಎಂಬುದು ಆತನ ಗ್ರಹಿಕೆಯೋ ಏನೋ. ಆ ಅರ್ಜಿಗಳ ಮಧ್ಯೆ ನನ್ನ ಅರ್ಜಿ. ಸ್ವಾತಂತ್ರ್ಯ ಹೋರಾಟಗಾರ ಅಲ್ಲದೆ ಯುದ್ಧದಲ್ಲಿ ಕಾಲು ಮುರಿದು ಅಂಗವಿಕಲನಾದವನು. ಹಾಗಾಗಿ ನನ್ನ ಅರ್ಜಿಯನ್ನು ಪಾಸುಮಾಡಲು ತೊಂದರೆಯಾಗದು. ಆತ ಶಿಫಾರಸ್ಸು ಕೂಡ ಮಾಡಿದ್ದಾನೆ ಎಂದಿದ್ದಾರೆ ಪಟೇಲರು.

ಬೊಳ್ಳೂರು ಪರಾರಿ ಮತ್ತು ಉಳವೂರಿನವರಿಗೆ ಸ್ವಲ್ಪ ಮುಖಭಂಗವಾದಂತಾಗಿದೆ. ಇನ್ನು ಅವರಿಂದ ಯಾವ ಬಗೆಯ ಕಿತಾಪತಿ ಬಂದೀತೋ ಕಾಣೆ. ಬೊಳ್ಳೂರು ಪರಾರಿಯ ನರಸಿಂಗಣ್ಣ ಮಹಾ ತಂತ್ರಶಾಲಿ. ಅವನ ಬತ್ತಳಿಕೆಯಲ್ಲಿ ಯಾವ್ಯಾವ ಬಗೆಯ ಅಸ್ತ್ರಗಳಿವೆಯೆಂದು ಹೇಳಲು ಸಾಧ್ಯವಿಲ್ಲ. ನಗುನಗುತ್ತಲೇ ಯಾರ ಜೀವವನ್ನಾದರೂ ತೆಗೆಯಬಲ್ಲ ಪಕ್ಕಾ ಖದೀಮ ಅಸಾಮಿ ಆತ.

ಕೋಟಿ ಚೆನ್ನಯ್ಯರನ್ನು ಪರಮಲೆ ಬಲ್ಲಾಳನ ಮಂತ್ರಿ ತಲೆ ಕಡಿದು ಕೊಳಕೆ ಗದ್ದೆಯ ಬದುವಿನ ಅಡಿಗೆ ಹಾಕಿದಂತೆ ಇದೇ ನರಸಿಂಗಣ್ಣ ನೀರಿನ ವ್ಯಾಜ್ಯವನ್ನು

ಹೈಕೋರ್ಟುವರೆಗೂ ಕೊಂಡು ಹೋದರೆಂಬ ಕಾರಣಕ್ಕೆ ಗುಮ್ಮಪ್ಪ ಅತಿಕಾರಿಯವರನ್ನು ಗದ್ದೆಯ ಬದುವಿಗೆ ತಳ್ಳಿ ಹಾಕಿ ಉಸಿರುಕಟ್ಟುವಂತೆ ಮಾಡಿ ಮುಂಡೋವಿನ ಪೊದರಿನಲ್ಲಿ ಗುಳಿ ತೋಡಿ ಹೂತು ಹಾಕಿದ್ದು ನಾಲ್ಕೈದು ದಿನಗಳ ಬಳಿಕ ನರಿ ನಾಯಿಗಳು ಹೆಣವನ್ನು ಎಳೆದುಹಾಕಿ ತೋಡಿನ ನೀರಿನಲ್ಲಿ ಚಿಂದಿ ಮಾಡಿ ಹಾಕಿದಾಗಲೇ ಗೊತ್ತಾದದ್ದು.

ಏನಾದರೂ ಅದು ಒಂದಾನೊಂದು ಕಾಲದ ಕಥೆ. ಆಗ ಆತ ಯುವಕ. ರಕ್ತ ತೆಳ್ಳಗಿತ್ತು. ದೊಡ್ಡ ಆಸ್ತಿವಂತನೆಂಬ ಅಹಂಕಾರವಿತ್ತು. ಒಕ್ಕಲು ಮಕ್ಕಳ ಸಹಾಯದ ಬಲವಿತ್ತು. ಈಗ ಸ್ವಾತಂತ್ರ್ಯ ಬಂದ ಮೇಲೆ ಆಸ್ತಿಯ ಬಹುಭಾಗ ಡಿಕ್ಲರೇಷನ್‌ನಿಂದ ಕೈಬಿಟ್ಟು ಹೋಗಿ ಒಕ್ಕಲಿಗರ ಪಾಲಾಗಿದೆ. ದೊಡ್ಡ ದೊಡ್ಡ ಮನೆಗಳ ಆಸ್ತಿಗಳು 1957ರ ಹಿಂದೂ ಆಸ್ತಿಯ ಕಾನೂನು ಪ್ರಕಾರ ತಲೆಲೆಕ್ಕದಲ್ಲಿ ಹರಿಹಂಚಾಗಿದೆ. ಅಧಿಕಾರದ ಮದ ಹೋಗಿದೆ. ವಯಸ್ಸಾಗಿ ರಕ್ತ ದಪ್ಪಗಾಗಿದೆ. ದೊಡ್ಡ ಮನೆಯ ಯುವಕರೂ ಬೆನ್ನು ಬಗ್ಗಿಸಿ ದುಡಿಯದೆ ಗತ್ಯಂತರವಿಲ್ಲ ಎಂಬ ಪಾಠ ಕಲಿತಿದ್ದಾರೆ. ಇಡೀ ದಿನ ಸೋಮಾರಿಗಳಾಗಿ ಕುಳಿತುಕೊಳ್ಳಲು, ಲೊಟ್ಟೆ ಪಂಚಾತಿಕೆ ಮಾಡಲು, ಅಲ್ಲದೆ ಇಸ್ಪೀಟು ಆಡಲು, ಕೋಳಿ ಅಂಕ, ದೈವ ದೇವರುಗಳ ವರ್ಷಾವಧಿಯ ಕೋಲ, ನೇಮ, ಉತ್ಸವ, ಜಾತ್ರೆ, ಎನ್ನುತ್ತ ಪಂಚೆ ಎತ್ತಿಕಟ್ಟಿ ತಿರುಗುವ ಕಾಲ ಕಳೆಯಿತು. ಈಗ ಹತ್ತು ಬೆರಳುಗಳು ಸವೆದರೆ ಮಾತ್ರ ಕೈ ಬಾಯಿಗೆ ಹೋಗುತ್ತದೆ. ದಿನಗಳು ಚೆನ್ನಾಗಿ ಕಳೆಯುತ್ತವೆಂದು ಭಾವಿಸಿ ಬೇಸರವಾದಾಗ ಕಾಡುಗುಡ್ಡಗಳನ್ನು ಹತ್ತಿ ಚಿಕ್ಕ ದೊಡ್ಡ ಬೇಟೆಯಾಡಿ ಕಾಡುಕೋಳಿಯ ಮಾಂಸತಿಂದು, ಮೂಗುಮಟ್ಟ ಹೆಂಡ ಕುಡಿದು ಖುಷಿಯಾಗಿ ಕಳೆಯುವ ಕಾಲ ಮುಗಿಯಿತು. ಬೇಟೆಯಾಡಿ ಪ್ರಾಣಿಗಳನ್ನು ಹಿಡಿಯುವ ಬದಲು ಕಾಲವೇ ಅವರನ್ನು ಬೇಟೆಯಾಡುತ್ತಿದೆ. ಈ ಬೇಟೆಯಲ್ಲಿ ಉಪಾಯದಲ್ಲಿ ಕಾರ್ಯಸಾಧನೆ ಮಾಡುವವನು ತಪ್ಪಿಸಿಕೊಳ್ತಾನೆ. ಸಾಧನೆ ಮಾಡದೆ ಕಾಲಕ್ಕೆ ಸರಿಯಾಗಿ ಹೆಜ್ಜೆಯಿಡಲಾರದವನು ಬಡತನಕ್ಕೆ ಬಲಿಯಾಗುತ್ತಾನೆ.

'ಇದು ಇವತ್ತಿನ ಸತ್ಯ. ಅಲ್ಲ ಮೈಂದಣ್ಣ ಹಿಂದಿನ ಕಾಲವಾಗ್ತಿದ್ದರೆ ನೀನು ಸ್ಟೋರಿನಲ್ಲಿ ಕುಳಿತುಕೊಳ್ಳಲು ಬರ್ತಿದ್ದೀಯಾ? ಯೋಚನೆ ಮಾಡಿ ನೋಡು. ಭವಾನಿ ಗುತ್ತಿನ ಮೊಗಸಾಲೆ ದಾಟಿ ಬರ್ತಿದ್ದಳಾ? ನೀನೇ ಚೆನ್ನಾಗಿ ಯೋಚಿಸು. ಕಾಲ ಬದಲಾಗುತ್ತಲೇ ಹೋಗುತ್ತದೆ. ಬುದ್ಧಿ ಇದ್ದವರು ಆ ಬದಲಾವಣೆಯನ್ನು ಒಪ್ಪಿಕೊಂಡು ಆ ಸಮಯಕ್ಕೆ ಸರಿಯಾಗಿ ಅವರ ಬದುಕನ್ನೂ ಬದಲಾಯಿಸ್ತಾರೆ. ಅಲ್ವಾ?' ಹಾಗೆ ಹೇಳಿ ಶಂಕರ ಮೈಂದಣ್ಣನ ಮುಖ ನೋಡಿದ.

ಮೈಂದಣ್ಣ ಏನನ್ನೋ ಯೋಚನೆ ಮಾಡುತ್ತಿದ್ದವ ಹೌದೆನ್ನುವಂತೆ ತಲೆಯಾಡಿಸಿದ.

ಭವಾನಿ ಬರೆಯುವುದನ್ನು ನಿಲ್ಲಿಸಿ ಶಂಕರನ ಸುದೀರ್ಘವಾದ ಮಾತುಗಳನ್ನು ಕೇಳಿ ಹೊಸ ಸತ್ಯವೊಂದು ಅರ್ಥವಾದವಳಂತೆ ಆಲೋಚನೆಯಲ್ಲಿ ಬಿದ್ದಳು.

ದರ್ಕಾಸ್ ಖಾಯಂ ಆದ ಆರ್ಡರ್ ಬಂದ ಕೂಡಲೇ ನಮ್ಮ ಕೆಲಸ ತ್ವರೆಯಿಂದ ಮುಂದುವರಿಯಬೇಕು. ಮಳೆಗಾಲಕ್ಕೆ ಮೊದಲು ಒಂದು ಗುಡಿಸಲು ಹಾಕಿ ತಳಪಾಯದ

ಕೆಲಸ ಮಾಡಬೇಕು. ಸುತ್ತಲೂ ಒಂದೂವರೆ ಅಡಿಯ ಎತ್ತರದ ದರೆ ಮಾಡಿದರಾಯ್ತು. ಸದ್ಯಕ್ಕೆ ಅಷ್ಟು ಮಾಡಿ ಸುತ್ತಲೂ ಹಳ್ಳ ಮಾಡಿದರೆ ಮಳೆಯ ನೀರು ಒಳಗೆ ಬರದೆ ಹರಿದುಕೊಂಡು ಹೋಗುತ್ತದೆ. ಗುಡಿಸಲಿನ ಸುತ್ತಲೂ ಕಾಯಿಬಿಡದ ಕಂಗುಗಳನ್ನು ತಂದು ಕಂಬ ನೆಟ್ಟು ಅದಕ್ಕೆ ಸುತ್ತಲಿಗೂ ಕಂಗಿನ ಅಡ್ಡ ಕೋಲು ಕಟ್ಟಿದರೆ ಅದರ ಬಲದಲ್ಲಿ ಸೋಗೆ ಹೊದಿಸಿ ತಟ್ಟಿ ಮಾಡಬಹುದು. ಮಾಡಿಗೆ ಯಾರಿಂದಲಾದರೂ ಬಿದಿರಿನ ಕೋಲು ಕೇಳಬೇಕು. ಒತ್ತೊತ್ತಾಗಿ ಇಟ್ಟು ಕಟ್ಟಿದರೆ ಹೆಣೆದ ಸೋಗೆಗಳನ್ನು ಅದರ ಮೇಲೆ ಹಾಕಿ ಪದವಿನ ಮುಳಿ ತಂದು ಹರಡಿ ಕಟ್ಟಿದರೆ ಆಗಬಹುದಲ್ಲ? ಮೈಂದಣ್ಣ ನೀನು ಸ್ವಲ್ಪ ನನ್ನ ಸಹಾಯಕ್ಕೆ ಬರಬೇಕು. ನಾವು ಮಾಡುವ ಕೆಲಸ ನಮ್ಮ ಸುತ್ತಲಿನ ಗ್ರಾಮದ ಜನರ ಏಳಿಗೆಗೆ. ನಮ್ಮ ಸ್ವಂತ ಲಾಭಕ್ಕಲ್ಲ.'

'ಸ್ಟೋರಿನ ಆಲೋಚನೆ ಮಾಡಬೇಕಾಗಿಲ್ಲ. ಅದನ್ನು ನೋಡಿಕೊಳ್ಳಲು ಭವಾನಿಯೂ ಅರ್ಕಾವತಿಯೂ ಇದ್ದಾರೆ. ತೆಗೆಯಲು ಇಡಲು ತಿಮ್ಮ ಹೇಗೂ ಇದ್ದಾನಲ್ಲ. ಸ್ತ್ರೀಶಕ್ತಿಯನ್ನು ಬಲಪಡಿಸಲು ತಿಮ್ಮನಿದ್ದಾನೆ.'

'ನಿನ್ನನ್ನು ಈಗ ನೋಡುವಾಗ ಕೆಲಸ ಮಾಡಲು ಉತ್ಸಾಹ ಇದ್ದಂತೆ ಕಾಣುತ್ತದೆ. ನಿನ್ನ ದೇವರ ಭಜನೆಗೂ ತೊಂದರೆಯಾಗುವುದಿಲ್ಲ. ಗುಡಿಸಲಿನ ಒಳಗೆ ಒಂದು ಎತ್ತರದ ಜಗಲಿ ಮಾಡಿ ಆ ಜಾಗದಲ್ಲಿ ಸಂಜೆಯಾಗುವಾಗ ಒಂದು ಹಣತೆ ಹಚ್ಚಿ ದೀಪ ಹೊತ್ತಿಸಬೇಕು. ಯಾವ ಜಾತಿಯವರು ಬೇಕಿದ್ದರೂ ಬರಲಿ. ದೀಪ ಜ್ಞಾನದ ಸಂಕೇತ. ಎಲ್ಲರೂ ಕೈಮುಗಿಯುವುದಕ್ಕಿರುವ ಒಂದು ಗುರುತು. ದೇವರ ಉಪಸ್ಥಿತಿ ಇದೆ ಎನ್ನುವುದಕ್ಕೆ ಒಂದು ನಿದರ್ಶನ. ಸಂಜೆ ಎಲ್ಲರೂ ಸೇರಿ ದೇವರ ಧ್ಯಾನ ಮಾಡುವ.'

ಊರಿನ ವಯಸ್ಸಾದವರನ್ನು ಒಂದುಗೂಡಿಸುವ ಜಾಗವಾಗಲಿ ಅದು. ಅವರಿಗೆ ದಿನವೂ ಪತ್ರಿಕೆ ಓದಿ ದೇಶದ ಸುದ್ದಿಗಳನ್ನು ತಿಳಿಸಬೇಕು. ಅವರ ಕಷ್ಟ ಸುಖಗಳನ್ನು ವಿಚಾರಿಸಬೇಕು. ವಾರದಲ್ಲಿ ಎರಡು ದಿನ ಡಾಕ್ಟರುಗಳನ್ನು ಕರೆಸಿ ಯಾರಿಗೆ ಮದ್ದಿನ ಅವಶ್ಯಕತೆ ಇದೆಯೋ ಅವರಿಗೆ ಅದನ್ನು ಕೊಡಿಸಬೇಕು. ಜನರಿಗೆ ಬೇಕಾಗುವ ಏನೇ ಸಂಗತಿ ಇದ್ದರೂ ನಾವು ಅದಕ್ಕೆ ತಲೆಕೊಡಬೇಕು. ಊರಿನಲ್ಲಿ ಏನಾದರೂ ಗುಲ್ಲುಗಲಭೆ, ಮಾರಾಮಾರಿ, ಅಭಿಪ್ರಾಯ ಭೇದ ಏನಿದ್ದರೂ ಅದನ್ನು ಎರಡೂ ಕಡೆಯ ಜನರನ್ನು ಮುಂದಿಟ್ಟು ನಿಷ್ಪಕ್ಷಪಾತವಾದ ತೀರ್ಪನ್ನು ನೀಡಬೇಕು.'

'ಈಗಲೇ ಬಹಳಷ್ಟು ಸಮಯ ಅದೂ ಇದೂ ಅಂತ ಹಾಳಾಯ್ತು. ಇನ್ನಾದರೂ ನಾವು ಬೇಗ ಬೇಗ ಕೆಲಸ ಮುಂದುವರಿಯುವಂತೆ ನೋಡಬೇಕು.'

ಅರ್ಕಾವತಿಗೆ ಶಂಕರನ ಮಾತು ಕೇಳುತ್ತ ಕೇಳುತ್ತ ಸಂತೋಷವಾಯ್ತು. ಸ್ಟೋರಿನಲ್ಲಿ ಅವಳಿಗೆ ಕೆಲಸ ಸಿಕ್ಕಿದ್ದರಿಂದ ಬದುಕುವ ಹಾದಿ ಸರಾಗವಾಯ್ತು. ಊರಿಗೆ ಬರುವಾಗ ಮುಂದೆ ಜೀವನ ಹೇಗೆ ಸಾಗಿಸುವುದು ಎಂಬ ಪ್ರಶ್ನೆ ಅವಳನ್ನು ಬಹುವಾಗಿ ಕಾಡುತ್ತಿತ್ತು. ಕುಳಿತಲ್ಲೇ ಆಗಿರುವ ತಂದೆಯನ್ನು ಬಿಟ್ಟು ದೂರದ ಊರಿಗೆ ಹೋಗಿ ದುಡಿಯುವುದು ಅವಳಿಂದ ಸಾಧ್ಯವಾಗುತ್ತಿರಲಿಲ್ಲ.

ಸತ್ತುಹೋದ ಶಂಭು ಚೌಟರನ್ನು ಎಣಿಸಿ ಅವಳ ಕಣ್ಣುಗಳು ತುಂಬಿದುವು. ಸತ್ತವರು ಅವರ ಹಾದಿ ಹಿಡಿದು ಹೋದರು. ಈ ಮಗುವಿನ ಬದುಕಿನ ಜವಾಬ್ದಾರಿಯನ್ನು ನನ್ನ ತಲೆಗೆ ಹೊರಿಸಿ ಹೊರಟುಹೋದರು. ಇನ್ನು ದೇವರೇ ಅದಕ್ಕೆ ಪರಿಹಾರದ ದಾರಿ ತೋರಿಸುತ್ತಾನೆ. ಎಂದು ಮನಸ್ಸಿನಲ್ಲೇ ಅವಳ ಕುಲದೇವರಾದ ತಿರುಪತಿ ತಿಮ್ಮಪ್ಪನನ್ನು ಧ್ಯಾನಿಸಿ ಕೈಮುಗಿದಳು. 'ದೇವರೇ, ವೆಂಕಟರಮಣಾ, ಪರ್ವತದಂತಿದ್ದ ವಿಘ್ನಗಳನ್ನು ಮಂಜಿನಂತೆ ಕರಗಿಸಿದೆ. ನೀವೇ ಗತಿ, ನೀವೇ ಮತಿ. ಇನ್ನು ಮುಂದೆಯೂ ಕಾಪಾಡಪ್ಪಾ' ಎಂದು ಮನದಲ್ಲೇ ಪ್ರಾರ್ಥಿಸಿದಳು.

ಮೈಂದಣ್ಣ ಅವಳ ಮುಖವನ್ನು ನೋಡುತ್ತ ಕೇಳಿದ, 'ನಾಳೆಯಿಂದ ಸ್ಟೋರಿಗೆ ಬಾ ಅರ್ಕಾವತಿ.!'

ಭವಾನಿ ಈ ಅನುನಯದ ಮಾತುಗಳನ್ನು ಆಲಿಸುತ್ತ ಶಂಕರನ ಮುಖ ನೋಡಿದಳು. ಅವನು ಹುಬ್ಬೇರಿಸುತ್ತ ಇದೇನೆಂಬಂತೆ ಪ್ರತಿಕ್ರಿಯಿಸಿದ. 'ಮಗುವಿಗೆ ನಿದ್ರೆ ಬರ್ತಿದೆ. ನಾನು ಮನೆಗೆ ಹೋಗುತ್ತೇನೆ.' ಅರ್ಕಾವತಿ ಭವಾನಿ ಕಡೆಗೆ ನೋಡುತ್ತ ಶಂಕರನಿಗೆಂಬಂತೆ ಹೇಳಿದಳು.

ಭವಾನಿ ಹೇಳಿದಳು, 'ಹಾಗಿದ್ದರೆ ಇನ್ನು ಮುಂದೆ ನೀವು ಸ್ಟೋರಿನ ಕೆಲಸಕ್ಕೆ ಬರ್ತೀರಿ ತಾನೆ?'

'ಬರುತ್ತೇನೆ ಭವಾನಿ ಅಕ್ಕ. ಖಂಡಿತವಾಗಿಯೂ ಬರ್ತೇನೆ' ಅಂದಳು ಅರ್ಕಾವತಿ.

ಮರುದಿನ ಬೆಳಗ್ಗಿನ ಜಾವವೇ ಬೇಗನೆ ಎದ್ದು ಮೈಂದಣ್ಣ ತನ್ನ ನಿತ್ಯವಿಧಿಗಳನ್ನು ಪೂರೈಸಿದ. ಭವಾನಿ ಮುಂಜಾವ ಎದ್ದವಳು ಜುಮಾದಿನ ಉಯ್ಯಾಲೆಗೆ ಪ್ರತಿದಿನ ನೀರು ಇಡುವ ಕಂಚಿನ ಕೊಂಬಿರುವ ಗಿಂಡಿಯನ್ನು ಬೂದಿ ಹಾಕಿ ತಿಕ್ಕಿ, ತೊಳೆದು ಇಟ್ಟಳು. ಅಂಗಳದ ಬಾವಿಯಿಂದ ನೀರು ಸೇದಿ ಗಿಂಡಿಗೆ ನೀರು ತುಂಬಿಸಿ ಉಯ್ಯಾಲೆಯಲ್ಲಿಟ್ಟು ಹಣತಿಗೆಗೆ ಬತ್ತಿ ಹಾಕಿ ಹೊನ್ನೆಣ್ಣೆಯನ್ನು ಸುರಿದು ಮೈಂದಣ್ಣ ದೀಪ ಹಚ್ಚಿದ. ಮೈಂದಣ್ಣನ ಕೆಲಸ ಇವತ್ತು ಸರಸರನೆ ಆಗುತ್ತಿತ್ತು. ಚಾವಡಿಯ ಬದಿಯ ಒಳಕೋಣೆಗೆ ಹೋಗಿ ಪಂಚೆ ಸುತ್ತಿ ಷರ್ಟ್ ಧರಿಸಿದ. ಚಾವಡಿಯಲ್ಲಿ ನಿಂತು ಬಾಗಿಲ ಒಳಭಾಗಕ್ಕೆ ಇಣುಕಿ ಗಟ್ಟಿಯಾಗಿ ಕೇಳಿದ, 'ಭವಾನಿ, ಚಹಾ ತಯಾರಾಗಿದೆಯಾ?' ಭವಾನಿ ಕಡೆಯುವ ಕಲ್ಲಿನಲ್ಲಿ ಚಟ್ನಿ ಅರೆಯುತ್ತಿದ್ದವಳು ಅಲ್ಲಿಂದಲೇ ಕೂಗಿ ಹೇಳಿದಳು 'ಆಯ್ತಣ್ಣ, ಚಟ್ನಿಯನ್ನು ಕಲ್ಲಿನಿಂದ ತೆಗೆಯುತ್ತ ಇದ್ದೇನೆ. ಬೇಗನೆ ಎರಡು ಓಡುಪ್ಪಳೆ ಮಾಡಿ ಕೊಡುತ್ತೇನೆ. ನೀವೇನು ಇಷ್ಟು ಬೇಗ ಹೊರಟಿರಿ? ಏನಾದರೂ ಅರ್ಜೆಂಟಾ?'

'ಅಂಥ ದೊಡ್ಡ ಅರ್ಜೆಂಟ್ ಏನಿಲ್ಲ. ಹೊಸ ರೇಶನ್ ಸ್ಟಾಕ್ ಬಂದಾಗ ಹಾಕಲು ಜಾಗ ಸರಿಯಿಲ್ಲದಿದ್ದರೆ ತೊಂದರೆಯಾದೀತು. ಲಾರಿಯವರು ನಿಂತ ಕಾಲಲ್ಲಿ ನಿಲ್ಲುವುದಿಲ್ಲ.'

'ಅದೇನೂ ಹೊಸ ವಿಷಯವಲ್ಲ. ಆದರೆ ಇವತ್ತು ನೀವೇನು ಭಾರಿ ಗತ್ತಿನಿಂದ ಹೊರಟಿದ್ದೀರಿ?'

'ಗತ್ತೇನೂ ಇಲ್ಲ. ಸ್ವಲ್ಪ ಬೇಗ ಹೋಗುವಾಂತ ಅಷ್ಟೇ.'

ಕೊಟ್ಟಿಗೆಯಿಂದ ಹಸುವಿನ ಹಾಲು ಕರೆದು ಬಟ್ಟೆ ಎಳೆದು ಕಟ್ಟಿದ್ದನ್ನು ಕೆಳಗಡೆಗೆ ಬಿಚ್ಚಿ ಹಾಕುತ್ತ ಅಂತಕ್ಕ ಹಾಲಿನ ಚೆಂಬನ್ನು ಹಿಡಿದುಕೊಂಡು ಒಳಗೆ ಬಂದರು.

'ಅರೆ, ಇದೇನು ಬೆಳ್ಳಂಬೆಳಗೆ ಇವನ ಸವಾರಿ ಸಿದ್ಧವಾಗಿ ಹೊರಟಿದೆ? ಎಲ್ಲಿಗೆ ಹೋಗಲಿದೆ?

'ಎಲ್ಲಿಗೂ ಇಲ್ಲಪ್ಪ. ಶಂಕರಣ್ಣ ದರ್ಕಾಸಿನ ಜಾಗದೊಳಗೆ ಗುಡಿಸಲು ಕಟ್ಟುವುದಕ್ಕೆ ಅದೇನೇನೋ ಸಿದ್ಧತೆಯಾಗಬೇಕೆಂದು ಹೇಳುತ್ತಿದ್ದರು. ಆ ಹೆಸರಲ್ಲಿ ಸ್ವಲ್ಪ ಬೇಗನೆ ಹೋದರೆ ಸ್ಟೋರಿಗೂ ಏನೇನು ಬೇಕು ಎಂಬುದನ್ನು ನೋಡಿ ಆಮೇಲೆ ಅವರ ಕೆಲಸಕ್ಕೆ ಹೋಗಬಹುದೂಂತ.'

ಈ ಯಾವತ್ತೂ ಇಲ್ಲದ ಅವನ ಉತ್ಸಾಹವನ್ನು ನೋಡಿ ಭವಾನಿಗೆ ನಗುಬಂತು. ತಟಕ್ಕನೆ ಎಲ್ಲರಿಗೂ ಅಚ್ಚರಿ ಹುಟ್ಟಿಸುವಂಥ ಬದಲಾವಣೆ ಮೈಂದಣ್ಣನಲ್ಲಿ ಉಂಟಾಗಲು ಕಾರಣವೇನೆಂದು ಅವಳಿಗೆ ಅರ್ಥವಾಗಲಿಲ್ಲ. ನಿಧಾನಕ್ಕಾದರೂ ತಿಳಿಯದೆ ಎಲ್ಲಿಗೆ ಹೋಗ್ತದೆ? ನೋಡುವ, ಎಂದು ಯೋಚಿಸಿದಳು.

ಮೈಂದಣ್ಣ ಭವಾನಿ ಮಾಡಿಕೊಟ್ಟ ಬಿಸಿ ಬಿಸಿ ಓಡುಪ್ಪಳೆಯನ್ನು ಚಟ್ನಿಯೊಂದಿಗೆ ನೆಂಚಿಕೊಂಡು ತಿಂದ. ಅವನು ಯಾವತ್ತೂ ಒಂದೇ ಸಲಕ್ಕೆ ಗಟ್ಟಿ ಚಟ್ನಿಯನ್ನು ನೆಂಚಿಕೊಂಡು ತಿನ್ನುವುದಿಲ್ಲ. 'ಅದೇನು ಚಟ್ನಿಯಾ ಇಲ್ಲ ಗಿಣ್ಣು ಮುದ್ದೆಯಾ? ಚಟ್ನಿ ಮಾಡ್ಬೇಕು ಅಂತ ಒಟ್ಟಾರೆ ಹೇಗೋ ಗಟ್ಟಿ ಗಟ್ಟಿಯಾಗಿ ರುಬ್ಬಿ ಚಟ್ನಿ ಮಾಡ್ತೀರಿ' ಎಂದು ಗೊಣಗುತ್ತ ತಿನ್ನುವವನು ಇವತ್ತು ಭವಾನಿ ಕಲ್ಲಿನಿಂದಲೇ ತೆಗೆದುಕೊಟ್ಟ ಮುದ್ದೆ ಚಟ್ನಿಯಲ್ಲೇ ಬಿಸಿ ಬಿಸಿ ದೋಸೆಯನ್ನು ನುಂಗಿ ಬೇಗನೆ ಎದ್ದುಹೋದ. ಭವಾನಿಯೇನಾದರೂ ಮೇಲಿಂದ ಮೇಲೆ ಪ್ರಶ್ನೆ ಹಾಕಲು ಶುರುಮಾಡಿದರೆ ಅವಳೊಟ್ಟಿಗೆ ಅಂತಕ್ಕನೂ ಸೇರಿದರೆ ಕಷ್ಟವಾಗುವುದು ಖಂಡಿತ.

ಮೈಂದಣ್ಣ ಕೈತೊಳೆದು ಒಳಕೋಣೆಯನ್ನು ದಾಟಿ ಚಾವಡಿಗೆ ಬಿಸ ಬಿಸ ನಡೆದ.

ನಾಟಕದೊಳಗೊಂದು ನಾಟಕ

ಅಂತಕ್ಕ ಒಳಗೆ ಬಂದವರು 'ಮೈಂದಣ್ಣ ಪದವಿಗೆ ಹೋದನಾ?' ಎಂದು ಕೇಳಿದರು.

ಭವಾನಿ ಓಡುಪ್ಪಳೆ ಮಾಡುವಲ್ಲಿಂದಲೇ ಉತ್ತರಿಸಿದಳು. 'ಅವನು ಆಗಲೇ ಹೋದ. ನಿಮಗೆ ಅವನಲ್ಲೇನಾದರೂ ಹೇಳುವುದಿತ್ತ?'

'ಸ್ವಲ್ಪ ಅಗತ್ಯದ ವಿಚಾರ. ಶಂಕರ ಪದವಿನಲ್ಲಿ ಗುಡಿಸಲು ಮಾಡಲು ಕವತಾರದಿಂದ ಬಿದಿರಿನ ಕೋಲುಗಳನ್ನು ತರುವುದಿದ್ದರೆ ನಮಗೂ ಕೊಟ್ಟಿಗೆಗೂ ಹಟ್ಟಿಗೂ ಹಾಕಲು ಬೇಕಾಗಿತ್ತು. ಅವರು ಲಾರಿಯಲ್ಲಿ ಎರಡು ಲೋಡು ತರುವುದಿದ್ದರೆ ಮರುದಿನ ನಮಗೂ ಅಲ್ಲಿಂದಲೇ ಎರಡು ಲೋಡು ತರಿಸಿದರೆ ಸುಲಭವಾಗುತ್ತಿತ್ತು. ಮೈಂದಣ್ಣನಿಗೆ ಹೇಳಿದರೆ ಶಂಕರನಿಗೆ ಹೇಳಿಡಬಹುದಿತ್ತು.'

'ಇವನು ಉರಿತಾಗಿದ ನಾಯಿಯಂತೆ ಒಂದು ಗಳಿಗೆ ನಿಲ್ಲದೆ ಓಡುತ್ತಾನೆಂದು ನನಗೇನು ಗೊತ್ತು. ಅವನ ಯಾವ ಕೆಲಸಕ್ಕೂ ತುದಿ ಮೊದಲೆಂಬುದೇ ಇಲ್ಲ.'

'ಹೋಗಲಿಬಿಡು, ನೀನಿವತ್ತು ಸ್ಟೋರಿನ ಕಡೆಗೆ ಹೋಗ್ತೀಯಾ?'

'ಹೋಗುವುದಿದ್ದರೆ ಸ್ವಲ್ಪ ಬೇಗನೆ ಹೋಗು. ಶಂಕರ ಸಿಕ್ಕಿದರೆ, ಅವನ ಬಳಿಯಲ್ಲಿ ನಾನು ಹೇಳಿದೆನೆಂದು ಹೇಳಿ ಎರಡು ಲೋಡು ಬಿದಿರು ಹೆಚ್ಚು ತರಿಸಲಾದೀತೇ ಕೇಳು. ಗೊತ್ತಾಯ್ತಾ?'

ಭವಾನಿ ಉಭ ಶುಭ ಉತ್ತರಿಸಲಿಲ್ಲ.

'ನಾನು ಹೇಳಿದ್ದು ಕೇಳಿಸಿತಾ ಭವಾನಿ? ನಾನು ಏನು ಹೇಳಿದರೂ ನಿಮಗೆ ಇಷ್ಟವಾಗುವುದಿಲ್ಲ. ಮೈಂದಣ್ಣ ಮಾತ್ರ ಹಾಗೆ ಅಂತ ಭಾವಿಸಿದ್ದೆ. ನೀನೂ ಶುರು ಮಾಡಿದೆಯಾ?'

ಭವಾನಿ ದೋಸೆ ಎಬ್ಬಿಸುವುದನ್ನು ನಿಲ್ಲಿಸಿ ಹೇಳಿದಳು, 'ನಾನು ನಿಮಗಾಗಿ ಗುಡ್ಡ ಹತ್ತಬೇಕು. ಇವತ್ತು ಅರ್ಕಾವತಿ ಸ್ಟೋರಿಗೆ ಬರುತ್ತಾಳೆ. ಇವತ್ತಿನಿಂದ ಅವಳು ಮೊದಲಿನಂತೆಯೇ ಕೆಲಸಕ್ಕೆ ಬರುತ್ತಾಳೆ.'

'ನಾನು ನೀವು ಹೇಳಿದ್ದೀರಲ್ಲಾಂತ ನಿಮ್ಮ ಕೆಲಸಕ್ಕಾಗಿ ಮಾತ್ರ ಹೋಗಬೇಕು. ಅಣ್ಣ ಹೊರಗೆ ಹೋಗುವ ತನಕ ಸುದ್ದಿ ಎತ್ತಲಿಲ್ಲ.

ಈಗ ನನ್ನನ್ನೂ ಸೇರಿಸಿ ಆಕ್ಷೇಪಿಸ್ತಿದ್ದೀರಿ. ಅಣ್ಣ ಮಧ್ಯಾಹ್ನ ಬಂದರೆ ಆಗ ಹೇಳಿ.'

'ಮಧ್ಯಾಹ್ನ ಅಂದರೆ ತಡವಾದೀತು. ಬೆಳಗ್ಗೆಯೇ ಅವನು ಲಾರಿಯ ವಿಷಯ ಮಾತನಾಡಿ ಜನರನ್ನೂ ಗೊತ್ತುಮಾಡಿ ಬಿದಿರು ಕಳುಹಿಸಲು ಹೇಳಿ ಕಳುಹಿಸಿದ್ದರೆ? ಈಗಲೇ ನಾವು ಕೂಡ ಹೇಳಿಡಬೇಕು. ಅದು ಸರ್ಕಾರಿ ಜಾಗದಲ್ಲಿರುವ ಬಿದಿರಾದರೂ ನಮ್ಮಿಂದ ಏನೂ ಮಾಡುವುದಕ್ಕಾಗುವುದಿಲ್ಲ. ಸ್ವಂತ ಜಾಗವೆಂದು ಆ ಉಗ್ರಾಣಿ ಜತ್ತಪ್ಪ ಹೇಳಿದ. ಆ ಜಾಗದ ಪಟೇಲರು ಆಕ್ಷೇಪವೆತ್ತುವ ಮೊದಲೇ ಕತ್ತರಿಸಿ ಸಾಗಿಸಬೇಕು. ಅಂದಿದ್ದಾನೆ ಶಂಕರ. ನೀನೇನು ಈಗ ಪದವಿಗೆ ಹೋಗ್ತೀಯಾ ಇಲ್ವಾ? ಹೇಳು. ನೀನು ಹೋಗುವುದಿಲ್ಲವಾದರೆ ನಾನೇ ಬೇಗ ಹೊರಡುತ್ತೇನೆ, ಶಂಕರ ಅಲ್ಲಿ ಮಾತಾಡಲು ಸಿಗದಿದ್ದರೆ ಮೈಂದಣ್ಣನಿಗೆ ಹೇಳಿ ಶಂಕರನಿಗೆ ತಿಳಿಸಲು ಹೇಳುತ್ತೇನೆ.'

'ಆಯ್ತು ಹೋಗಿ. ಗುಡ್ಡ ಹತ್ತಿ ಎರಡೂ ಮಂಡಿ ಬಾತಿವೆ ಎಂದು ನಾಳೆ ನರಳಬಾರದು. ಆಯ್ತಾ?'

'ಅಕೋ ನೋಡು.. ಹೋಗಿ ಅನ್ನುವವಳೂ ನೀನೇ. ಹೋಗಬೇಡವೆನ್ನುವವಳೂ ನೀನೇ.'

'ಆಯ್ತು. ನಿಮಗೆ ಆಗಬೇಕಾಗಿರುವುದು ಇಷ್ಟು, ಪದವಿನಲ್ಲಿ ಗುಡಿಸಲು ಕಟ್ಟಲು ಬಿದಿರು ತರಿಸುವಾಗ ನಿಮಗೂ ಅಷ್ಟೇ ಬಿದಿರು ತರಿಸಬೇಕು. ಇಷ್ಟೇ ತಾನೆ? ನಾನು ಅಷ್ಟು ಹೇಳಿ ಬರ್ತೇನೆ. ಬೇರೇನೂ ಬೇಕಾಗಿಲ್ಲ ತಾನೇ? ಮಕ್ಕಳಿಗೇ ಏನಾದರೂ ಬೇಕಿದ್ದರೆ ಹೇಳಿ. ಹೇಗೂ ಹೋಗ್ತೇನಲ್ಲ.'

'ಅವರಿಗೆ ಬೇಕಾಗಿರುವ ವಸ್ತುಗಳು ಏನೆಂದು ನೀನೇ ಅಂದಾಜು ಮಾಡಿ ತಾ. ಅಲಮಾರಿನ ಕೆಳಗೆ ನಿನ್ನೆ ಇಟ್ಟ ಹಣವಿದೆ. ಅದರಿಂದ ಇನ್ನೂರು ರೂಪಾಯಿ ತಗೋ. ಲಾರಿಯ ಕೂಲಿ ಮತ್ತು ಬಿದಿರಿನ ಕ್ರಯದ ವಿಷಯ ಮಾತನಾಡಲು ಶಂಕರನನ್ನು ಒಮ್ಮೆ ಇಲ್ಲಿಗೆ ಬರಹೇಳು.'

'ಬರಲು ಹೋಗಲು ವಿಲೇವಾರಿ ಮಾತನಾಡಲು ನೀವೇ ಮೈಂದಣ್ಣನಿಗೆ ಹೇಳಿ.'

ಬೆಳಗ್ಗಿನ ಕೆಲಸವನ್ನೆಲ್ಲ ಬೇಗ ಬೇಗ ಮುಗಿಸಿ ಭವಾನಿ ಗುಡ್ಡ ಹತ್ತಿ ಹೋದಳು. ದರ್ಕಾಸಿನ ಗಡಿ ದಾಟಿ ಸ್ಟೋರಿನ ಬಳಿಗೆ ಬಂದಾಗ ಅಲ್ಲಿ ಒಂದು ದೊಡ್ಡ ಲಾರಿಯ ಬಳಿಯಲ್ಲಿ ಐದು ಜನ ಕೆಲಸಗಾರರು ಕುಳಿತಿದ್ದರು. ತಮಿಳೋ ಮಲಯಾಳವೋ ಯಾವುದೋ ಭಾಷೆಯಲ್ಲಿ ಮಾತನಾಡುತ್ತಿದ್ದರು. ಇಬ್ಬರ ಕೈಯಲ್ಲಿ ಕುಡುಗೋಲುಗಳಿದ್ದುವು.

ಅವರ ಹಿಂದೆ ಲಾರಿಯ ಬಾನೆಟ್ಟಿನ ಅಂಚಿನಲ್ಲಿ ತಿಮ್ಮ ಸುಮ್ಮನೆ ನಿಂತಿದ್ದ. ಸ್ಟೋರಿನ ಹುಡುಗ ಲಾರಿಯ ಚಂದವನ್ನು ನೋಡುತ್ತ ಅದನ್ನು ಕೈಯಲ್ಲಿ ಸವರುತ್ತ ನಿಂತಿದ್ದ. ಸ್ಟೋರಿನ ಕೆಲಸ ಎಷ್ಟು ಬೋರು! ಲಾರಿಯಲ್ಲಾದರೆ ಅದರ ಮೇಲೆ ಅಷ್ಟು ಎತ್ತರದಲ್ಲಿ ಕುಳಿತು ಸ್ಟೇರಿಂಗ್ ತಿರುಗಿಸುವುದು ಎಂಥ ದೊಡ್ಡ ಕೆಲಸ! ಲಾರಿಯಲ್ಲಿ ಕುಳಿತು ಬೀದಿಯಲ್ಲಿ ಹೋಗುವ ಯುವತಿಯರನ್ನು ನೋಡುತ್ತ ಹಾರ್ನ್ ಮಾಡುವುದೆಂದರೆ ಎಷ್ಟು ಮಜಾ! ನಿಜವಾಗಿಯೂ ಮನುಷ್ಯರಾದವರಿಗೆ ಮೋಟಾರು

ಓಡಿಸುವುದಕ್ಕಿಂತ ಅದರಲ್ಲೂ ಲಾರಿಯ ಡ್ರೈವರ್ ಆಗಿ ಎತ್ತರದಲ್ಲಿ ಕುಳಿತು ಸ್ಟೇರಿಂಗ್ ತಿರುಗಿಸುವುದಕ್ಕಿಂತ ಮಿಗಿಲಾದ ಕೆಲಸ ಯಾವುದಿದೆ! ಇದು ತಿಮ್ಮನ ಜೀವನದ ಮಹತ್ವಾಕಾಂಕ್ಷೆ. ಕೈಯಲ್ಲಿ ನಾಲ್ಕು ಕಾಸು ಉಳಿಸಿ ಲಾರಿಯ ಕ್ಲೀನರ್ ಆಗಿ ಸೇರಿ ಆ ಬಳಿಕ ಡ್ರೈವರುಗಳ ಕೈಯಿಂದ ಏಟು ತಿಂದಾದರೂ ಪರವಾಗಿಲ್ಲ ಅವರು ಇಲ್ಲದ ಸಮಯದಲ್ಲಿ ಸ್ಟೇರಿಂಗ್ ತಿರುಗಿಸಲು ಕಲಿಯಬೇಕು. ಅನಂತರ ಡ್ರೈವಿಂಗ್ ಕಲಿತು ಡ್ರೈವರ್ ಆಗಬೇಕು.

ಹಾಗೆಯೇ ಬಸ್ಸಿನಲ್ಲಿ ಹೋಗಿಯೂ ಕಲಿಯಬಹುದು. ಆದರೆ ಬಸ್ಸಿನಲ್ಲಿ ಯಾವಾಗಲೂ ಜನರು ಇರುತ್ತಾರೆ. ಲಾರಿಯಾದರೆ ಹಾಗಲ್ಲ. ಡ್ರೈವರ್ ಸಾಹೇಬರು ಆಚೀಚೆ ಹೋದರೆ ಕ್ಲೀನರೇ ಧನಿ. ತಿಮ್ಮನ ಯೋಚನೆ ದೂರ ದೂರ ಸಾಗುತ್ತಿದ್ದಾಗ ಭವಾನಿ ಅವನನ್ನು ನೋಡಿದಳು.

'ಏ ತಿಮ್ಮಾ, ನೀನೇನು ಮಾಡ್ತಿದ್ದೀಯಾ? ಲಾರಿಯ ಬಾನೆಟ್ ಒರಸುವ ಕೆಲಸ ನಿನಗೆ ಯಾರು ಕೊಟ್ಟರು? ಬಾ ಇಲ್ಲಿಗೆ. ಪೆದ್ದು ಕೋತಿಯಂತೆ ಹಲ್ಲು ಬಿಟ್ಟು ನಿಲ್ಬೇಡ. ಬಾರೋ ಇಲ್ಲಿಗೆ' ಭವಾನಿ ಹೇಳಿದಳು.

ಕದ್ದು ಸಿಕ್ಕಿಬಿದ್ದಂತೆ ಆಯ್ತು ತಿಮ್ಮನಿಗೆ. ಹತ್ತಿರದ ಮನೆಯಿಂದ ಒಂದು ಬಕೆಟ್ ನೀರು ತಂದು ಸ್ಟೋರಿನ ಅಂಗಳಕ್ಕೆ ಹಾಕಿ ಕಸವನ್ನೆಲ್ಲ ಗುಡಿಸು ಅಂತ ಹೇಳಿ ಭವಾನಿ ಅವನನ್ನು ಕಳುಹಿಸಿದ್ದಳು. ದಾರಿಯಲ್ಲಿ ಲಾರಿ ಬಂದು ನಿಂತುದನ್ನೂ ಕೆಲಸದವರು ಅಲ್ಲಿ ಕುಳಿತಿರುವುದನ್ನೂ ನೋಡಿ ತಿಮ್ಮನ ಕಾಲು ಮುಂದಕ್ಕೆ ಚಲಿಸಲಿಲ್ಲ. ಹತ್ತಿರಲ್ಲೇ ಲಾರಿ ನಿಂತಿದೆ. ಅದರ ಡ್ರೈವರ್ ಕೂಡ ಇಲ್ಲ. ತಿಮ್ಮನಿಗೆ ಲಾರಿಯನ್ನು ಹತ್ತಿರದಿಂದ ನೋಡಿ ಅದರ ಮೇಲೆ ಹತ್ತಿ ಅದರ ಮೈಯನ್ನು ಮಾಲೀಸು ಮಾಡಲು ಸಲೀಸಾಯ್ತು. ಏನೇನೋ ಹೊಸ ಹೊಸ ಕನಸುಗಳು ಅವನ ಮನಸ್ಸಿನಲ್ಲಿ ಮೂಡಿದುವು. ಅಷ್ಟರಲ್ಲೇ ಈ ಭವಾನಿ ಅಕ್ಕ ಬಂದು ಕರೆಯಬೇಕಾ? ಕನಸಿನ ಸ್ವರ್ಗದಿಂದ ತಿಮ್ಮ ಭೂಮಿಗೆ ಬಿದ್ದ.

ಆಚೆಕಡೆ ಸರಿಸಿ ಇಟ್ಟಿದ್ದ ಬಕೆಟನ್ನು ಎಳೆದು ಕೈಗೆ ತೆಗೆದುಕೊಂಡ. 'ನಾನು ಕುಂಞಂಬು ಮನೆಗೆ ನೀರು ತರಲು ಹೋಗ್ತಿದ್ದೆ ಅಕ್ಕ. ಸ್ಟೋರಿನ ಅಂಗಳಕ್ಕೆ ನೀರು ಹಾಕಿ ಗುಡಿಸಲು.'

'ಸ್ಟೋರಿನ ಅಂಗಳಕ್ಕೆ ಹಾಕಲು ನೀರಿಗೆ ಹೋಗ್ತಿದ್ದೆಯಾ? ಅದೇನು ಲಾರಿಯ ಬಾನೆಟಲ್ಲಿ ಬಾವಿ ಇದೆಯಾ? ಭಾರಿ ಬಲಿತಿದ್ದೀಯಾ ಕಣೋ ನೀನು. ಬೇಗ ಹೋಗಿ ನೀರು ತೆಕ್ಕೊಂಡು ಬಾ.'

ತಿಮ್ಮನನ್ನು ನೀರು ತರಲು ಕಳುಹಿಸಿ ಭವಾನಿ ಸ್ಟೋರಿಗೆ ಹೋದಳು. ಅಂಗಳದ ಒಳಗೆ ಕಾಲಿಡುತ್ತಿದ್ದಂತೆ ಅಲ್ಲಿ ಅರ್ಕಾವತಿಯೂ ಮೈಂದಣ್ಣನೂ ಇರುವುದು ಕಾಣಿಸಿತು. ಇಬ್ಬರೂ ಆರಾಮವಾಗಿ ಮಾತನಾಡುತ್ತಿದ್ದಂತೆ ಅನ್ನಿಸಿತು.

ಭವಾನಿ ಬಂದುದನ್ನು ನೋಡಿ ಮೈಂದಣ್ಣ ತುಸು ಅಳುಕಿದಂತೆ ತೋರಿತು.

ಅವನ ಮುಖದ ನಗು ಮಾಯವಾಯ್ತು.

'ಏನು ಭವಾನಿ ಬೆಳಗ್ಗೆಯೇ ಬಂದೆ?' ಅವನು ಕೇಳಿದ.

'ಅದೇನು ನಾನು ಕೆಲಸ ಇದ್ದರೆ ಮಾತ್ರ ಬರಬೇಕಾ? ಸುಮ್ಮನೆ ಇಲ್ಲಿಗೆ ಬರಬಾರದೇ?'

'ಹಾಗಲ್ಲ ಭವಾನಿ ಅಕ್ಕ. ಈ ಸಮಯದಲ್ಲಿ ಏನಾದರೂ ಅರ್ಜೆಂಟ್ ಕೆಲಸಕ್ಕೆ ಬಂದಿದ್ದೀರಾ ಅಂತ ಅಣ್ಣ ಕೇಳಿದ್ದು. ಅವರು ಬೆಳಗ್ಗೆ ಬರುವಾಗ ಏನೂ ಹೇಳದೆ ಈಗ ಪಕ್ಕನೆ ಇಷ್ಟು ದೂರ ಬರುವಾಗ ಅವರು ಇನ್ನೇನು ಭಾವಿಸುತ್ತಾರೆ? ಏನಾದರೂ ಅಗತ್ಯದ ಕಾರಣವಿರಬಹುದೆಂದು ಊಹಿಸಿ ಹೇಳಿದರು. ಅಲ್ವಾ ಮೈಂದಣ್ಣ?' ಅರ್ಕಾವತಿ ಇಬ್ಬರ ಮಾತಿನ ಧಾಟಿಯನ್ನೂ ಕೇಳಿಸಿಕೊಂಡು ಹೇಳಿದಳು. ಮೈಂದಣ್ಣ ನಗುವಿನ ಮುಖಭಾವದಿಂದ ಭವಾನಿಯ ಮುಖ ನೋಡಿದ.

'ಅಂತ ತಲೆಹೋಗುವ ಕೆಲಸವೇನಿಲ್ಲ. ಇವತ್ತು ಕವತಾರದಿಂದ ಗಳುವಿಗೆ ಬಿದಿರಿನ ಕೋಲು ತರಿಸುತ್ತಾರೆಂದು ಕೇಳಿ ಅಮ್ಮ ನಮಗೂ ಅಲ್ಲಿಂದಲೇ ಬಿದಿರು ತರಿಸಿದರೆ ಒಳ್ಳೆಯದೆಂದು ಹೇಳಿದರು.'

'ಮುಂಜಾವ ಅವರು ಕೊಟ್ಟಿಗೆಯಲ್ಲಿ ಹಾಲು ಕರೆಯುತ್ತ ಇದ್ದರು. ಈ ಮಹಾರಾಯ ಬೆಳಗ್ಗೆ ಬೆಳಗ್ಗೆ ಮೂಗಿನಲ್ಲೂ ಬಾಯಿಯಲ್ಲೂ ತಿಂದು ಹೊರಟು ಬಂದ. ಸುಖ ದುಃಖ ಮಾತನಾಡಲು ಅವನಿಗೆ ಪುರುಸೊತ್ತೆಲ್ಲಿದೆ? ಬಿದಿರು ತುಂಬ ಅಗತ್ಯವಾಗಿ ಬೇಕು. ಅವರೇ ಹೊರಟು ಬರ್ತೇನೆ ಅಂದರು. ಕಾಲಿನ ಮಂಡಿಬೇನೆಯಿಂದ ರಾತ್ರಿಯೆಲ್ಲ ನರಳುತ್ತಾರೆ. ಸರಿಯಾಗಿ ನಿದ್ರೆ ಕೂಡ ಮಾಡುವುದಿಲ್ಲ. ಗುಡ್ಡ ಹತ್ತಿ ಬಂದರೆ ಆಮೇಲೆ ರಾತ್ರಿಯ ಕಥೆ ಹೇಳುವುದೇ ಬೇಡ. ಅದಕ್ಕೆ ನಾನೇ ಬಂದೆ. ಏನಣ್ಣ ಸುಮ್ಮನಿದ್ದೀಯಾ..? ಬಿದಿರು ತರಿಸಲು ಹೇಳ್ತೀಯಾ?'

ಆಗಲೇ ಶಂಕರ ಸ್ಟೋರಿನ ಅಂಗಳಕ್ಕೆ ಕಾಲಿಟ್ಟ.

'ಆ ಪೆದ್ದ ತಿಮ್ಮನಿಗೆ ಏನು ಹೇಳಿ ಬಂದೆ? ನಾನು ಸ್ಟೋರಿನಲ್ಲಿದ್ದೇನೆ. ಹೇಳದೆ ಹೋಗಬಾರದೆಂದು ಹೇಳಿದೆಯಾ? ಏನರ್ಥ ಆ ಮಾತಿಗೆ? ತುಳು ಮಾತನಾಡುವ ಕೆಲಸದವರು ನಗುತ್ತಿದ್ದರು.'

ಅವನ ಮಾತು ಕೇಳಿ ಭವಾನಿಯ ಮುಖ ಕೆಂಪಾಯ್ತು.

ಅರ್ಕಾವತಿ ಮಧ್ಯದಲ್ಲಿ ಮಾತನಾಡಿದಳು. 'ಅವರ ಅಮ್ಮ ಹೇಳಿದರಂತೆ ನೀವು ಬಿದಿರು ತರಿಸುವಾಗ ಗುತ್ತಿನ ಮನೆಗೂ ಎರಡು ಲೋಡು ತರಿಸಬೇಕು ಅಂತ. ಅದನ್ನು ಹೇಳುವುದಕ್ಕೆಂದೇ ಅಕ್ಕ ಇಷ್ಟು ಆತುರದಿಂದ ಬಂದುದು. ನೀವು ಅಲ್ಲಿ ಇರಲಿಲ್ಲವೇನಣ್ಣ?'

'ಆ ತಿಮ್ಮ ಅರೆಪಿರ್ಕಿ. ಅದನ್ನು ಸರಿಯಾಗಿ ಮೈಂದಣ್ಣನಲ್ಲಿ ಹೇಳಿ ಕಳುಹಿಸುತ್ತಿದ್ದರೆ ಈ ಪ್ರಸಂಗಕ್ಕೆ ಅವಕಾಶವಿರುತ್ತಿತ್ತೇ?'

'ನಾನು ಅಲ್ಲಿರಲಿಲ್ಲ. ಡ್ರೈವರನ್ನು ಕರೆದುಕೊಂಡು ಹೆಗ್ಗಡೆಯವರ ಅಂಗಡಿಗೆ ಹೋದೆ. ಲಾರಿಗೆ ಬಿದಿರು ಹಾಕಿದ ಮೇಲೆ, ಲೋಡು ರನ್ನಿಂಗ್‌ನಲ್ಲಿ ಜಾರದ ಹಾಗೆ ಅದಕ್ಕೆ ಕಟ್ಟಲು ಕತ್ತಾಳೆಯ ಹಗ್ಗವನ್ನು ತೆಗೆಸಿಕೊಡಲು ಹೋಗಿದ್ದೆ. ಗುತ್ತಿನ ದೊಡ್ಡ ಜನ

ಬರುತ್ತಾರೆಂಬ ಸೂಚನೆ ನನಗಿರಲಿಲ್ಲ. ಅಲ್ಲದೆ ಅವರಿಗೂ ಬಿದಿರು ಬೇಕೆಂಬುದನ್ನು ಮೈಂದಣ್ಣ ಹೇಳಲಿಲ್ಲ.'

'ನಾನು ಬೆಳಗ್ಗೆಯೇ ಹೊರಟು ಬಂದೆ. ಆಮೇಲೆ ಅಮ್ಮ ಬಿದಿರು ಬೇಕು ಅಂತ ಭವಾನಿಗೆ ಹೇಳಿದರಂತೆ. ಅವರೇ ಹೊರಟದ್ದು ನೋಡಿ ಅವರ ಕಾಲುನೋವು ಹೆಚ್ಚಾದೀತೆಂದು ಗುಡ್ಡ ಹತ್ತಿ ಬಂದರೆ ಮರುದಿನ ಏಳಲೂ ಕುಳಿತುಕೊಳ್ಳಲೂ ಆಗುವುದಿಲ್ಲ ವೆಂದು ಇವಳೇ ಬಂದಳು. ಎರಡು ಲೋಡು ಬಿದಿರು ನಮಗೂ ಸಿಗಬಹುದೇ?' ಮೈಂದಣ್ಣ ಕೇಳಿದ. ಅವನು ಸ್ಟೋರಿನ ಗಲ್ಲಾದಲ್ಲಿ ಕುಳಿತಿದ್ದವನು ಎದ್ದುಬಂದಿದ್ದ.

'ಬಿದಿರು ಸಿಗಬಹುದು. ನಾನು ನೋಡಿ ಸಾಧ್ಯವಾದರೆ ಇವತ್ತೇ ಕಳುಹಿಸಿಕೊಡುತ್ತೇನೆ. ಒಂದೇ ಕಡೆಯಲ್ಲಿ ಸಿಗದಿದ್ದರೆ ಬೇರೆ ಎಲ್ಲಾದರೂ ಸಿಗಬಹುದು. ಹಾಗೆ ಖಂಡಿತ ಸಿಗಬಹುದು ಅಂತ ಹೇಳುವ ಹಾಗೂ ಇಲ್ಲ. ಎಲ್ಲಾದರೂ ಫಾರೆಸ್ಟಿನವರ ಕಣ್ಣು ತಪ್ಪಿಸಿ ಸ್ವಂತ ಭೂಮಿ ಇದ್ದವರ ಹತ್ತಿರ ಮಾಡುವ ವ್ಯವಹಾರ. ಅದು ಅಷ್ಟು ಸುಲಭ ಅಲ್ಲ.' ಇಷ್ಟಾದರೂ ಭವಾನಿ ಮುಖ ತಿರುಗಿಸಿ ಕುಳಿತವಳು ಬಾಯಿ ತೆರೆಯದೆ ಸುಮ್ಮನಿದ್ದಳು.

ಶಂಕರನಿಗೆ ಗೊತ್ತಾಯ್ತು. ತಾನು ಮಾತನಾಡಿದ್ದು ಹೆಚ್ಚಾಯ್ತು. ಅವಳಿಗೆ ಬೇಸರವಾಗಿದೆ. ಅವನು ಮೈಂದಣ್ಣನಿಗೆ ಹೇಳಿದ, 'ಮೈಂದಣ್ಣ, ನಮ್ಮ ಹತ್ತಿರ ಎರಡು ಕುಡುಗೋಲು ಮಾತ್ರ ಇದೆ. ಇನ್ನೂ ಎರಡು ಸಿಗುತ್ತಿದ್ದರೆ ತುಂಬ ಉಪಕಾರವಾಗುತ್ತಿತ್ತು. ಯಾರ ಹತ್ತಿರ ಸಿಗಬಹುದು?'

'ಗುತ್ತಿನಲ್ಲಿ ಒಂದು ಕುಡುಗೋಲಿದೆ. ಈಗ ತರುವುದಕ್ಕೆ ಯಾರಾದರೂ ಹೋದರೆ ನಿಮಗೆ ತಡವಾದೀತು. ಆಮೇಲೆ ತಂದಿಡುತ್ತೇನೆ. ಡಿಪ್ಪದ ರಹಮತ್ ಸಾಯಿಪ್ಪನ ಹತ್ತಿರ ಎರಡು ಉಂಟು. ಅದರಲ್ಲಿ ಒಂದು ಕೊಡುತ್ತಾನೆ.'

'ಹೀಗೆ ಮಾಡೋಣ. ನೀವು ಒಂದು ಲೋಡು ಬಿದಿರು ಕಳುಹಿಸುವಾಗ ಗುತ್ತಿನ ಕುಡುಗೋಲು ನಾನೇ ತರಿಸಿಡ್ತೇನೆ. ಅಲ್ಲಿಗೆ ತಿಮ್ಮನನ್ನು ಕಳುಹಿಸುವ. ಆಗಬಹುದೇ?

ರಹಮತ್ ಯಾರಾದರೂ ಹೋದ್ರೆ ಕೊಡಲಾರ. ನೀನೇ ಹೋಗಿ ಕೇಳಬೇಕು ಮೈಂದಣ್ಣ. ಯಾಕಣ್ಣ?' ಅಂತ ಅವನು ಕೇಳಿದರೆ ಗುಟ್ಟು ಬಿಡಬಾರದು. ಇಡೀ ಊರಿಗೆ ಹರಡುತ್ತದೆ.'

'ಮೈಂದಣ್ಣ, ಬೇಗ ಹೋಗಿ ಬಾ. ತಿಮ್ಮನನ್ನೂ ಜೊತೆಗೆ ಕರೆದುಕೋ.' ಮೈಂದಣ್ಣ ಆ ಕಡೆಗೆ ಹೋದದ್ದೇ ಶಂಕರ ಅರ್ಕಾವತಿಯನ್ನು ಕುರಿತು 'ಅರ್ಕಾವತಿ, ಕುಡಿಯುವುದಕ್ಕೆ ಒಂದು ಚೆಂಬು ನೀರು ತಂದುಕೊಡಿ' ಅಂದ.

ಅರ್ಕಾವತಿ ಎದ್ದು ಒಳಗೆ ಹೋದಳು. ಶಂಕರ ಭವಾನಿ ಕುಳಿತಲ್ಲಿಗೆ ಬಂದು ಹೇಳಿದ, 'ಭವಾನಿ, ನನ್ನದು ತಪ್ಪಾಯ್ತು. ನಿನಗೆ ಕೋಪ ಬಂತಾ? ತಿಮ್ಮ ಹೇಳಿದ, ಅಕ್ಕ ಸ್ಟೋರಿನಲ್ಲಿ ಕುಳಿತಿದ್ದಾರಂತೆ. ನೀವು ಹೇಳದೆ ಹೋಗಬಾರದಂತೆ ಅಂತ. ನೀನೇ ಹೇಳು ನನಗೆ ತುಸುವಾದರೂ ಕೋಪ ಬರದೆ ಇರುತ್ತದಾ? ಇದ್ಯಾವ ಸೀಮೆ ಮಾತೂಂತ ನನ್ನ ಮನಸ್ಸಿಗೆ ತೋಚಿತು. ... ದೇವಿ ಕ್ಷಮಿಸಿ. ದಯೆ ತೋರಿ' ನಾಟಕದಲ್ಲಿ ಮಾಡುವಂತೆ

ಕೈ ಮುಗಿದು ಕೇಳಿದ.

ಅವನ ನಾಟಕವನ್ನು ನೋಡಿ ಕೋಪ ಇಳಿದು ಅವಳಿಗೆ ನಗು ಬಂತು. 'ನಾಟಕ ಮಾಡಲು ಚೆನ್ನಾಗಿ ಕಲ್ತಿದ್ದೀರಿ... ಎಷ್ಟು ಬೇಗ ತಪ್ಪಾಯ್ತು ಅನ್ತೀರಾ. ಗುತ್ತಿನವರು ದೊಡ್ಡ ಜನ ಅಂತ ನಿಮಗೆ ಈಗ ಗೊತ್ತಾಯ್ತಾ? ನೀವೂ ಏನೂ ಕಡಿಮೆಯಿಲ್ಲ. ದೊಡ್ಡ ಬಾಯಿ ತೆಗೆದು ಗುತ್ತಿನವರನ್ನು ಕೀಳುಮಾಡಿ ಎತ್ತಿ ಬಿಸಾಡ್ತೀರಿ.'

'ಎಷ್ಟು ಭಾರ ಇದ್ದೀ, ಅಷ್ಟು ಸುಲಭದಲ್ಲಿ ಎಸೆಯಲು ನನಗೆ ಸಾಧ್ಯವೇ? ಒಮ್ಮೆ ನೋಡಲಾ?' ಅನ್ನುತ್ತ ಶಂಕರ ಒಂದು ಹೆಜ್ಜೆ ಮುಂದೆ ಬಂದ.

'ಅಯ್ಯಯ್ಯೋ, ಹಾಗೆ ಮಾಡಬೇಡಿ, ನಿಮ್ಮ ದಮ್ಮಯ್ಯ, ಯಾರಾದರೂ ಬರ್ತಾರೆ. ಅರ್ಕಾವತಿಯೇನಾದರೂ ನೋಡಿದರೆ ಪೂರಾ ನಾಚಿಕೆ ಬಿಟ್ಟವಳೆಂದು ಹೇಳುತ್ತಾರೆ.'

'ಯಾವುದದು ನಾಚಿಕೆಯಾಗುವ ವಿಷಯ? ಒಂದು ಚೆಂಬು ನೀರು ಕುಡಿಯುವಷ್ಟು ಬಿಸಿಯಾಗಿದ್ದೀರಾ ಶಂಕರಣ್ಣ. ಈಗ ತಣ್ಣಗಾಗಿರ್ತೀರಿ ಅಂದುಕೊಂಡು ಒಂದೇ ಲೋಟ ನೀರು ತಂದೆ.. ನಿಜವಾಗಿಯೂ ನೀರು ಬೇಕಿತ್ತೇ?.. ನಾನು ಸ್ವಲ್ಪ ಹೊತ್ತು ಒಳಗೆ ಇರಲಾ?'.. ಅರ್ಕಾವತಿ ಅವರಿಬ್ಬರ ಮುಖವನ್ನು ನೋಡಿ ಹೇಳಿದಳು.

'ಒಂದು ಲೋಟ ನೀರು ಸಾಕು. ನನಗೆ ನಿಲ್ಲಲು ವೇಳೆಯಿಲ್ಲ. ಹೊತ್ತಾಯ್ತು. ಸುಮಾರು ದೂರ ಹೋಗಬೇಕು' ಹೇಳಿದ ಶಂಕರ.

'ನಾನು ಬರುವುದಾ ಹಾಗಿದ್ದರೆ?' ಶಂಕರ ಭವಾನಿಯನ್ನೊಮ್ಮೆ ಅರ್ಕಾವತಿ ಯನ್ನೊಮ್ಮೆ ನೋಡಿ ಹೇಳಿದ.

ರಹಮತ್‌ನ ಕುಡುಗೋಲನ್ನು ತಿಮ್ಮನ ಕೈಯಲ್ಲಿ ಹಿಡಿಸಿಕೊಂಡು ಮೈಂದಣ್ಣ ಬಂದ.

ಜನಗಳನ್ನು ಲಾರಿಯಲ್ಲಿ ಕುಳ್ಳಿರಿಸಿಕೊಂಡು ಅವರು ಹೊರಟರು. ಅಡ್ಡಾದಿಡ್ಡಿ ಕೆಲಸ ಮಾಡಿದರೆ ಕಾಲಿಗೆ ಭಾರಬಿದ್ದು ಶಂಕರನ ಕೃತಕಕಾಲು ಚುಚ್ಚಲು ಶುರುವಾಗುತ್ತದೆ. ಭವಾನಿ ದೂರ ನಿಂತು ಅವರು ಹೊರಡುವ ಗಡಿಬಿಡಿಯನ್ನು ನೋಡುವಾಗ ಆ ನೋವಿನ ಎಡಗಾಲನ್ನು ಊರುವಾಗ ಶಂಕರನ ಮುಖದಲ್ಲಿ ಸುಳಿಯುವ ನೋವಿನ ನೆರಳನ್ನು ನೋಡಿ ಅವಳ ಅಳ್ಳೆಗೆ ಮುಳ್ಳು ಚುಚ್ಚಿದಂತೆ ಆಯ್ತು. ಆದರೆ ಏನು ಮಾಡುವುದು! ಅಷ್ಟು ದೂರದಿಂದ ನೋಡಿ ತಾನೂ ನೋವನ್ನು ಅನುಭವಿಸುವುದಲ್ಲದೆ ಬೇರೆ ದಾರಿ ಇಲ್ಲ. 'ದೇವಿ ಚಾಮುಂಡಿ, ನೀನೇ ಶಕ್ತಿ ಕೊಡು. ಅವರ ನೋವನ್ನು ಕಡಿಮೆ ಮಾಡು. ನೀನೇ ದಿಕ್ಕು, ನೀನೇ ನಮ್ಮನ್ನು ಕಾಪಾಡುವ ಸರ್ವ ಶಕ್ತಿ' ಎಂದು ಮನಸ್ಸಿನಲ್ಲೇ ಮತ್ತೆ ಮತ್ತೆ ಕೈಮುಗಿದಳು.

ಲಾರಿ ಹೋದಮೇಲೆ 'ನಾನೂ ಮನೆಗೆ ಹೋಗ್ತೇನೆ. ತಿಮ್ಮನನ್ನು ಈಗ ಕಳುಹಿಸುತ್ತೀಯಾ ಅಥವಾ ಸ್ವಲ್ಪ ಕಳೆದು ಗುಡಿಸುವ ಕೆಲಸ ಮುಗಿದ ಮೇಲೆ ಕಳುಹಿಸುತ್ತೀಯಾ?' ಭವಾನಿ ಮೈಂದಣ್ಣನನ್ನು ಕೇಳಿದಳು.

'ಸ್ವಲ್ಪ ಹೊತ್ತು ಕಳೆದ ಮೇಲೆ ಯಾಕೆ? ಈಗಲೇ ಹೋಗಲಿ ಅಲೆದಾಡಿಕೊಂಡು

ಬರುತ್ತಾನೆ. ಆಮೇಲೆ ಹತ್ತು ಸುಳ್ಳುಗಳ ಕಾರಣಗಳನ್ನು ತೋರಿಸುತ್ತಾನೆ.'

'ತಿಮ್ಮ, ನೀನು ಅಕ್ಕನೊಟ್ಟಿಗೆ ಗುತ್ತಿಗೆ ಹೋಗು. ಕುಡುಗೋಲು ಕೊಡ್ತಾರೆ. ಅದನ್ನು ತೆಗೆದುಕೊಂಡು ಬೇಗ ಬಾ. ಎಲ್ಲೆಲ್ಲೋ ನಿಂತು ಹೆಂಡ ಕುಡಿದು ಬಂದರೆ ಜಾಗ್ರತೆ' ಮೈಂದಣ್ಣ ಹೇಳಿದ.

'ಬಿಟ್ಟಿ ಹೆಂಡ ನನಗೆ ಯಾರು ಕೊಡ್ತಾರೆ? ಸ್ವಲ್ಪ ಕುಡಿದರೆ ನನಗೆ ಅಮಲು ಏರ್ತದಾ? ಅಣ್ಣನವರು ಸುಮ್ಮ ಸುಮ್ಮನೆ ತಮಾಶೆ ಮಾಡ್ತಾರೆ. ನೀವು ನಂಬಬೇಡಿ ಅಕ್ಕ' ದೊಡ್ಡ ನಿಯತ್ತಿನ ಗೃಹಸ್ಥನಂತೆ ತಿಮ್ಮ ಹೇಳಿದ.

* * * * *

ನಾಲ್ಕು ಲೋಡು ಬಿದಿರು ಸಿಕ್ಕಿತು, ಅದರ ನಂತರ ಯಾರೋ ಫಾರೆಸ್ಟ್ ಡಿಪಾರ್ಟಮೆಂಟಿಗೆ ತಳ್ಳಿ ಅರ್ಜಿ ಬರೆದರು. ಆಮೇಲೆ ಶಂಕರ ನಚ್ಚದ ಪಟೇಲರನ್ನು ಹಿಡಿದು ಗುಟ್ಟಾಗಿ ಫಾರೆಸ್ಟ್ ಇಲಾಖೆಯ ಪರ್ಮಿಟ್ ಪಡೆಯಲು, ಸಾಮಗ್ರಿಗಳನ್ನು ತರಿಸಲು ಹಗಲೂ ರಾತ್ರಿ ಪೇಚಾಡುವುದೇ ಆಯ್ತು. ವಾರದ ಐದು ದಿನವೂ ಮಂಗಳೂರಿಗೆ ಸುತ್ತಾಡಿ ಅರ್ಧಕ್ಕರ್ಧ ಇಳಿದುಹೋದ. ಅಷ್ಟಾಗುವಾಗ ಬೇಸಿಗೆಯ ಮಿಂಚು ಸಿಡಿಲು ಶುರುವಾಯ್ತು.

ಗುಡಿಸಲಿಗೆ ಬೇಕಾದ ಬಿದಿರು ತಲಪಿದ್ದಾಯ್ತು. ಹಾಗೆಯೇ ಗುತ್ತಿನ ಮನೆಯ ಕೊಟ್ಟಿಗೆಗೂ ಹಟ್ಟಿಗೂ ಬಿದಿರು ಹಾಕಿದ್ದಾಯ್ತು. ಮಳೆಗಾಲ ಕಳೆದು ಆಷಾಢದ ಬಳಿಕ ಶ್ರಾವಣ ತಿಂಗಳು ಬರುತ್ತಲೇ ಗುಡಿಸಲಿಗಾಗಿ ಭೂಮಿ ಪೂಜೆ ಮಾಡಿ ಸಮುದಾಯ ಭವನಕ್ಕೆ ಗುದ್ದಲಿ ಹಾಕುವುದೆಂದು ಶಂಕರ ಮತ್ತು ಉಳಿದವರ ಅಭಿಪ್ರಾಯವಾಗಿತ್ತು.

ಇಷ್ಟೆಲ್ಲ ಕೆಲಸವಾಗುವಾಗ ಭವಾನಿಯ ಮುಖ ನೋಡುತ್ತಿದ್ದಂತೆ ಅವಳನ್ನು ಕಾಯಿಸುವುದು ಸರಿಯಲ್ಲವೆಂದು ಶಂಕರನಿಗೆ ಅನ್ನಿಸುತ್ತಿತ್ತು... ಸಾದಾಸೀದ ಹುಡುಗಿ.. ಅವಳ ಒಳಗೆ ಎಂಥ ನೋವಿನ ಬೇಗೆ ಅಡಗಿದೆಯೆಂಬುದು ಅವನಿಗೇ ಗೊತ್ತಾಗುತ್ತಿತ್ತು. ಯಾಕಿಂಥ ಶಿಕ್ಷೆ?'

ಅವನೇನೂ ರಾಮನಲ್ಲ. ತ್ರೇತಾಯುಗದ ರಾಮ ಸೀತೆಗೆ ಕೊಟ್ಟ ಪರೀಕ್ಷೆಗಳು ಎಷ್ಟು ಸರಿ? ಮರ್ಯಾದಾ ಪುರುಷೋತ್ತಮನೆಂದು ರಾಮನನ್ನು ಹೊಗಳುವ ಸಂದರ್ಭದಲ್ಲಿ ಸೀತೆಯನ್ನು ಓರ್ವ ನಾಲಗೆಯಿಲ್ಲದ ಮೊದ್ದು ಪ್ರಾಣಿಯಂತೆ ರಾಮ ನಡೆಸಿದ್ದು ಸರಿಯಾ? ದಾಂಪತ್ಯನೀತಿ ಪರಿಶುದ್ಧವಾಗಿರಬೇಕೆಂಬುದು ಹೆಣ್ಣಿಗೆ ಮಾತ್ರ ಇರುವುದಾ? ಅವಳಿಗೆ ಬದುಕಿನಲ್ಲಿ ಮನಸ್ಸು, ಭಾವನೆ, ಬೇಕು ಬೇಡಗಳೆಂಬುದು ಇಲ್ಲವೇ? ಅವುಗಳನ್ನು ವಾಲ್ಮೀಕಿ ಯಾಕೆ ಹೇಳಿಲ್ಲ?

ಹೀಗೆ ರಾಮನಂತೆ ಶಂಕರ ಭವಾನಿಯ ಬಗ್ಗೆ ಈ ಕಾಲದಲ್ಲೂ ಯೋಚಿಸಿದರೆ ಹೇಗೆ?

ನನ್ನ ಅನುಕೂಲಕ್ಕೆ ಸರಿಯಾಗಿ ಮದುವೆಯಾಗಬೇಕೇ? ಅವಳ ಬೇಕು ಬೇಡಗಳಿಗೆ

ಒಂದು ಬೆಲೆ ಇಲ್ಲವೇ? ಅವಳು ಕಾದು ಕಾದು ನನಗಿನ್ನು ಮದುವೆಯೇ ಬೇಡವೆಂದು ಯೋಚಿಸಿದರೆ!

ಸರಿ. ಮೊದಲು ಅವಳನ್ನು ಕೇಳಿ ಆಮೇಲೆ ಅವಳ ತಾಯಿಯಲ್ಲಿ ಮಾತಾಡಬೇಕೆಂದು ಶಂಕರ ಆಲೋಚಿಸಿದ.

ಗುದ್ದಲಿಪೂಜೆ ಮಾಡುವ ದಿನ ಶ್ರಾವಣದ ಒಂಬತ್ತು ಕಳೆದು ಎಂದು ಕೇಶವ ತಂತ್ರಿಗಳು ಹೇಳಿದ ವಿಚಾರವನ್ನು ತ್ಯಾಂಪಣ್ಣ ಸಾಮನಿಯವರು ಶಂಕರನಿಗೆ ತಿಳಿಸಿದರು. ಅದನ್ನು ಜಾಗದ ಒಡತಿಗೆ (ಒಂದು ಕಾಲದ) ಹೇಳಿ ಅನುಮತಿ ಪಡೆಯಬೇಕಲ್ಲ! ಸ್ವಾಮಿ ಕಾರ್ಯವೂ ಆಯ್ತು, ಸ್ವಕಾರ್ಯವೂ ಆಯ್ತು ಎಂದು ನಿರ್ಧರಿಸಿ ಶಂಕರ ಗುತ್ತಿನ ಮನೆಗೆ ಬಂದ. ಮೊಗಸಾಲೆ ದಾಟಿ ಅಂಗಳಕ್ಕೆ ಕಾಲಿಟ್ಟ. ಬಾವಿಯಿಂದ ನೀರು ಸೇದಿ ಸೊಂಟದಲ್ಲಿಟ್ಟುಕೊಂಡು ಅಡುಗೆ ಕೋಣೆಗೆ ಹೋಗುವ ಕಿರುಬಾಗಿಲಿನ ಕಡೆಗೆ ತಿರುಗುತ್ತಿದ್ದ ಭವಾನಿಗೆ ಎದುರಿನಲ್ಲಿ ಬರುತ್ತಿರುವ ಶಂಕರನನ್ನು ನೋಡಿ ಮುಖದಲ್ಲಿ ಮುಗುಳ್ನಗು ಮೂಡಿತು. ಶಂಕರ ಬಾಯಿಬಿಟ್ಟು ನಗಲಿಲ್ಲ. ಕಣ್ಣಿನಲ್ಲೇ ಅವನ ನಗು ಸೂಸುತ್ತಿತ್ತು.

ಅವನು ಚಾವಡಿಯ ಎದುರಿನ ಅತಿಥಿಗಳ ಜಗಲಿಗೆ ಹೋಗುವಾಗ ಮೈಂದಣ್ಣ ಚಾವಡಿಯ ಮೆಟ್ಟಲು ಇಳಿದು ಬಂದ. 'ಓ ಶಂಕರಣ್ಣ, ಬೆಳಗ್ಗೆಯೇ ಬಂದುಬಿಟ್ಟಿರಾ? ಒಳ್ಳೆಯದಾಯ್ತು. ಇವತ್ತು ಕೆಲಸದಾಳುಗಳು ಎಷ್ಟು ಜನ ಬೇಕು, ಯಾವ ಕೆಲಸ ಹೇಳಬೇಕು? ನಿನ್ನೆ ನೀವು ಏನೂ ಹೇಳದೆ ಸೇನೆರ ಮೂಲೆಗೆ ಹೋದಿರಿ ಎಂದು ಅರ್ಕಾವತಿ ಹೇಳಿದಳು.'

ಜಗಲಿಯಲ್ಲಿ ಕುಳಿತುಕೊಂಡು ಶಂಕರ ಆರಾಮವಾಗಿ ಮಾತಿಗೆ ಮೊದಲಿಟ್ಟ. 'ಸೇನೆರ ಮೂಲೆಗೆ ಹೋದುದು ಪದ್ಮಣ್ಣ ಊರಿಗೆ ಬರ್‍ತಾರಾ ಎಂದು ತ್ಯಾಂಪಣ್ಣ ಮಾಮನ ಹತ್ತಿರ ಕೇಳಬೇಕೆಂದು. ಅಲ್ಲದೆ ಸಮುದಾಯ ಭವನಕ್ಕೆ ಗುದ್ದಲಿಪೂಜೆ ಮಾಡುವ ವ್ಯವಸ್ಥೆಯನ್ನೂ ಕೇಳಬೇಕಿತ್ತು.'

'ಶ್ರಾವಣದ ಒಂಬತ್ತು ಕಳೆದಾಗ ಗುದ್ದಲಿಪೂಜೆ ಮಾಡಲು ದಿನ ಒಳ್ಳೆಯದಿದೆಯೆಂದು ಕೇಶವ ತಂತ್ರಿಗಳು ಹೇಳಿದ್ದಾರೆ. ನನಗೆ ಬೇರೊಂದು ಕೆಲಸವೂ ಅದರೊಟ್ಟಿಗೆ ಆಗಬೇಕು.'

'ಅದು ಯಾವ ಕೆಲಸ ಶಂಕರಣ್ಣ? ನನ್ನಿಂದ ಆಗುವ ಸಹಾಯವೇನಾದರೂ ಇದ್ದರೆ ಹೇಳಿ.'

'ಮೈಂದಣ್ಣ, ನಿನ್ನ ಅಮ್ಮನನ್ನು ಒಮ್ಮೆ ಇಲ್ಲಿಗೆ ಬರಲು ಹೇಳ್ತಿಯಾ? ಅವರ ಹತ್ತಿರವೂ ನಿನ್ನ ಹತ್ತಿರವೂ ಒಟ್ಟಿಗೆ ಮಾತನಾಡುವ ಕೆಲಸ ಅದು.'

'ಅದೆಂಥ ದೊಡ್ಡ ವಿಚಾರವಪ್ಪಾ. ಅಮ್ಮ ಒಳಗಿದ್ದಾರು.'

'ಭವಾನಿ.. ಭವಾನಿ.. ಅಮ್ಮ ಒಳಗಿದ್ದರೆ ಒಮ್ಮೆ ಇಲ್ಲಿಗೆ ಬರಲು ಹೇಳು' ಒಳಗಿನಿಂದ ಯಾವ ಪ್ರತಿಕ್ರಿಯೆಯೂ ಇಲ್ಲ. ಮೈಂದಣ್ಣ ಮತ್ತೊಮ್ಮೆ ಭವಾನಿಯನ್ನು ಕರೆದ.

'ಅಮ್ಮ ಭತ್ತ ಕುಟ್ಟುವಲ್ಲಿಗೆ ಹೋಗಿದ್ದಾರೆ. ನಾನು ಹೋಗಿ ಕರೆಯುತ್ತೇನೆ' ಭವಾನಿ ಮೆಲ್ಲಗಿನ ಧ್ವನಿಯಲ್ಲಿ ಉತ್ತರಿಸಿದಳು.

ಮೈಂದಣ್ಣನೂ ಶಂಕರನೂ ಮಾತನಾಡುತ್ತಿದ್ದಂತೆ ಅಂತಕ್ಕ ಬಿರಬಿರನೆ ನಡೆದುಕೊಂಡು ಬಂದರು.

'ಏನು ಶಂಕರ, ಅಷ್ಟು ಅವಸರದಲ್ಲಿ ಹೇಳಿ ಕಳುಹಿಸಿದೆ? ಎರಡು ಕಳಸ ಬೆಳ್ತಿಗೆ ಮಾಡಿಸುತ್ತಿದ್ದೆ. ಮಠಕ್ಕೆ ವರ್ಷಾವಧಿಯಲ್ಲಿ ಸಲ್ಲುವ ಸೇವೆ. ಅಲ್ಲದೆ ದೈವ ದೇವರುಗಳ ಕಾರ್ಯಕ್ಕೂ ಬೇಕಲ್ಲ. ಬಾಕಿ ನಿತ್ಯದ ಖರ್ಚಿಗೆ. ಏನು ಮಗಾ ನೀನೀಗ ಅಷ್ಟು ಅರ್ಜೆಂಟಾಗಿ ಬಂದೆ?'

'ಅರ್ಜೆಂಟೇನೂ ಇಲ್ಲ. ಎಲ್ಲ ಚೆನ್ನಾಗಿದೆ. ನಿಮ್ಮ ಹತ್ತಿರ ಒಂದು ಅಗತ್ಯದ ವಿಷಯ ಕೇಳುವುದು ಬಾಕಿಯಾಗಿತ್ತು. ಅದಕ್ಕೆ ಬಂದೆ.'

'ಯಾವ ಅಗತ್ಯದ ವಿಷಯ ಕೇಳಬೇಕು? ನೀನು ಏನು ಕೇಳಿದರೂ ನಾನು ಕೊಡುತ್ತೇನೆ. ಕೇಳು.'

'ನೀವು ಕೊಡ್ತೀರಿ ಎನ್ನುವ ಭರವಸೆ ನನಗಿದೆ. ನಿಮ್ಮ ಮಗಳನ್ನೂ ಕೇಳಲಾ?'

'ಯಾರನ್ನು? ಭವಾನಿಯನ್ನಾ? ಕೇಳು. ಈಗಲೇ ಕೇಳುತ್ತೀಯಾ?'

'ಹೌದು. ನಿಮ್ಮ ಎದುರಿಗೇ ಕೇಳಬೇಕು.'

'ಇವನೇನು ಕೇಳುತ್ತಾನಪ್ಪಾ ಎಂದು ಅಂತಕ್ಕ ತುಸು ಹೊತ್ತು ಗೊಂದಲಕ್ಕೆ ಬಿದ್ದರು. ಆಮೇಲೆ ಧೈರ್ಯ ಮಾಡಿ ಮಗಳನ್ನು ಕರೆದರು. 'ಭವಾನಿ, ಇಲ್ಲಿಗೆ ಬಾಮ್ಮ, ಶಂಕರನಿಗೆ ನಿನ್ನ ಹತ್ತಿರ ಏನನ್ನೋ ಕೇಳಬೇಕಂತೆ.' ಒಳಗಿನಿಂದ ಮಾತಿಲ್ಲ.

'ಭವಾನಿ, ಹೊರಗೆ ಬಾಮ್ಮ, ಕೇಳಿದ ಮಾತಿಗೆ ಉತ್ತರ ಹೇಳಬೇಕಲ್ಲ.'

'ಅವಳಿಗೆ ಮನಸ್ಸಿಲ್ಲದಿದ್ದರೆ ನನ್ನ ಮಾತಿಗೆ ಉತ್ತರಿಸುವ ಅಗತ್ಯವಿಲ್ಲ.'

ಶಂಕರ ಬಹಳ ಸಭ್ಯನಂತೆ, ದೊಡ್ಡ ಗೃಹಸ್ಥನ ರೀತಿಯಲ್ಲಿ ಮಾತನಾಡಿದ.

ಚಾವಡಿಯ ಮೂರು ಹಂತದ ಕೆತ್ತನೆಯ ಬಾಗಿಲಿನ ದಾರಂದದ ಹಿಂದೆ ನಿಂತಿದ್ದ ಭವಾನಿ ದಡಕ್ಕನೆ ಹೊಸ್ತಿಲು ದಾಟಿ ಚಾವಡಿಗೆ ಬಂದಳು. ಚಾವಡಿಯ ಎರಡು ಮೆಟ್ಟಲು ಇಳಿದು ಮೈಂದಣ್ಣನ ಹಿಂದೆ ಬಂದು ನಿಂತಳು. ಅವಳ ಮುಖ ಕೆಂಪಾಗಿತ್ತು. ಶರೀರ ನಡುಗುತ್ತಿತ್ತು. ಕಣ್ಣು ಫಳಫಳ ಮಿಂಚುತ್ತಿತ್ತು. ಅದರಲ್ಲಿ ತೆಳ್ಳಗೆ ಕಣ್ಣೀರು ಕೂಡ ಇದೆಯಾ? ಮುಖದಲ್ಲಿ ಗಂಭೀರ ಭಾವ. ನೀನು ನನ್ನನ್ನೇಕೆ ಪರೀಕ್ಷೆ ಮಾಡ್ತೀಯಾ? ಎಂಬ ಪ್ರಶ್ನೆ.

ಅವಳ ಅವತಾರವನ್ನು ನೋಡಿ ಸ್ವಲ್ಪ ತಮಾಶೆಯಾಗಿಯೇ ಆರಂಭಿಸಿದ ಶಂಕರನ ಮಾತಿನ ವರಸೆ ಅಲ್ಲಿಗೇ ತಗ್ಗಿತು. ಅವಳನ್ನು ಪೇಚಿಗೆ ಸಿಕ್ಕಿಸಬೇಕೆಂದು ಭಾವಿಸಿದ ಅವನ ಮಾತುಗಳು ಅಲ್ಲಿಗೇ ಅಡಗಿದುವು. ಈಗ ಕೇಳದೆ ಉಪಾಯವಿಲ್ಲ. ಆತ ಮೈಂದಣ್ಣನ ಮುಖವನ್ನು ನೋಡಿ ಹೇಳಿದ.

'ನಾನು ಅಂಗವಿಕಲ. ಆಸ್ತಿ, ಬದುಕುಗಳೂ ಹೇಳುವಷ್ಟಿಲ್ಲ. ಹೀಗೇ ಅಂತ ಒಂದು ಉದ್ಯೋಗವಿಲ್ಲ. ಕೈತುಂಬ ಸಂಪಾದನೆ ಇಲ್ಲ. ಹಾಗಿದ್ದರೂ ಧೈರ್ಯಮಾಡಿ ಹೆಣ್ಣು ಕೇಳುತ್ತಿದ್ದೇನೆ. ಒತ್ತಾಯಮಾಡಿ ಕೇಳುವ ಶಕ್ತಿ ನನ್ನ ಹತ್ತಿರ ಇಲ್ಲ. ಆದ್ದರಿಂದ ಈ

ಮಾತನ್ನೆಲ್ಲ ಯೋಚಿಸಿ ನಿನ್ನ ಅಭಿಪ್ರಾಯ ಹೇಳು.'

ಭವಾನಿ ಅವನ ಮುಖವನ್ನು ತಲೆಯೆತ್ತಿ ನೋಡಿದಳು. 'ನನಗೆ ಒಪ್ಪಿಗೆ' ಅಂದಳು. ಅವಳ ಕಣ್ಣುಗಳಲ್ಲಿ ನಿಮಗೆ ನನ್ನ ಬಗ್ಗೆ ಇರುವ ನಂಬಿಕೆ ಇಷ್ಟೇಯಾ? ಎಂಬ ಪ್ರಶ್ನೆ ತೆಳ್ಳಗೆ ಕಣ್ಣನೀರಾಗಿ ಕಾಣಿಸಿತು.

ಅಯ್ಯೋ, ನಾನ್ಯಾಕೆ ಇವಳನ್ನು ಕೇಳಿದೆ ಅಂತ ಶಂಕರ ಪಶ್ಚಾತ್ತಾಪಿಸಿದ.

ಈಗ ಭವಾನಿಯ ಕಣ್ಣೊಳಗಿನಿಂದ ಪಟಪಟನೆಂದು ಹನಿಗಳು ಉದುರಿದುವು. ಶಂಕರನ ಮನಸ್ಸು ಅಲ್ಲೋಲಕಲ್ಲೋಲವಾಯ್ತು. ಅಂತಕ್ಕ ಈ ನಾಟಕವನ್ನು ನೋಡಿಯೂ ನೋಡದವರಂತೆ ಗಟ್ಟಿಯಾದ ಸ್ವರದಲ್ಲಿ ಹೇಳಿದರು.

'ನಿನಗೀಗ ಸಮಾಧಾನವಾಯ್ತಲ್ಲ ಶಂಕರ, ಭವಾನಿ, ನೀನು ಒಳಗೆ ಹೋಗಿ ಬಾಯಾರಿಕೆಗೆ ಏನಾದರೂ ತಯಾರು ಮಾಡು' ಎಂದರು.

ಮೈಂದಣ್ಣನಿಗೆ ಯಾವಾಗಲೂ ಚಿಕ್ಕಪುಟ್ಟ ಸೂಕ್ಷ್ಮಗಳು ಅರ್ಥವಾಗುವುದಿಲ್ಲ. ಆದರೆ ಇವತ್ತು ಮಾತ್ರ ಏನೋ ಬಹುಮುಖ್ಯವಾದ ದೊಡ್ಡ ಸಂಗತಿಯೊಂದು ನಡೆಯುತ್ತಿದೆಯೆಂದು ಅವನಿಗೆ ತೋರಿತು. ಜೊತೆಯಲ್ಲಿ ಭವಾನಿಗೆ ಮದುವೆ ಆಗುತ್ತದೆಂಬುದೂ ಗೊತ್ತಾಯ್ತು. ಶಂಕರ ಒಪ್ಪಿದ್ದಾರೆ, ಭವಾನಿಯೂ ಒಪ್ಪಿಗೆ ಸೂಚಿಸಿದ್ದಾಳೆ. ಅಮ್ಮನ ಮುಖವನ್ನು ನೋಡುತ್ತ ಅವನಂದ, 'ಮದುವೆ ಬೇಗ ಮಾಡಿಸೋಣ ಆಗದೇ?'

'ಆಯ್ತು.' 'ಏನಪ್ಪ,' ಅವರು ಶಂಕರನ ಕಡೆಗೆ ನೋಡುತ್ತ ಹೇಳಿದರು. 'ಮದುವೆ ಯಾವಾಗ ಇಡುವುದು? ಆದಷ್ಟು ಬೇಗನೆ ಇಡುವುದು ಒಳ್ಳೆಯದಲ್ವೇ?'

'ನನಗೆ ಯಾವ ಅಭ್ಯಂತರವೂ ಇಲ್ಲ. ಸಮುದಾಯ ಭವನಕ್ಕೆ ಗುದ್ದಲಿಪೂಜೆ ಮಾಡಿಸುವ ದಿನವನ್ನು ಕೇಶವ ತಂತ್ರಿಗಳು ನೋಡಿದ್ದಾರೆ. ಅದು ಶ್ರಾವಣದಲ್ಲಿ ಒಂಬತ್ತು ದಿನ ಕಳೆದು. ಅದೇ ಮುಹೂರ್ತದಲ್ಲಿ ಅದೇ ಚಪ್ಪರದಲ್ಲಿ ಸ್ವಲ್ಪ ಸಡಗರದಿಂದ ಆಡಂಬರವಿಲ್ಲದೆ ಮದುವೆ ಆದರೆ ಒಳ್ಳೆಯದು, ಆಗಬಹುದಲ್ಲ?'

'ಮದುಮಗಳಿಗೆ ಕರಿಮಣಿ ನಾನು ತರ್ತೇನೆ. ನೀವು ಧಾರೆ ಎರೆದು ಕೊಟ್ಟರೆ ಸಾಕು.'

'ನಾವು ಅಳಿಯ ಸಂತಾನದವರಪ್ಪ. ಹೆಣ್ಣನ್ನು ಧಾರೆ ಎರೆದು ಕೊಡುವುದಿಲ್ಲ. ಧಾರೆ ಏರಿಸಿ ಕೊಡುತ್ತೇವೆ. ಹೆಣ್ಣು ಅವಳು ಹುಟ್ಟಿದ ಕುಲದಿಂದ ಹೊರಗೆ ಹೋಗುವುದಿಲ್ಲ. ಅವಳ ಹಕ್ಕು ಅವಳು ಹುಟ್ಟಿದ ಮನೆಯಲ್ಲಿ, ಆ ಕುಟುಂಬದಲ್ಲೇ ಉಳಿಯುತ್ತದೆ. ಪರವಾಗಿಲ್ಲ. ನೀನು ನನ್ನನ್ನು ಉಳಿಸಿದೆ ಕಣಪ್ಪ. ಭವಾನಿಗೆ ಮದುವೆ ಮಾಡದಿದ್ದರೆ ನಾನು ಸತ್ತರೂ ಮಣ್ಣಿಗೆ ಸೇರುತ್ತಿರಲಿಲ್ಲ' ಅಂತಕ್ಕ ಹೇಳುತ್ತ ನೀಳವಾಗಿ ಉಸಿರು ಬಿಟ್ಟರು. ಅವರ ಕಣ್ಣು ತುಂಬಿತ್ತು.

* * * * *

'ಮಾಯಿ ಕಳೆದು ಮಳೆಗಾಲ ಆಷಾಢ ಕಳೆದು ಸೆಕೆಗಾಲ'ವೆಂಬುದು ತುಳುವರ

ಹಳೆಯ ಗಾದೆ. ಜೇಷ್ಠ (ಮಿಥುನ ಮಾಸ) ಕಳೆದು ಕಣ್ಣು ಮುಚ್ಚಿ ತೆರೆಯುವಾಗ ಆಷಾಢ ಬರುತ್ತದೆ. ಮಳೆಯ ಅಬ್ಬರ, ಪ್ರವಾಹದ ಕಿರಿಕಿರಿ, ಸಿಡಿಲು ಮಿಂಚುಗಳ ಹಾವಳಿ ಮುಗಿಯುವಾಗ ಸಾಕಪ್ಪ ಈ ಮಳೆಗಾಲ ಅನ್ನಿಸಿಬಿಡುತ್ತದೆ. ನೀರಲ್ಲಿ ನೆನೆದು ಒದ್ದೆಮುದ್ದೆಯಾಗಿ ಒಂದು ನಾಲ್ಕು ದಿನವಾದರೂ ಬೇಸಿಗೆ ಬಂದರೆ ಸಾಕಾಗಿತ್ತು ಅನ್ನುತ್ತಾರೆ ಜನಗಳು. ಈ ಲೋಕದ ಅವಸ್ಥೆಯೇ ಹಾಗೆ. ವಿಪರೀತ ಸೆಕೆಯಾದರೂ ತಡೆಯುವುದಿಲ್ಲ. ಕುಡಿಯಲು ನೀರಿಲ್ಲ. ಉರಿಯುವ ಬಿಸಿಲಲ್ಲಿ ಜೀವ ಬೇಯುತ್ತದೆ ಅನ್ನುತ್ತಾರೆ. ಜೇಷ್ಠಮಾಸದಲ್ಲೇ ಮಳೆಯೇನಾದರೂ ಜೋರಾಗಿ ಬಂದರೆ ಎಲ್ಲರೂ ನೆನೆದು ನೆಲವೆಲ್ಲ ಹಳ್ಳವಾಗಿ ಜನರೆಲ್ಲ ಕಾಯಿಲೆ ಹಿಡಿಯಿತೆಂದು ಗೊಣಗುತ್ತಾರೆ.

'ಶಂಕರಣ್ಣ ಅಡಿಮೇಲು ಮಾಡಿ ದರ್ಕಾಸು ಮಾಡಿದರು. ಗುಡಿಸಲು ಕಟ್ಟಿ ಸಮುದಾಯ ಭವನ ಮಾಡಿ ಹಳ್ಳಿಗೆ ಹಳ್ಳಿಯನ್ನೇ ಗಾಂಧೀಜಿಯ ಗ್ರಾಮರಾಜ್ಯ ಮಾಡಿ ಉದ್ಧಾರ ಮಾಡ್ತೇವೆ ಅಂದರು. ಮುಂಗೈಗೆ ಬೆಲ್ಲ ತಾಗಿಸಿ ನೆಕ್ಕುವಂತೆ ಅದೇನೇನೋ ಮಾಡ್ತೇನೆ ಅಂತ ಜಂಭ ಕೊಚ್ಚಿದ್ದರು. ಈಗ ಒಂದೂವರೆ ಎರಡು ತಿಂಗಳಿನಿಂದ ಬಾಯಿ ಮುಚ್ಚಿ ಕುಳಿತಿದ್ದಾರೆ. ಇದು ಉತ್ತರನ ಪೌರುಷ ಆಯ್ತಲ್ಲ.' ಅಂದ ಅಂತೋಣಿ. ಆತ ಆವಾಗಾವಾಗ ಆಟದವರ ಗಲ್ಲಾ ತುಂಬಿಸಲು ಮೇಳದ ಹಿಂದೆ ಹೋಗುತ್ತಾನೆ. ಮೊದಲು ಬಾಲಗೋಪಾಲನ ವೇಷ ಹಾಕುವ ಯುವಕರು ಹೊಲದ ಗಟ್ಟಿನೆಲ ತುಳಿದು, ರಾತ್ರಿ ಎಲ್ಲೋ ಬಿದ್ದು ಎದ್ದು ಸೊಳ್ಳೆ ಕಚ್ಚಿ ಜ್ವರ ಬಂದು ಎರಡು ವಾರ ವೇಷ ಹಾಕಲು ಅಡ್ಡಿಯಾದರೆ ಮೇಳದ ಯಜಮಾನನಿಗೆ ಹೊಟ್ಟೆನೋವು ಬರುತ್ತದೆ. ಮೇಳದಲ್ಲಿ ಕೆಲಸ ಮಾಡದವರಿದ್ದರೆ ಅದು ಅವನಿಗೆ ದೊಡ್ಡ ನಷ್ಟದ ದಾರಿ. ಆಗ ಅಂತೋನಿಯಂಥ ಪೆಟ್ಟಿಗೆ ತುಂಬಿಸುವ ಯುವಕರನ್ನು ಪೀಠಿಕಾಪ್ರಸಂಗವೆಂದು ಮಾವು ಸೊಪ್ಪಿನ ವೇಷ, ಬಾಲಗೋಪಾಲನ ವೇಷವೆಂದು ಮುಖಕ್ಕೆ ಸ್ವಲ್ಪ ಬಣ್ಣ ಹಚ್ಚಿ ಹಳೆಯ ಡ್ರೆಸ್ ಹಾಕಿ ಪ್ರಸಂಗ ಶುರುವಾಗುವುದಕ್ಕಿಂತ ಮೊದಲಿನ ವೇಷವೆಂದು ಕುಣಿಯಲು ರಂಗಸ್ಥಳಕ್ಕೆ ಕಳುಹಿಸುತ್ತಾರೆ. ಈ ಹುಡುಗರಿಗೆಲ್ಲ ಹುಮ್ಮಸ್ಸು. ಹೀಗೆ ಕುಣಿದರೆ ಕ್ರಮೇಣ ಚೆಂಡೆಯ ಪೆಟ್ಟಿನ ಅಂದಾಜು ತಮಗಾಗುತ್ತದೆಂದು. ಭಾಗವತರು ತಮಾಶೆಗೆ ಪ್ರಸಂಗದ ಮೊದಲು ಪೀಠಿಕೆಯಾಗಿ ಹೇಳುವ ಹಾಡಿನ ಹದ ಸಿಕ್ಕಿದರೆ ಆಮೇಲೆ ದೊಡ್ಡ ವೇಷ ಹಾಕಲು ಸಾಧ್ಯವೆಂಬ ಚಿಕ್ಕ ಆಸೆ ಅವರಿಗೆ.

ಹಾಗಾಗಿ ಕ್ರಿಶ್ಚಿಯನ್ ಆದರೂ ಮಹಾಭಾರತ, ರಾಮಾಯಣ ಭಾಗವತದ ಆಟದ ಪ್ರಸಂಗಗಳ ಮತ್ತು ವೇಷಗಳ ಹೆಸರು ಆತನಿಗೆ ಒಂದಷ್ಟು ಪರಿಚಯವಿದೆ. ಮಳೆಗಾಲದಲ್ಲಿ ಆಟದವರಿಗೆ ವಾರ್ಷಿಕ ರಜೆ. ಅಂತೋನಿಯೂ ಆಗ ಊರಿಗೆ ಬಂದು ಅವನ ತಂದೆ ಪಾವುಲ ಪೊರ್ಬುವಿನ ಕಂಟ್ರಿ ಸಾರಾಯಿ ಕಾಯಿಸುವ, ಗೃಹಕೈಗಾರಿಕೆ ಕೆಲಸಗಳಿಗೆಲ್ಲ ಸಹಾಯ ಮಾಡ್ತಾನೆ. ಅದರ ಕೆಲಸ ಮುಗಿದ ಮೇಲೆ ಅವತ್ತವತ್ತು ತಯಾರು ಮಾಡಿದ ಸಾರಾಯಿಯನ್ನು ಬಾಟ್ಲಿಯಲ್ಲಿ ತುಂಬಿಸಿದ ಬಳಿಕ ಇಂಥ ಅಡ್ಡ ಕೆಲಸಗಳಿಗೆ ಸೇರುತ್ತಾನೆ. ಒಂದು ಲೋಟ ಸಾರಾಯಿಯೂ ನೆಂಚಿಕೊಳ್ಳಲು ಉಪ್ಪುನೀರಲ್ಲಿ ಹಾಕಿದ ಹಲಸಿನ

ತೊಳೆಯೂ, ಹಲಸಿನ ಹಣ್ಣು ಬೇಯಿಸಿ ಬೆಲ್ಲ ಹಾಕಿ ಮಾಡಿದ ತಿಂಡಿಯೂ ಸಿಗುತ್ತದೆ. ಅದನ್ನು ಹೊಟ್ಟೆತುಂಬ ತುಂಬಿಸಿದರೆ ಬಾಯಿಗೆ ಬಂದುದನ್ನೆಲ್ಲ ಮಾತನಾಡಲು ಯಾವ ಅಡೆತಡೆಯೂ ಇಲ್ಲ.

ಜನ ಏನೇ ಹೇಳಲಿ ಶಂಕರ ತನ್ನ ಸಾಧನೆಯ ಹಾದಿಯಿಂದ ವಿಮುಖನಾಗಲಿಲ್ಲ. ಜ್ಯೇಷ್ಠ, ಆಷಾಢಗಳ ಹಟಮಾಡಿ ಶನಿಹಿಡಿದಂತೆ ಬರುವ ಜಡಿಮಳೆಯ ರಭಸಕ್ಕೆ ನೆರೆಯ ಅಬ್ಬರಕ್ಕೆ ತೋಡಿನ ಸಮೀಪದ ಹೊಳೆಯ ಬದಿಯ ಹೊಲಗಳು, ಮನೆಗಳೆಲ್ಲ ಅರ್ಧಕ್ಕರ್ಧ ಮುಳುಗಿದಾಗ ಯಾವ ಕಾರ್ಯಭಾರ ಕೈಗೊಂಡರೂ ವ್ಯರ್ಥ. ಮನೆಯೊಳಗೆ ಕುಳಿತು ಪ್ರಸಂಗಗಳನ್ನು ಓದಿ ಮನೆಯ ಜನರಿಗೆ ಹೊತ್ತು ಹೋಗುತ್ತದೆ. ಅಂತೋನಿಗೆ ಏಕೆ ಚಿಂತೆ. ಅವನ ತಂದೆ ಪಾವುಲ್‌ಗೆ ಒಳ್ಳೆಯ ವ್ಯಾಪಾರ. ಮಳೆಯಲ್ಲಿ ನೆನೆದರೂ ಮೈ ಬಿಸಿಯಾಗ್ತದೆ. ಗೊರಬೆ ಹಾಕಿ ಪೊರ್ಬುವಿನ ಮನೆಯನ್ನು ಹುಡುಕುತ್ತ ಬರುವ ಜನರಿಗೇನೂ ಕಡಿಮೆಯಿಲ್ಲ.

ಆಷಾಢದ ಸಂಕ್ರಮಣ ಕಳೆದ ಕೂಡಲೇ ಶಂಕರ ಪದವಿನ ಗುಡಿಸಲಿನ ಸಮುದಾಯ ಭವನದ ಕಟ್ಟಡಕ್ಕೆ ಗುದ್ದಲಿಪೂಜೆ ಮಾಡಿಸುವುದಕ್ಕೆ ಬೇಕಾದ ಸಿದ್ಧತೆಗಳನ್ನು ಮಾಡಿದ.

ತಂತ್ರಿಗಳನ್ನು ಕೇಳಿ ದಿನ ಗಳಿಗೆ ನೋಡಿ ಅವರನ್ನೂ ಗೌರವದ ಆಮಂತ್ರಣ ಕೊಟ್ಟು ಕರೆಯಬೇಕು. ಗ್ರಾಮದ ಬ್ರಾಹ್ಮಣರಿಂದ ಹರಿಜನರವರೆಗೆ ಸರ್ವರಿಗೂ ಕರೆಯೋಲೆ ಕೊಡಬೇಕು. ಆ ದಿನ ಎಲ್ಲರಿಗೂ ಊಟದ ಏರ್ಪಾಡು ಮಾಡಬೇಕು ಎಂದು ತೀರ್ಮಾನಿಸಿದ.

ಅದರೊಟ್ಟಿಗೇ ಶಂಕರನದ್ದೂ ಭವಾನಿಯದ್ದೂ ಮದುವೆಯ ಸಿದ್ಧತೆ ಆಗಬೇಕು. ಆ ವಿಷಯದಲ್ಲಿ ಹೆಚ್ಚಿನ ಗಡಿಬಿಡಿ ಇಲ್ಲದಿದ್ದರೂ ತುಂಬ ಹತ್ತಿರದ ಬಂಧುಗಳಿಗೆ ಒತ್ತಾಯದ ಆಮಂತ್ರಣ ಕೊಡಬೇಕು. ಭವಾನಿಯನ್ನು ನೋಡದೆ ತುಂಬ ದಿನಗಳಾದುವು. ಆ ದಿನ ಅವಳ ಒಪ್ಪಿಗೆ ಕೇಳಲು ಹೋದಮೇಲೆ ಕೊನೆಗೆ ಅವಳಿಗಾದ ನೋವನ್ನು ಕಣ್ಣಾರೆ ನೋಡಿದ ಮೇಲೆ ಅವಳನ್ನು ಮುಖತಃ ಭೇಟಿಯಾಗಿ ಮಾತನಾಡುವ ಧೈರ್ಯ ಅವನಲ್ಲಿರಲಿಲ್ಲ.

ಭವಾನಿ ಅತ್ಯಂತ ಸ್ವಾಭಿಮಾನಿ ಹೆಣ್ಣು. ಅವಳು ನನ್ನನ್ನೇಕೆ ನೆನಪಿಸುತ್ತಾಳೆ! ನನ್ನ ಬೆಲೆ ಏನೆಂದು ನಿರ್ಧರಿಸಿದ್ದಾಳಾ? ಅಥವಾ ಇವನೊಬ್ಬ ನಾಲ್ಕೂರು ತಿರುಗುವ ಲಂಗುಲಗಾಮಿಲ್ಲದ ಪರದೇಶಿ ಅಂತ ತಿಳಿದಿದ್ದಾಳಾ? ಅದನ್ನು ಬದಲಾಯಿಸುವ ಸೂಕ್ಷ್ಮ ಒಳಬುದ್ಧಿತನಗಿಲ್ವೇ! ಮದುವೆಗೆ ಮೊದಲು ಧಾರೆ ಆಗುವುದಕ್ಕೆ ಎಷ್ಟೋ ಮುಂಚಿತವಾಗಿ ಒಂದೆರಡು ಸಂಗತಿಗಳನ್ನು ಅವಳಿಗೆ ತಿಳಿಸುವ ಅಗತ್ಯವಿತ್ತು.

ಅಳಿಯ ಸಂತಾನದವರ ಹಿಂದಿನ ಸಂಪ್ರದಾಯದಲ್ಲಿ ಮದುಮಗಳು ಕುಟುಂಬದ ಮನೆಯಿಂದ ಹೊರಡುವ ಮೊದಲು ಹಿರಿಯರೆಲ್ಲ ಸೇರಿ (ತಂದೆ, ತಾಯಿ, ಸೋದರಮಾವ ಮತ್ತು ಕುಟುಂಬದ ಎಲ್ಲರೂ) ದೈವ ದೇವರುಗಳಿಗೆ ಕೈಮುಗಿದು ಸಲ್ಲಿಸಲಿರುವ ಹರಕೆಯನ್ನು ನಿವೇದಿಸಿ ಮದುಮಗಳನ್ನು ಮಣೆಯಲ್ಲಿ ಕುಳಿತುಕೊಳ್ಳಿಸುತ್ತಾರೆ. ಕುಟುಂಬದ

ಹಿರಿಯ ಮುತ್ತೈದೆ ತೀರಿಹೋಗಿದ್ದರೆ ಸೋದರಮಾವನ ಹೆಂಡತಿ(ಮಾಮಿ) ಹಿಂದಿನ ದಿನ ರಾತ್ರಿ ಮದರಂಗಿ ಹಚ್ಚಿ ತಲೆಗೆ ಸ್ನಾನ ಮಾಡಿ ಶುದ್ಧವಾಗಿರುವ ಮದುಮಗಳ ಕಾಸರಕನ ಕೆಂಪು ಚಿಗುರಿನಂತಿರುವ ಬಲಗೈಯ ಉಂಗುರಬೆರಳಿಗೆ ವಂಕಿಉಂಗುರ (ಒಡ್ಡುಂಗುರ) ಹಾಕುತ್ತಾರೆ. ಕಾಲಿನ ಬೆರಳಿಗೆ ಬೆಳ್ಳಿಯ ಕಾಲುಂಗುರ ತೊಡಿಸುತ್ತಾರೆ. ಅನಂತರ ಕುಟುಂಬದ ದೈವದ ಮಣೆಯಲ್ಲಿಟ್ಟಿರುವ ಸಿಂಗಾರದ ಕರಿಯಮಣಿಯನ್ನು ಐದು ಜನ ಮುತ್ತೈದೆಯರ ಕುತ್ತಿಗೆಗೆ ಮುಟ್ಟಿಸಿ ಅವಳ ಕುತ್ತಿಗೆಗೆ ಕಟ್ಟುತ್ತಾರೆ.

ಶಂಕರನ ಮನಸ್ಸಿನಲ್ಲಿ ಆ ಕ್ರಮ ಬೇಡವೆಂದಿತ್ತು. ಅವರು ಬೇಕಿದ್ದರೆ ಕಾಲುಂಗುರ ಹಾಕಲಿ, ಒಡ್ಡುಂಗುರವನ್ನೂ ಹಾಕಲಿ ಆದರೆ ಕರಿಮಣಿಯನ್ನು ಮಾತ್ರ ತಾನೇ ಕಟ್ಟಬೇಕೆಂಬುದು ಅವನ ಇಚ್ಛೆ. ಇದನ್ನು ಭವಾನಿಗೆ ತಿಳಿಸುವ ಅಗತ್ಯವಿತ್ತು. ಅವಳ ಒಪ್ಪಿಗೆ ಇದ್ದರೆ ಆತನಿಗೆ ಈ ವಿಚಾರದಲ್ಲಿ ಮುಂದುವರಿಯಬಹುದು. ಆದರೆ ಯಾರಿಗೆ ಹೇಳುವುದು ಇದನ್ನು?

ಅಂತಕ್ಕನ ಹತ್ತಿರ ಹೇಳಲು ಅವನಿಗೆ ಮನಸ್ಸಿಲ್ಲ. ಮೈಂದಣ್ಣನಿಗೆ ತಿಳಿಸಲು ತುಂಬ ಸಮಯ ಬೇಕು. ವಿಷಯವನ್ನು ವಿವರಿಸಬೇಕು. ಅವನ ಏನು, ಯಾಕೆ, ಎಲ್ಲಿ ಇತ್ಯಾದಿ ಪ್ರಶ್ನೆಗಳಿಗೆ ಉತ್ತರ ಕೊಡಬೇಕು. ಊಹುಂ. ಇದು ಬೇಗನೆ ಆಗುವ ಕೆಲಸವಲ್ಲ.

ಅರ್ಕಾವತಿಗೆ ಹೇಳಿ, ಸ್ಟೋರಿನ ಲೆಕ್ಕವನ್ನು ನೋಡಲು ಒಮ್ಮೆ ಭವಾನಿ ಬಂದು ಹೋಗಬೇಕೆಂದು ತಿಳಿಸಿ ತಿಮ್ಮನನ್ನು ಗುತ್ತಿಗೆ ಕಳುಹಿಸಿದರೆ ಏನು? ಸದ್ಯಕ್ಕೆ ಅದೇ ಒಳ್ಳೆಯ ಉಪಾಯ.

ಶಂಕರ ಪದವಿಗೆ ಬಂದವನು ಸಂದರ್ಭ ನೋಡಿ ಅರ್ಕಾವತಿಯಲ್ಲಿ ಈ ವಿಷಯ ಹೇಳಿದ. ಅವಳು ಅದಕ್ಕೊಪ್ಪಿ ಭವಾನಿಗೆ ತಿಳಿಸಲು ತಿಮ್ಮನನ್ನು ಗುತ್ತಿನ ಮನೆಗೆ ಕಳುಹಿಸಿದಳು. ಆವತ್ತು ಮೈಂದಣ್ಣ ರೇಷನ್ ಇಲಾಖೆಗೆ ಮಾತನಾಡಲು ಹೋಗುವ ದಿನ.

ತಿಮ್ಮನ ಸವಾರಿ ಹತ್ತು ಗಂಟೆಗೆ ಗುತ್ತಿಗೆ ಹೋಯ್ತು. ಭವಾನಿಗೆ ವಿಷಯ ಏನೆಂದು ಸ್ಪಷ್ಟವಾಗಿ ಅರ್ಥವಾಗದಿದ್ದರೂ ಬೇರೇನೋ ಇರಬೇಕೆಂಬ ಸಂಶಯವೂ ಬಂತು.

ಮಕ್ಕಳಿಗೆ ಇಬ್ಬರಿಗೂ ಎಣ್ಣೆ ಹಚ್ಚಿ ಸ್ನಾನ ಮಾಡಿಸಬೇಕು. ಎಣ್ಣೆ ಹಚ್ಚುತ್ತ ಇದ್ದೇನೆಂದು ತಿಮ್ಮನನ್ನು ಸ್ವಲ್ಪ ಹೊತ್ತು ಕುಳಿತುಕೊಳ್ಳಲು ಹೇಳಿದಳು.

'ನನಗೂ ಸ್ವಲ್ಪ ಕೆಲಸವಿದೆ. ಗುಡ್ಡದ ಮೇಲೆ ಸಿಕ್ಕುತ್ತೇನೆ' ಅಂದ ತಿಮ್ಮ.

'ನಿನ್ನ ದೊಡ್ಡ ಕೆಲಸ ಏನೆಂದು ನನಗೆ ಗೊತ್ತಿದೆ. ಹೋಗು.. ಇನ್ನು ಹೆಂಡವೇನಾದರೂ ಮೂಗುಮಟ್ಟ ಕುಡಿದು ಅತ್ತಿತ್ತ ತೂರಾಡುತ್ತ ಬಂದರೆ ನೋಡು. ಕೋತಿ ತರ ಹಲ್ಲು ಕಿರಿಯಬೇಡ.'

ಅಕ್ಕನ ಇಬ್ಬರು ಮಕ್ಕಳನ್ನೂ ಮೀಯಿಸಿ ಅಂತಕ್ಕನ ಹತ್ತಿರ ಹೇಳಿ ಭವಾನಿ ಹೊರಟಳು. ಗುಡ್ಡದ ಹತ್ತಿರ ಬಂದಾಗ ಓರೆಯಾಗಿದ್ದ ಒಂದು ಗೇರುಬೀಜದ ಮರದ

ಅಡಿಯಲ್ಲಿ ಮಲಗಿ ತಿಮ್ಮ ಗೊರಕೆ ಹೊಡೆಯುತ್ತಿದ್ದ. ಕಣ್ಣು ಮುಚ್ಚಿದ್ದ, ಬಾಯಿ ಬಿಟ್ಟಿದ್ದ.

ಎಲಾ ಇವನ ಕರ್ಮವೇ ಎನ್ನುತ್ತ ಒಂದು ಹೂಬಿಟ್ಟ ಗೊಂಚಲನ್ನು ಹಿಡಿದು ಅವನ ಮೂಗಿಗೆ ಅಡ್ಡ ಹಿಡಿದಳು. ಒಮ್ಮೆ ಬರುವಾಗ ತಿಮ್ಮ ಕೈಯಿಂದ ಅದನ್ನು ಅತ್ತ ತಳ್ಳಿದ. ಎರಡನೆ ಸಲ ಮೂಗಿನ ಹತ್ತಿರ ಬಂದಾಗ 'ಹಚಾ ಹಚಾ ಹಡಬೇ' ಎಂದು ಬೈಯುತ್ತ ಕಣ್ಣುಬಿಟ್ಟ. ಪಿಳಿಪಿಳಿ ನೋಡಿದ.

'ಓ ಅಕ್ಕಾ, ನೀವಾ? ನಾನು ನೊಣ ಅಂತ ಭಾವಿಸಿ ಬೈದೆ.'

'ಅದಿರಲಿ. ನೀನೆದ್ದು ಬಾ ಇಲ್ಲಿಗೆ. ಹುಳಿ ಹೆಂಡದ ವಾಸನೆ ಬರ್‍ತ್ತೀ.'

ಇಬ್ಬರೂ ನಿಧಾನವಾಗಿ ಗುಡ್ಡ ಹತ್ತಿ ಸ್ಟೋರಿಗೆ ಬಂದರು. ಸ್ಟೋರಿನ ಒಳಗೆ ಲೆಕ್ಕದ ಪುಸ್ತಕ ಬಿಡಿಸಿ ಕೈಯಲ್ಲಿ ಪೆನ್ನು ಹಿಡಿದುಕೊಂಡು ಅರ್ಕಾವತಿ ಕುಳಿತಿದ್ದಳು. ಭವಾನಿಯನ್ನು ನೋಡಿ, 'ತಿಮ್ಮನೂ ಇಷ್ಟು ಹೊತ್ತು ಕುಳಿತು ನಿಮ್ಮ ಜೊತೆ ಬಂದನಾ.. ಈ ತೂತಾದ ಗೋಣಿಗಳನ್ನು ಆರಿಸಿ ಬೇರೆ ಇಟ್ಟು ಖಾಲಿ ಗೋಣಿಗಳನ್ನು ಒಟ್ಟಿಗೆ ಪೇರಿಸಿಡು ಅಂದಿದ್ದೆ. 'ಏ ಬೇಗ ಬಾರೋ' ಅಂದಳು.

'ಅವನೆಲ್ಲಿ ಹೇಳ್ತಾನೆ. ನೀವು ನಿಧಾನಕ್ಕೆ ಬನ್ನಿ, ನಾನು ಗುಡ್ಡದ ಕೆಳಗೆ ಕುಳಿತಿರುತ್ತೇನೆ ಅಂದ. ಅವನಾ ಸುಮ್ಮನೆ ಕುಳಿತುಕೊಳ್ಳುವವ. ಕುಳಿತಿರಲೇ ಇಲ್ಲ. ಚೆನ್ನಾಗಿ ಹೆಂಡ ಕುಡಿದು ಗೊರಕೆ ಹೊಡೆಯುತ್ತಿದ್ದ.'

ಇಷ್ಟು ಮಂಗಳಾರತಿ ಆಗುವಾಗ ತಿಮ್ಮ ಹೋಗಿ ತಣ್ಣೀರಿನಲ್ಲಿ ಮುಖ ತೊಳೆದು ಬಂದ.

'ಈಗ ಏನಾಗಬೇಕು ಹೇಳಿ ಅಕ್ಕಾ' ಅಂದ ಅದೇನೂ ದೊಡ್ಡ ಸಂಗತಿಯೇ ಅಲ್ಲವೆಂಬಂತೆ.

'ಆಯ್ತು, ನೀನು ಹೋಗು ಮಾರಾಯ. ಅರ್ಕಾವತಿ, ಅದ್ಯಾವ ಲೆಕ್ಕ ಸರಿತಪ್ಪಿದ್ದು?'

'ಲೆಕ್ಕ ತಪ್ಪಿದ್ದು ನಿನ್ನ ಸ್ಟೋರಿನದ್ದಲ್ಲ...' ಒಂದು ಗಂಡಸಿನ ಸ್ವರ ಕೇಳಿಸಿತು.

ಭವಾನಿ ಅಳುಕಿ ಹಿಂದೆ ತಿರುಗಿದಳು. ಶಂಕರ ಹಿಂದೆಯೇ ನಿಂತಿದ್ದ.

'ಲೆಕ್ಕವೂ ತಪ್ಪಿದೆ, ನಂಬಿಕೆಯೂ ತಪ್ಪಿದೆ. ನೆನಪೂ ಮರೆತಿದೆ' ಅಂದಳು ಭವಾನಿ ಖಾರವಾಗಿ.

'ಹೇಗೆ ನಂಬಿಕೆ ತಪ್ಪುವುದು. ಲೋಕವೆಲ್ಲ ತಿರುಗಿದರೂ ಕೊನೆಗೆ ಇಲ್ಲಿಗೇ ಬಂದೆ. ಅದು ನೆನಪಿಲ್ಲದೆಯೇ?'

'ಮೊನ್ನೆ ಅವರೆದುರಿಗೆ ನನ್ನ ಒಪ್ಪಿಗೆ ಕೇಳುವ ಅಗತ್ಯವಿತ್ತೇ?'

ಭವಾನಿ ಪ್ರಶ್ನಿಸಿದಳು.

'ನಾನು ಮದುವೆಯ ಯಾವ ಸುದ್ದಿಯನ್ನೂ ನಿನ್ನ ಹತ್ತಿರ ಹೇಳದೆ ಏಕಾಏಕಿ ಹೆಣ್ಣು ಕೊಡಿ ಮದುವೆಯಾಗ್ತೇನೆ ಅನ್ನುವುದು ಸರಿಯಾ? ಚಿಕ್ಕ ಮಕ್ಕಳಾದರೆ ಅವರ ಅಪ್ಪ ಅಮ್ಮ ಸೋದರಮಾವನ ಒಪ್ಪಿಗೆ ಇದ್ದರೆ ಸಾಕು. ಮದುವೆಯಾಗಬಹುದು. ನಿನ್ನಂಥ ಪ್ರಾಯಕ್ಕೆ ಬಂದ ಯುವತಿಯ ಒಪ್ಪಿಗೆಯನ್ನು ಅವರ ಎದುರು ಕೇಳಿದ್ದು ನನ್ನ ತಪ್ಪು ಅನ್ತೀಯಾ?'

'ಮಾತಿಗೆ ಸಿಕ್ಕಿಬೀಳುವವರಲ್ಲವೆಂದು ನನಗೆ ಚೆನ್ನಾಗಿ ಗೊತ್ತಿದೆ. ಈಗ ನನ್ನಿಂದ ನಿಮಗೆ ಯಾವ ಕೆಲಸವಾಗಬೇಕು?'

'ನನಗೆ ಏನು ಕೆಲಸ ಅಂತನಾ? ನಿನ್ನ ಅಮ್ಮ ಮೊನ್ನೆ ಹೇಳಿದರಲ್ಲ. ಹಿರಿಯರ ಕ್ರಮದಂತೆ ಧಾರೆ ಎರೆದು ಕೊಡುವುದಲ್ಲ, ಧಾರೆಏರಿಸಿ ಕೊಡ್ತೇವೆ ಅಂತ' ಸರಿ.

'ಆದರೆ ಈಗ ಕೇಳುವಾಗ ಹಿಂದಿನ ಸಂಪ್ರದಾಯದಲ್ಲಿ ಧಾರೆಗೆ ಮೊದಲು ಮದುಮಗಳು ಮನೆಯಿಂದ ಹೊರಡುವಾಗ ಹಿರಿಯ ಮುತ್ತೈದೆ ಅವಳಿಗೆ ಕಾಲುಂಗುರ, ಒಡ್ಡುಂಗುರ ಹಾಕಿ ಅನಂತರ ಕುತ್ತಿಗೆಗೆ ಕರಿಯಮಣಿಯನ್ನೂ ಕಟ್ಟುತ್ತಾರಂತೆ.'

'ಭವಾನಿ, ನನಗೇಕೋ ಅದು ಸರಿಯೆನಿಸುವುದಿಲ್ಲ. ಕಾಲುಂಗುರ ಹಾಕಲಿ ಹಾಕಬೇಕಿದ್ದರೆ, ಒಡ್ಡುಂಗುರವನ್ನೂ ತೊಡಿಸಲಿ. ಆದರೆ ಕುತ್ತಿಗೆಗೆ ಕರಿಮಣಿ ಮಾತ್ರ ನಾನೇ ಕಟ್ಟುತ್ತೇನೆ. ಅವರು ಯಾರ್‍ಯಾರೋ ಮುಟ್ಟಿಸಿಕೊಂಡು ಕಟ್ಟುವ ಹಳೆ ಕ್ರಮ ನನಗೆ ಸರಿಯೆಂದು ಕಾಣುವುದಿಲ್ಲ.'

'ನಿನ್ನ ಅಭಿಪ್ರಾಯ ಏನು ಹೇಳು.'

'ಅವರು ಮೊದಲಿಗೆ ಕರಿಮಣಿಯನ್ನು ಮುಟ್ಟಬಾರದೆಂದು ತಾನೆ ನೀವು ಹೇಳುವುದು. ಅಷ್ಟೇ ತಾನೆ? ನೀವು ತೂಕ ಎಷ್ಟೆಂದು ಮೊದಲಿಗೇ ನೋಡಿಲ್ಲವೇ? ಈಗ ಅವರು ಮುಟ್ಟುವುದು ಇದೇನೂ ಮೊದಲಲ್ಲ.'

'ಆ ದಿನ ನೀವು ಯಾವ ನಂಬಿಕೆಯಿಂದ ನನ್ನ ಕೈ ಹಿಡಿದಿರಿ?'

'ಅಯ್ಯೋ, ಹುಡುಗಿ, ಮಾತನ್ನು ನನಗೇ ತಿರುಗಿಸಿಬಿಟ್ಟೆಯಾ? ನಾನು ಮಾಡಿದ ತಪ್ಪನ್ನು ನೀನು ವಾಪಸ್ಸು ತೀರಿಸಿದೆ. ಆಯ್ತು, ನಾನು ಹೇಳಿದ್ದು ತಪ್ಪಾಯ್ತು. ಈಗ ನೀನು ಹೇಳು. ನಾನೇ ಕರಿಮಣಿ ಕಟ್ಟುತ್ತೇನೆ ಆಗದೇ?'

'ನೀವೇ ಕಟ್ಟಿ. ಕಟ್ಟುವಷ್ಟು ನಂಬಿಕೆ ಇದೆಯಲ್ಲ..?'

'ಈಗ ನೀನು ಸ್ಟೋರಿನಲ್ಲಿದ್ದಿ. ಎದುರಿಗೆ ಅರ್ಕಾವತಿ ಇದ್ದಾರೆ. ಇಲ್ಲದಿದ್ದರೆ ಏನಾಗುತ್ತಿತ್ತು.. ಯೋಚಿಸಿ ನೋಡು..' ಶಂಕರ ಅವಳನ್ನು ಕೀಟಲೆ ಮಾಡುವ ಸ್ವರದಲ್ಲಿ ಹೇಳಿದ. ಅವನ ಕಣ್ಣಿನಲ್ಲಿ ತುಂಟತನ ಮಿಂಚುವುದನ್ನು ನೋಡಿ ಭವಾನಿಯೇ ಬಾಯಿ ಮುಚ್ಚಿ ತಲೆ ಕೆಳಗೆ ಹಾಕಿದಳು.

ಶಂಕರ ನಗುತ್ತ ಹೊರಟ. 'ನಾನು ಬರ್ತೇನೆ ಅರ್ಕಾವತಿ' ಎಂದು ಅರ್ಕಾವತಿಗೆ ಹೇಳಿದ. ಹೊರಗೆ ಗುಡಿಸಲಿನ ನೆಲ ಸಮತಟ್ಟು ಮಾಡಿ ಸುತ್ತಲೂ ಚಪ್ಪರ ಹಾಕಲು ಆಳುಗಳು ಬಂದಿದ್ದರು. ಮಾತಾಡುತ್ತ ನಿಂತರೆ ಸಮಯ ಹೋದದ್ದೇ ಗೊತ್ತಾಗುವುದಿಲ್ಲ.

ಅರ್ಕಾವತಿ ನಗುತ್ತ ಭವಾನಿಯನ್ನು ನೋಡಿದಳು. ಹೃದಯದ ಬಂಧನ ಎಷ್ಟು ಬಿಗಿಯಾಗಿದೆ! ಎಷ್ಟು ಪುಣ್ಯ ಮಾಡಿದ್ದಾಳೋ ಈ ಹುಡುಗಿ!

ಮಳೆ ಜೋರಾಗಿ ಬರುತ್ತಿದ್ದರೂ ನಿಲ್ಲಿಸದೆಯೇ ಒಂದೇ ಹಟದಿಂದ ಚಪ್ಪರ ಹಾಕುವ ಕೆಲಸವನ್ನು ಮುಗಿಸಿದ ಶಂಕರ. ಸಮುದಾಯ ಭವನದಲ್ಲಿ ಏನೋ ಆಗಲಿದೆ ಯೆಂಬ ಅನುಮಾನ ಜನರಿಗೆ ಬಂದರೂ ಗ್ರಾಮದ ಜನರ ಬದುಕಿನಲ್ಲಿ ಸುಧಾರಣೆ

ಯಾಗುವುದು ಖಂಡಿತವೆಂಬುದು ಎಲ್ಲರಿಗೂ ತಿಳಿದ ವಿಚಾರವಾಗಿತ್ತು. ಕೆಲಸ ಯಾವುದೇ ಆಗಿರಲಿ ಅದು ಆಗುವಾಗ ತಾನಾಗಿ ಗೊತ್ತಾಗುತ್ತದೆಂದು ಜನರ ವಿಶ್ವಾಸ.

ಸಂಕ್ರಮಣ ಮುಗಿಯಿತು, ತಿಂಗಳ ಮೊದಲ ದಿನವೂ ಕಳೆಯಿತು. ಆಷಾಢವೂ ಜಾರಿತು. ಶ್ರಾವಣ ಬಂತು. ಪದ್ಮನಾಭ ಸಾಮನಿ ಊರಿಗೆ ಬರುತ್ತಾನೆಂಬ ಸುದ್ದಿ. ಈ ಸಲ ವರ್ಷದ ಭೂತದ ಕೋಲಕ್ಕೂ ಅವನು ಬಂದಿರಲಿಲ್ಲ. ಅವನು ಬರುವ ಸುದ್ದಿ ಸೇನೆರ ಮೂಲೆಗಿಂತ ಮೊದಲೇ ಅಂತಕ್ಕನಿಗೆ ಬರೆದ ಪತ್ರದಿಂದ ಗುತ್ತಿಗೆ ಗೊತ್ತಾಗಿತ್ತು. ಸರಸು ತೀರಿ ಹೋಗಿ ಮೂರು ವರ್ಷವಾಗುತ್ತ ಬಂದಿತ್ತು. ಮಕ್ಕಳು ಸುಮಾರಾಗಿ ದೊಡ್ಡವರಾಗಿದ್ದರು. ಅವರನ್ನು ಬೊಂಬಾಯಿಗೆ ಕರೆದುಕೊಂಡು ಹೋಗಬೇಕಾ ಎಂದು ಅವನು ಅಂತಕ್ಕನಿಗೆ ಬರೆದ ಪತ್ರದಲ್ಲಿ ವಿಚಾರಿಸಿದ್ದ. ಇಬ್ಬರೂ ಮಕ್ಕಳೂ ಆ ದೊಡ್ಡ ಮನೆಯಲ್ಲಿ ಒಳಗೆ ಹೊರಗೆ ನಗುನಗುತ್ತ ಓಡಾಡುವಾಗ ಮನೆಗೇ ಒಂದು ಶೋಭೆ ಇತ್ತು. ಜೀವಕಳೆ ಇತ್ತು. ಈಗ ಅವರನ್ನು ಕರೆದುಕೊಂಡು ಹೋದರೆ ಮತ್ತೆ ಮನೆಯಲ್ಲಿ ಮೌನ ಕವಿಯುತ್ತದೆ. ನಗುವಿನ ಬೆಳಕು ಮಾಯವಾಗುತ್ತದೆ.

ಭವಾನಿ ಕಾಗದವನ್ನು ಓದಿ ಹೇಳಿದ್ದೇ ಅಂತಕ್ಕನ ಮುಖ ಮಸುಕಾಯ್ತು. ಅವನ ಮಕ್ಕಳು ಅವನು ಕರೆದುಕೊಂಡು ಹೋಗ್ತಾನೆ. ಬೊಂಬಾಯಿಯಂಥ ದೊಡ್ಡ ಊರಿನಲ್ಲಿ ಬೇಕಾದ ಸೌಭಾಗ್ಯಗಳು ಸಿಗುತ್ತವೆ. ದುಡ್ಡಿನಿಂದ ಸಿಗುವ ಅನುಕೂಲಗಳನ್ನೂ ಮಾಡಿಕೊಡಲು ಅವನಿಗೆ ಸಾಧ್ಯವಿದೆ. ಈಗ ನಾವೇನು ಮಾಡುವುದು?

'ಮದುವೆಯಾಗಿ ನೀನೂ ಗುತ್ತಿನಿಂದ ಹೋಗುವ ಸಾಧ್ಯತೆಯಿದೆ. ಮೈಂದಣ್ಣ ಮುಂದೆ ಏನು ಮಾಡ್ತಾನೆಂದು ಹೇಳುವಂತಿಲ್ಲ. ಈ ಭೂತಬಂಗಲೆಯಲ್ಲಿ ನಾನೊಬ್ಬಳು ಗತಿ ತಪ್ಪಿದ ಭೂತವಾಗ್ತೇನೆ.'

ಭವಾನಿ ಅಮ್ಮನನ್ನು ಸಮಾಧಾನಪಡಿಸುವಂತೆ ಹೇಳಿದಳು. 'ನನಗೆ ಏನೇ ಆಗಲಿ, ನಾನು ನಿಮ್ಮನ್ನು ಒಂಟಿಯಾಗಿ ಬಿಟ್ಟು ಹೋಗಲಾರೆ. ನೀವು ಒಮ್ಮೆಗೇ ಗಡಿಬಿಡಿ ಮಾಡಬೇಡಿ. ಬೇಡವಾದ ಚಿಂತೆಗಳನ್ನು ಮನಸ್ಸಿಗೆ ಹಚ್ಚಿಕೊಳ್ಳಬೇಡಿ.'

ಶಂಕರಣ್ಣ ಕಟ್ಟುನಿಟ್ಟಿದ ಮನುಷ್ಯನಾದರೂ ಮೆದು ಮನಸ್ಸಿನವ. ಮೈಂದಣ್ಣನೂ ಈಗ ಮೊದಲಿನಂತಿಲ್ಲ. ಸನ್ಯಾಸಿಗಳನ್ನು ಬೆನ್ನು ಹತ್ತುವವನಾದರೂ ಈಗ ಮೊದಲಿನಂತೆ ಮಠಗಳಿಗೆ ಹೋಗುವುದನ್ನೆಲ್ಲ ತುಂಬ ಕಡಿಮೆ ಮಾಡಿದ್ದಾನೆ. ಇನ್ನು ಮುಂದಿನ ವರ್ಷ ಅವನ ಕುತ್ತಿಗೆಗೂ ಒಂದನ್ನು ಕಟ್ಟಿದರೆ ಆಮೇಲೆ 'ಪೆರ್ಚಿ ಕಟ್ಟುವ ಕೋಣನಿಗೆ ಮೂಗುದಾರ ಹಾಕಿದಂತೆ' ಆಗುತ್ತದೆ. ನೀವು ಸ್ವಲ್ಪ ಆಚೀಚೆ ಕಣ್ಣು ಹಾಯಿಸಿದರೆ ಮದುವೆ ಮಾಡಲು ಸುಲಭವಾದೀತು. ಪದ್ಮನಾಭ ಭಾವ ಬಂದರೆ ಮಕ್ಕಳ ವಿಷಯ ನಾನೇ ಅವರಲ್ಲಿ ಮಾತನಾಡ್ತೇನೆ. ಈಗಲೇ ಕರೆದುಕೊಂಡು ಹೋಗುವುದು ಬೇಡವೆಂದರೆ ಅವರು ನಮ್ಮ ಮಾತನ್ನು ತೆಗೆದು ಹಾಕಲಾರರು. ಈಗ ಕರೆದುಕೊಂಡು ಹೋದರೆ ಮಕ್ಕಳಿಗೆ ಊಟಕ್ಕೆ ತೊಂದರೆ, ಶಾಲೆಯ ಆಲೋಚನೆಯನ್ನೂ ಮಾಡಬೇಕು. ಅವರಿಗೂ ಹೋಟೆಲು ಊಟ ತಪ್ಪುತ್ತದೆ. ಈ ಅನಂತಲಕ್ಷ್ಮಿ ತುಂಬ ಸೂಕ್ಷ್ಮ. ಒಂದಿಷ್ಟು ಹೆಚ್ಚು

ಕಡಿಮೆ ಆದರೆ ಅವಳಿಗೆ ಗಳಿಗೆಗೆ ಶೀತ, ಜ್ವರ ತಪ್ಪುವುದಿಲ್ಲ. ಅವನೋ ಭಾರಿ ತುಂಟ. ಕಣ್ಣು ತಪ್ಪಿದರೆ ಪರಾರಿ. ಮಾರ್ಗದ ಬದಿಗೂ ಹೋಗುತ್ತಾನೆ. ಆದ್ದರಿಂದ ಇಲ್ಲೇ ಕೆಲವು ವರ್ಷ ಇದ್ದು ಗುರುಕಂಬಳದ ಶಾಲೆಗೆ ಹೋದರೆ ಆಮೇಲೆ ಬೊಂಬಾಯಿಗೆ ಕರೆದುಕೊಂಡು ಹೋಗಿ ಮಾತುಂಗದಲ್ಲಿ ಕನ್ನಡ ಶಾಲೆ ಉಂಟಂತೆ, ಅಲ್ಲಿ ನಮ್ಮ ಊರಿನ ಟೀಚರುಗಳು ತುಂಬ ಜನ ಇದ್ದಾರಂತೆ, ಅಲ್ಲಿ ಸೇರಿಸಬಹುದು.

'ಯಾಕೆ? ಅಷ್ಟಾಗುವಾಗ ಪದ್ಮನಾಭ ಭಾವ ಇನ್ನೊಂದು ಮದುವೆ ಆಗುವುದಿಲ್ಲವೇ?'

ಅಷ್ಟು ಮಾತಾಗುವಾಗ ಮೈಂದಣ್ಣ ಮಹಡಿಯಿಂದ ಸ್ಟೋರಿಗೆ ಹೋಗಲು ಹೊರಟವನು ಕೆಳಗಿಳಿದು ಬಂದ.

'ಇನ್ನೊಂದು ಮದುವೆ ಆಗುವವರು ಯಾರು? ಯಾರ ಸುದ್ದಿ ಮಾತಾಡ್ತಿದ್ದೀರೀ ಭವಾನಿ?' ಮೈಂದಣ್ಣ ಕೇಳಿದ.

'ಇತ್ತೀಚೆಗೆ ನಿಮಗೆ ಮದುವೆ ಸುದ್ದಿಯೇ ಆಯ್ತು. ಈಗ ಯಾರ ಮದುವೆ ಸುದ್ದಿ ಹೊಸದಾಗಿ?'

'ನಿಮ್ಮ ಪದ್ಮನಾಭ ಭಾವ ಹೀಗೆಯೇ ಇದ್ದರೆ ಹೇಗೆ ಅಂತ ಮಾತನಾಡುತ್ತಿದ್ದೆವು. ಇಂಥದ್ದೇ ಹೆಣ್ಣೂಂತ ಅಲ್ಲ. ಬೇಗನೆ ಮದುವೆ ಇದೆ ಅಂತಲೂ ಅಲ್ಲ. ಸುಮ್ಮನೆ ಮಾತನಾಡಬೇಕೆಂದು ಮಾತನಾಡಿದೆವು, ಅಷ್ಟೇ' ಎಂದರು ಅಂತಕ್ಕ. 'ಅವನೇನೂ ಮದುವೆ ಸುದ್ದಿ ಹೇಳಿಲ್ಲ. ಬಂದು ಮಕ್ಕಳನ್ನು ಕರೆದುಕೊಂಡು ಹೋಗುತ್ತೇನೆಂದು ಪತ್ರ ಬರದಿದ್ದಾನೆ.'

'ಅವರು ಬಂದು ಹೋಗ್ತಾರೆ. ಅವರದ್ದೇ ಆದ ಒಂದು ಹೆಂಗಸು ಇಲ್ಲದೆ ಮಕ್ಕಳನ್ನು ಸಾಕುವುದು ಕಷ್ಟ ಅರ್ಕಾವತಿ ಒಂದು ಮಗುವನ್ನು ಸಾಕುವುದಕ್ಕೇ ಸ್ಟೋರಿನಲ್ಲೂ ಮನೆಯಲ್ಲೂ ಕೆಲಸ ಮಾಡಿ ಕಷ್ಟಪಡ್ತಾಳೆ. ಈಗ ಮನೆಯಲ್ಲಿ ಕುಂಟ ತಂದೆಯಾದರೂ ಇದ್ದಾರೆ. ಅವರು ತೀರಿಹೋದರೆ ಅವಳಿಗೆ ಇನ್ನೂ ಕಷ್ಟ.'

ತಾಯಿಗೂ ಮಗಳಿಗೂ ಅವನು ಹೇಳುವ ರೀತಿ ನೋಡಿದರೆ ಅಯ್ಯೋ, ಅರ್ಕಾವತಿಗೆ ಎಷ್ಟು ಕಷ್ಟವೆಂದು ಅವನ ಒಡಲಿಗೇ ತುಂಬ ಸಂಕಟವಾಗುವಂತೆ ತೋರಿತು. 'ಏನು ಮಾಡುವುದು? ನಿನ್ನ ಮಾವ ಕೊನೆಗಾಲದಲ್ಲಿ ಅವಳಿಗೆ ಅಷ್ಟು ಉಪಕಾರ ಮಾಡಿ ಹೋದ' ಎನ್ನುತ್ತ ಅಂತಕ್ಕ ಮಾತು ನಿಲ್ಲಿಸಿದರು. ಮನಸ್ಸಿಗೆ ಏನು ತೋಚಿತೋ ಕುಳಿತಿದ್ದವರು ಎದ್ದು ನಿಂತು, 'ಭವಾನಿ, ಅವನ ಚಾ ಮತ್ತು ತಿಂಡಿ ತಯಾರು ಮಾಡಿದ್ದೀಯಾ? ಇವತ್ತು ಇಬ್ಬರು ಆಳುಗಳು ಅಂಗಳಕ್ಕೆ ಸೆಗಣಿ ಹಾಕಿ ಗುಡಿಸುವುದಕ್ಕೆ ಬರುತ್ತಾರೆ. ಅವರಿಗೂ ಚಾ ಮತ್ತು ತಿಂಡಿ ಮಾಡಿ ಇಡು. ಏಳು, ಕುಳಿತರೆ ಎಷ್ಟು ಹೊತ್ತಾದರೂ ಕುಳಿತುಕೊಂಡೇ ಇರ್ತೀ.'

ಹಾಗೆ ಹೇಳಿದವರೇ ಅಂತಕ್ಕ ಅಂಗಳಕ್ಕಿಳಿದು ಹೋದರು. ಭವಾನಿಯೂ ಎದ್ದು ಚಿಕ್ಕ ಜಗಲಿಯ ಮೂಲಕ ಹೋಗಿ ಕುರುಬಾಗಿಲು ದಾಟಿದಳು.

* * * * *

ಮೈಂದಣ್ಣ ಒಬ್ಬನೇ ಆದ. ಪಕ್ಕನೆ ಯಾವುದೋ ಒಂದು ಹೊಸ ಆಲೋಚನೆ ಮನಸ್ಸಿಗೆ ಬಂದಂತೆ ಆಗಿ ಸುಮಾರು ಹೊತ್ತು ಅದೇ ಗುಂಗಿನಲ್ಲಿ ಕಲ್ಲಾದಂತೆ ನಿಂತು ಆಲೋಚನೆ ಮಾಡುತ್ತಲೇ ಇದ್ದ. ತಿಂಡಿ ತಯಾರಿಸಿ ಭವಾನಿ ಚಾವಡಿಗೆ ಬಂದಳು. ಇವನು ಚಾ ಕುಡಿಯಲು ಒಳಗೆ ಬರುವಂತೆ ಕಾಣೆ. ಏನು ಮಾಡ್ತಿದ್ದನೆಂದು ನೋಡಲು ಬಂದರೆ ಅವನೆಲ್ಲಿದ್ದಾನೆ? ಚಾವಡಿಯಲ್ಲಿ ಯಾರೂ ಇರಲಿಲ್ಲ. ಅಷ್ಟು ಬೇಗ ಹೋಗಲು ಇವನಿಗೇನಿದೆ ಕೆಲಸ! ಪದವಿನಲ್ಲಿ ಇವನನ್ನು ಕಾಯುವವರು ಯಾರಿದ್ದಾರೆ?

ಪದವಿನಲ್ಲಿ ಯಾರೂ ಕಾಯುವುದಿಲ್ಲ. ಅವನ ಮನಸ್ಸಿನಲ್ಲಿ ಇದುವರೆಗೂ ಸುಪ್ತವಾಗಿದ್ದ ಆಲೋಚನೆಯೊಂದು ಇದೀಗ ಜಾಗೃತವಾಗಿತ್ತು.

ಆ ಮಿಂಚಿನಂಥ ಆಲೋಚನೆಯ ತುದಿಯನ್ನು ಹಿಡಿದುಕೊಂಡು ಅವನು ಅರ್ಕಾವತಿಯ ಜೊತೆಯಲ್ಲಿ ಮಾತನಾಡಲು ಸೀದಾ ಮರಳು ತೋಟಕ್ಕೆ ಹೋದ.

ಮೈಂದಣ್ಣ ಬದುವಿನ ಮೇಲೆ ಹೋಗಿ ನೀಲಯ್ಯ ಆಚಾರಿಯ ಹಿತ್ತಿಲಿಗೆ ಕಾಲಿಟ್ಟಾಗ ಆತ ಕೋಲೂರಿಕೊಂಡು ಬಚ್ಚಲು ಮನೆಯಿಂದ ಕುಂಟುತ್ತ ಮನೆಯ ಒಳಗೆ ಬರುವುದು ಕಾಣಿಸಿತು. ಆಚಾರಿ ಒಳಗೆ ಹೋಗಿ ಮಗುವಿನ ಎರಡು ಬಟ್ಟೆಗಳನ್ನು ಹಿಡಿದುಕೊಂಡು ಬರುತ್ತಿದ್ದ.

'ಆಚಾರಿ, ನೀಲಯ್ಯ ಆಚಾರಿ' ಮೈಂದಣ್ಣ ಕರೆದ.

ಆಚಾರಿ ಗಾಬರಿಬಿದ್ದು ತಿರುಗಿ ನೋಡಿದ. ಕೈಯಲ್ಲಿದ್ದ ಕೋಲು ನೆಲದ ಕಲ್ಲಿನ ಸಂದಿಗೆ ಸಿಕ್ಕಿ ಆತ ತಿರುಗಿ ಕೆಳಗೆ ಬಿದ್ದ. 'ಅಯ್ಯಪ್ಪ' ಎಂದು ಉದ್ಗರಿಸಿದ.

ಮೈಂದಣ್ಣ ಮುಂದಕ್ಕೆ ಓಡಿಬಂದು 'ಎಲ ಎಲ, ಏನವಸರ ಮಾಡಿಬಿಟ್ಟೆ ಆಚಾರಿ?' ಅನ್ನುತ್ತ ತೋಳಿಗೆ ಕೈನೀಡಿ ಎಬ್ಬಿಸಿ ಕೂಡಿಸಿದ. 'ತಾಗಿತಾ? ಎಲ್ಲಿಗೆ ಪೆಟ್ಟಾಯ್ತು?'

ಅಷ್ಟರಲ್ಲಿ ಅರ್ಕಾವತಿ ಜೋರಾಗಿ ಕರೆಯುವುದು ಕೇಳಿಸಿತು.

'ಇಟ್ಟ ಬಟ್ಟೆಯನ್ನು ತರಲು ಇಷ್ಟು ಹೊತ್ತೇಕೆ? ಎಲ್ಲಿಗೆ ಹೋದರೂ ಒಂದು ಗಂಟೆ ಬೇಕು. ಕಾದು ಕಾದು ನನ್ನ ಆಯುಸ್ಸು ಅರ್ಧ ಆಯ್ತು. ಮಗುವಿಗೆ ಮೈಒರಸದೆ ಶೀತ ಹಿಡಿಯುತ್ತದೆ. ಜ್ವರವಿನ್ನೂ ಪೂರ್ತಿ ಬಿಟ್ಟಿಲ್ಲ. ಏನು ಮಾಡ್ತಿದ್ದೀರಿ? ಅಪ್ಪಯ್ಯ, ಬೇಗ ಬರಲು ಆಗುವುದಿಲ್ಲವೇ?'

ಆಚಾರಿಯ ಕೈಯಿಂದ ಜಾರಿ ನೆಲಕ್ಕೆ ಬಿದ್ದ ಬೈರಾಸನ್ನೂ ಮಗುವಿನ ಬಟ್ಟೆಯನ್ನೂ ಹೆಕ್ಕಿ ಮೈಂದಣ್ಣ ಬಚ್ಚಲಿಗೆ ತೆಗೆದುಕೊಂಡು ಹೋದ. ಬಾಗಿಲಲ್ಲಿ ಆತ ನಿಂತು ಬಟ್ಟೆಯನ್ನು ಮುಂದೆ ಹಿಡಿದಾಗ ಅವಳಿಗೆ ಆಶ್ಚರ್ಯ.

'ನೀವು ಯಾವಾಗ ಬಂದಿರಿ? ಈ ಬಟ್ಟೆಯನ್ನು ಅಪ್ಪ ನಿಮ್ಮ ಕೈಯಲ್ಲಿ ಕೊಟ್ಟರಾ?'

ಬಟ್ಟೆಯನ್ನು ತೆಗೆದುಕೊಂಡು ಶಾಂಭವಿಯ ಮೈಯನ್ನು ಒರಸಿದಳು.

ಮೈಂದಣ್ಣ ಮಾತಾಡದೆ ಹಿಂದೆ ಬಂದ. ಆಚಾರಿ ಕುಳ್ಳಿರಿಸಿದಲ್ಲೇ ಕುಳಿತಿದ್ದ. ಅವನ ಕೋಲು ಆಚೆ ಬಿದ್ದಿತ್ತು. ಅದಿಲ್ಲದೆ ಆಚಾರಿಗೆ ಎದ್ದು ನಿಲ್ಲಲು ಸಾಧ್ಯವಿಲ್ಲ. ಮೈಂದಣ್ಣ ಕೋಲನ್ನು ಹೆಕ್ಕಿ ಕೈಗೆ ಕೊಟ್ಟು ಆತನನ್ನು ನಿಲ್ಲಿಸಿದ. ಆಚಾರಿ ನಿಧಾನಕ್ಕೆ ನಡೆದುಕೊಂಡು

ಹೋಗುವಾಗ ಮಗಳು ಕರೆದು ಹೇಳಿದಳು. 'ಮಗುವಿನ ತಲೆ ಒಣಗಿಸಬೇಕು. ಬಚ್ಚಲೊಲೆಯಿಂದ ಕೆಂಡ ತಂದು ಲೋಬಾನ ತಯಾರು ಮಾಡಿಡಿ. ಇಡೀ ದಿನ ನರಳುತ್ತ ಇರಬೇಡಿ.'

ನೀಲಯ್ಯ ಆಚಾರಿ ಹೂಂಗುಟ್ಟಲಿಲ್ಲ. ಉಸಿರೇ ತೆಗೆಯಲಿಲ್ಲ. ತಿರುಗಿ ಬಚ್ಚಲು ಮನೆಗೆ ಹೋದ. ಮೈಂದಣ್ಣ ಇದನ್ನು ನೋಡಿ ಇನ್ನು ಇಲ್ಲೇನು ಮಾಡುವುದೆಂದು ಒಳಗೆ ಹೋಗಿ ಒಂದು ಸ್ಟೂಲಿನಲ್ಲಿ ಕುಳಿತ. ಅಲ್ಲಿ ಕುಳಿತುಕೊಳ್ಳಲು ಒಂದು ಸೋಫಾ ಆಗಲಿ, ಮರದ ಕುರ್ಚಿಯಾಗಲೀ ಇರಲಿಲ್ಲ. ಅಲ್ಲಿ ಇದ್ದುದು ಒಂದು ಬೆಂಚು ಮತ್ತು ಒಂದು ಹಳೆಯ ಸ್ಟೂಲು.

ಗಾದೆಮಾತಿನಂತೆ 'ಕುಂಬಾರನ ಮನೆಯಲ್ಲಿ ಅಡಿಗೆಗೆ ಗಡಿಗೆಯಿಲ್ಲ. ಆಚಾರಿಯ ಮನೆಯಲ್ಲಿ ಕುಳಿತುಕೊಳ್ಳಲು ಮಣೆಯಿಲ್ಲ..' ಅವರಿಗೆ ಊರವರ ಉಸಾಬರಿ ನೋಡುವುದಕ್ಕಲ್ಲದೆ ಸ್ವಂತ ಮನೆಯ ವಿಚಾರ ಮಾಡಲು ಸಮಯವಿಲ್ಲ.

ಮಗುವನ್ನು ಬೈರಾಸಿನಲ್ಲಿ ಸುತ್ತಿಕೊಂಡು ಅರ್ಕಾವತಿ ಅದನ್ನು ಸೊಂಟದಲ್ಲಿ ಎತ್ತಿಟ್ಟುಕೊಂಡು ಒಳಗೆ ಬಂದಳು. ಮೈಂದಣ್ಣನನ್ನು ನೋಡಿ ಹೇಳಿದಳು, 'ಸ್ವಲ್ಪ ಕುಳಿತುಕೊಳ್ಳಿ. ಮಗುವಿಗೆ ಲೋಬಾನದ ಹೊಗೆ ಹಾಕಿ ಮಲಗಿಸಿ ಬರುತ್ತೇನೆ. ಗಾಳಿ ಹಾಕಿದರೆ ಜ್ವರ ಮತ್ತೆ ಶುರುವಾಗ್ತದೆ.'

ಮೈಂದಣ್ಣ ಏನೂ ಉತ್ತರಿಸಿಲಿಲ್ಲ. ಸುಮ್ಮನೆ ಆ ಹಳೆ ಕುರ್ಚಿಯಲ್ಲಿ ಕುಳಿತೇ ಇದ್ದ. ಸುಮಾರು ಹೊತ್ತು ಕಳೆದ ಮೇಲೆ ಅರ್ಕಾವತಿ ಹೊರಗೆ ಬಂದಳು. ಮಗುವಿನ ಮೈಗೆ ಹಾಕಿದ ಪೌಡರಿನ ಪರಿಮಳದೊಂದಿಗೆ ಲೋಬಾನದ ವಾಸನೆಯೂ ಸೇರಿ ಅವಳು ಬರುವಾಗ ಒಂದು ಹಿತವಾದ ಪರಿಮಳ ಗಾಳಿಯಲ್ಲಿ ತೇಲಿ ಬಂತು.

ಮೇಲೆತ್ತಿ ಕಟ್ಟಿದ ಸೀರೆಯನ್ನು ಕೆಳಗೆ ಹಾಕಿ ಅವಳು ಕೇಳಿದಳು, 'ಸುಮಾರು ಹೊತ್ತು ನಿಮ್ಮನ್ನು ಕಾಯಿಸಿದೆ. ನಾನೇ ಎಲ್ಲ ಮಾಡಬೇಕು. ನೀವೇನು ಈ ಕಡೆ ಬಂದದ್ದು? ಅರ್ಜೆಂಟ್ ಕೆಲಸವಿದೆಯೇ ಎಂದು ಕೂಡ ನಾನು ಕೇಳಲಿಲ್ಲ.'

'ಅರ್ಜೆಂಟ್ ಕೆಲಸವಲ್ಲ. ಆದರೆ ಅಗತ್ಯದ ಕೆಲಸ. ಇಲ್ಲಿಗೆ ಬಂದ ಮೇಲೆ ಅದು ಎಷ್ಟು ಅತ್ಯಗತ್ಯ ಅಂತ ನನಗೆ ಪೂರ್ತಿ ಮನವರಿಕೆಯಾಯ್ತು... ನೀನು ಎಷ್ಟೊಂದು ಕಷ್ಟಪಡ್ತಿದ್ದೀ. ಒಬ್ಬಳೇ ಹೆಣ್ಣು ಮುದಿ ತಂದೆಯ ಸೇವೆ ಮಾಡಬೇಕು, ಚಿಕ್ಕ ಮಗುವಿನ ಕೆಲಸ ಮಾಡಬೇಕು. ಜೀವನಯಾಪನೆಗೆ ಹೊರಗೆ ಹೋಗಿ ದುಡಿದು ಹಣ ಸಂಪಾದನೆ ಮಾಡಬೇಕು. ಓ, ಜುಮಾದಿಯೇ ನೀನೇ ನೋಡಬೇಕು. ನಿನ್ನಂತಿರುವ ನಿಷ್ಪಾಪ ಹೆಣ್ಣುಮಗಳನ್ನು ಈ ಕಷ್ಟಕ್ಕೆ ಗುರಿ ಮಾಡಿದವರು ನನ್ನ ಮನೆಯವರೇ.'

'ಆದ್ದರಿಂದ ನಮಗೆ ನಿನ್ನ ಆ ಭಾರವನ್ನು ಕಡಿಮೆ ಮಾಡಬೇಕಾದ ಜವಾಬ್ದಾರಿ ಇದೆ. ನ್ಯಾಯವಾಗಿ ನೋಡಿದರೆ ಶಾಂಭವಿಗೆ ಮಾವನಾಗಿ ನಿನಗೆ ರಕ್ಷಣೆಯನ್ನೂ ಕೊಡಬೇಕು... ನೀನೇನು ಹೇಳ್ತೀಯಾ? ಹೌದಾ.. ಅಲ್ಲವಾ?'

ಈ ಪುಣ್ಯಾತ್ಮನಿಗೆ ಇವತ್ತು ಏನು ಪಿತ್ತ ನೆತ್ತಿಗೇರಿದೆಯಾ? ನ್ಯಾಯ, ನೀತಿ,

ಜವಾಬ್ದಾರಿ, ಮಾವ ಎನ್ನುತ್ತ ಬಾಯಿಗೆ ಬಂದಂತೆ ಮಾತಾಡ್ತಿದ್ದಾರಲ್ಲ. ಹೇಗಾದರೂ ಇವರನ್ನು ಸಾಗಹಾಕಬೇಕೆಂದು ಅರ್ಕಾವತಿ ಯೋಚಿಸಿದಳು.

'ಮೈಂದಣ್ಣ, ಸಮಯ ಎಂಟೂವರೆಯಾಯ್ತು. ನಾನಿನ್ನು ಸ್ನಾನಮಾಡಿ ಸ್ಟೋರಿಗೆ ಹೊರಡಬೇಕು. ನೀವು ಮುಂದೆ ಹೋಗಿ. ಸ್ಟೋರಿನ ಬೀಗದ ಕೈ ಕೊಡ್ತೇನೆ.... ತಿಮ್ಮ ಬರುತ್ತಾನೆ. ಅವನಿಗೆ ಬೆಳಗ್ಗಿನ ಕೆಲಸ ಹೇಳಿ. ಅಂಗಳ ಗುಡಿಸಲಿ. ಸ್ಟೋರಿನ ಒಳಗೆ ನಾನು ಬಂದ ಮೇಲೆ ಗುಡಿಸಲಿ. ಇಲ್ಲದಿದ್ದರೆ ಬಿಟ್ಟಿ ಸಲ್ಲಿಸುತ್ತಾನೆ. ಬೀಗದ ಕೈ ತರ್‍ತೇನೆ..'

'ತ್ಚು.. ತ್ಚು.. ಅವಸರ ಮಾಡ್ಬೇಕಾಗಿಲ್ಲ ಅರ್ಕಾವತಿ, ನಾನು ಸ್ಟೋರಿನ ಸಮಾಚಾರ ಮಾತನಾಡಲು ಬಂದದ್ದಲ್ಲ. ನನ್ನ ನಿನ್ನ ಸಂಗತಿ ಮಾತನಾಡಲು ಬಂದೆ.'

ನನ್ನದೂ ಇವರದೂ ಅದೇನು ಮಾತು? ಅರ್ಕಾವತಿಗೆ ಆಶ್ಚರ್ಯವಾಯ್ತು. ಅದರೊಟ್ಟಿಗೇ ಈ ಮನುಷ್ಯನಿಗೆ ಇದ್ದಕ್ಕಿದ್ದಂತೆ ಏನಾಯ್ತೆಂಬುದೂ ಗೊತ್ತಾಗಲಿಲ್ಲ. ಎಚ್ಚರಿಕೆಯಲ್ಲಿರಬೇಕೆನಿಸಿತು.

'ಮೈಂದಣ್ಣ, ನನ್ನ ನಿಮ್ಮ ಸಂಗತಿ ಏನೂ ಇಲ್ವಲ್ಲ? ಮಾತನಾಡುವಂತದ್ದು ಏನೂ ಇಲ್ಲ... ನೀವು ಅದೇನೋ ತಪ್ಪಾಗಿ ಯೋಚಿಸಿ ಬಂದಿದ್ದೀರಿ. ನಾವು ಯಾವಾಗಲೂ ಅಕ್ಕ ತಮ್ಮನ ಹಾಗೆ. ನಮಗೆ ಯಾವುದೇ ರೀತಿಯಲ್ಲಿ ಚರ್ಚೆ ಮಾಡುವ ಸಂಗತಿ ಇಲ್ಲ.'

'ಅದು ನೀನು ಭಾವಿಸಿರುವುದು. ನೀನು ಎಷ್ಟು ಉದಾರ ಮನಸ್ಸಿನವಳೆಂದೂ ತಿಳುವಳಿಕಸ್ಥೆ ಎಂದೂ ನನಗೆ ಚೆನ್ನಾಗಿ ಗೊತ್ತಿದೆ. ನೀನು ಇಷ್ಟು ಕಷ್ಟಪಡಲು ಕಾರಣ ರಾರೆಂಬುದೂ ನನಗೆ ಗೊತ್ತಿದೆ. ಅದಕ್ಕೆ ನಿನ್ನ ಭಾರವನ್ನು ಕಡಿಮೆ ಮಾಡಲು ನಿನಗೆ ನ್ಯಾಯವಾಗಿ ಸಿಗಬೇಕಾದುದನ್ನು ನೀಡಲು ನಾನು ಇವತ್ತು ಸಿದ್ಧನಾಗಿಯೇ ಬಂದೆ. ನಾನು ಹೇಳಿದ್ದು ಅರ್ಥ ಆಯ್ತಾ? ನಿನ್ನನ್ನು ನಾನು ಮದುವೆಯಾಗ್ತೇನೆ. ಶಾಂಭವಿಯನ್ನು ದತ್ತು ಸ್ವೀಕರಿಸುತ್ತೇನೆ. ನಿನಗೆ ಸಾಧ್ಯವಾದಷ್ಟು ಉತ್ತಮವಾದ ಬದುಕನ್ನು ನಾನು ಕೊಡುತ್ತೇನೆ. ಏನು ಹೇಳ್ತೀ ನೀನಿದಕ್ಕೆ?'

ಕಟ್ಟೆ ಕಡಿದ ನೀರು ಒಮ್ಮೆಗೇ ಧುಮುಕಿ ಹರಿಯುವಂತೆ ಮೈಂದಣ್ಣನ ಮಾತು ಕೇಳಿದ ಅರ್ಕಾವತಿಗೆ ಸಿಡಿಲು ಬಡಿದಂತೆ ಆಯ್ತು. ಏನು ಹೇಳುವುದು! ಎಂಥ ವಿಚಿತ್ರ ಆಲೋಚನೆ ಮಾಡ್ತಾನೆ ಈ ಮನುಷ್ಯ! ನನ್ನ ಯಾವ ವರ್ತನೆಯಿಂದ ಈತನಿಗೆ ಈ ಬಗೆಯ ಆಲೋಚನೆ ಹುಟ್ಟಿತು!!

ಅರ್ಕಾವತಿ ಪ್ರಬುದ್ಧಳಾದ ಮಹಿಳೆ. ನಾಲ್ಕೂರು ಸುತ್ತಿ ನಾಲ್ಕಾರು ನಮೂನೆಯ ವ್ಯವಹಾರಗಳನ್ನು ನೋಡಿದವಳು. ತನಗೆ ಒಳ್ಳೆಯ ರೂಪವಿದೆ, ಅದನ್ನು ನೋಡಿ ಗಂಡಸು ಜಾತಿ ಹುಚ್ಚಾಗುತ್ತದೆ. ಮದ್ಯಪಾನ ಮಾಡಿ ಇಂಥ ಮಾತುಗಳನ್ನು ಆಡುತ್ತಾರೆಂದೂ ಗೊತ್ತಿದೆ. ಈತ ಹಾಗೇನೂ ಅಲ್ಲ. ಸಾರಾಯಿ ಕುಡಿದಿಲ್ಲ. ನಿನ್ನೆ ನಿದ್ರೆ ಮಾಡಿಲ್ಲವೇ?

ಈ ಮಾತುಗಳು ಹೊರಬರಬೇಕಿದ್ದರೆ ಆತನ ಮನಸ್ಸಿನಲ್ಲಿ ಆ ಆಲೋಚನೆ ಮೊದಲೇ ಗಟ್ಟಿಯಾಗಿ ಇದ್ದಿರಬೇಕು. ಈತ ಯಾಕೆ ಹೀಗೆ ಮಾತನಾಡುತ್ತಾನೆ?

'ಮೈಂದಣ್ಣ, ಆತುರಪಟ್ಟುಕೊಂಡು ಮಾತನಾಡಬೇಡಿ. ಯಾರೋ ಮಾಡಿದ ತಪ್ಪಿನ

ಪಾಪವನ್ನು ನಿಮ್ಮಿಂದ ಪರಿಹರಿಸಲು ಸಾಧ್ಯವಿಲ್ಲ.. ಅವರವರು ಮಾಡಿದ ಪಾಪ ಅವರವರ ತಲೆಗೇ.. ತಲೆಗೆ ಹೊಯ್ದ ನೀರು ಕಾಲಿಗೇ ಬರುವುದು.. ನೀವೇಕೆ ಇಷ್ಟು ಉದ್ರಿಕ್ತರಾಗಿದ್ದೀರಿ? ನೋಡಿ, ನಾನು ನಿಮಗೆ ಅಕ್ಕ. ಅಲ್ಲದೆ ನೇರವಾಗಿ ಕಲ್ಮಶವಿಲ್ಲದೆ ಹೇಳಿದರೆ ನಾನು ನಿಮಗೆ ಮಾತೃಸ್ಥಾನದಲ್ಲಿರುವವಳು. ಅದಕ್ಕೆ ಇವತ್ತು ಬಲವಾದ ಸಾಕ್ಷಿ ಇದೆ. ಅದು ಶಾಂಭವಿ. ಅದು ಯಾವುದೇ ಬಲಾತ್ಕಾರದಿಂದ ನನ್ನನ್ನು ಕೆಡಿಸಿ ಹುಟ್ಟಿಸಿದ ಸಂತಾನವಲ್ಲ. ಅದು ನಮ್ಮಿಬ್ಬರ ಪ್ರೀತಿಯ, ಒಮ್ಮನಸ್ಸಿನ ಕೂಡುವಿಕೆಯ ಫಲ. ನಾನು ನಿಮ್ಮ ಮಾವನ ಹೆಂಡತಿ. ಅವರ ಧಾರೆಯ ಹೆಂಡತಿಯಲ್ಲದಿದ್ದರೂ ಮೆಚ್ಚಿ ಮೈನೀಡಿದ ಉಪಪತ್ನಿ. ನಾನು ಇವತ್ತು ನಿಮಗೆ ತಾಯಿಗೆ ಸಮಾನ.. ನಾನು ಹೀಗೆ ಹೇಳಿದೆನೆಂದು ನೀವು ಮನಸ್ಸು ಕಹಿಮಾಡುವುದು ಬೇಕಿಲ್ಲ.'

'ನೀವಿನ್ನೂ ಚಿಕ್ಕವರು, ಬ್ರಹ್ಮಚಾರಿ. ಲೋಕದ ಒಳ್ಳೆಯದು ಕೆಟ್ಟದ್ದನ್ನು ನೋಡಿದವರಲ್ಲ. ತಪ್ಪು ಸರಿಗಳಿಗೆ ಅದೆಷ್ಟೋ ಮುಖಗಳಿವೆ. ನಿಮ್ಮ ಬಾಲಬುದ್ಧಿಗೆ ಈಗ ಕಾಣುವುದು ಕಪ್ಪು ಬಿಳುಪು ಮಾತ್ರ. ಜಗತ್ತಿನಲ್ಲಿ ನಡೆಯುವ ಎಷ್ಟೋ ವ್ಯವಾಹಾರಗಳು ಪೂರ್ತಿ ತಪ್ಪಾಗಿರುವುದಿಲ್ಲ. ಸ್ಪಷ್ಟವಾಗಿ ಸರಿಯೂ ಆಗಿರುವುದಿಲ್ಲ. ಸರಿ ತಪ್ಪುಗಳು ಬೆರೆತು ಕೊಂಡಿರುತ್ತವೆ.'

'ನಿಮ್ಮ ಕರ್ತವ್ಯವೆಂದು ನೀವು ಭಾವಿಸಿದ್ದು ನಿಮ್ಮದಾಗಿರಲಿಕ್ಕಿಲ್ಲ. ನಿಮ್ಮ ಮಾವನವರ ಸಾವಿಗೆ ಯಾರು ಕಾರಣರೆಂದು ಯೋಚಿಸಿ ಯೋಚಿಸಿ ನೀವು ಒದ್ದಾಡುತ್ತಿದ್ದೀರಿ. ಮಾವ ಸತ್ತು ಹೋದರು. ಅವರ ಆಯುಸ್ಸು ಅಷ್ಟೇ. ಅವರ ಸಾವಿಗೆ ಅದೆಷ್ಟೋ ಕಾರಣಗಳಿರಬಹುದು. ಅದಕ್ಕೆಲ್ಲ ನ್ಯಾಯತೀರ್ಮಾನ ಮಾಡುವುದು ನಿಮ್ಮ ಕೆಲಸವಲ್ಲ. ಅದು ದೇವರ ಕೆಲಸ. ನನ್ನ ವಿಚಾರದಲ್ಲಿ ನೀವು ಹೆಚ್ಚು ಯೋಚನೆ ಮಾಡುವ ಅಗತ್ಯವಿಲ್ಲ. ನಾನು ಈ ಅವಸ್ಥೆಯಲ್ಲಿರಲು ಕಾರಣ ನಾನೇ.'

'ಮುಂದಿನ ಪರಿಣಾಮವೇನಾದೀತೆಂದು ಯೋಚಿಸದೆ ನಾನು ಹೆಜ್ಜೆ ಮುಂದಿಟ್ಟೆ. ನಿಮ್ಮ ಮಾವನಿಗೆ ಹೆಂಡತಿ ಮಕ್ಕಳು ಇದ್ದಾರೆಂದು ಗೊತ್ತಿದ್ದೇ ಅವರನ್ನು ಇಷ್ಟಪಟ್ಟು ಮೆಚ್ಚಿ ಸುಖ ಪಡೆದೆ. ಸರಿಯಾದ ಹಾದಿಯಲ್ಲಿ ನಡೆಯದೆ ಈಗ ಒರಳಿನಲ್ಲಿ ಕುಳಿತು ಒನಕೆ ಪೆಟ್ಟು ತಾಗಬಾರದೆಂದು ಹೇಳಿದರೆ ಹೇಗೆ ಸಾಧ್ಯ? ಒಳ್ಳೆಯದು ಮಾಡಿದರೆ ಒಳ್ಳೆಯದನ್ನೇ ಅನುಭವಿಸಬಹುದು.. ದೇವರು ಕೊಡಲಿಲ್ಲವೆನ್ನಲು ದೇವರದೇನು ತಪ್ಪು? ಹಾಗಲಕಾಯಿ ಬಿತ್ತಿದರೆ ಹೀರೆಕಾಯಿ ಬೆಳೆಯುತ್ತದಾ?'

'ಮೈಂದಣ್ಣ, ನೀವು ನನಗೆ ಚಿಕ್ಕ ತಮ್ಮನಿದ್ದಂತೆ. ಇದನ್ನೆಲ್ಲ ಮರೆತುಬಿಡಿ... ಸಮಾಧಾನವಾಗಿ ಕುಳಿತು ಆಲೋಚನೆ ಮಾಡಿ. ನನ್ನ ಶಾಂಭವಿಗೆ ನೀವು ಮಾವನಾಗಿ ಅವಳ ರಕ್ಷಕರಾಗಿರಿ. ಅವಳ ಜೀವನಕ್ಕೆ ಆಧಾರವಾಗಿ ವಿದ್ಯೆ ಕೊಡಿಸಿ ಒಳ್ಳೆಯ ಬುದ್ಧಿವಂತೆ ಯಾಗಿ ಬಾಳು ಮಗೂ ಎಂದು ಹರಸಿರಿ. ಅದೇ ನೀವು ನನಗೆ ಈಗ ಮಾಡುವ ದೊಡ್ಡ ಉಪಕಾರ.'

'ನಿಮ್ಮ ಮಾವನ ಕಾಮ ನನಗೆ ಪ್ರೇಮವಾಗಿ ತೋರಿ ನನ್ನನ್ನು ಮರುಳು ಮಾಡಿದರೆ

ನನ್ನ ಪ್ರೇಮ ಅವರಿಗೆ ಕಾಮವೆನಿಸಿ ವಾಸ್ತವವನ್ನು ಮರೆಸಿತು ಮೈಂದಣ್ಣ. ನೀವು ಈ ಕಾಮ ಪ್ರೇಮದ ಸುಳಿಯಲ್ಲಿ ಸಿಲುಕಬೇಡಿ. ಭವಾನಿಗೆ ಮದುವೆಯಾದ ಬಳಿಕ ನೀವು ಕೂಡ ನಿಮ್ಮ ತಾಯಿಗೆ ಹೇಳಿ ಮದುವೆಯಾಗಿ. ಓರ್ವ ನಿಷ್ಕಳಂಕ ಪುಣ್ಯವತಿಯನ್ನು ಪತ್ನಿಯಾಗಿ ಪಡೆದು ಅವಳಿಗೆ ಒಳ್ಳೆಯ ಬದುಕು ಕೊಡಿ.'

'ಮೈಂದಣ್ಣ, ನಾನು ಹೀಗೆಲ್ಲ ಮಾತನಾಡಿದೆನೆಂದು ಬೇಸರಿಸಬೇಡಿ. ನಿಮ್ಮ ಒಬ್ಬ ಅಕ್ಕ ತಮ್ಮನಿಗೆ ಪ್ರೀತಿಯಿಂದ ತಿಳಿಸಿ ಹೇಳಿ ತಿದ್ದಲು ನೋಡಿದಳೆಂದು ತಿಳಿಯಿರಿ.'

'ಇವತ್ತು ಇಲ್ಲಿ ಯಾರೂ ಇಲ್ಲ. ಈ ವಿಷಯ ಹೊರಗೆ ಹೋಗುವುದಿಲ್ಲ. ಧೈರ್ಯವಾಗಿರಿ.'

ಮೈಂದಣ್ಣ ಅರ್ಕಾವತಿಯ ಮಾತಿಗೆ ಉತ್ತರಿಸಲಿಲ್ಲ. ತನ್ನ ಬೇಕು ಬೇಡಗಳನ್ನೂ ಹೇಳಲಿಲ್ಲ. ಎದ್ದು ತಲೆ ಕೆಳಗೆ ಹಾಕಿ ಸೀದ ಇಳಿದು ಹೋದ.

ಅರ್ಕಾವತಿಗೆ ಯಾವ ಬೇಸರವೂ ಆಗಲಿಲ್ಲ. ಮದ್ದು ಕಹಿಯಾದರೂ ಆರಂಭದಲ್ಲೇ ಕೊಡುವುದು ಒಳ್ಳೆಯದು.

ಹೆಣ್ಣು ಸುಂದರಿಯಾಗಿರಬೇಕು, ಮರ್ಯಾದೆ ಉಳ್ಳವಳಾಗಿರಬೇಕು ಎಂದು ಎಲ್ಲರೂ ಹಾರೈಸುವರು. ಅವಳು ಮಾತ್ರ ಬದುಕಿನ ಹೆಜ್ಜೆ ಹೆಜ್ಜೆಗೂ ತನ್ನ ಮರ್ಯಾದೆಯನ್ನು ಕಾಪಾಡಲು ಪಾಡು ಪಡಬೇಕು.

'ನನ್ನನ್ನು ಬೇಗ ಮುದುಕಿಯನ್ನಾಗಿ ಗಂಡುಗಳ ಕಣ್ಣಿಗೆ ಕಸವಾಗಿ ಸಿಕ್ಕಿಬೀಳದಂತೆ ಮಾಡು ದೇವರೇ!' ಅರ್ಕಾವತಿ ದೂರದಲ್ಲಿ ಕಾಣುವ ಗ್ರಾಮದೇವತೆಯ ಸ್ಥಾನದತ್ತ ತಿರುಗಿ ಕೈಮುಗಿದಳು.

* * * * *

ಶ್ರಾವಣದಲ್ಲಿ ಆರು ಕಳೆದಾಗ ಪದ್ಮನಾಭ ಸಾಮನಿ ಸ್ವಂತ ಕಾರಿನಲ್ಲಿ ಊರಿಗೆ ಬಂದ. ಬಂದವನೇ ನೇರವಾಗಿ ಗುತ್ತಿಗೆ ಹೋದ. ಅವನ ಇಬ್ಬರು ಮಕ್ಕಳೂ ಮೊದಲು ದೂರದಲ್ಲಿ ನಿಂತುಕೊಂಡು ಅಪ್ಪನನ್ನು ನೋಡಿದರು. ಭವಾನಿ, 'ಹೋಗು ಮಗೂ ಅಪ್ಪನ ಬಳಿಗೆ ಹೋಗು' ಅನ್ನುತ್ತ ಅನಂತಲಕ್ಷ್ಮಿಯನ್ನು ಕೈಹಿಡಿದು ಪದ್ಮನ ಬಳಿಗೆ ಕರೆದುಕೊಂಡು ಹೋದಳು. ಪದ್ಮ ಮಗಳನ್ನು ಬಾಚಿ ತಬ್ಬಿಕೊಂಡು ಮಡಿಲಲ್ಲಿ ಕುಳ್ಳಿರಿಸಿದ. ಸರಸುವಿನ ಪ್ರೀತಿಯ ಮೃದುವಾದ ಸರಸ ಸಂಭಾಷಣೆಗಳು ನೆನಪಾದುದಕ್ಕೋ ಅವನ ಮುಖ ಕೆಂಪಾಯ್ತು. ಕಣ್ಣಾಲಿಗಳಲ್ಲಿ ನೀರು ತುಂಬಿತು. ಅವನು ಇನ್ನೊಂದು ಕೈಯನ್ನು ಮುಂದುಮಾಡಿ ಮಗನನ್ನು ಹತ್ತಿರ ಕರೆದ. ಅಕ್ಕ ಅಪ್ಪನ ತೊಡೆಯಲ್ಲಿ ಕುಳಿತಿರುವುದು ನೋಡಿ ಅವನೂ ಬೇಗ ಪದ್ಮನ ಬಳಿಗೆ ಬಂದು ಅವನಿಗೆ ತಾಗಿ ನಿಂತುಕೊಂಡ.

ಕಾರಿನ ಡ್ರೈವರನ್ನು ಕರೆದು ಸೂಟ್‌ಕೇಸನ್ನು ಒಳಗೆ ತರಲು ಹೇಳಿದ. ಅದನ್ನು ತೆರೆದು ಅವರಿಗೆ ತಂದ ಚಾಕ್ಲೆಟ್ ಆಟದ ಸಾಮಗ್ರಿಗಳನ್ನು ಕೊಟ್ಟ. ಅವರಿಗಾಗಿ ತಂದ ಬಟ್ಟೆಗಳನ್ನು ಭವಾನಿಯ ಕೈಯಲ್ಲಿ ಕೊಟ್ಟ. ಅವರಿಗೆ ಹಾಕಿ ಅಳತೆ ಸರಿಯಾಗಿದೆಯೇ ನೋಡಲು ತಿಳಿಸಿದ.

ಅಂತಕ್ಕ ಒಳಗೆ ಬಂದು 'ಬಾಯಾರಿಕೆ ಬೇಕೇ?' ಎಂದು ಕೇಳಿದರು. ಕೆತ್ತಿ ಇಟ್ಟಿದ್ದ ಎಳನೀರನ್ನು ಅವನಿಗೂ ಉಳಿದವರಿಗೂ ಕೊಡಬೇಕೆಂದು ಕೆಲಸದಾಳು ಬೂಬನಲ್ಲಿ ಹೇಳಿದರು.

'ಮಾಮೀ, ಭವಾನಿ ಮದುವೆಯ ಸಂತೋಷದಲ್ಲಿಯೂ ಚೆನ್ನಾಗಿ ಆಗಿಲ್ಲ. ಜೀವ ಮುದುರಿದ ಹಾಗಿದೆ. ಅದೇನು ಹಾಗೆ? ಭಯವಾ?'

'ಬಂದು ಕುಳಿತುಕೊಳ್ಳುವಾಗಲೇ ತಮಾಶೆ ಮಾಡಲು ಶುರುಮಾಡಿದಿರಾ ಭಾವ? ನನಗೇಕೆ ಭಯ? ಮದುವೆಗೆ ಹುಲಿಯೇನೂ ಬರುವುದಿಲ್ವಲ್ಲ.'

'ಹುಲಿಯಂಥ ಮನುಷ್ಯ ಬರುತ್ತಾನೆ. ನಾನು ಈಗಲೇ ಹೇಳಿಬಿಡುತ್ತೇನೆ. ಜಾಗ್ರತೆ ಮಾಡಬೇಕು. ಗೊತ್ತಾಯ್ತಾ?'

'ಅದೆಲ್ಲ ಇರಲಿ, ನೀವು ಮೊದಲು ಚಾ ಕುಡಿದು ತಿಂಡಿ ತಿನ್ನಿರಿ. ಆಮೇಲೆ ನಿಮ್ಮ ಹತ್ತಿರ ಒಂದು ವಿಷಯ ಮಾತನಾಡಲಿದೆ.'

'ಆಯ್ತು ಮಹಾರಾಯ್ತಿ. ನೀನು ಯಾವಾಗ ಬೇಕಾದರೂ ಮಾತನಾಡು. ಮೈಂದಣ್ಣ ಎಲ್ಲಿದ್ದಾನೆ?'

'ನೀನು ಸ್ಟೋರಿಗೆ ಹೋಗಿಲ್ವಾ?' ಅಂತಕ್ಕ ಕೇಳಿದರು.

'ಪದವಿನಲ್ಲಿ ಶಂಕರ ಸಿಕ್ಕಿದ. ಜನರನ್ನು ಸೇರಿಸಿ ಕೆಲಸ ಮಾಡಿಸುತ್ತಿದ್ದ. ಆಗ ಸ್ಟೋರಿನ ಬಾಗಿಲಿನಲ್ಲಿ ಒಬ್ಬಳು ಯುವತಿ ಇದ್ದಳು. ಯಾರೋ ಹೇಳಿದರು, ಅವಳು ನೀಲಯ್ಯ ಆಚಾರಿಯ ಮಗಳೆಂದು. ನಾನು ಸೀದಾ ಗುಡ್ಡವಿಳಿದು ಕಾರು ಈಕಡೆಗೆ ಬಿಡಲು ಹೇಳಿದೆ.'

'ಅವನು ಬಹುಶಃ ಒಳಗಿದ್ದಾನು.'

ಎಲ್ಲರ ಚಹಾ ಮತ್ತು ಫಲಾಹಾರ ಆದಮೇಲೆ ಪದ್ಮ ಭವಾನಿಯನ್ನು ಕೇಳಿದ, 'ನೀನು ಮಾತನಾಡಲು ಇದೆ ಅಂದೆಯಲ್ಲ, ಏನದು?'

'ನಾನು ಈ ಸಲ ಹೆಚ್ಚು ದಿನ ಇರಲಾರೆ. ನಾಡಿದ್ದು ಮದುವೆ ಕಳೆದು ಎರಡು ದಿನದಲ್ಲಿ ವಾಪಸ್ಸು ಹೋಗ್ತೇನೆ. ಅಲ್ಲಿ ಕೆಲಸದವರು ಸರಿಯಾಗಿಲ್ಲ. ಈ ಸಲ ಮಕ್ಕಳನ್ನೂ ಕರೆದುಕೊಂಡು ಹೋಗ್ತೇನೆ. ಇನ್ನು ಎಷ್ಟು ಸಮಯಾಂತ ಅವರನ್ನು ಇಲ್ಲೇ ಬಿಡುವುದು? ಏನು ಹೇಳ್ತೀರಿ ಅತ್ತೆ?'

'ಮಕ್ಕಳು ತುಂಬ ಚಿಕ್ಕವರು. ಇನ್ನೂ ಎರಡು ವರ್ಷ ಕಳೆದು ಕರೆದುಕೊಂಡು ಹೋದರೆ ಆಗದೇ? ಈ ಸಲ ಭವಾನಿಯೂ ಹೋಗುತ್ತಾಳೆ. ನಾನು ಒಬ್ಬಳೇ ಇಷ್ಟು ದೊಡ್ಡ ಮನೆಯಲ್ಲಿ ಇರುವುದು ಹೇಗೆ ಪದ್ಮ?'

'ಅತ್ತೆ, ಇವತ್ತಲ್ಲದಿದ್ದರೆ ನಾಳೆ ಭವಾನಿ ಗಂಡನ ಮನೆಗೆ ಹೋಗುವವಳೇ. ನೀವು ಮಗನಿಗೆ ಮದುವೆ ಮಾಡಿಸಿ. ಅಲ್ಲಿಯವರೆಗೆ ಭವಾನಿಯೂ ಶಂಕರನೂ ನಿಮ್ಮ ಒಟ್ಟಿಗೆ ಇರ್ತಾರೆ. ಅಲ್ವಾ ಭವಾನಿ? ಇಷ್ಟು ದೊಡ್ಡ ಮನೆಯಲ್ಲಿ ಒಂದು ಬದಿಯಲ್ಲಿ ನೀವು ಮಾತನಾಡುವುದು ಅತ್ತೆಗೆ ಏನೂ ಕೇಳಿಸದು. ಏನು ಭವಾನಿ? ನೀವು ಎಷ್ಟಾದರೂ ಮಾತನಾಡಬಹುದು.'

'ಭಾವ, ನೀವು ತಮಾಶೆ ಮಾಡುವುದನ್ನು ಕಡಿಮೆ ಮಾಡಬೇಡಿ. ಆದರೆ ಅಮ್ಮ ಹೇಳುವ ಮಾತಿನ ಆಂತರ್ಯ ನಿಮಗೆ ಗೊತ್ತಾಗಲಿಲ್ಲ. ಅವರಿಗೆ ಮೊಮ್ಮಕ್ಕಳನ್ನು ಇಷ್ಟು ಬೇಗ ಬೊಂಬಾಯಿಗೆ ಕಳುಹಿಸಲು ಮನಸ್ಸಿಲ್ಲ.'

'ಇಷ್ಟು ಬೇಗ ಅಲ್ಲ. ಯಾವತ್ತಿದ್ದರೂ ಇವರು ನನ್ನ ಹತ್ತಿರ ಬರಬೇಕಾದವರೇ. ಅದರಲ್ಲಿ ಬೇಗ ಮತ್ತು ತಡ ಎಂಬ ಪ್ರಶ್ನೆ ಏನಿದೆ?'

'ನಿನಗೆ ಮಕ್ಕಳನ್ನು ನೋಡಿಕೊಳ್ಳಲು ವೇಳೆ ಎಲ್ಲಿದೆಯಪ್ಪ?' ಅಂತಕ್ಕ ಹೇಳಿದರು. 'ಅವರನ್ನು ನೋಡಿಕೊಳ್ಳುವುದಕ್ಕೇ ಒಬ್ಬರು ಬೇಕು. ಅಡಿಗೆ ಬೇರೆ ಮಾಡಬೇಕು. ಅವರ ತಲೆ ಮೈ ತೊಳೆದು ಬಟ್ಟೆಗಳನ್ನು ಒಗೆದು ಕಷ್ಟ ಸುಖ ನೋಡಬೇಕು. ಅದೆಲ್ಲ ಹೆಂಗಸರ ಕೆಲಸ.'

'ಹಣ ಕೊಟ್ಟರೆ ಹೆಂಗಸರು ಕೆಲಸಕ್ಕೆ ಸಿಗುವುದಿಲ್ಲವೇ? ಒಬ್ಬರಲ್ಲದಿದ್ದರೆ ಇಬ್ಬರನ್ನು ಇಟ್ಟುಕೊಳ್ಳಬಹುದು. ಅಡಿಗೆಗೂ ಮಕ್ಕಳನ್ನು ನೋಡುವುದಕ್ಕೂ.'

'ಅದು ಅಮ್ಮ ನೋಡಿದಂತೆ ಅಥವಾ ನಾವು ನಾವೇ ನೋಡಿದಂತೆ ಆಗುವುದಿಲ್ಲ.' ತಾನು ಆಡಿದ ಮಾತು ಎಲ್ಲಿಗೋ ತಗಲಿಹಾಕುತ್ತದೆಂದು ಯೋಚಿಸಿ ಅಂತಕ್ಕ ಮಾತು ನಿಲ್ಲಿಸಿದರು.

ಭವಾನಿ ಮಧ್ಯದಲ್ಲಿ ಮಾತನಾಡಿದಳು. ಅಮ್ಮನೂ ಭಾವನೂ ಮಾತನಾಡಿದರೆ ಇದು ಕೊನೆ ಮುಟ್ಟುವುದಿಲ್ಲವೆಂದು ಅವಳಿಗೆ ಅನಿಸಿತು.

'ಭಾವ ಅವರು ಈಗ ಚಿಕ್ಕವರು. ಇನ್ನು ನಾಲ್ಕೈದು ವರ್ಷ ಕಳೆದು ಅವರು ಸ್ವಲ್ಪ ದೊಡ್ಡವರಾದರೆ ತಮ್ಮ ಮೈಕೈ ನೋಡಿಕೊಳ್ಳಲು ಅವರಿಗೆ ಸಾಧ್ಯ. ನಿಮಗೂ ಕಷ್ಟವಾಗದು. ಬೊಂಬಾಯಿಯ ಮಾತುಂಗಾದಲ್ಲಿ ಕನ್ನಡ ಶಾಲೆ ಇದೆಯಂತಲ್ಲ..'

ಅಂತಕ್ಕ ಅವಳ ಮಾತುಗಳನ್ನು ಮುಂದುವರಿಸಿದರು. 'ಮಗೂ, ನೀನು ಯುವಕ. ಹೀಗೇ ಇರಲು ಸಾಧ್ಯವೇ? ನಮಗೆ ಋಣವಿರಲಿಲ್ಲ. ಅಂಥ ಒಳ್ಳೆಯ ಬದುಕು ನಮಗೆ ಯಾವತ್ತೂ ಇಲ್ಲ.'

'ಮಕ್ಕಳು ಚಿಕ್ಕವರಿರುವಾಗಲೇ ಅವರಿಗೆ ಇನ್ನೊಂದು ಅಮ್ಮನನ್ನು ತರುವುದು ಒಳ್ಳೆಯದು. ನಿನಗೂ ಅನುಕೂಲ. ಮಕ್ಕಳಿಗೆ ತಮ್ಮ ಮನೆ ಅಂಥ ಆಗ್ತದೆ. ಚಿಕ್ಕವರಾಗಿದ್ದರೆ ಮಕ್ಕಳು ಹೊಂದಿಕೊಂಡು ಹೋಗುತ್ತಾರೆ. ನೀನು ತಿಳಿದವ. ಏನಾಗಬೇಕೆಂದು ಯೋಚಿಸು. ಈಗ ಮಕ್ಕಳು ಇಲ್ಲೇ ಇರಲಿ.."

ಪದ್ಮ ಅವರ ಮಾತಿಗೆ ಪ್ರತಿಕ್ರಿಯಿಸಲಿಲ್ಲ. ಅವರ ಮಾತು ತಳ್ಳಿಹಾಕುವಂಥದ್ದಲ್ಲ. ಜೀವನದ ಅನುಭವದ ಮಾತುಗಳನ್ನು ಆತ ಹೇಳಿದ.

'ಅತ್ತೆ, ನೀವು ವ್ಯಥೆ ಪಡಬೇಡಿ. ಮಕ್ಕಳು ಇನ್ನೂ ಎರಡು ವರ್ಷ ಇರಲಿ. ಆಮೇಲೆ ಏನು ಬೇಕೋ ಮಾತನಾಡುವ.'

'ನಾನೀಗ ಒಮ್ಮೆ ಸೇನೆರ ಮೂಲೆಗೆ ಹೋಗಿ ಬರುತ್ತೇನೆ. ತ್ಯಾಂಪಣ್ಣನ ಹತ್ತಿರ ಮಾತನಾಡಬೇಕು. ನಾಳೆ ನಾಳೆ ಅನ್ನುವಾಗ ಮದುವೆ ಸಡಗರ. ನಾನು ಅಲ್ಲಿಗೆ

ಹೋಗಿ ನಾಳೆ ಬೆಳಿಗ್ಗೆ ಬರ್ತೇನೆ. ಮಕ್ಕಳು ಈಗ ನನ್ನ ಜೊತೆ ಬರಲಿ. ಅವರಿಗೂ ಕಾರಿನಲ್ಲಿ ಕುಳಿತುಕೊಳ್ಳಲು ಎಷ್ಟು ಆಸೆಯಾಗುತ್ತದೋ!'

* * * * *

ಶ್ರಾವಣದಲ್ಲಿ ಎಂಟು ಕಳೆಯವುದರೊಳಗೆ ಚಪ್ಪರದ ಕೆಲಸ ಮುಗಿಯಿತು. ಚಪ್ಪರದ ಅಂದ ಹೆಚ್ಚಲು ಕಂಗಿನ ಕಂಬಗಳಿಗೆ ತಾಳೆಯ ಗರಿಗಳನ್ನು ಕಟ್ಟಿ ಅಡಿಕೆಯ ಗೊನೆಯನ್ನು ತೂಗಿಸಿ ಮೇಲೆ ಮಾವಿನ ಎಲೆ ಕಟ್ಟಿದರು. ಜನರಿಗೆ ಕುಳಿತುಕೊಳ್ಳಲು ತಾಳೆಗರಿಯ ಚಾಪೆ ಹಾಸಿದರು. ಗುದ್ದಲಿ ಪೂಜೆ ಮಾಡುವ ಜಾಗದ ಸುತ್ತಲೂ ಸೆಗಣಿ ಹಾಕಿ ಗುಡಿಸಿ ಒಂದು ತಾಪಿಯನ್ನೂ ಒಂದು ಪಿಕ್ಕಾಸನ್ನೂ ಎರಡು ಕಲ್ಲುಗಳನ್ನೂ ಸಿದ್ಧ ಮಾಡಿದರು. ಅದರ ಮುಂದೆ ಸ್ವಲ್ಪ ಎತ್ತರದಲ್ಲಿ ಚಿಕ್ಕ ಜಗಲಿ. ಸಾಕಷ್ಟು ಜನರು ಸೇರುವ ಕಾರ್ಯಕ್ರಮ.

ಅಡಿಗೆಗಾಗಿ ದೊಡ್ಡ ದೊಡ್ಡ ಕಡಾರ, ಬೋಗುಣಿಗಳನ್ನು ಸಿದ್ಧ ಮಾಡಿದರು. ಬೊಳ್ಳೂರು ಪರಾರಿಯಲ್ಲದೆ ಸುತ್ತಲಿನ ನಾಲ್ಕು ಗ್ರಾಮಗಳಿಗೂ ಉಗ್ರಾಣಿ ಸೀನಸೆಟ್ಟಿ ಹೋಗಿ ಸಮುದಾಯ ಭವನದ ಗುದ್ದಲಿಪೂಜೆಯ ಆಮಂತ್ರಣವನ್ನು ಕೊಟ್ಟು ಕರೆದುಬಂದ.

ಸಂಜೆಯಾಯ್ತು. ಅಂತಕ್ಕ ಒಳಗೆ ಹೊರಗೆ ಎಡತಾಕತೊಡಗಿದರು. ಮೂರು ದಿನಕ್ಕೆ ಮೊದಲು ಮುದುಕ ರಾಮಪ್ಪ ಆಚಾರಿ, ಮಡಿವಾಳ ಮಾಂಕುಲ ಬಂದು ತ್ಯಾಂಪಣ್ಣ ಸಾಮನಿ, ಪದ್ಮ, ಮೈಂದಣ್ಣ ಸೇರಿ ಮುಂಜಾವದಲ್ಲಿ ತುಳಸಿ ಕಟ್ಟೆಯ ಎದುರು ಗಣಪತಿಯನ್ನು ಇಟ್ಟರು. ಕುಡಿಬಾಳೆಯೆಲೆಯಲ್ಲಿ ಜೀರಿಗೆಸಾಲಿ ಬೆಳ್ತಿಗೆ ಅಕ್ಕಿಯ ಮಧ್ಯದಲ್ಲಿ ಜುಟ್ಟಿನ ತೆಂಗಿನಕಾಯಿಯನ್ನಿಟ್ಟು ತೆಂಗಿನ ಸಿಂಗಾರವನ್ನೂ ಇಟ್ಟರು. ವೀಳ್ಯದೆಲೆ, ಅಡಿಕೆಗಳನ್ನು ಪಕ್ಕದಲ್ಲಿಟ್ಟರು.

ಶೀನ ತಂತ್ರಿಗಳು ಗಣಪತಿಯನ್ನಿಟ್ಟು ಸ್ವಸ್ತಿ ಮಂತ್ರ ಹೇಳಿದರು. ಅನಂತರ ಆಚಾರಿಯೂ ಮಡಿವಾಳರೂ ಸೇರಿ ಮುಹೂರ್ತದ ಕಂಬವನ್ನು ತುಳಸಿಕಟ್ಟೆಯ ಎದುರು ಊರಿದರು. ಬಿಳಿಯ ಹೊಂಗಾರೆಯ ಮರದಿಂದ ಮಾಡಿದ ಕಂಬ (ಈಶ್ವರನ ಕೈಯಲ್ಲಿರುವ ತ್ರಿಶೂಲದ ಆಕಾರದ ಕಂಬ). ಅದು ಶುಭಸೂಚಕವಾಗಿ ವಿಘ್ನನಿವಾರಕ ಗಣರಕ್ಷಣೆ ಕೊಡುವ ಗಣಪತಿಯನ್ನು ಧ್ಯಾನಿಸಿ ಯಾವುದೇ ವಿಘ್ನಗಳಿಲ್ಲದೆ ಕಾರ್ಯಕ್ರಮ ಶುಭವಾಗಿ ನೆರವೇರಲೆಂದು ಪ್ರಾರ್ಥಿಸಿ ಹಿರಿಯರೆಲ್ಲ ಕೈಮುಗಿದು ಊರುವ ರಕ್ಷಣೆಯ ಪ್ರತೀಕ. ಹಿಂದಿನಿಂದಲೇ ಬಂದ ಪದ್ಧತಿ.

ಮುಹೂರ್ತದ ಕಂಬ ಊರುವ ಮೊದಲು ತುಳಸಿಯ ಸುತ್ತಲೂ ಅಂತಕ್ಕ ತನಿಯರುವಿನಿಂದ ಗುಡಿಸಿದರು. ಸೆಗಣಿ ಪೂರ್ತಿ ಒಣಗದೆ ಅದು ಆಚೀಚೆ ನಡೆದಾಡುವ ಜನರ ಕಾಲಿಗೆ ಅಂಟಿ ಎದ್ದು ಹೋಗಿತ್ತು. ಹೋಗಿರುವುದರ ಮೇಲೆ ಮತ್ತೆ ಸ್ವಲ್ಪ ತೆಳುವಾಗಿ ಗುಡಿಸಲು ಹೇಳಿದರು.

'ನಿನ್ನೆ ಗುಡಿಸಿದ್ದು. ನನ್ನ ಸೊಂಟ ಇನ್ನೂ ನೆಟ್ಟಗಾಗಿಲ್ಲ. ಈಗ ಮತ್ತೆ ಗುಡಿಸಬೇಕೇ ಅಮ್ಮಾವ್ರೇ?'

'ನಿನ್ನೆ ಗುಡಿಸಿದ್ದರಿಂದ ದಪ್ಪಗೆ ಗುಡಿಸುವುದು ಬೇಡ. ತುಳಸಿಯ ಸುತ್ತ ತೆಳ್ಳಗೆ ಗುಡಿಸಿ ಬಿಡು. ಉದಾಸೀನ ಮಾಡಬೇಡ. ನಿನ್ನೆ ಚಪ್ಪರ ಹಾಕುವ ಕೆಲಸದಿಂದ ಅಷ್ಟು ಗುಡಿಸಿದ್ದು ದಂಡವಾಯ್ತು.'

ಅವರ ಮಾತುಕತೆ ನಡೆಯುವಾಗ ಶಂಕರ ಮೊಗಸಾಲೆಯ ಚಾವಡಿ ಇಳಿದು ಅಂಗಳ ದಾಟಿದ್ದು ಅಂತಕ್ಕನಿಗೆ ಗೊತ್ತಾಗಲಿಲ್ಲ.

ಆತ ಸೀದ ಚಾವಡಿಯ ಎದುರಿನಿಂದ ಜಗಲಿಯ ಬದಿಗೆ ಹೋದ. ಚಾವಡಿಯ ಬದಿಯಲ್ಲಿ ನೋಡಿದಾಗ ಭವಾನಿ ಒಂದು ಪಂಚೆಯುಟ್ಟು ಹಣತೆ, ಭೂತದ ಎದುರು ನೀರು ತುಂಬಿಸಿಡುವ ಕೊಂಬಿನ ಗಿಂಡಿ ಮುಂತಾದುವನ್ನೆಲ್ಲ ತೊಳೆಯಲು ಕೈಬುಟ್ಟಿಯಲ್ಲಿ ಹಾಕುತ್ತಿದ್ದಳು. ಹತ್ತಿರದಲ್ಲಿ ಒಳಕೋಣೆಯ ನಾಲ್ಕು ಕಪ್ಪಾದ ಗರುಡದೀಪಗಳು, ಉದ್ದದ ಮರದ ಹಿಡಿಯುಳ್ಳ ಕೈದೀಪ ಎಲ್ಲವನ್ನೂ ಇಟ್ಟುಕೊಂಡಿದ್ದಳು. ಎಲ್ಲವನ್ನೂ ತೊಳೆದು ಶುಭ್ರಗೊಳಿಸಲು ಇವಳು ಹೊರಟಿದ್ದಾಳೆಂದು ಅವನಿಗೆ ಅನ್ನಿಸಿತು. ಹೆಸರು ಹಿಡಿದು ಕರೆದರೆ ಈ ಹೊತ್ತಿನಲ್ಲಿ ಇದೇನಿಷ್ಟು ಸಲಿಗೆ ತೋರಿಸುತ್ತಾರೆ ಅಂತ ಭಾವಿಸುತ್ತಾಳೆ. ಅಲ್ಲದೆ ಒಳಗೆ ತುಂಬ ಜನ ನೆಂಟರು ಇದ್ದರೆ ಇದ್ಯಾವ ಸೀಮೆ ಸಲಿಗೆ ಅಂತ ತಪ್ಪು ತಿಳಿದುಕೊಳ್ಳುತ್ತಾರೆ. ಅದಕ್ಕೆ ಒಂದು ಪುಟ್ಟ ಉಸಿರು ತೆಗೆದು ಕೆಮ್ಮಿದ. ಹುಂ, ಹುಂ ಅಂತ ಕಂಠ ಸರಿಮಾಡಿದ.

ಗಂಡಸರ ಸ್ವರ ಕೇಳಿದ್ದೇ ಬೆನ್ನು ಹಾಕಿ ದೀಪಗಳನ್ನು ಜೋಡಿಸಿಡುತ್ತಿದ್ದ ಭವಾನಿ ಯಾರು ಬಂದರಪ್ಪ ಎಂದು ತಿರುಗಿ ನೋಡಿ, ಅಂಜಿದರೂ ಅವನನ್ನು ನೋಡಿದ ಸಂತೋಷದ ಮುಗುಳ್ನಗು ಮುಖದಲ್ಲಿ ಅರಳಿತು.

'ಅಮ್ಮ ಎಲ್ಲಿದ್ದಾರೆ?' ಗೆಲುವಿನ ಸಂತೋಷದಲ್ಲಿ ಮೆಲ್ಲನೆ ಕೇಳಿದ.

ಅಂತಕ್ಕ ಗಮನಿಸದಿದ್ದರೂ ಅವರ ಎದುರು ಪೊರಕೆ ಹಿಡಿದು ನಿಂತಿದ್ದ ತನಿಯರು ಅವನನ್ನು ನೋಡಿದಳು.

'ಅದೋ ನೋಡಿ ಅಮ್ಮಾವ್ರೇ, ಮದುಮಗ ಚಾವಡಿಗೆ ಹೋದರು' ಆಕೆ ಹೇಳಿದಳು.

'ಯಾರು ಶಂಕರ ಬಂದನಾ?' ಅನ್ನುತ್ತ ಅವಳ ವಿಚಾರಣೆಯನ್ನು ಕೈಬಿಟ್ಟು ಅಂತಕ್ಕ ಬಿಸಬಿಸನೆಂದು ಹೆಜ್ಜೆ ಹಾಕಿ ಚಾವಡಿಯತ್ತ ಸಾಗಿದರು. ಜಗಲಿಯ ಬದಿಗೆ ಕಾಲಿಟ್ಟಾಗ ಭವಾನಿ ಅಂಗಳದತ್ತ ಕೈತೋರಿಸಿದ್ದು ಕಾಣಿಸಿತು. ಮಾತಿಲ್ಲ. ಆತನೂ ಮಾತಿಲ್ಲದೆ ಕಣ್ಣಲ್ಲೇ ನಗುತ್ತ ಅವಳನ್ನು ನೋಡುತ್ತಿದ್ದ. ಅಂತಕ್ಕನ ಮನಸ್ಸಿನಲ್ಲೂ ಸಂತೋಷ ಉಕ್ಕೇರಿತು. ಮಾತನಾಡದಿದ್ದರೆ ಇಬ್ಬರಿಗೂ ಗೊತ್ತಾಗುವುದಿಲ್ಲವೆನಿಸಿತು. 'ಏನಪ್ಪಾ, ಇಷ್ಟು ಅವಸರದಲ್ಲಿ ಬಂದೆ?' ಗಟ್ಟಿಯಾಗಿ ಕೇಳಿದರು.

ಶಂಕರ ಮೆಲ್ಲನೆ ತಿರುಗಿ ಹೇಳಿದ. 'ನಿಮ್ಮ ಹತ್ತಿರ ಒಂದು ವಿಷಯ ಮಾತನಾಡುವುದಿತ್ತು. ಅವಳಲ್ಲಿ ಕೇಳಿದರೆ ಅಂಗಳದತ್ತ ಕೈತೋರಿಸಿದಳು.'

‘ನಾನು ಅಂಗಳದಲ್ಲೇ ಇದ್ದೆ. ಕರುವದಿಗೆಯ ಹತ್ತಿರ ಅಂಗಳಕ್ಕೆ ತೆಳ್ಳಗೆ ಸೆಗಣಿ ಗುಡಿಸಲು ಹೇಳುತ್ತಿದ್ದೆ.’

‘ಸರಿ. ನಾನು ಬಂದ ಕಾರಣವೇನೆಂದರೆ ನಾಳೆಯ ಕಾರ್ಯಕ್ರಮದ ವಿವರವನ್ನು ಕೇಳಲು. ಮೊನ್ನೆ ಕರಿಮಣಿ ತರಲು ಮಂಗಳೂರಿಗೆ ಹೋಗಿದ್ದಾಗ ಮೈಂದಣ್ಣ ಕರಿಮಣಿ ನೀವೇ ಹಾಕುವುದೆಂದು ಹೇಳಿದರು. ಅದು ಬೇಡ ನಾನೆ ಹಾಕುತ್ತೇನೆ ಅಂದೆ. ಬೇರೆ ಏನೆಲ್ಲ ಕ್ರಮಗಳಿವೆ. ಅವರಿಗೆ ಸರಿಯಾಗದು. ಅದನ್ನೆಲ್ಲ ಅಮ್ಮನಲ್ಲೇ ಕೇಳಿ ಅಂದರು. ಅವು ಎಂಥ ಕ್ರಮಗಳು? ನಾನು ಊರು ಬಿಟ್ಟು 10–15 ವರ್ಷಗಳೇ ಕಳೆದುವು. ಹೋಗುವಾಗ ಹುಡುಗ. ಹಾಗಾಗಿ ನಮ್ಮ ಕ್ರಮಗಳಾವುವೂ ನನಗೆ ಗೊತ್ತಿಲ್ಲ.’

‘ನಾಳೆ ನೀನೇ ಮಾಡುವಂಥ ದೊಡ್ಡ ಸಂಗತಿಗಳು ಯಾವುದೂ ಇಲ್ಲ. ಇವತ್ತು ರಾತ್ರಿ ಮದುಮಗಳಿಗೆ ಕೈಗೂ ಕಾಲಿಗೂ ಮದರಂಗಿ ಹಚ್ಚುತ್ತಾರೆ. ನಿನಗೂ ಸ್ವಲ್ಪ ಕೈಗೆ ಹಾಕಬೇಕು. ಬೆಳಗ್ಗೆ ತಲೆಗೆ ಸ್ನಾನಮಾಡಿ ದೈವ ದೇವರುಗಳಿಗೆ ಕೈಮುಗಿಯಬೇಕು. ಆಮೇಲೆ ಮದುಮಗಳನ್ನು ಅಲಂಕರಿಸಬೇಕು.’

‘ಹೇಗೆ? ತಲೆಗೆ ಒಂದು ಕಟ್ಟು ಮಲ್ಲಿಗೆ ಹೂವು ಮುಡಿಸಿ ಮುಖಕ್ಕೆ ಪೌಡರ್ ಮೆತ್ತಿ ಬಾಯಿಗೆ ಕೆಂಪು ಹಚ್ಚಿ ಕಣ್ಣಿಗೆ ಕಪ್ಪು ಎಳೆದು ದಸರಾ ವೇಷದಂತೆ ಮಾಡಿಬಿಡಬೇಡಿ.’

ಅಷ್ಟು ಹೊತ್ತೂ ಭವಾನಿ ಮೌನವಾಗಿ ಅವರು ಮಾತನಾಡುವುದನ್ನು ಕೇಳುತ್ತ ಕುಳಿತಿದ್ದವಳು ಈಗ ತಲೆಯೆತ್ತಿ ಅವನನ್ನು ನೋಡಿದಳು. ‘ನಿಮ್ಮ ನಿತ್ಯ ಉಡುವ ಮಗ್ಗದ ಸೀರೆಯಲ್ಲಿ ಒಂದು ಎಸಳು ಮಲ್ಲಿಗೆ ಮುಡಿದು ಹೊರಟರೆ ಸಾಕೇ? ಕೇಳಿ ಅಮ್ಮ’ ಅಂದಳು.

‘ಅವನು ಹಾಗೆ ಹೇಳಿದ್ದಲ್ಲ ಭವಾನಿ. ವಿಶೇಷ ವೇಷ ಕಟ್ಟಬೇಡಿ. ಮದುವೆ ಹೆಣ್ಣು ನಿರಾಭರಣೆಯಾಗಿರಲಿ ಎಂದು ಹೇಳಿದ್ದು’ ಅಂತಕ್ಕ ಮಗಳನ್ನು ಸಮಾಧಾನ ಮಾಡಲು ನೋಡಿದರು.

‘ಅಂದ ಹಾಗೆ ಶಂಕರಾ’

ಅವನು ಮಧ್ಯದಲ್ಲೇ ಹೇಳಿದ. ‘ಇನ್ನೂ ಸ್ವಲ್ಪ ಹೇಳುವುದಕ್ಕಿದೆ. ದೊಡ್ಡ ದೊಡ್ಡ ಜರಿಯ ಜರತಾರೀ ಸೀರೆಯನ್ನು ಉಡಿಸಬೇಡಿ. ಮದುವೆ ಆದಷ್ಟು ಸರಳವಾಗಿ ಆಗಿ ಹಣ ಪೋಲಾಗದೆ ಆಗಬೇಕೆಂದು ನನ್ನ ಇಬ್ಬರು ಗುರುವರ್ಯರೂ ಹೇಳಿದ್ದಾರೆ. ಅವರಿಗೆ ನಾನು ಮನಸ್ಸಿನಲ್ಲೇ ಮಾತು ಕೊಟ್ಟಿದ್ದೇನೆ. ಮದುವೆಯಾಗುವುದಿದ್ದರೆ ಹಾಗೆಯೇ ಆಗುತ್ತೇನೆ. ಆ ಗುರುವರ್ಯರ ಹೆಸರು ಸಾವಿತ್ರೀಬಾಯಿ ಫುಲೆ, ಮಂದಾಕಿನೀ ತಾಯಿ ಅಠವಳೆ. ಅದನ್ನು ಭಾವಿಸಿ ಆಡಂಬರವನ್ನೇನೂ ಮಾಡಬೇಡಿ. ಇನ್ನು ಯಾರ್ಯಾರಿಂದಲೋ ಬಂಗಾರದ ಆಭರಣ ತಂದು ಅವಳಿಗೆ ಸುರಿಯಬೇಡಿ. ದಯವಿಟ್ಟು ನಾನು ಹೇಳಿದ ಹಾಗೆ ಮಾಡಿ.’

‘ಆಯ್ತಪ್ಪಾ. ನಿನ್ನ ಮನಸ್ಸಿಗೆ ವಿರುದ್ಧವಾಗಿ ಏನೂ ಮಾಡುವುದಿಲ್ಲ. ನಮ್ಮ ಮನೆಯಿಂದ ಮದುಮಗಳನ್ನು ಹೊರಡಿಸುವಾಗ ನಮ್ಮ ಹಿರಿಯಾಕೆಯ ಮದುವೆಯ ಧಾರೆ ಸೀರೆ

ಇದ್ದರೆ ಅದನ್ನು ಉಡಿಸುತ್ತೇವೆ. ಸರಸುವಿಗೂ ನಾವು ಹಾಗೆಯೇ ಮಾಡಿದ್ದೇವೆ.'

'ಅದು ಯಾವ ಸೀರೆ?'

'ಅದು ಹಳೆಯ ಕುತ್ತಾಲದ ಕೋರನಾಡು ಸೀರೆ. ನೇರಳೆ ಬಣ್ಣದ ಒಡಲಿಗೆ ಅಡ್ಡಕ್ಕೂ ಉದ್ದಕ್ಕೂ ಜರಿಯ ಗೆರೆ ಇರುವುದು. ಅದರ ಅಂಚು ಎರಡು ಕೈ ಬಿಡುವಷ್ಟು ಅಗಲ, ಗುಲಾಬಿ ಬಣ್ಣದ್ದು. ಅದಕ್ಕೆ ಎರಡು ಸಾಲು ಮೇಲೆ ಕೆಳಭಾಗಕ್ಕೆ ಜರಿಯ ಕಿರುಬೆರಳಿನ ಅಗಲದ ಜರಿಯ ಸರಪಳಿ ನೇಯ್ಗೆ. ಅದಲ್ಲದೆ ನನ್ನ ಅಮ್ಮ ರುಕ್ಕಕ್ಕ ಅವಳಿಗೆಂದೇ ಕುತ್ತಿಗೆಗೆ ಮಾಡಿಸಿಟ್ಟ ಎರಡೆಳೆಯ ಗುಂಡು ಮಣಿಯ ಗೆಜ್ಜೆ ಟೀಕ್. ಕೈಗೆ ಎರಡು ಜತೆ ಅಪ್ಪದ ಬಳೆ. ಕಿವಿಗೆ ಪದ್ಮ ತಂದಿರುವ ಮುತ್ತಿನ ಬೆಂಡೋಲೆ. ಅದಕ್ಕೆ ನನ್ನ ಮುತ್ತಿನ ಕೊಪ್ಪು. ಬಲಗೈಯ ಬೆರಳಿಗೆ ಒಡ್ಡು ಉಂಗುರ, ಎಡಗೈ ಬೆರಳಿಗೆ ಕೆಂಪು ಉಂಗುರ.

'ಮತ್ತೆ ಬೇರೇನಿದೆ ಹೆಚ್ಚು? ಒಡ್ಡುಂಗುರ ಹಾಕ್ತೀರಲ್ಲ. ಅದು ಸಾಲದೇ? ಮೈಸೂರು ದಸರದ ಆನೆಯ ಅಲಂಕಾರ ಆಯ್ತು. ನಾನು ಹೀಗೆ ಹೇಳ್ತೇನೆಂದು ಬೇಸರ ಮಾಡಬೇಡಿ.' (ಅವನ ಈ ಮಾತು ಎಲ್ಲರಿಗೂ ಅನ್ವಯಿಸುವ ವಿಚಾರ)

'ಇಲ್ಲಪ್ಪ, ನೀನು ಏನು ಹೇಳಿದರೂ ಅದನ್ನು ನಾವು ಕೇಳಲೇಬೇಕಲ್ಲ.'

'ಅಲ್ಲ, ಇಷ್ಟು ಅಲಂಕಾರ ಮಾಡಿಕೊಂಡು ಹೊರಟಾಗ ಪದವಿಗೆ ಬಂದ ಮೇಲೆ ಒಮ್ಮೆ ಎಲ್ಲರೂ ನೋಡುತ್ತಾರೆ ಅಲ್ಲವೇ. ಹಾಗಿರುವಾಗ ಸ್ಟೋರಿಗೆ ಬಂದಮೇಲೆ ಅಲ್ಲಿ ಕುಳ್ಳಿರಿಸಿ ಆ ದಿಬ್ಬಣದ ಸೀರೆಯನ್ನು ಬಿಚ್ಚಿಸಿ. ನನ್ನ ಸಾಕುತಾಯಿ ಮಂದಾಕಿನಿ ಅಠಾವಳೆ.. ಓ ಅವರು ಯಾರೂಂತ ನಿಮಗೆ ವಿವರಿಸಿಲ್ಲ..!'

ನಾನು ನಾಗಪುರದ ಸಬರ್ಮತಿ ಆಶ್ರಮದಲ್ಲಿದ್ದಾಗ ನನಗೊಮ್ಮೆ ಜೋರಾದ ಕಾಯಿಲೆ ಬಂತು. ಆಗ ಆ ಮಂದಾಕಿನಿ ಅಮ್ಮ ನನ್ನನ್ನು ಉಪಚರಿಸಿದರು. ನಿದ್ರೆಗೆಟ್ಟು ನನ್ನ ಹತ್ತಿರದಲ್ಲೇ ಕುಳಿತು ಬದುಕಿಸಿದರು. ನಾನು ಐ.ಎನ್.ಎ. ಯುದ್ಧವಾಗಿ ಬರ್ಮಾದಿಂದ ವಾಪಸ್ಸಾಗುವಾಗ ಅವರನ್ನು ನೋಡಲು ಹೋದೆ. ಆಗ ಅವರು ಮಹರ್ಷಿ ಫುಲೆ ಅವರ ಸತಾರದ ಆಶ್ರಮದಲ್ಲಿದ್ದರು. ಸಾವಿತ್ರಿ ಬಾಯಿ ಫುಲೆಯವರು ಅವರನ್ನು ಮಗ್ಗದ ನೇಯ್ಗೆಯ ಉಸ್ತುವಾರಿಗೆ ನೇಮಿಸಿದ್ದರು. ನಾನು ಅವರನ್ನು ಕಾಲು ಕುಂಟುತ್ತ ನೋಡಲು ಹೋದಾಗ ಕಣ್ಣಿನಲ್ಲಿ ನೀರು ತುಂಬಿ ಅವರು ಹೇಳಿದರು. 'ಮಗೂ, ಎಲ್ಲಾದರೂ ದುಡಿದು ಬದುಕು. ನಿನಗೆ ಒಳ್ಳೆಯದಾಗಲಿ.'

ಅನಂತರ ಅಲ್ಲಿದ್ದ ಹೆಣ್ಣುಮಕ್ಕಳು ನೇಯ್ದ ಸಿಲ್ಕ್ ಸೀರೆಯನ್ನು ಕೊಟ್ಟು 'ಇದನ್ನು ನೀನು ಮದುವೆಯಾಗುವ ಹುಡುಗಿಗೆ ಕೊಡು. ನಿನ್ನ ದಾಂಪತ್ಯ ಸುಖಕರವಾಗಲಿ. ಅದರಲ್ಲಿ ನಿನಗೆ ಸದಾ ಶಾಂತಿ, ಆರೋಗ್ಯ, ಸಮೃದ್ಧಿಗಳು ಸಿಗಲಿ ಎಂದು ಆಶೀರ್ವದಿಸಿದರು.'

ಇವತ್ತು ನಾನು ಸಂಸಾರ ಬಂಧನಕ್ಕೆ ಕಾಲಿಡಲು ನಿರ್ಧಾರ ಮಾಡಿದ್ದೇನೆ. ಎಲ್ಲರ ಸಮಕ್ಷಮದಲ್ಲಿ ಸಾವಿತ್ರಿಬಾಯಿ ಫುಲೆಯವರನ್ನೂ ಮಂದಾಕಿನಿ ಅಠಾವಳೆಯವರನ್ನೂ ಸ್ಮರಿಸುತ್ತಿದ್ದೇನೆ. ಆ ಅಮ್ಮ ಕೊಟ್ಟ ಸೀರೆಯಲ್ಲೇ ನನ್ನ ಕೈಹಿಡಿಯುವ ಹೆಣ್ಣು ಧಾರೆಯ

ಹಸೆಮಣೆಗೆ ಬರಬೇಕು. ಏನು ಹೇಳ್ತೀರಿ ಅತ್ತೆ?'

'ಅಯ್ಯೋ, ನಾನು ಹೇಳುವುದಕ್ಕೆ ಏನು ಬಾಕಿ ಇದೆ ಕಂದಾ. ನಿನಗೆ ಮೆಚ್ಚಿಕೆಯಾಗುವ ರೀತಿಯಲ್ಲೇ ನಿನ್ನ ಮಡದಿ ಇರಬೇಕು. ಹಾಗೆಯೇ ಮಾಡುವ. ಏನು ಭವಾನಿ? ಆಗಬಹುದಲ್ಲ?'

'ನನಗೆ ಆಗಬಹುದು... ಕಣ್ಣಿಗೆ ಹಾಕುವ ಕಾಡಿಗೆಯನ್ನು ಮುಖಕ್ಕೆ ಬಳಿದುಕೊಂಡು ಬರಬೇಕಾ ಕೇಳಿ.'

'ಅದು ದಸರಾದ ವೇಷದಲ್ಲಿ ಇನ್ನೊಂದು ಹೊಸವೇಷ ಆಗ್ತದೆ.'

'ಮದುಮಗಳು ಮಸಿ ಹಚ್ಚಿಕೊಂಡು ಬಂದರೆ ಮದುಮಗ ಊರು ಬಿಟ್ಟು ಓಡಿದ ಎಂದು ಮರುದಿನ ನಾಲ್ಕು ಊರಿನವರೂ ಮಾತನಾಡ್ತಾರೆ... ಅತ್ತೆ... ನಾನು ಬರ್ತೇನೆ..' ಶಂಕರ ಭವಾನಿಯನ್ನು ನೋಡಿ, ಅಂತಕ್ಕನಿಗೆ ಬೆನ್ನು ಹಾಕಿ ಕಣ್ಣುಮಿಟುಕಿಸಿ ಇಳಿದು ಹೋದ. ಭವಾನಿಗೆ ಅವಮಾನವಾಯ್ತು. ಶಂಕರ ತನ್ನನ್ನು ಕೀಳಾಗಿ ಭಾವಿಸಿದನೆಂದು ತೋರಿತು. ಅಮ್ಮನ ಹತ್ತಿರ ಏನೂ ಮಾತನಾಡದೆ ಕೈಬುಟ್ಟಿ ಹಿಡಿದುಕೊಂಡು ಕೆರೆಯ ಬದಿಗೆ ಹೋದಳು. ದೂರದಲ್ಲಿ ಶಂಕರ ಬಾಕಿಮಾರಿನ ಬದಿಯಲ್ಲಿ ಹೋಗುವುದು ಕಾಣಿಸಿತು. ಆಗ ಸಕತ್ ಕೋಪ ಬಂದಿದ್ದರೂ ಈಗ ಆತನ ಕುಚೋದ್ಯವನ್ನು ಎಣಿಸಿ ನಗುಬಂತು. ಬಡ್ಡಿ ಸಮೇತ ತೀರಿಸೋಣ, ನೀವು ಎಲ್ಲಿಗೆ ಹೋಗ್ತೀರಿ ಎಂದು ಯೋಚಿಸುತ್ತ ಖುಷಿಪಟ್ಟಳು.

* * * * *

ಶ್ರಾವಣದ ಒಂಬತ್ತನೆಯ ದಿನ. ಗುತ್ತಿನಲ್ಲಿ ಮುನ್ನಾದಿನ ಸಂಜೆಯಿಂದಲೇ ಸಂಭ್ರಮ, ಸಡಗರ. ಬಂಧುಬಳಗವೆಲ್ಲ ಸೇರಿದ್ದರು. ಸರಸುವಿನ ಸಾವಿನ ಬಳಿಕ ಯಾವ ಒಳ್ಳೆಯ ಕಾರ್ಯವೂ ಆ ಮನೆಯಲ್ಲಿ ನಡೆದಿರಲಿಲ್ಲ. ಮದುವೆಯಾಗುವುದಿಲ್ಲವೆಂದು ಹುಡುಗಿ ಹಟಹಿಡಿದು ಕುಳಿತಿದ್ದಾಳೆಂದು ಊರವರೆಲ್ಲ ಬಾಯಿಗೆ ಬಂದಂತೆ ಆಡಿಕೊಳ್ಳುತ್ತಿದ್ದರು. ಅದು ಸುಳ್ಳಾಗಿತ್ತು. ಎಲ್ಲರಿಗೂ ಸಂತೋಷವೇ ಸಂತೋಷ.

ಮುಂಜಾವದಲ್ಲೇ ದಿಬ್ಬಣ ಹೊರಡುವ ಅವಸರದ ತಯಾರಿ. ಹೆಂಗಸರೆಲ್ಲ ಸೇರಿ ಮದುಮಗಳನ್ನು ಹೊರಡಿಸಿದರು. ಭವಾನಿ ದೆಯ್ಯಕ್ಕನಲ್ಲಿ ಮೆಲ್ಲ ಹೇಳಿದಳು, 'ಹೂ ಕಡಿಮೆ ಮುಡಿಸಿ. ಮಲ್ಲಿಗೆ ಮಾತ್ರ ಸಾಕು.'

'ಅದ್ಯಾಕೋ? ಇವತ್ತೂ ಸೀಮಂತದ ದಿವಸವೂ ಹೆಣ್ಣಿಗೆ ಧಾರಾಳ ಹೂ ಮುಡಿಯುವ ಅವಕಾಶ. ನೀನ್ಯಾಕೆ ಹಾಗನ್ನುವುದು? ತುಂಬ ಹೂ ಮುಡಿಸಿ ತಲೆನೋವು ತರಿಸುವುದಿಲ್ಲ. ಇಷ್ಟು ದುಡ್ಡು ಕೊಟ್ಟು ಉಡುಪಿಯ ಶಂಕರಪುರದಿಂದ ತರಿಸಿದ ಮಲ್ಲಿಗೆ. ಇಷ್ಟು ದಪ್ಪವಾಗಿ ಕಟ್ಟಿಸಿ ತಂದಿದ್ದಾರೆ. ಸ್ವಲ್ಪ ಹೆಚ್ಚು ಮುಡಿದರೆ ಏನಾಗುತ್ತದೆ?' ಅಂತ ಎಲ್ಲ ಹೆಂಗಸರೂ ಹೇಳಿದರು.

'ತುಂಬ ಹೂ ಮುಡಿಸಬೇಡಿ ಅಂದಿದ್ದಾನೆ ಶಂಕರ ನನ್ನ ಹತ್ತಿರ.' ಅಷ್ಟಾಗುವಾಗ

ಅಂತಕ್ಕ ಹೇಳಿದರು. 'ಓ ಭವಾನಿಗೆ ಸರಿಯಾದ ಮೂಗುದಾರ ಸಿದ್ಧವಾಯ್ತೆ'ಂದು ಹೆಂಗಸರೆಲ್ಲ ಯೋಚಿಸಿದರು. ಕೆಲವರು ಅದನ್ನು ಬಾಯಿಬಿಟ್ಟೇ ಹೇಳಿದರು.

ಮದುಮಗಳಿಂದ ತುಳಸಿಗೆ ದೀಪ ಹಚ್ಚಿಸಿ ಉಯ್ಯಾಲೆಗೆ ಕೈಮುಗಿಯಲು ಹೇಳಿದರು. ಪಂಚಲಿಂಗೇಶ್ವರ ಗ್ರಾಮದೇವರಿಗೂ ಮಠದ ಗಣಪತಿ ದೇವರಿಗೂ ಪಂಚಾಮೃತ ಅಭಿಷೇಕ. ಜುಮಾದಿ, ಪಂಜುರ್ಲಿ ಮತ್ತು ಗ್ರಾಮದ ದೈವಗಳಿಗೆ ಕೋಲ–ಹೀಗೆ ಹರಕೆ ಹೇಳುವವರಿಂದ ಹರಕೆ ಹೇಳಿಸಿ ಹಿರಿಯರು ಕೈಮುಗಿದರು. ಕುರ್ಚಿ ಇಟ್ಟು ಮದುಮಗಳನ್ನು ಕುಳ್ಳಿರಿಸಿ ದೇವಣ್ಣ ಚೌಟರ ಹೆಂಡತಿ ಕಾಲುಂಗುರ, ಒಡ್ಡುಂಗುರಗಳನ್ನು ಹಾಕಿದರು. ಅನಂತರ ಹನ್ನೊಂದು ಪವನಿನ ರುಕ್ಕಕ್ಕನ ಗೆಜ್ಜೆಟೀಕನ್ನು ಕೊರಳಿಗೆ ಹಾಕಿದರು. ಮುತ್ತಿನ ಬೆಂಡೋಲೆಯನ್ನೂ ಕೊಪ್ಪು ಬುಗುಡಿಗಳನ್ನೂ ಹಾಕಿದರು. ಅನಂತರ ಮದುಮಗಳ ಹಣೆಗೆ ಕುಂಕುಮ ಇಡುವಾಗ ಅಂತಕ್ಕನನ್ನು ಕರೆದು 'ಕರಿಮಣಿ ಕೊಡಿ ಅತ್ತಿಗೆ' ಅಂದರು. ಅಂತಕ್ಕ ಪಾಪ, ಈ ಹೊಸಕ್ರಮದಲ್ಲಿ ತುಂಬ ಇಕ್ಕಟ್ಟಿಗೆ ಸಿಕ್ಕಿದರು. ಆಮೇಲೆ ಹೇಳಲೇಬೇಕಾಯ್ತು.

'ಕರಿಮಣಿ ನಾವು ಕಟ್ಟುವುದಿಲ್ಲ ಅಕ್ಕ. ಅದನ್ನು ಶಂಕರನೇ ಧಾರೆ ಆಗುವಾಗ ಕಟ್ತಾನಂತೆ.'

'ಅಯ್ಯಯ್ಯ, ನಾವೇನು ಮಕ್ಕಳ ಕಟ್ಟಿನವರಾ, ಬ್ರಾಹ್ಮಣರು, ಕೊಂಕಣಿಗಳ ಹಾಗೆಯಾ? ಇದೇನು ಹೊಸ ಪದ್ಧತಿ?'

'ಸ್ವಾತಂತ್ರ್ಯ ಸಿಕ್ಕಿದ ಮೇಲೆ ಊರೇ ಹೊಸದಾಯ್ತು. ಮದುವೆಯ ಕ್ರಮವನ್ನು ಯಾಕೆ ಉಳಿಸಬೇಕು?' ಯಾರೋ ಹೆಂಗಸು ಹೇಳಿದರು.

ಇನ್ನೊಬ್ಬಾಕೆ, 'ಹೆಣ್ಣಿನ ಮನೆಯವರಿಗೆ ಖರ್ಚು ಸ್ವಲ್ಪ ಕಡಿಮೆಯಾಯ್ತು.' ಅಂದರು.

ಎಲ್ಲರ ಹಿರಿಯರ ಕಾಲುಗಳಿಗೂ ನಮಸ್ಕರಿಸಿ ಮದುಮಗಳು ಹೊರಡಲು ಸಿದ್ಧಳಾದಳು.

ಎಂಟೂವರೆ ಗಂಟೆಗೆ ದಿಬ್ಬಣ ಹೊರಟಿತು. ಸುಲೇಮಾನ್ ಬ್ಯಾರಿಯ ಗರ್ನಾಲು, ವಾದ್ಯದ ಓಮಯನ ನಾಗಸ್ವರ, ಬ್ಯಾಂಡಿನ ಜಾನಿಯ ಕ್ಲಾರಿನೆಟ್ ಮೇಳದ ಗೌಜಿಯಲ್ಲಿ ದಿಬ್ಬಣ ಒಂಬತ್ತು ಗಂಟೆಗೆ ಪದವಿಗೆ ತಲಪಿತು. ಮದುಮಗಳು ಸ್ಟೋರಿನಲ್ಲಿ ಕುಳಿತ ಕೂಡಲೇ ಅಲ್ಲಿಗೆ ಪಾನಕದ ಕಟಾರ ಬಂತು. ಮದುಮಗಳು ಪದ್ಮನ ಸ್ಟುಡ್‌ಬೇಕರ್ ಕಾರಿನಲ್ಲಿ ಅವನ ಇಬ್ಬರು ಮಕ್ಕಳೊಂದಿಗೆ ಕುಳಿತು ಬಂದಳು. ಬಾಯಾರಿಕೆಯಾದರೂ ತೋರಿಕೆಯ ನಾಚಿಕೆಯಿಂದ ಮದುಮಗಳು ಅದನ್ನು ಹೇಳುವ ಹಾಗಿಲ್ಲ. ಅಲ್ಲಿಗೆ ಪದ್ಮ ಶಂಕರ ಕೊಟ್ಟ ಸೀರೆಯ ಗಂಟನ್ನು ತಂದು ಅದರ ಮೇಲೆ ಒಂದು ಪುಟ್ಟ ಮಲ್ಲಿಗೆ ಹಾರವನ್ನೂ ಇಟ್ಟು ಕೊಟ್ಟ. ಅದನ್ನು ಭವಾನಿಯ ಕೈಯಲ್ಲಿ ಕೊಡಲು ದೆಯ್ಯಕ್ಕನಿಗೆ ಹೇಳಿದ.

'ಅದರಲ್ಲಿ ಒಂದು ಬೆಳ್ಳಿಯ ಡಬ್ಬಿಯಲ್ಲಿ ಕುಂಕುಮ ಇದೆ. ಅದನ್ನು ಅವಳ ಹಣೆಗೆ ದೆಯ್ಯಕ್ಕ ಅತ್ತಿಗೆ ಹಾಕಿ. ಆ ಸೀರೆಯನ್ನೂ ಉಡಿಸಿ' ಅಂದ ಪದ್ಮನಾಭ ಸಾಮಣಿ.

ನವಿಲು ಬಣ್ಣದ ನಾಲ್ಕು ಬೆರಳಿನಷ್ಟು ಅಗಲದ ಅಂಚು, ಅದರ ಮೇಲೆ ಕೆಳಗೆ ಎರಡು ಸಾಲು ಜರಿಯ ಸರಪಣಿಯಂಥ ನೆಯ್ಗೆ. ಮುಡ್ಯಾಲದ ಬೇರನ್ನು ಇಟ್ಟುದರಿಂದ ಸೀರೆಯಿಡೀ ಗಮಗಮ ಅನ್ನುತ್ತಿತ್ತು. ಕೊಟ್ಟವರ ಹೃದಯದ ಮಧುರವಾದ ಭಾವನೆ ಅದರೊಳಗೆಲ್ಲ ಆವರಿಸಿತ್ತು.

ಹೊರಗಿನ ಚಪ್ಪರದ ಕಡೆಗೆ ಮದುಮಗಳನ್ನು ಕರೆಸಬೇಕೆಂದು ಮೈಂದಣ್ಣನಿಗೆ ತಿಳಿಸಲು ತ್ಯಾಂಪಣ್ಣ ತಿಮ್ಮನಿಗೆ ಹೇಳಿದರು. ಆತ ಒಂದು ಸುತ್ತು ತಿರುಗಿ ಮೈಂದಣ್ಣ ಎಲ್ಲಿಯೂ ಕಾಣಿಸುವುದಿಲ್ಲವೆಂದ. ಆಮೇಲೆ ತ್ಯಾಂಪಣ್ಣನೇ ಹೋಗಿ ಹೇಳಿದರು.

ಹೆಂಗಸರೆಲ್ಲ ಗುಡಿಸಲಿನ ಒಳಗೆ ಬಂದ ನಂತರ ತಂತ್ರಿಗಳು ಸೇರಿದ ಜನ ಸಮುದಾಯವನ್ನುದ್ದೇಶಿಸಿ ಒಂದು ಚಿಕ್ಕ ಭಾಷಣ ಮಾಡಿದರು. 'ಸಮಯ ಹತ್ತೂಕಾಲು ಆಯ್ತು. ಈ ಸುಮುಹೂರ್ತದಲ್ಲಿ ನಾವೆಲ್ಲರೂ ಸೇರಿ ಈಗ ಮಾಡುವ ಇಂಥ ಜನಪ್ರಿಯ ಕಾರ್ಯ ಯಶಸ್ವಿಯಾಗಲಿ. ಊರಿನ ಜನರಿಗೆಲ್ಲ ಉಪಯೋಗವಾಗಲಿ. ಗುದ್ದಲಿ ಪೂಜೆಯಾಗಿ ಮೊದಲ ಕಲ್ಲನ್ನು ಊರಿನ ಹಿರಿಯ ವಯಸ್ಸಿನಲ್ಲಿ ಎಲ್ಲರಿಗಿಂತ ಹಿರಿಯವರಾದ ಶ್ರೀಮಾನ್ ಬೊಗಟ ಹರಿಜನ ಇಡಬೇಕೆಂದು ಊರಿನ ಸರ್ವ ಜನರ ಪರವಾಗಿ ಕೇಳಿಕೊಳ್ಳುತ್ತಿದ್ದೇನೆ' ಎಂದರು ಕೇಶವ ತಂತ್ರಿಗಳು.

ಶಂಕರ ಮುಂದೆ ಹೋಗಿ ಬೊಗಟನನ್ನು ಕರೆದ. ಸಿಡಿಲು ಬಡಿದಂತೆ, ಸ್ವತಃ ಮಲ್ಲರಾಜ ದೈವವೇ ಎದುರುಬಂದು ಹೇಳಿದಂತೆ ಬೊಗಟನೇ ಆದಿಯಾಗಿ ಗ್ರಾಮದ ಸಕಲ ಜನರೂ ಆಶ್ಚರ್ಯದಿಂದ ಸ್ತಂಭಿತರಾದರು. ಬೊಗಟನಂತೂ ಕಣ್ಣು ಬಾಯಿ ಬಿಟ್ಟ. ಆತ ಒಂದು ಬಿಳಿಯ ಪಂಚೆ ಸುತ್ತಿ ನೀಲಿ ಚೌಕಳಿಯ ಶರ್ಟ್ ತೊಟ್ಟಿದ್ದ. ಅವನ ಕೈಹಿಡಿದು ಶಂಕರ ಹೇಳಿದ, 'ನಾವೆಲ್ಲರೂ ದೇವರ ಮಕ್ಕಳು. ಹೆದರಬೇಕಿಲ್ಲ. ಹಿಂಜರಿಯ ಬೇಡ. ಬಾ' ಅನ್ನುತ್ತ ಆ ಹಿರಿಯನ ಕೈಹಿಡಿದುಕೊಂಡು ಮುಂದೆ ತಂದ. ಬೊಗಟನಿಗೆ ಇದು 92ನೆಯ ವಯಸ್ಸು. ಅವನಿಗೆ ಒಂದು ಕುಡಿಕೆ ಹೆಂಡ ಕುಡಿದರೂ ಕೈಕಾಲು ನಡುಗುತ್ತದೆ. ಈಗಂತೂ ಪೂರ್ತಿ ನಡುಗುತ್ತಿದ್ದ.

ಇಬ್ಬರೂ ಮುಂದೆ ನಡೆದು ಎರಡು ಕಲ್ಲುಗಳನ್ನೂ ಒಂದು ಹೊಸ ಪಿಕ್ಕಾಸನ್ನೂ ಇಟ್ಟಲ್ಲಿಗೆ ಬಂದರು. ಕೇಶವ ತಂತ್ರಿಗಳು ಆದ್ಯಾವುದೋ ಶ್ಲೋಕ ಪಠಿಸಿದರು. ಎರಡು ಮೂರು ಜನ ಆಳುಗಳು ಎಲ್ಲರಿಗೂ ಅಕ್ಷತೆ ಹಂಚಿದರು. ತಿಮ್ಮನೂ ಅರ್ಕಾವತಿಯೂ ಹೆಂಗಸರಿಗೆ ಕೊಟ್ಟರು. ಬೊಗಟ ತಂತ್ರಿಗಳು ಹೇಳಿದಂತೆಯೇ ಮಾಡಿದ. ಪಿಕ್ಕಾಸಿನಿಂದ ಅವರು ತೋರಿಸಿದ ಜಾಗವನ್ನು ಅಗೆದು ಎರಡು ಕಲ್ಲುಗಳಲ್ಲಿ ಒಂದನ್ನು ಆ ಗುಂಡಿಯಲ್ಲಿ ಇಟ್ಟ. ಅದರ ಮೇಲೆ ಸಿಮೆಂಟ್ ಹಾಕುವ ಹೊಸ ತಾಪಿಯಿಂದ ಸಿಮೆಂಟ್ ಹಾಕಿ ಸರಿಯಾಗಿ ಇರಿಸಿದ. 'ಅದರ ಮೇಲೆ ಇನ್ನೊಂದು ಕಲ್ಲನ್ನು ಅಡ್ಡಕ್ಕಿಡು' ಅಂದ ಶಂಕರ. ಅವನು ಹಾಗೆಯೇ ಮಾಡಿದ.

ಶಂಕರನೂ ಶಾಸ್ತ್ರಿಗಳೂ ಚಪ್ಪಾಳೆ ಹೊಡೆದಾಗ ಅದನ್ನೇ ಕಾದಿದ್ದವರಂತೆ ಸೇರಿದ ಜನಸ್ತೋಮವೆಲ್ಲ ಜೋರಾಗಿ ಚಪ್ಪಾಳೆ ತಟ್ಟಿದರು.

'ಆ ತಾಪಿ ನಿನಗೇ. ತೆಗೆದುಕೋ' ಅಂದ ಶಂಕರ. 'ಇನ್ನು ಹೆಚ್ಚು ಮೇಸ್ತ್ರಿ ಕೆಲಸ ಸಿಗಲಿ' ಎಂದು ಶಾಸ್ತ್ರಿಗಳೂ ಆಶೀರ್ವದಿಸಿದರು. ಜನರೆಲ್ಲ ಈ ಹೊಸ ಬಗೆಯ ಸಂಭ್ರಮವನ್ನು ಅಚ್ಚರಿಯಿಂದ ವೀಕ್ಷಿಸಿದರು.

'ಇನ್ನು ಸ್ವಲ್ಪ ಕೆಲಸ ಬಾಕಿಯಿದೆ. ಜನರೆಲ್ಲ ಗಡಿಬಿಡಿ ಮಾಡದೆ ಕುಳಿತುಕೊಂಡು ಅದನ್ನು ನೋಡಿ ಮದುಮಗನಿಗೂ ಮದುಮಗಳಿಗೂ ಆಶೀರ್ವಾದ ಮಾಡಬೇಕು. ಅನಂತರ ನಿಮಗಾಗಿಯೇ ತಯಾರಾಗಿರುವ ಈ ಸಂಭ್ರಮದ, ಅಂದರೆ ಜೋಡಿ ಸಂಭ್ರಮದ ಊಟ ಮಾಡಿ ಸಂತೋಷಪಟ್ಟು ನಮಗೂ ಸಂತೋಷವಾಗುವಂತೆ ಮಾಡಬೇಕು. ಕೈಮುಗಿದು ವಿನಂತಿಸುತ್ತಿದ್ದೇನೆ' ಎಂದು ಹೇಳಿ ಶಂಕರ ಸಭೆಗೆ ಕೈಮುಗಿದ.

ಅಲ್ಲಿ ನೆರೆದಿದ್ದ ಜನರೆಲ್ಲರೂ ಅವರ ಪ್ರೀತಿಯ ಗೌರವದ ಶಂಕರಣ್ಣ ನಾಲ್ಕು ಭುಜದವರಾಗುವ ಮಂಗಳ ಸಂದರ್ಭವನ್ನು ನೋಡಲು ಅತ್ಯಂತ ಉತ್ಸಾಹದಿಂದ ಅಭಿಮಾನದಿಂದ ಕುಳಿತರು.

ಕೇಶವ ತಂತ್ರಿಗಳು ಅಲ್ಲಿ ಇರಿಸಿದ್ದ ಗಣಪತಿಗೆ ಕೈಮುಗಿದು ನಿಂತು ಸಂಸ್ಕೃತ ಶ್ಲೋಕ ಹೇಳಿ ಗಣಪತಿಯ ಸ್ತುತಿ ಮಾಡಿದರು. ಅಷ್ಟರಲ್ಲಿ ಶಂಕರ ಹೇಳಿದ, 'ತಂತ್ರಿಗಳೇ, ಕನ್ನಡದಲ್ಲಿ ಇಲ್ಲವಾದರೆ ತುಳುವಿನಲ್ಲಿ ಬಾಕಿ ವಿಷಯವೆಲ್ಲವನ್ನೂ ವಿವರಿಸಬೇಕು, ಜನರಿಗೆ ಅದು ಅರ್ಥವಾಗಲಿ ಎಂದ.

ತಂತ್ರಿಗಳು ಆರಂಭಿಸಿದರು. 'ಸೇರಿದ ಮಹಾಜನರೇ, ಇಲ್ಲಿ ಇರಿಸಿದ ಈ ಗಣಪತಿಯ ಸಾನ್ನಿಧ್ಯದಲ್ಲಿ ಇವತ್ತು ಮಂಜಲಬೈಲು ಸೋಮಣ್ಣ ಅಡ್ಯಂತಾಯರ ಮತ್ತು ಲಕ್ಷ್ಮಿ ಅಕ್ಕನ ಸುಪುತ್ರ ತ್ಯಾಂಪಣ್ಣ ಸಾಮನಿಯ ಸೋದರಳಿಯ ಶ್ರೀ ಸೋಮಶಂಕರನೆಂಬ ವರನಿಗೆ ಸಂಪಾಜೆ ಬಾವೆಯ ಮುಂಡಪ್ಪ ಕಂಬೋಳಿ ಮತ್ತು ಅಂತಕ್ಕನ ಸುಪುತ್ರಿ ಬೊಳ್ಳೂರು ಪರಾರಿಯ ದೇವಣ್ಣ ಚೌಟರ ಸೋದರಸೊಸೆ ಭವಾನಿ ಎನ್ನುವ ವಧುವನ್ನು ಗುರುಹಿರಿಯರ ಸಮಕ್ಷಮದಲ್ಲಿ ಈ ಮಂಗಳ ಮುಹೂರ್ತದಲ್ಲಿ ವಿವಾಹ ಮಾಡಿ ಕೊಡುವುದಕ್ಕೆ ತಮ್ಮ ಅನುಮತಿಯನ್ನು ಕೇಳಿಕೊಳ್ಳುತ್ತೇವೆ. ಹಿರಿಯರು ಮಂಗಳಾಕ್ಷತೆ ಹಾಕಿ ದೇವರಿಗೆ ಕೈಮುಗಿಯಿರಿ. ಅನಂತರ ವಧೂವರರನ್ನು ಎದುರೆದುರಾಗಿ ನಿಲ್ಲಿಸಿ. ಮದುವೆಗೆ ಹೂವಿನ ಮಾಲೆಯನ್ನು ಅವರ ಕೈಗೆ ಕೊಡಿ.' ತ್ಯಾಂಪಣ್ಣ ಸಾಮನಿ ಇಬ್ಬರ ಕೈಗೂ ಹೂವಿನ ಹಾರಗಳನ್ನು ಕೊಟ್ಟರು.

ಅಷ್ಟಾಗುವಾಗ ದೇವಣ್ಣ ಚೌಟರು ಹೇಳಿದರು, 'ಮದುಮಗನ ತಲೆ ಖಾಲಿ ಇರಬಾರದು. ಪದ್ಮ, ನಿನ್ನ ಹೆಗಲಲ್ಲಿರುವ ಶಾಲನ್ನು ತೆಗೆದು ಅವನಿಗೆ ಮುಂಡಾಸು ಕಟ್ಟು.'

ಮಂಗಳವಾದ್ಯ ಮೊಳಗಿತು. ಜೋಡಿ ಕೊಂಬುಗಳನ್ನು ಜೋರಾಗಿ ಊದಿದರು. ಗುರುವಪ್ಪನೂ ಮಗನೂ ನಾಗಸ್ವರ ವಾದಿಸಿದರು. 'ಭವಾನಿ, ನೀನು ಮೊದಲು ಹಾರ ಹಾಕಮ್ಮ. ಶಂಕರಾ, ನೀನು ಈಗ ಹಾಕು' ಎಂದರು ದೇವಣ್ಣ ಚೌಟರು.

ತಂತ್ರಿಗಳು ಹೇಳಿದರು, 'ವಧುವಿನ ಅಣ್ಣ ಕೊಂಬಿನ ಗಿಂಡಿಯನ್ನು ಎತ್ತಿ (ಅದರ ಮೇಲೆ ಜುಟ್ಟಿರುವ ತೆಂಗಿನಕಾಯಿಯನ್ನು ಇಟ್ಟು ಬಾಯಿಯ ಸುತ್ತಲೂ ಮಾವಿನ

ಎಲೆಗಳನ್ನೂ ಹೂವನ್ನೂ ಇಟ್ಟು) ಅವನ ಸೋದರಮಾವನ ಕೈಗೆ ಕೊಡಲಿ.'

'ಮೈಂದಣ್ಣ, ಮೈಂದಣ್ಣ' ಚೌಟರು ಕರೆದರು. ಅವನೆಲ್ಲೂ ಕಾಣಿಸಲಿಲ್ಲ. ಸುತ್ತ ಇದ್ದವರೆಲ್ಲ ಕರೆದರು. ಮೈಂದಣ್ಣ ನಾಪತ್ತೆ. 'ಸಮಯ ಮೀರುತ್ತದೆ, ಬೇರೆ ಯಾರಾದರೂ ಎತ್ತಿ ಕೊಡಿ' ಅಂದರು ತಂತ್ರಿಗಳು.

'ಪದ್ಮ, ನೀನು ತಗೋ ಮಗಾ. ನಿನ್ನ ತಂಗಿಗೆ ಕಲಶ ಎತ್ತು' ಅಂತಕ್ಕ ಹೇಳಿದರು. ಅವರ ಮುಖ ಬಾಡಿತ್ತು.

ಪದ್ಮ ಕಲಶವೆತ್ತಿ ದೇವಣ್ಣ ಚೌಟರ ಕೈಗೆ ಕೊಟ್ಟ. ತ್ಯಾಂಪಣ್ಣ ಗಂಡಿನ ಬಲ ಅಂಗೈಯ ಮೇಲೆ ಹೆಣ್ಣಿನ ಬಲಹಸ್ತವನ್ನು ಇಟ್ಟರು. ಅವರ ಕೈಗಳ ಮೇಲೆ ದೇವಣ್ಣ ಚೌಟರು ಕಲಶವಿಟ್ಟರು. ದಂಪತಿಗಳನ್ನು ಹಸೆಮಣೆಯ ಮೇಲೆ ಕುಳಿತುಕೊಳ್ಳಲು ಹೇಳಿದರು. ನಿಮಿಷ ಕಳೆದು ಏಳಲು ತಿಳಿಸಿದರು. ಪುನಃ ಕಲಶಗಳನ್ನು ಅವರ ಕೈಗಳಲ್ಲಿಟ್ಟು ಕುಳಿತುಕೊಳ್ಳಲು ಹೇಳಿದರು. ಹೀಗೆ ಐದು ಸಲ ಮಾಡಿದರು.

ಭಾರವಾದ ಕಲಶ ಕೈಗಿಡುವಾಗ ಭವಾನಿಯ ಕೈ ತಗ್ಗಿ ಶಂಕರನ ಅಂಗೈಗೆ ಅಂಟಿಕೊಳ್ಳುವಂತೆ ಆಯ್ತು. ಅವಳ ಸಮಸ್ತ ಭಾರವನ್ನೂ ಅಂದಿನಿಂದ ಅವನೇ ಹೊತ್ತುಕೊಳ್ಳುವವನೆನ್ನುವ ಭಾವನೆ ಅವಳ ಮನಸ್ಸಿಗೆ ಬಂತು. ನೀವು ಆಸರೆಯಾದರೆ ಬದುಕಿನ ಯಾವ ಏರುಪೇರನ್ನಾಗಲೀ ಎದುರಿಸುವೆನೆನ್ನುವ ಧೈರ್ಯ ಅವಳಲ್ಲಿ ಮೂಡಿತು. ಶಂಕರ ವಧುವಿನ ಬಲಗೈಯನ್ನು ಹಿಡಿದುಕೊಂಡು ಗಣಪತಿಯನ್ನೂ ಹಸೆಮಣೆಯನ್ನೂ ಐದು ಸುತ್ತು ಪ್ರದಕ್ಷಿಣೆ ಬಂದ. ಅದಾದಮೇಲೆ ಅವರು ಹಸೆಮಣೆಯಲ್ಲಿ ಕುಳಿತುಕೊಂಡರು. ಐದು ಜನ ಮುತ್ತೈದೆಯರು ಅವರಿಗೆ ಆರತಿಯೆತ್ತಿ ಗಂಧದ ಕುಂಕುಮದ ತಿಲಕವಿಟ್ಟರು.

ತಂತ್ರಿಗಳ ಆದೇಶದ ಪ್ರಕಾರ ಹಿರಿಯರೆಲ್ಲ ದೆಯ್ಯಕ್ಕ ಇಟ್ಟಿದ್ದ ಹರಿವಾಣದಿಂದ ಅಕ್ಷತೆ ತೆಗೆದು ಮದುಮಕ್ಕಳಿಗೆ ಹಾಕಿ ಶುಭವಾಗಲೆಂದು ಆಶೀರ್ವದಿಸಿದರು. ಯುವಕರು ಬಂದು ಅಭಿನಂದಿಸಿದರು.

ಸಾಮನಿಯವರೂ ಚೌಟರೂ ನೆರೆದ ಜನರೆಲ್ಲರೂ ಚಪ್ಪರದಲ್ಲಿ ಕುಳಿತು ಊಟ ಮಾಡಬೇಕೆಂದು ಮನವಿ ಮಾಡಿದರು.

ಊಟ ಮುಗಿದು ಗುಂಪು ಕರಗಿದ ಬಳಿಕ ಶಂಕರನೂ ಭವಾನಿಯೂ ಪದ್ಮನ ಕಾರಿನಲ್ಲಿ ಸೇನೆರ ಮೂಲೆಗೆ ಹೋದರು.

ಎಲ್ಲರೂ ಮೈಂದಣ್ಣ ಕಾಣೆಯಾದುದನ್ನು ದೊಡ್ಡದಾಗಿ ಪರಿಗಣಿಸಿರಲಿಲ್ಲ. ಧಾರೆಯಾಗುವಾಗ ಕೊಂಬುವಾದ್ಯದ ಗೌಜಿಗೆ ದೂರವಿದ್ದವರೆಲ್ಲ ಹತ್ತಿರ ಬಂದಿದ್ದರು. ಗುರುಕಂಬಳದ ಮಸೀದಿಯ ಮುಕ್ರಿ ಹಾಜಿ ಮಹಮ್ಮದ್ ಇಕ್ಬಾಲ್ ಸಾಬರು ಸಮುದಾಯ ಭವನದ ಗುದ್ದಲಿಪೂಜೆಗೆಂದು ಬಂದವರು ದಾರಿಯಲ್ಲಿ ಮೈಂದಣ್ಣನನ್ನು ನೋಡಿದ್ದರು. ಎಲ್ಲರೂ ಒಮ್ಮೆ ಗಾಬರಿಯಿಂದ ಮೈಂದಣ್ಣ ಇಲ್ಲವೆಂದು ಆಚೀಚೆ ಗುಸಗುಸ ಮಾತನಾಡುವಾಗ ಅವರು ಹೇಳಿದರು, 'ನಾನು ಈಗ ಇಲ್ಲಿಗೆ ಬರುವಾಗ ಅವರನ್ನು

ನೋಡಿದೆ. ಅವರು ಮಾರ್ಗದ ಬದಿಯಲ್ಲಿ ನಿಂತಿದ್ದವರು ಆಗುಂಬೆಯಾಗಿ ಶೃಂಗೇರಿಗೆ ಹೋಗುವ ಬಸ್ಸು ಹತ್ತಿ ಹೋದರು. ಅವರ ಕೈಯಲ್ಲಿ ಕಪ್ಪಗಿನ ಒಂದು ಬ್ಯಾಗ್ ಮಾತ್ರ ಇತ್ತು' ಅಂದರು. ಈ ಸುದ್ದಿ ಕಿವಿಯಿಂದ ಕಿವಿಗೆ ಹರಡಿ ಮದುಮಕ್ಕಳು ಸೇನೆರ ಮೂಲೆಗೆ ಹಾಲು ಕುಡಿಯಲು ಹೋದಮೇಲೆ ಯಾರೋ ಅಂತಕ್ಕನ ಕಿವಿಗೆ ಹಾಕಿದರು.

ಸಂಜೆ ಮದುವೆಗೆ ಹೋದವರೆಲ್ಲ ಮನೆಗೆ ಬಂದರು. ಕತ್ತಲೆಯಾಗುವಾಗ ಮದುಮಕ್ಕಳೂ ಗುತ್ತಿಗೆ ಬಂದರು. ಅಷ್ಟು ಹೊತ್ತಿಗೆ ಯಾರೋ ಈ ಸುದ್ದಿಯನ್ನು ಅವರಿಗೂ ತಲಪಿಸಿದ್ದರು.

ಭವಾನಿ ಬಂದವಳು ಮನೆಯೊಳಗೆ ಪ್ರವೇಶಿಸಿ ಅಮ್ಮ ಎಲ್ಲಿದ್ದಾರೆಂದು ಕೇಳಿದಳು. ಅವರು ಒಳಭಾಗದ ಕೋಣೆಯಲ್ಲಿ ಕಾಲುನೀಡಿ ತೊಟ್ಟಿಯ ಕಂಬಕ್ಕೊರಗಿ ಕುಳಿತಿದ್ದರು. ಮಗಳನ್ನು ನೋಡಿ ಒಂದು ಪತ್ರವನ್ನು ಅವಳ ಕೈಗಿಟ್ಟರು. ಭವಾನಿ ತೆರೆದು ಓದಿದಳು.

ಪೂಜ್ಯರಾದ ಅಮ್ಮನವರಿಗೆ,

ನನಗೆ ನಿನ್ನೆಯ ಎರಡು ದಿನ ಮೊದಲು ಮುಂಜಾವದಲ್ಲಿ ಚಿಕ್ಕಮಾವ ಕಾಣಿಸಿದರು. ಅವರು ನನ್ನ ಮಂಚದ ಕಾಲಿನ ಹತ್ತಿರ ನಿಂತಿದ್ದರು. ಅವರು ಕೇಳಿದರು, 'ನನ್ನನ್ನು ಬೇಟೆಯಾಡಿದವರ ಜೊತೆಗೆ ಸೇರುತ್ತೀಯಾ? ಅವರ ಕಾರ್ಯಗಳಿಗೆ ಸಹಕರಿಸ್ತೀಯಾ? ನೀನು ನನ್ನನ್ನು ಎಷ್ಟು ಬೇಗ ಮರೆತೆ. ನೀನೂ ನನ್ನನ್ನು ದೂರಮಾಡಿದೆ, ಅಲ್ಲವೇ?'

ಹಾಗೆ ಹೇಳಿ ನಾನು ಎದ್ದು ಕುಳಿತುಕೊಳ್ಳುವಾಗ ಅವರು ಹಿಂದೆ ಹಿಂದೆ ಹೋದರು. 'ಇಲ್ಲ ಮಾವ, ನಾನು ನಿಮ್ಮನ್ನು ಮರೆಯಲಿಲ್ಲ. ನಾನು ಅವರ ಜೊತೆ ಸೇರುವುದಿಲ್ಲ. ನೀವು ಯಾವಾಗಲೂ ನನ್ನ ಪಾಲಿಗೆ ಜೀವಂತವಾಗಿದ್ದೀರಿ' ಎಂದು ಪೂರ್ತಿ ಹೇಳುವ ಮೊದಲೇ ಅವರು ಹಿಂದೆ ಹಿಂದೆ ಹೋಗಿ ಬಾಗಿಲು ದಾಟಿ ಹೋದರು. ಅವರು ಉಪ್ಪರಿಗೆಯಲ್ಲಿದ್ದಾರೆಂದು ನಾನು ಬಾಗಿಲ ಹತ್ತಿರ ಎದ್ದು ಬಂದೆ. ನನ್ನನ್ನು ಯಾರೋ ತಡೆದು ಹಾಸಿಗೆಗೆ ಬಲವಾಗಿ ತಳ್ಳಿದರು.

ಅದು ಖಂಡಿತವಾಗಿಯೂ ಅವರೇ. ನನ್ನ ಹಣೆಗೂ ಹೆಗಲಿಗೂ ಏಟಾಯ್ತು. ಸೋಮಕ್ಕ ಮಾಮಿಯ ಹತ್ತಿರ ನಾನು ನಿನ್ನೆ ರಾತ್ರಿ ಕೇಳಿದ್ದೆ.

'ಮಾಮಿ, ನಿಮಗೆ ಯಾವತ್ತಾದರೂ ಮಾಮನವರು ಕನಸಿನಲ್ಲಿ ಬಂದಿದ್ದಾರಾ?' ಅದಕ್ಕವರು 'ಇಲ್ಲ' ಅಂದಿದ್ದರು. ಅಲ್ಲದೆ 'ಕನಸಿನಲ್ಲಿ ಬರುವುದು ಒಳ್ಳೆಯದಲ್ಲ. ಸತ್ತವರು ಮತ್ತೆ ಕಾಣಿಸಬಾರದು. ಹೆದರಿದರೆ ಏನೇನೋ ಆಗಬಹುದು. ಆಮೇಲೆ, ಜೋರಿನವ ರಾದರೆ ನಮ್ಮನ್ನೇ ತೆಗೆದುಕೊಂಡು ಹೋಗ್ತಾರಂತೆ ಅಂದರು.'

ಮೈಂದಣ್ಣ, ನೀನು ಹಾಗೆಲ್ಲ ಯೋಚನೆ ಮಾಡಬೇಡ. ಸತ್ತವರು, ದೇವರ ಪಾದ ಸೇರುತ್ತಾರೆ. ಅವರ ಆತ್ಮ ದೇವರನ್ನು ಸೇರಲಿ ಎಂದು ನಾವು ಪ್ರಾರ್ಥನೆ ಮಾಡಬೇಕು. ಅವರನ್ನು ಮತ್ತೆ ಈ ಭೂಮಿಯ ಧರ್ಮ ಕರ್ಮಗಳಿಗೆ ನಾವಾಗಿ ಎಳೆಯಬಾರದು.

ಸತ್ತ ಮೇಲೆ ಯಾರು ಯಾರಿಗೂ ಸಂಬಂಧವಿಲ್ಲ. ಜೀವ ಹೋಗಿ ಆತ್ಮವಾದ ಮೇಲೆ ಆ ಆತ್ಮಕ್ಕೆ ಈ ಭೂಮಿಯಲ್ಲಿರುವವರೊಂದಿಗೆ ಪೂರ್ವಜನ್ಮದ ಯಾವ

ಸಂಬಂಧವೂ ಉಳಿಯುವುದಿಲ್ಲ. ನೀನು ಅವುಗಳನ್ನೆಲ್ಲ ಮನಸ್ಸಿನಲ್ಲೇ ಇಡು.

ಅವರ ಮರಣದ ನೆನಪನ್ನು ಅಷ್ಟು ಆಳವಾಗಿ ಕಟ್ಟಿಕೊಳ್ಳುವುದು ಬೇಡ. ಅವರವರು ಮಾಡಿದ ಕರ್ಮಫಲವನ್ನು ಅವರವರು ಅನುಭವಿಸುತ್ತಾರೆ.

ಹಿಂದಿನ ಜನ್ಮದಲ್ಲಿ ಅದು ಸ್ವಲ್ಪ ಸಮಯ ಕಳೆದು ಸಿಕ್ಕುತ್ತಿತ್ತಂತೆ. ಇದು ಕಲಿಗಾಲ. ಇದೇ ಜನ್ಮದಲ್ಲಿ ಅದು ಬೆನ್ನುಹತ್ತಿ ಬರುತ್ತದೆ. ನೀನ್ಯಾಕೆ ಅದನ್ನೇ ಯೋಚಿಸಿ ತಲೆ ಕೆಡಿಸುತ್ತೀ?

ನಿದ್ರೆ ಮಾಡಲು ಹಾಸಿಗೆಯಲ್ಲಿ ಕುಳಿತುಕೊಳ್ಳುವಾಗಲೂ ಬೆಳಗ್ಗೆ ಹಾಸಿಗೆಯಿಂದ ಏಳುವಾಗಲೂ ಆ ಪಂಚಲಿಂಗೇಶ್ವರನ ನೆನಪು ಮಾಡು. ಅವರು ಅಂಥ ಬೇಡವಾದ ಕನಸುಗಳು ಬರದಂತೆ ಕಾಪಾಡುತ್ತಾರೆ ಎಂದು ಹೇಳಿ ಸೋಮಕ್ಕ ಮಾಮಿ ನನ್ನನ್ನು ಸಮಾಧಾನಪಡಿಸಿದರು.

ಯಾರು ಏನು ಹೇಳಿದರೂ ನನಗೆ ನನ್ನ ಚಿಕ್ಕಮಾಮ ನನ್ನ ಒಟ್ಟಿಗೇ ಇದ್ದಾರೆಂದು ಮನಸ್ಸಿಗೆ ತೋರುತ್ತದೆ. ಅದರ ಭಾರವನ್ನು ಕಳೆಯಲು ಪ್ರಯತ್ನ ಮಾಡಿದೆ. ಅದೂ ಆಗಲಿಲ್ಲ.

ನನ್ನ ಮನಸ್ಸು ತಿಳಿಯಾಗಿ ಒಡಲಿಗೆ ಶಾಂತಿ ಸಿಗುವ ತನಕ ಈ ಮನೆಗೆ ಬರುವುದಿಲ್ಲ. ನನ್ನನ್ನು ಯಾರೂ ವ್ಯರ್ಥವಾಗಿ ಹುಡುಕುವ ಪ್ರಯತ್ನ ಮಾಡಬೇಡಿ.

ಇಂತಿ,

ನಿಮ್ಮ ಪ್ರಯೋಜನ ಇಲ್ಲದ ಮಗ,

ಮೈಂದಣ್ಣ.

ಭವಾನಿ ಕಾಗದ ಓದಿದಳು. ಬಳಿಕ ಶಂಕರನ ಕೈಗೆ ಕೊಟ್ಟಳು. ಅವನದನ್ನು ಓದಿ ಮಡಚಿ ಅಂತಕ್ಕನ ಕೈಗೇ ವಾಪಸ್ಸು ಕೊಟ್ಟ.

'ಮೈಂದಣ್ಣನಿಗೆ ಅವನ ಮನಸ್ಸಿನ ಒಳಗೊಳಗೇ ಒಂದು ರೀತಿಯ ಕೀಳರಿಮೆ ಕಾಡುತ್ತಿತ್ತು. ತಾನು ಸತ್ಯವೆಂದು ನಂಬಿದ್ದನ್ನೇ ಅವನು ಉಡದಂತೆ ಬಲವಾಗಿ ಆತುಕೊಳ್ಳುತ್ತಾನೆ. ಯಾವುದನ್ನೂ ಸಾಧಿಸಿ ಪ್ರವರ್ತಿಸುವ ಜಾಯಮಾನವಿಲ್ಲ. ಅವನಿಗೆ ಮನಸ್ಸಿನಲ್ಲಿ ಭ್ರಮೆಯಿದೆ. ಆ ಮಾನಸಿಕ ಭ್ರಮೆಯಿಂದಾಗಿ ಸತ್ತವರು ತನ್ನ ಬಳಿಯಲ್ಲಿಯೇ ಇದ್ದಾರೆ. ತನ್ನ ಹತ್ತಿರ ಮಾತನಾಡುತ್ತಿದ್ದಾರೆ ಎಂದು ಅನ್ನಿಸುತ್ತದೆ. ಅದನ್ನು ಆತ ನಂಬುತ್ತಾನೆ. ಅವನು ವಾಪಸ್ಸು ಬಂದರೆ ಅವನನ್ನು ಮನಶ್ಶಾಸ್ತ್ರಜ್ಞರ ಬಳಿಗೆ ಟ್ರೀಟ್‌ಮೆಂಟಿಗೆ ಕರೆದುಕೊಂಡು ಹೋಗಬೇಕು. ಬೇರೆ ದಾರಿ ಇಲ್ಲ.

ಈಗ ಸ್ವಲ್ಪ ದಿವಸ ಅವನನ್ನು ಅವನಷ್ಟಕ್ಕೇ ಇರಲಿ ಎಂದು ಬಿಟ್ಟುಬಿಡೋಣ. ಆಮೇಲೆ ಏನಾದರೂ ಮಾಡೋಣ. ನೀವು ಚಿಂತಿಸುವುದು ಬೇಡ.

ಮನುಷ್ಯ ಅವನ ಅಂತರಾಳದಲ್ಲಿರುವ ಹಿಂಸ್ರ ಭಾವನೆಯ ಬೆನ್ನು ಹತ್ತುತ್ತ ಇರುತ್ತಾನೆ. ಅವನ ಒಳಗೆಯೇ ಒಂದು ಬೇಟೆ ನಡೆಯುತ್ತದೆ. ಅದರ ಲೆಕ್ಕಾಚಾರ ಹೆಚ್ಚಾದರೆ ಮೆಲ್ಲ ಮೆಲ್ಲ ಅವನ ವ್ಯಕ್ತಿತ್ವವೇ ಅದಕ್ಕೆ ಬಲಿಯಾಗುತ್ತದೆ. ಅವನು ಒಬ್ಬನೇ ವ್ಯಕ್ತಿಯಲ್ಲ. ಅವನ

ಒಳಗೆ ಇನ್ನೊಬ್ಬ ಮನುಷ್ಯ ಇದ್ದಾನೆ. ಆ ಹೊಸ ವ್ಯಕ್ತಿಯೇ ಅವನಿಗೆ ನಿಕಟವರ್ತಿಯಾಗುತ್ತಾನೆ. ಅವನ ವ್ಯಕ್ತಿತ್ವದ ಭಾಗವಾಗ್ತಾನೆ. ಈತ ಪ್ರತಿಯೊಂದು ವಿಷಯಕ್ಕೂ ಆ ಇನ್ನೊಂದು ಮನಸ್ಥಿತಿಯ ಮಾತುಗಳಿಗೆ ಆದೇಶಗಳಿಗೆ ಕಿವಿಗೊಡುತ್ತಾನೆ. ಅಂಥ ದ್ವಿಮುಖದ ಮನುಷ್ಯನಾಗಿದ್ದಾನೆ ಈಗ ಮೈಂದಣ್ಣ. ಇದು ವಿಚಿತ್ರವೆನಿಸಿದರೂ ಸತ್ಯ. ಹಿಂದೆ ಇಂಥ ಕಾಯಿಲೆ ಬಂದರೆ ಮನುಷ್ಯ ಹೆದರುತ್ತಾನೆ. ಈಗ ಅದಕ್ಕೂ ಔಷಧಿಗಳಿವೆ.

ಈಗ ಮೆದುಳಿನ ನರಗಳ ಕಾಯಿಲೆಗೆ ಈಷೀಜೋಫ್ರೀನಿಯಾ ಎನ್ನುವ ಔಷಧಿಯನ್ನು ಕಂಡುಹಿಡಿದಿದ್ದಾರೆ. ಆದರೆ ಆ ಕಾಯಿಲೆ ಯಾಕೆ ಬರ್ತದೆ, ಹೇಗೆ ಬರ್ತದೆ ಎನ್ನುವುದನ್ನು ಯಾರಿಗೂ ಹೇಳಲು ಸಾಧ್ಯವಿಲ್ಲ.

ಮಾಮಿ, ನಾವೆಲ್ಲ ನಿಮ್ಮ ಜೊತೆ ಇದ್ದೇವೆ. ನಿಮ್ಮ ಮಗನನ್ನು ಸರಿಮಾಡುವ.' ಅಂದ ಶಂಕರ.

ಅದನ್ನು ಕೇಳಿದ ಭವಾನಿ ಧನ್ಯತಾಭಾವನೆಯಿಂದ ತನ್ನನ್ನು ಅವನಿಗೆ ಸಂಪೂರ್ಣ ಸಮರ್ಪಿಸಿಕೊಂಡಳು. ಮೈಂದಣ್ಣನ ಈ ಪರಿಸ್ಥಿತಿಗೆ ತಾನೇ ಹೊಣೆ ಎನ್ನುವ ಭಾವನೆ ಅವಳಲ್ಲಿತ್ತು. ಮೈಂದಣ್ಣನ ಸಂಕೋಚದ, ಚಂಚಲದ ನಿತ್ರಾಣ ಮನಸ್ಸು ಇದಕ್ಕೆಲ್ಲ ಮುಖ್ಯ ಕಾರಣವೆಂದು ತಿಳಿದಾಗ ಅವಳ ಮನಸ್ಸಿಗೂ ಸಮಾಧಾನವಾಯ್ತು.

* * * * *

ತುಳು ನಾಡು-ನುಡಿ ಪ್ರಬಲವಾಗಬೇಕಾದರೆ, ಅದರ ಸಾಂಸ್ಕೃತಿಕ ವೈಶಿಷ್ಟ್ಯ ಮತ್ತು ಶಕ್ತಿಯನ್ನು ಹೊರ ಜಗತ್ತಿಗೆ ತಿಳಿಸುವುದು ಅಗತ್ಯ ಎನ್ನುವುದನ್ನು ಮನಗಂಡು ತುಳುವಿನಿಂದ ಇತರ ಭಾಷೆಗಳಿಗೆ ಅನುವಾದಿಸಿದ ಕೃತಿಗಳನ್ನು ಪ್ರಕಟಿಸುವ ಕೆಲಸ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಕೈಗೊಂಡಿದೆ.

ಹಿರಿಯ ಲೇಖಕಿ ಶ್ರೀಮತಿ ಲಲಿತಾ ರೈಯವರ ತುಳು ಮೂಲ ಕೃತಿ 'ಬೋಂಟೆ ದೇರ್‌ಂಡ್' ಎನ್ನುವ ಕಾದಂಬರಿಯನ್ನು ಡಾ. ಪ್ರಮೀಳಾ ಮಾಧವ್ ಅವರು ಕನ್ನಡಕ್ಕೆ ಅನುವಾದಿಸಿದ್ದಾರೆ. ಬಂಟರ ಸಮುದಾಯದ ಕತೆಯನ್ನು ಮುಂದಿಡುವ ಈ ಕಾದಂಬರಿ ಹೆಣ್ಣಿಗಾಗುವ ಅನ್ಯಾಯಗಳನ್ನು ಅನಾವರಣಗೊಳಿಸುತ್ತದೆ. ಈ ಬೃಹತ್ ಕಾದಂಬರಿಯು ಒಂದು ಕಡೆಗೆ ಸ್ವಾತಂತ್ರ್ಯ ಹೋರಾಟದ ಕನಸುಗಳನ್ನು ಮತ್ತೊಂದೆಡೆಗೆ ಭೂಮಸೂದೆಯಿಂದ ಉಂಟಾದ ಪಲ್ಲಟಗಳನ್ನು ಮಂಡಿಸುತ್ತಾ ಸಮುದಾಯವು ಬದಲಾವಣೆಗೊಳ್ಳ ಬೇಕಾದ ಅಗತ್ಯವನ್ನು ಪ್ರಗತಿಪರ ದೃಷ್ಟಿಕೋನದಲ್ಲಿ ನಮ್ಮ ಮುಂದೆ ಪ್ರಸ್ತುತಪಡಿಸುತ್ತದೆ.

ತುಳು ಸಮಾಜ ಮತ್ತು ಸಂಸ್ಕೃತಿಯ ವೈಶಿಷ್ಟ್ಯಗಳನ್ನು ಸುಂದರವಾಗಿ ಮುಂದಿಡುವ ಈ ಕಾದಂಬರಿಯನ್ನು ಅನುವಾದಿಸಿ ಕೊಡುವ ಮೂಲಕ ಡಾ. ಪ್ರಮೀಳಾ ಮಾಧವ್ ಅವರು ಕನ್ನಡ ಭಾಷಿಕರಿಗೆ ತುಳು ಲೋಕವನ್ನು ಪರಿಚಯಿಸುವ ಮಹತ್ತರ ಕೆಲಸವನ್ನು ಮಾಡಿದ್ದಾರೆ.

ಎ.ಸಿ. ಭಂಡಾರಿ

ಅಧ್ಯಕ್ಷರು, ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ
ತುಳುಭವನ, ಉರ್ವಸ್ಟೋರ್
ಮಂಗಳೂರು – 575 006

ಬೆಲೆ : ರೂ. 225